ಶುಕ್ರವಾರ, ಜನವರಿ 12, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ಮುಂಬೈನಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಕರ್ಮ ಕಾಲಿಂಗ್' ವೆಬ್ ಸರಣಿಯ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ನಮ್ರತಾ ಶೇತ್ ಪಾಲ್ಗೊಂಡಿದ್ದರು



ಅಕ್ರಮದಲ್ಲಿ ಮಾಲೂರು ಕಾಂಗ್ರೆಸ್ ಶಾಸಕ ನಂಜೇಗೌಡ ಪಾತ್ರ: ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಆರೋಪ

ಕೋಚಿಮುಲ್ ಹುದ್ದೆ ₹30 ಲಕ್ಷಕ್ಕೆ ಮಾರಾಟ

ಪ್ರಜಾವಾಣಿ ವಾರ್ತೆ


ನಂಜೇಗೌಡ

ಕೋಲಾರ: ಮಾಲೂರು ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡ ಅಧ್ಯಕ್ಷರಾಗಿರುವ ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಯ ಸಹಕಾರ ಹಾಲು ಒಕ್ಕೂಟದಲ್ಲಿ (ಕೋಚಿಮುಲ್) ಈಚೆಗೆ ನಡೆದ 75 ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಆರೋಪಿಸಿದ್ದಾರೆ.

40 ತಾಸುಗಳ ದಾಖಲೆ ಪರಿಶೀಲನೆ ಕೊನೆಗೊಂಡ ನಂತರ ಜಾರಿ ನಿರ್ದೇಶನಾಲಯವು ಗುರುವಾರ ಈ ಸಂಬಂಧ ಪ್ರಕಟಣೆ ಹೊರಡಿಸಿದೆ. 'ಪ್ರತಿ ಹುದ್ದೆ ₹20 ಲಕ್ಷದಿಂದ ₹30 ಲಕ್ಷಕ್ಕೆ ಮಾರಾಟವಾಗಿರುವ ಕುರಿತು ಕೋಚಿಮುಲ್ ನಿರ್ದೇಶಕರು ಮತ್ತು ನೇಮಕಾತಿ ಸಮಿತಿಯ ಸದಸ್ಯರು ಶೋಧ ಹಾಗೂ ಜಪ್ತಿ ಪ್ರಕ್ರಿಯೆ ವೇಳೆ ಒಪ್ಪಿಕೊಂಡಿದ್ದಾರೆ' ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಾಲೂರು ತಾಲ್ಲೂಕಿನ ಕೊಮ್ಮನಹಳ್ಳಿಯಲ್ಲಿರುವ ನಂಜೇಗೌಡ ನಿವಾಸ ಹಾಗೂ ಅವರಿಗೆ ಸಂಬಂಧಿಸಿದ 14 ಕಡೆ ಈಚೆಗೆ ಇ.ಡಿ ಅಧಿಕಾರಿಗಳು ಪರಿಶೀಲನೆ ನಡೆಸಿದ್ದರು.



ಕೋಚಿಮುಲ್ ಆಡಳಿತ ಮಂಡಳಿ ಕಚೇರಿ

ಕೋಲಾರ ತಾಲ್ಲೂಕಿನ ಬೆಳಗಾನಹಳ್ಳಿಯಲ್ಲಿರುವ ಕೋಚಿಮುಲ್ ಮುಖ್ಯ ಕಚೇರಿ ಮೇಲೂ ದಾಳಿ ನಡೆಸಿದ್ದರು. ಅಧಿಕಾರಿಗಳು ಹಾಗೂ ಕೆಲ ನಿರ್ದೇಶಕರನ್ನು ಕಚೇರಿಗೆ ಕರೆಸಿಕೊಂಡು ತನಿಖೆ ನಡೆಸಿದ್ದರು. ಕಂಪ್ಯೂಟರ್ ಸೇರಿದಂತೆ ವಿವಿಧ ದಾಖಲೆ ವಶಕ್ಕೆ ಪಡೆದಿದ್ದರು.

ಪ್ರಕ್ರಿಯೆ ತಿರುಚಲಾಗಿದೆ: 'ಅಭ್ಯರ್ಥಿಗಳ ನೇಮಕಾತಿ ಸಮಿತಿಯು ಇಡೀ ಸಂದರ್ಶನ ಪ್ರಕ್ರಿಯೆಯನ್ನೇ ತಿರುಚಿದೆ. ಅಂತಿಮ ಪಟ್ಟಿಯನ್ನು ಸಾರ್ವಜನಿಕವಾಗಿ ಪ್ರಕಟಿಸುವ ಮುನ್ನವೇ ಮಂಡಳಿ ತೀರ್ಮಾನದಂತೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿ ತರಬೇತಿಗೆ ಕಳುಹಿಸಲಾಗಿದೆ. ಕೆಲ ರಾಜಕಾರಣಿಗಳು ಅಭ್ಯರ್ಥಿಗಳ ಆಯ್ಕೆಗೆ ಶಿಫಾರಸು ಮಾಡಿದ್ದಾರೆ. ಅವರು ಶಿಫಾರಸು ಮಾಡಿದ 30 ಅಭ್ಯರ್ಥಿಗಳಿಗೆ ಹುದ್ದೆ ಲಭಿಸಿದೆ. ಹುದ್ದೆಗಳ ಮಾರಾಟದಲ್ಲಿ ಕೋಚಿಮುಲ್ ಅಧ್ಯಕ್ಷ ನಂಜೇಗೌಡ ನೇರವಾಗಿ ಭಾಗಿ ಆಗಿದ್ದು, ಸಂದರ್ಶನದ ಅಂಕ ಬದಲಾವಣೆಯಲ್ಲಿ ಕೈಚಳಕ ಪ್ರದರ್ಶಿಸಿದ್ದಾರೆ' ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

ಶೋಧಕ್ಕೆ ಮೂಲ ಕಾರಣ: 'ಮಾಲೂರು ತಾಲ್ಲೂಕು ವ್ಯಾಪ್ತಿಯಲ್ಲಿ ಸುಮಾರು ₹150 ಕೋಟಿ ಮೌಲ್ಯದ 80 ಎಕರೆ ಸರ್ಕಾರಿ ಜಮೀನನ್ನು ಅಕ್ರಮವಾಗಿ ಮಂಜೂರು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಶೋಧ ನಡೆಸಲಾಗಿದೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ–2002 (ಪಿಎಂಎಲ್ಎ) ಪ್ರಕಾರ ನಂಜೇಗೌಡ ಹಾಗೂ ಅವರ ಸಂಪರ್ಕದಲ್ಲಿರುವ ವ್ಯಕ್ತಿಗಳ ಮನೆಗಳಲ್ಲಿ ಶೋಧ ನಡೆಸಿ ಜಪ್ತಿ ಪ್ರಕ್ರಿಯೆ ಕೈಗೊಳ್ಳಲಾಗಿದೆ' ಎಂದು ಇ.ಡಿ ತಿಳಿಸಿದೆ.

'ಸಮಿತಿ ಅಧ್ಯಕ್ಷರಾಗಿದ್ದ ನಂಜೇಗೌಡ, ಸದಸ್ಯರು ಹಾಗೂ ಕಂದಾಯ ಅಧಿಕಾರಿಗಳು ಕೇವಲ ಒಂದು ತಿಂಗಳಲ್ಲಿ ನಾಲ್ಕು ಸಭೆ ನಡೆಸಿ ₹150 ಕೋಟಿ ಮೌಲ್ಯದ 80 ಎಕರೆ ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ ನಕಲಿ ದಾಖಲೆ ಸೃಷ್ಟಿಸಿದ್ದಾರೆ. ಅದನ್ನು ನಕಲಿ ಫಲಾನುಭವಿಗಳಿಗೆ ಮಂಜೂರು ಮಾಡಿ ಅಧಿಕಾರ ದುರುಪಯೋಗಿಸಿಕೊಂಡಿದ್ದಾರೆ. ಪ್ರಾದೇಶಿಕ ಆಯುಕ್ತರ ಪರಿಶೀಲನಾ ವರದಿ ಆಧಾರದ ಮೇಲೆ ಆ ಮಂಜೂರಾತಿ ರದ್ದಾಗಿದೆ. ಮಾರ್ಗಸೂಚಿಯನ್ನು ಉಲ್ಲಂಘಿಸಿ ದಾಖಲೆಗಳನ್ನು ತಿರುಚಿ ಅಕ್ರಮವಾಗಿ ಜಮೀನನ್ನು ಮಂಜೂರಾತಿ ಮಾಡಿರುವುದು ಶೋಧದ ವೇಳೆ ಪತ್ತೆಯಾಗಿದೆ. ಎಲ್ಲಾ ವಿಚಾರಗಳಲ್ಲಿ ತನಿಖೆ ಮುಂದುವರಿದಿದೆ' ಎಂದೂ ಪ್ರಕಟಣೆ ತಿಳಿಸಿದೆ.

ಘೋಷಣೆಗೆ ಮುನ್ನವೇ ಜಾಲತಾಣದಲ್ಲಿ ಪಟ್ಟಿ

ಕೋಚಿಮುಲ್‌ನ 75 ಹುದ್ದೆಗಳ ಭರ್ತಿಗೆ ನಡೆದ ನೇಮಕಾತಿ ವಿಚಾರದಲ್ಲಿ ಅಕ್ರಮ ನಡೆದಿರುವ ಆರೋಪ ಕೇಳಿ ಬಂದಿತ್ತು. ಘೋಷಣೆಗೆ ಮುನ್ನವೇ ಸಾಮಾಜಿಕ ಜಾಲತಾಣದಲ್ಲಿ ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಹರಿದಾಡಿತ್ತು. ಅಭ್ಯರ್ಥಿಗಳ ಹೆಸರಿನ ಮುಂದೆ ಶಿಫಾರಸು ಮಾಡಿದವರ ಹೆಸರೂ ಇತ್ತು. ಮಾಹಿತಿ ಹೊರಹಾಕಿದ್ದ ನಾಗೇಶ್ ಎಂಬ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.

ಜಾಲತಾಣದಲ್ಲಿ ಹರಿದಾಡಿದ್ದ ಪಟ್ಟಿಯಲ್ಲಿದ್ದ ಹಲವರು ಹೆಸರು ಕೋಚಿಮುಲ್ ಅಧ್ಯಕ್ಷ ನಂಜೇಗೌಡರು ಓದಿ ಹೇಳಿದ ಅಂತಿಮ ಪಟ್ಟಿಯಲ್ಲೂ ಕಾಣಿಸಿಕೊಂಡಿತ್ತು.

₹50 ಕೋಟಿ ಮೌಲ್ಯದ ಆಸ್ತಿ ದಾಖಲೆ ವಶ

'ನಂಜೇಗೌಡ ಅವರಿಗೆ ಸಂಬಂಧಿಸಿದ 14 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ₹25 ಲಕ್ಷ ನಗದು, ₹50 ಕೋಟಿ ಮೌಲ್ಯದ ಚರಾಸ್ತಿ ಹಾಗೂ ಸ್ಥಿರಾಸ್ತಿಗೆ ಸಂಬಂಧಿಸಿದ ವಿವಿಧ ದಾಖಲೆ, ಡಿಜಿಟಲ್ ದಾಖಲೆಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ' ಎಂದು ಜಾರಿ ನಿರ್ದೇಶನಾಲಯದ ಪ್ರಕಟಣೆ ತಿಳಿಸಿದೆ.

'ಎಫ್‌ಐಆರ್ ಆಧಾರದಲ್ಲಿ ಪ್ರಕರಣದ ತನಿಖೆ'

'ಅಕ್ರಮ ಭೂ ಮಂಜೂರಾತಿ ಪ್ರಕರಣ ಸಂಬಂಧ ಮಾಲೂರು ಠಾಣೆಯಲ್ಲಿ ಶಾಸಕ ನಂಜೇಗೌಡ ಹಾಗೂ ಇತರರ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಆಧರಿಸಿ ತನಿಖೆ ನಡೆಸಲಾಗುತ್ತಿದೆ. ನಂಜೇಗೌಡ ಭೂ ಮಂಜೂರಾತಿ ಸಮಿತಿ ಅಧ್ಯಕ್ಷರಾಗಿದ್ದರೆ, ಅಂದಿನ ಮಾಲೂರು ತಹಶೀಲ್ದಾರ್ ವಿ.ನಾಗರಾಜ್ ಹಾಗೂ ಇತರ ಆರೋಪಿಗಳು ಸದಸ್ಯರಾಗಿದ್ದರು' ಎಂದು ಜಾರಿ ನಿರ್ದೇಶನಾಲಯ ಉಲ್ಲೇಖಿಸಿದೆ.

ಸುದ್ದಿ 2 ನಿಮಿಷ

ಬರ ಪರಿಹಾರ ನಿಧಿಗೆ ನೌಕರರ ನೆರವು: ಸಿ.ಎಸ್.ಷಡಾಕ್ಷರಿ

ದಾವಣಗೆರೆ: ಸರ್ಕಾರ ಬಯಸಿದರೆ ರಾಜ್ಯ ಸರ್ಕಾರಿ ನೌಕರರ ಸಂಬಳದಿಂದ ಬರ ಪರಿಹಾರ ನಿಧಿಗೆ ನೆರವು ನೀಡುವುದಾಗಿ ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು.

ಪುಣ್ಯಕೋಟಿ ಯೋಜನೆಗೆ ₹50 ಕೋಟಿ, ಪ್ರವಾಹದ ಸಂದರ್ಭದಲ್ಲಿ ₹200 ಕೋಟಿ ಹಾಗೂ ಕೋವಿಡ್ ಸಂದರ್ಭ ಸೇರಿದಂತೆ ನಾನು ಅಧ್ಯಕ್ಷನಾಗಿರುವ ಅವಧಿಯಲ್ಲಿ ಒಟ್ಟು ₹1,000 ಕೋಟಿಯಷ್ಟು ನೆರವು ನೀಡಲಾಗಿದೆ. ಮುಖ್ಯಮಂತ್ರಿಯವರು ಈ ಸಂಬಂಧ ಚರ್ಚೆಗೆ ಆಹ್ವಾನಿಸಿದ್ದು, ಅವರ ಜೊತೆ ಚರ್ಚಿಸಿ ನೆರವು ಒದಗಿಸುವ ಬಗ್ಗೆ ತಿಳಿಸಲಾಗುವುದು' ಎಂದು ಸಿ.ಎಸ್.ಷಡಾಕ್ಷರಿ ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.



'7ನೇ ವೇತನ ಆಯೋಗದ ಶಿಫಾರಸು ಜಾರಿ, ಹಳೆ ಪಿಂಚಣಿ ವ್ಯವಸ್ಥೆ ಮರು ಸ್ಥಾಪನೆ, ಆರೋಗ್ಯ ಸಂಜೀವಿನಿ ಸೇರಿದಂತೆ ಇತರ ಬೇಡಿಕೆಗಳ ಈಡೇರಿಕೆಗೆ ಮುಖ್ಯಮಂತ್ರಿಯವರ ಗಮನ ಸೆಳೆಯುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿನ ಸಚಿವರು, ಶಾಸಕರು, ವಿಧಾನಪರಿಷತ್ ಸದಸ್ಯರಿಗೆ ಮನವಿ ಸಲ್ಲಿಸಲಾಗುತ್ತಿದೆ. ಮುಂಬರುವ ಬಜೆಟ್ ಒಳಗಾಗಿ ಸರ್ಕಾರ ನಮ್ಮ ಬೇಡಿಕೆಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಜ.14,15ರಂದು ಸಿಗಂದೂರು ಜಾತ್ರೆ

ಶಿವಮೊಗ್ಗ: ಸಾಗರ ತಾಲ್ಲೂಕಿನ ಸಿಗಂದೂರು ಚೌಡೇಶ್ವರಿ ದೇವಸ್ಥಾನದಲ್ಲಿ ಜನವರಿ 14 ಮತ್ತು 15ರಂದು ಮಕರ ಸಂಕ್ರಮಣ ಜಾತ್ರಾ ಮಹೋತ್ಸವ ಡೆಯಲಿದೆ ಎಂದು ದೇವಳದ ಆಡಳಿತ ಮಂಡಳಿ ತಿಳಿಸಿದೆ.

ಜ.14ರಂದು ಬೆಳಿಗ್ಗೆ 4 ಗಂಟೆಗೆ ಮಹಾಭಿಷೇಕ, ಅಲಂಕಾರ, ಆಭರಣ ಪೂಜೆ, ಚಂಡಿಕಾ ಹೋಮ ನೆರವೇರಲಿದೆ. ದೇವಸ್ಥಾನದ ಧರ್ಮದರ್ಶಿ ಎಸ್. ರಾಮಪ್ಪ ನೇತೃತ್ವದಲ್ಲಿ ನಡೆಯುವ ಜಾತ್ರಾ ಮಹೋತ್ಸವಕ್ಕೆ ಆರ್ಯ ಈಡಿಗ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ. ತಿಮ್ಮೇಗೌಡ ಚಾಲನೆ ನೀಡಲಿದ್ದಾರೆ.

ಬೆಳಿಗ್ಗೆ 8 ಗಂಟೆಗೆ ರಥ ಪೂಜೆಯೊಂದಿಗೆ ದೇವಿಯು ಮೂಲ ಸ್ಥಾನಕ್ಕೆ ಹೊರಡಲಿದ್ದು, ಕೇರಳದ ಶಿವಗಿರಿಯ ಬ್ರಹ್ಮಶ್ರೀ ನಾರಾಯಣ ಗುರು ಮಠದ ಪೀಠಾಧಿಪತಿ ಸಚ್ಚಿದಾನಂದ ಸ್ವಾಮೀಜಿಯವರು ಸೀಗೇ ಕಣಿವೆಯಲ್ಲಿ ಧರ್ಮ ಜ್ಯೋತಿಗೆ ಚಾಲನೆ ನೀಡಲಿದ್ದಾರೆ. ರಂಭಾಪುರಿ ಮಳಲಿಮಠದ ಗುರು ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಅದೇ ದಿನ ರಾತ್ರಿ 9.30ಕ್ಕೆ ಸಿಗಂದೂರು ಮೇಳದಿಂದ ಯಕ್ಷಗಾನ ಪ್ರದರ್ಶನ ನಡೆಯಲಿದೆ.

15ರ ಬೆಳಿಗ್ಗೆ 5ರಿಂದ ನವ ಚಂಡಿಕಾ ಹೋಮ, ರಾತ್ರಿ 8 ಗಂಟೆಗೆ ದುರ್ಗಾ ದೀಪ ನಮಸ್ಕಾರ, ಗುರು ಪೂಜೆ, ದೇವಿ ಪಾರಾಯಣ, ರಂಗಪೂಜೆ, ರಾತ್ರಿ 8.30ರಿಂದ ಕುದ್ರೋಳಿ ಗಣೇಶ ಮತ್ತು ಬಳಗದಿಂದ ಮ್ಯಾಜಿಕ್ ಶೋ ನಡೆಯಲಿದೆ. ಜಾತ್ರೆಯ ಅಂಗವಾಗಿ 2 ದಿನಗಳವರೆಗೆ ವಿವಿಧ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ನಾಲ್ಕು ವರ್ಷಗಳ ಪದವಿಗಳಿಗೆ ಕೊಕ್: ಚಿಂತನೆ

1 ಮಧ್ಯದಲ್ಲೇ ಪದವಿ ತೊರೆಯುವ ಅವಕಾಶ ಉಳಿಕೆಗೆ ಎಸ್‌ಇಪಿ ಆಯೋಗದ ಒಲವು

2 ಮೂರು ವರ್ಷದ ಪದವಿ ಪೂರೈಸಲು ಹೆಚ್ಚು ಜಾಗೃತಿ ಮೂಡಿಸಲು ಬಹುತೇಕರ ಸಲಹೆ

3 ಬಹು ವಿಷಯಗಳ ಐಚ್ಛಿಕ ಆಯ್ಕೆಯನ್ನು ಕೈಬಿಡಲು ಸದಸ್ಯರ ಒತ್ತಾಯ

ಪ್ರಜಾವಾಣಿ ವಾರ್ತೆ


ಸಾರ್ವಜನಿಕರು, ಪೋಷಕರು, ಶಿಕ್ಷಕರು, ವಿದ್ಯಾರ್ಥಿಗಳು ಸೇರಿ ನಾಲ್ಕು ವಿಭಾಗಗಳಲ್ಲಿ ಮೊದಲ ಸುತ್ತಿನ ಸಮಾಲೋಚನೆ

ಬೆಂಗಳೂರು: ನಾಲ್ಕು ವರ್ಷಗಳ ಪದವಿ, ಬಹು ವಿಷಯಗಳ ಐಚ್ಛಿಕ ಆಯ್ಕೆ ಸೇರಿದಂತೆ ರಾಷ್ಟ್ರೀಯ ಶಿಕ್ಷಣ ನೀತಿ ಪರಿಚಯಿಸಿದ್ದ ಹಲವು ವಿಷಯಗಳನ್ನು ಕೈಬಿಡಲು ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಆಯೋಗ ಚಿಂತನೆ ನಡೆಸಿದೆ.

ಆಯೋಗದ ಅಧ್ಯಕ್ಷ ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ ಜ.10ರಿಂದ ಆರಂಭವಾದ ಸರಣಿ ಸಭೆಗಳಲ್ಲಿ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಶಿಕ್ಷಣ ತಜ್ಞರು, ವಿಷಯ ಪರಿಣತರು, ಆಯೋಗ ಸದಸ್ಯರು ಹಾಗೂ ಸಲಹಾ ಸಮಿತಿ ಸದಸ್ಯರು ಎನ್‌ಇಪಿಯಲ್ಲಿನ ಹಲವು ವಿಷಯಗಳ ಕುರಿತು ಸುದೀರ್ಘ ಚರ್ಚೆ ನಡೆಸಿದರು.

ಎನ್‌ಇಪಿಯನ್ನು ಸಂಪೂರ್ಣ ತಿರಸ್ಕರಿಸುವ ಬದಲು ಅದರಲ್ಲಿನ ಮುಖ್ಯ ವಿಚಾರಗಳನ್ನು ರಾಜ್ಯ ಶಿಕ್ಷಣ ನೀತಿಯಲ್ಲೂ ಅಳವಡಿಸಿಕೊಳ್ಳಬೇಕು. ಬೇರೆ ರಾಜ್ಯಗಳಲ್ಲಿ ಎನ್‌ಇಪಿ ಜಾರಿಗೆ ನಡೆಸಿದ್ದ ಸಿದ್ಧತೆ, ಅದರ ಸಾಧಕ–ಬಾಧಕಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು. ಉತ್ತಮ ಅಂಶಗಳಿಗೆ ಮನ್ನಣೆ ನೀಡಬೇಕು ಎಂದು ಹಲವರು ಸಲಹೆ ನೀಡಿದರು ಎಂದು ಮೂಲಗಳು ಹೇಳಿವೆ.

ಒಮ್ಮೆ ಪದವಿಗೆ ಸೇರಿದವರು ಮಧ್ಯದಲ್ಲೇ ಪದವಿ ತೊರೆದರೂ, ಒಂದು, ಎರಡು, ಮೂರು ವರ್ಷಗಳ ಪದವಿ ಪ್ರಮಾಣಪತ್ರ ನೀಡುವುದು ಉದ್ಯೋಗಕ್ಕೆ ಸೇರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಬಹುದು. ಹಾಗಾಗಿ, ಎನ್‌ಇಪಿಯಲ್ಲಿ ಅಳವಡಿಸಿದ್ದ ಬಹು ಪ್ರವೇಶ, ಬಹು ನಿರ್ಗಮನದ ಪದವಿಯ ಅವಕಾಶಗಳನ್ನು ಉಳಿಸಿಕೊಳ್ಳಬೇಕು ಎಂದು ಕೆಲ ಸದಸ್ಯರು ಅಭಿಪ್ರಾಯ ಮಂಡಿಸಿದರು. ಆದರೆ, ವಿದ್ಯಾರ್ಥಿಗಳು ಮೂರು ವರ್ಷದ ಪದವಿ ಪೂರೈಸಲು ಹೆಚ್ಚು ಜಾಗೃತಿ ಮೂಡಿಸಬೇಕು ಎಂದು ಬಹುತೇಕರು ಸಲಹೆ ನೀಡಿದರು ಎಂದು ಆಯೋಗದ ಮೂಲಗಳು ತಿಳಿಸಿವೆ.

'ರಾಜ್ಯದ ಹೊಸ ಶಿಕ್ಷಣ ನೀತಿಯು ಎಲ್ಲ ವರ್ಗದ ಮಕ್ಕಳ ಭವಿಷ್ಯದ ಶಿಕ್ಷಣಕ್ಕೆ ಬುನಾದಿಯಾಗಲಿದೆ. ಮೊದಲ ಹಂತದಲ್ಲಿ ಶಾಲೆ ಮತ್ತು ಉನ್ನತ ಶಿಕ್ಷಣದ ಪ್ರಸ್ತುತ ಸ್ಥಿತಿಗತಿಗಳನ್ನು ಪರಿಶೀಲಿಸಲಾಗಿದೆ. ಈಗಾಗಲೇ ಎನ್‌ಇಪಿ ಪರಿಚಯಿಸಿದ ನಂತರ ನಡೆದ ದಾಖಲಾತಿ, ಪ್ರವೇಶ, ಆಡಳಿತ ರಚನೆ, ಹಣಕಾಸು ಮತ್ತು ಧನಸಹಾಯ, ವೆಚ್ಚ, ಗುಣಮಟ್ಟದ ಶಿಕ್ಷಣ, ದೂರ ಶಿಕ್ಷಣ ಮತ್ತು ಆನ್‌ಲೈನ್ ಶಿಕ್ಷಣ, ಅಧ್ಯಾಪಕರು ಮತ್ತು ಮೌಲ್ಯ ಶಿಕ್ಷಣದಂತಹ ಅಂಶಗಳತ್ತ ಗಮನಹರಿಸಲಾಗಿದೆ. ಎನ್‌ಇಪಿಯಲ್ಲಿನ ಒಳ್ಳೆಯ ಹಾಗೂ ಅಗತ್ಯವಿಲ್ಲದ ವಿಷಯಗಳನ್ನು ಪ್ರತ್ಯೇಕಗೊಳಿಸಲಾಗಿದೆ. ಆ ಕುರಿತು ಮೂರು ದಿನಗಳು ಸುದೀರ್ಘ ಚರ್ಚೆ ನಡೆಸುತ್ತಿದ್ದೇವೆ' ಎಂದು ಆಯೋಗದ ಸದಸ್ಯರೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಕಲಾ ವಿದ್ಯಾರ್ಥಿಯೊಬ್ಬ ವಿಜ್ಞಾನದ ಒಂದು ವಿಷಯ ತೆಗೆದುಕೊಂಡರೆ ಆ ಕಾಲೇಜಿನಲ್ಲಿ ಪ್ರಯೋಗಾಲಯ ಅಗತ್ಯಬೇಕಿರುತ್ತದೆ. ಅದಕ್ಕೆ ತಕ್ಕಂತಹ ಸೌಕರ್ಯ ಒದಗಿಸದೇ ಹೊಸ ನೀತಿ ಅನುಷ್ಠಾನಗೊಳಿಸಿದರೆ ಆ ವಿದ್ಯಾರ್ಥಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಇಂತಹ ಎಲ್ಲ ನ್ಯೂನತೆಗಳನ್ನು ಸರಿಪಡಿಸಿಕೊಂಡು, ಇತರೆ ರಾಜ್ಯಗಳು, ಹಿಂದಿನ ಶಿಕ್ಷಣ ನೀತಿಯನ್ನು ಪರಿಶೀಲಿಸಿ, ಸಮಗ್ರ ರಾಜ್ಯ ಶಿಕ್ಷಣ ನೀತಿ ಜಾರಿಗೆ ತರಲಾಗುವುದು ಎಂದು ಹೇಳಿದರು.

ಎಸ್‌ಇಪಿ ಆಯೋಗ ಈಗಾಗಲೇ ಸಾರ್ವಜನಿಕರು, ಪೋಷಕರು, ಶಿಕ್ಷಕರು, ವಿದ್ಯಾರ್ಥಿಗಳು ಸೇರಿ ನಾಲ್ಕು ವಿಭಾಗಗಳಲ್ಲಿ ಮೊದಲ ಸುತ್ತಿನ ಸಮಾಲೋಚನೆ ನಡೆಸಿದೆ. ನೀತಿಯ ಕುರಿತು ಅವರ ಜತೆ ಸಂವಹನ ನಡೆಸಿ, ಪ್ರತಿಕ್ರಿಯೆಗಳನ್ನು ದಾಖಲಿಸಿದೆ.

ಡ್ರೋನ್ ಚಿತ್ರೀಕರಣ ಎಸಿಎಫ್‌ಗೆ ನೋಟಿಸ್


ಪ್ರಜಾವಾಣಿ ವಾರ್ತೆ

ಚಾಮರಾಜನಗರ/ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿರುವ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಪತ್ರಕರ್ತ ವಿಶ್ವೇಶ್ವರ ಭಟ್ ಅವರು ಡ್ರೋನ್ ಕ್ಯಾಮರಾದಲ್ಲಿ ವಿಡಿಯೊ ಚಿತ್ರೀಕರಣ ಮಾಡಿರುವ ಪ್ರಕರಣ ಸಂಬಂಧ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗೆ ನೋಟಿಸ್ ನೀಡಿ ತನಿಖೆ ನಡೆಸುವಂತೆ ಸೂಚಿಸಲಾಗಿದೆ.

ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪಿ.ರಮೇಶ್ ಕುಮಾರ್ ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದು, 'ಬೆಟ್ಟದಲ್ಲಿ ಡ್ರೋನ್ ಬಳಕೆ ಮಾಡಲು ಅನುಮತಿ ಪಡೆದಿಲ್ಲ. ಸಂಜೆ ಅಲ್ಲಿಗೆ ತೆರಳಲು ಅನುಮತಿ ನೀಡಿದ್ದು ಯಾರು ಎಂಬುದೂ ಗೊತ್ತಿಲ್ಲ' ಎಂದು ಹೇಳಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ, ಅರಣ್ಯ ಇಲಾಖೆಯ ಹುಲಿ ಯೋಜನೆ ವಿಭಾಗದ ಎಪಿಸಿಸಿಎಫ್ ಅವರ ಕಚೇರಿಗೆ ದೂರು ಕೂಡ ಸಲ್ಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಇತ್ತೀಚೆಗೆ ಒಂದು ದಿನ, ಬೆಟ್ಟಕ್ಕೆ ಸಂಜೆ 4.40ರ ಬಳಿಕ ಭೇಟಿ ನೀಡಿದ್ದ ವಿಶ್ವೇಶ್ವರ ಭಟ್, ಡ್ರೋನ್ ಕ್ಯಾಮೆರಾದ ಮೂಲಕ ದೇವಾಲಯದ ಆವರಣದಲ್ಲಿ ಚಿತ್ರೀಕರಣ ನಡೆಸಿದ್ದರು. ಅದನ್ನು ಫೇಸ್‌ಬುಕ್ ಹಾಗೂ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು.


ಡ್ರೋನ್ ಕ್ಯಾಮೆರಾದಲ್ಲಿ ಸೆರೆಯಾದ ಹಿಮವದ್ ಗೋಪಾಲಸ್ವಾಮಿ ದೇವಾಲಯದ ನೋಟ (ವಿಡಿಯೊ ಚಿತ್ರ)

ಸಂರಕ್ಷಿತ ಪ್ರದೇಶದಲ್ಲಿ ಅರಣ್ಯ ಇಲಾಖೆಯ ಅನುಮತಿ ಇಲ್ಲದೆ ವಿಡಿಯೊ ಚಿತ್ರೀಕರಣ ಮಾಡುವಂತಿಲ್ಲ. ಜೊತೆಗೆ ಸಂಜೆ 4.30ರ ನಂತರ ಸಾರ್ವಜನಿಕರು ಅಲ್ಲಿಗೆ ಭೇಟಿ ನೀಡುವಂತಿಲ್ಲ. ಈ ಬಗ್ಗೆ ವಾಟ್ಸ್‌ಆ್ಯಪ್ ಗ್ರೂಪುಗಳಲ್ಲಿ ತೀವ್ರ ಚರ್ಚೆ ನಡೆದಿದೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ವಿಶ್ವೇಶ್ವರ ಭಟ್, 'ನಾನೊಬ್ಬ ಡ್ರೋನ್ ಛಾಯಾಗ್ರಾಹಕ. ಅದಕ್ಕೆ ಸಂಬಂಧಿಸಿದ ಅನುಮತಿ ನನ್ನ ಬಳಿ ಇದೆ' ಎಂದರು.



ಮಹಾಬಲೇಶ್ವರನ ದರ್ಶನ

ಗೋಕರ್ಣದ ಆತ್ಮಲಿಂಗಕ್ಕೆ ಪೂಜೆ ಸಲ್ಲಿಸಿದ ಬಹುಭಾಷಾ ನಟಿ ಸಾಯಿ ಪಲ್ಲವಿ ಅವರಿಗೆ ದೇವರ ಚಿತ್ರ ನೀಡಲಾಯಿತು

'ಖಾಸಗಿ ದೇಗುಲಗಳಲ್ಲಿ ಸಭ್ಯ ಉಡುಪು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವಸ್ಥಾನಗಳಿಗೆ ಬರುವವರು ಸಭ್ಯ ಉಡುಪು ಧರಿಸಬೇಕು ಎಂಬ ನಿಯಮವನ್ನು ಎಲ್ಲ ಖಾಸಗಿ ದೇವಸ್ಥಾನಗಳಲ್ಲಿ ಜಾರಿ ಮಾಡುವ ಅಭಿಯಾನವನ್ನು ಕರ್ನಾಟಕ ದೇವಸ್ಥಾನ, ಮಠ ಮತ್ತು ಧಾರ್ಮಿಕ ಸಂಸ್ಥೆಗಳ ಮಹಾಸಂಘ ಆರಂಭಿಸಿದೆ.

ಬೆಂಗಳೂರಿನ 54 ದೇವಸ್ಥಾನಗಳು ಸೇರಿದಂತೆ ರಾಜ್ಯದ 500 ದೇವಸ್ಥಾನಗಳಲ್ಲಿ ಈ ಬಗ್ಗೆ ಸೂಚನಾ ಫಲಕಗಳನ್ನು ಅಳವಡಿಸಲಾಗುವುದು. ವಸಂತನಗರದ ಲಕ್ಷ್ಮೀ ವೆಂಕಟರಮಣ ದೇವಸ್ಥಾನದಲ್ಲಿ ಫಲಕ ಅಳವಡಿಸುವ ಮೂಲಕ ಈ ಅಭಿಯಾನ ಆರಂಭಿಸಲಾಗಿದೆ ಎಂದು ಮಹಾಸಂಘದ ಸಂಚಾಲಕ ಮೋಹನ್ ಗೌಡ ತಿಳಿಸಿದ್ದಾರೆ.

ದತ್ತಿ ಇಲಾಖೆ ಅಧೀನದಲ್ಲಿರುವ ದೇವಸ್ಥಾನಗಳಲ್ಲಿ ಕೂಡ ಸಭ್ಯ ವಸ್ತ್ರ ಸಂಹಿತೆ ಜಾರಿಗೊಳಿಸುವಂತೆ ರಾಜ್ಯ ಹಿಂದೂ ಧಾರ್ಮಿಕ ದತ್ತಿ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.



ವಸಂತ ನಗರದ ಲಕ್ಷ್ಮೀ ವೆಂಕಟರಮಣ ದೇವಸ್ಥಾನದಲ್ಲಿ ಫಲಕ ಅಳವಡಿಸುವ ಮೂಲಕ ಸಭ್ಯ ಉಡುಪು ಧರಿಸುವ ಜಾಗೃತಿ ಅಭಿಯಾನವನ್ನು ಕರ್ನಾಟಕ ದೇವಸ್ಥಾನ, ಮಠ ಮತ್ತು ಧಾರ್ಮಿಕ ಸಂಸ್ಥೆಗಳ ಮಹಾಸಂಘ ಆರಂಭಿಸಿತು.

ಏನೆಲ್ಲ ಧರಿಸಬಹುದು: ಮಹಿಳೆಯರು ಚೂಡಿದಾರ, ಲಂಗ-ದಾವಣಿ, ಸಲ್ವಾರ್-ಕುರ್ತಾ, ಸೀರೆ, ಪುರುಷರು ಕುರ್ತಾ, ಧೋತಿ, ಪಂಚೆ, ಪೈಜಾಮ ಅಥವಾ ಸಾಮಾನ್ಯ ಶರ್ಟ್-ಪ್ಯಾಂಟ್‌ಗಳನ್ನು ಧರಿಸಬಹುದು.

ಯಾವುದು ಬೇಡ: ಪಾಶ್ಚಿಮಾತ್ಯ ಉಡುಪುಗಳಲ್ಲಿ ಸ್ಕರ್ಟ್, ಮಿಡಿ, ಶಾರ್ಟ್ ಪ್ಯಾಂಟ್, ಸ್ಯಾಂಡೋ ವೆಸ್ಟ್, ಜೀನ್ಸ್, ಸ್ಕರ್ಟ್, ಸ್ಲೀವ್‌ಲೆಸ್ ಡ್ರೆಸ್, ನೈಟ್ ಡ್ರೆಸ್ ಹಾಗೂ ಯಾವುದೇ ತುಂಡು ಉಡುಗೆಗಳನ್ನು ಧರಿಸಿ ಬರುವಂತಿಲ್ಲ.

'ಬೆಂಗಳೂರಿನಲ್ಲಿ ಶೇ 99ರಷ್ಟು ಭಕ್ತರು ಸಭ್ಯ ಉಡುಗೆಯಲ್ಲಿಯೇ ಬರುತ್ತಾರೆ. ಎಲ್ಲರ ದೃಷ್ಟಿ, ಮನಸ್ಸು ದೇವರ ಮೇಲೆಯೇ ಇರಬೇಕು ಎಂಬ ಕಾರಣಕ್ಕೆ ಎಲ್ಲರೂ ಸಭ್ಯ ಉಡುಗೆಯನ್ನೇ ಧರಿಸಿ ದೇವಸ್ಥಾನಕ್ಕೆ ಬರಲಿ. ತುಂಡು ಉಡುಗೆ ಬೇಡ ಎಂಬುದು ನನ್ನ ಮನಸ್ಸಲ್ಲೂ ಇದೆ. ಎಲ್ಲ ಭಕ್ತರ ಅಭಿಪ್ರಾಯವೂ ಅದುವೇ ಆಗಿದೆ. ಅದರ ಬಗ್ಗೆ ಫಲಕವನ್ನು ದೇವಸ್ಥಾನದಲ್ಲಿ ಅಳವಡಿಸಲು ತಯಾರಿ ನಡೆಸಿದ್ದೇವೆ' ಎಂದು ರಾಜಾಜಿನಗರ ವಾಸವಿ ದೇವಸ್ಥಾನದ ಧರ್ಮದರ್ಶಿ ಎ.ಎಸ್.ಎನ್. ಗುಪ್ತ ಪ್ರತಿಕ್ರಿಯಿಸಿದರು.

'ನಮ್ಮಲ್ಲಿ ಅಧಿಕೃತವಾಗಿ ವಸ್ತ್ರಸಂಹಿತೆ ಜಾರಿಯಲ್ಲಿ ಇಲ್ಲದೇ ಇದ್ದರೂ ಎಲ್ಲರೂ ಸಭ್ಯ ಉಡುಪು ಧರಿಸಿಯೇ ಬರುತ್ತಾರೆ. ಸರ್ಕಾರದಿಂದ ಅಧಿಕೃತ ಆದೇಶ ಬಂದರೆ ನಿಯಮ ಪಾಲಿಸುತ್ತೇವೆ' ಎಂದು ಆನೆಗುಡ್ಡೆ ವಿನಾಯಕ ದೇವಸ್ಥಾನದ ವ್ಯವಸ್ಥಾಪಕ ನಟೇಶ್ ಕಾರಂತ್ 'ಪ್ರಜಾವಾಣಿ'ಗೆ ತಿಳಿಸಿದರು.

> **ಮುಜರಾಯಿ ಇಲಾಖೆಯ ಅಡಿಯಲ್ಲಿ ಬರುವ ದೇಗುಲಗಳಲ್ಲಿ ಇರುವ ಪದ್ಧತಿಯನ್ನೇ ಮುಂದುವರಿಸಲಾಗುವುದು. ಹೊಸ ವಸ್ತ್ರ ನಿಯಮ ಜಾರಿ ಮಾಡುವ ಅಗತ್ಯವಿಲ್ಲ**
> **ರಾಮಲಿಂಗಾರೆಡ್ಡಿ**, ಮುಜರಾಯಿ ಇಲಾಖೆ ಸಚಿವ

ಗುತ್ತಿಗೆದಾರನನ್ನು ಹಿಡಿದುಕೊಟ್ಟ ಅಧಿಕಾರಿ!

ಹಾವೇರಿ: 'ಟೆಂಡರ್‌ದಾರ ಲಂಚ ಕೊಡುವ ಆಮಿಷ ಒಡ್ಡುತ್ತಿದ್ದಾನೆ' ಎಂದು ಸರ್ಕಾರಿ ಅಧಿಕಾರಿ ದೂರು ನೀಡಿ, ಟೆಂಡರ್‌ದಾರನನ್ನು ಲೋಕಾಯುಕ್ತ ಪೊಲೀಸರಿಗೆ ಒಪ್ಪಿಸಿದ ಘಟನೆ ನಗರದಲ್ಲಿ ಗುರುವಾರ ನಡೆದಿದೆ.

ತಾಲ್ಲೂಕಿನ ಗುತ್ತಲದ ಗುರುಕೃಪಾ ಎಂಟರ್‌ಪ್ರೈಸಸ್ ಮಾಲೀಕ ಶರಣಪ್ಪ ಸಿದ್ದಪ್ಪ ಶೆಟ್ಟರ್ ಬಂಧಿತ ಟೆಂಡರ್‌ದಾರ. ಇವರ ವಿರುದ್ಧ ಹಾವೇರಿ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಭರತ್ ಹೆಗಡೆ ದೂರು ಕೊಟ್ಟಿದ್ದರು.

ಏನಿದು ಪ್ರಕರಣ: ಹಾವೇರಿ ತಾಲ್ಲೂಕು ಪಂಚಾಯಿತಿಯಿಂದ ಸಾಮಗ್ರಿ ಪೂರೈಕೆಗಾಗಿ ಕರೆದ ಟೆಂಡರ್‌ನಲ್ಲಿ ಶರಣಪ್ಪ ಅವರು 'ಈ ಟೆಂಡರ್ ನನಗೆ ಸಿಗುವಂತೆ ಮಾಡಿದ್ದಲ್ಲಿ ಟೆಂಡರ್ ಮೊತ್ತದ ಶೇ 20ರಷ್ಟು ಹಣ ನಿಮಗೆ ಕೊಡುತ್ತೇನೆ ಎಂದು ಹೇಳಿ, ಲಂಚ ತೆಗೆದುಕೊಳ್ಳುವಂತೆ ಆಮಿಷ ಒಡ್ಡಿದ್ದರು' ಎಂದು ಭರತ್ ಹೆಗಡೆ ಲೋಕಾಯುಕ್ತರಿಗೆ ದೂರು ನೀಡಿದ್ದರು.

ನಗರದ ಹೋಟೆಲ್‌ನಲ್ಲಿ ₹90 ಸಾವಿರ ಲಂಚ ಕೊಡುತ್ತಿದ್ದ ವೇಳೆ ಆರೋಪಿಯನ್ನು ಬಂಧಿಸಲಾಗಿದೆ. 'ಸರ್ಕಾರಿ ಅಧಿಕಾರಿ ಲಂಚ ಕೊಡುವವನನ್ನೇ ಹಿಡಿದುಕೊಟ್ಟಿದ್ದಾರೆ' ಎಂದು ಲೋಕಾಯುಕ್ತ ಡಿವೈಎಸ್ಪಿ ಚಂದ್ರಶೇಖರ ಬಿ.ಪಿ. ತಿಳಿಸಿದರು.

ಸೇನಾ ನರ್ಸಿಂಗ್ ಹುದ್ದೆ: ಶೇ 100ರ ಮಹಿಳಾ ಮೀಸಲು ಕಾನೂನು ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸೇನೆಯಲ್ಲಿ ನರ್ಸಿಂಗ್ ಹುದ್ದೆಗಳನ್ನು ಸಂಪೂರ್ಣವಾಗಿ ಮಹಿಳೆಯರಿಗೇ ಮೀಸಲು ಇರಿಸುವ ನಿಟ್ಟನಲ್ಲಿ, ಭಾರತೀಯ ಮಿಲಿಟರಿ ನರ್ಸಿಂಗ್ ಸೇವೆಗಳ ಸುಗ್ರೀವಾಜ್ಞೆ-1943ರ ಕಲಂ 6ರಲ್ಲಿ ಬಳಕೆ ಮಾಡಲಾಗಿದ್ದ 'ಮಹಿಳೆಯಾಗಿದ್ದರೆ' ಎಂಬ ಪದವನ್ನು ಹೈಕೋರ್ಟ್, ಅಸಾಂವಿಧಾನಿಕ ಎಂದು ಘೋಷಿಸಿದೆ.

ಈ ಸಂಬಂಧ ಹುಬ್ಬಳ್ಳಿಯಲ್ಲಿರುವ 'ಕರ್ನಾಟಕ ಲಿಂಗಾಯತ ವಿದ್ಯಾ ಸಂಸ್ಥೆ'ಯ (ಕೆಎಲ್‌ಇಎಸ್) ನರ್ಸಿಂಗ್ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಸಂಜಯ ಎಂ.ಪೀರಾಪುರ, ಬೋಧಕ ಶಿವಪ್ಪ ಮಾರನಬಸರಿ ಮತ್ತು 'ಕರ್ನಾಟಕ ಶುಶ್ರೂಷಕರ ಸಂಘ'ದ ಕಾರ್ಯದರ್ಶಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ಅರ್ಜಿದಾರರ ಮನವಿಯನ್ನು ಭಾಗಶಃ ಪುರಸ್ಕರಿಸಿದೆ.

'ಈ ರೀತಿಯ ಮೀಸಲಾತಿ ನೀಡುವುದು ಸಂವಿಧಾನದ 14ನೇ ವಿಧಿ, (ಸಮಾನತೆ), 16 (2)(ಲಿಂಗ ತಾರತಮ್ಯ)ನೇ ವಿಧಿ ಹಾಗೂ 21ನೇ ವಿಧಿಗಳನ್ನು (ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಹಕ್ಕು) ಉಲ್ಲಂಘಿಸಿದಂತೆ' ಎಂಬ ಅಭಿಪ್ರಾಯ ವ್ಯಕ್ತಪಡಿಸುವ ಮೂಲಕ 81 ವರ್ಷಗಳ ಹಳೆಯ ಕಾನೂನನ್ನು ರದ್ದುಗೊಳಿಸಿದೆ.

'ಸ್ವಾಂತಂತ್ರ್ಯ ಪೂರ್ವದಲ್ಲಿ ಮಹಿಳೆಯರು ಸೇನೆಗೆ ಸೇರಲು ಹಿಂಜರಿಯುತ್ತಿದ್ದರು. ಹಾಗಾಗಿ, ಅವರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಅವರಿಗಾಗಿಯೇ ಪ್ರತ್ಯೇಕವೆಂದು ಶೇ 100ರ ಮೀಸಲಾತಿ ಕಲ್ಪಿಸಲಾಗಿತ್ತು. ಆದರೆ, 1943ರಲ್ಲಿ ಇದ್ದಂತಹ ಪರಿಸ್ಥಿತಿ ಈಗಿಲ್ಲ. ಸಕಾರಣಗಳಿಲ್ಲದೆ ಮಹಿಳೆಯರಿಗೆ ಶೇ 100ರಷ್ಟು ಅವಕಾಶ ನೀಡಿದಲ್ಲಿ ಮೀಸಲಾತಿಯ ಕಲ್ಪನೆಯನ್ನೇ ಅಂತ್ಯಗೊಳಿಸಿದಂತಾಗುತ್ತದೆ. ಅಂತೆಯೇ, ಮೀಸಲು ಸೌಲಭ್ಯದಿಂದ ಪುರುಷರನ್ನು ಪ್ರತ್ಯೇಕಿಸಿದಂತಾಗಲಿದೆ' ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?: ಶುಶ್ರೂಷಕಿಯರ ನೇಮಕಾತಿಗೆ ಸಂಬಂಧಿಸಿದಂತೆ ಭಾರತೀಯ ಸೇನೆ 2010ರ ಫೆಬ್ರುವರಿ 13 ಮತ್ತು 19ರಂದು ಅಧಿಸೂಚನೆ ಹೊರಡಿಸಿತ್ತು. ಈ ಅಧಿಸೂಚನೆಯಲ್ಲಿ 'ಮಹಿಳೆಯರಿಗೆ' ಮಾತ್ರ ಎಂದು ತಿಳಿಸಲಾಗಿತ್ತು.

ಬೆಂಗಳೂರು, ಬೆಳಗಾವಿ, ವಿಜಯಪುರ ಜಿಲ್ಲೆಯಲ್ಲಿ ಅತ್ಯಧಿಕ ಪ್ರಕರಣ

ರಾಜ್ಯದಲ್ಲಿ 28,657 ಬಾಲ ಗರ್ಭಿಣಿಯರು!

• ಬಸವರಾಜ್ ಸಂಪಳ್ಳಿ

ವಿಜಯಪುರ: ರಾಜ್ಯದಲ್ಲಿ ಬಾಲಕಿಯರು 18 ವರ್ಷ ತುಂಬುವ ಒಳಗೆ ಗರ್ಭಿಣಿ ಆಗುತ್ತಿರುವ ಪ್ರಕರಣಗಳಲ್ಲಿ ಭಾರಿ ಏರಿಕೆ ಆಗಿದೆ.

ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (ಆರ್‌ಸಿಎಚ್) ಪೋರ್ಟಲ್ ಪ್ರಕಾರ, 2023ರ ಜನವರಿಯಿಂದ ನವೆಂಬರ್ ವರೆಗಿನ 11 ತಿಂಗಳಲ್ಲಿ ರಾಜ್ಯದ 28,657 ಬಾಲಕಿಯರು ಗರ್ಭಿಣಿಯರು ಆಗಿದ್ದಾರೆ.

ರಾಜ್ಯದಲ್ಲಿ ಅತಿ ಹೆಚ್ಚು ಅಂದರೆ, 2,815 ಬಾಲಗರ್ಭಿಣಿಯರು ಬೆಂಗಳೂರಿನಲ್ಲಿದ್ದರೆ, ಬೆಳಗಾವಿ ಜಿಲ್ಲೆಯಲ್ಲಿ 2,254 ಮಂದಿ ಗರ್ಭಿಣಿಯರು ಇದ್ದಾರೆ. ವಿಜಯಪುರ ಜಿಲ್ಲೆಯಲ್ಲಿ 2,004 ಬಾಲಕಿಯರು ಗರ್ಭಿಣಿಯರಾಗಿದ್ದರೆ, ಅತೀ ಕಡಿಮೆ ಅಂದರೆ, 56 ಪ್ರಕರಣಗಳು ಉಡುಪಿ ಜಿಲ್ಲೆಯಲ್ಲಿ ಬೆಳಕಿಗೆ ಬಂದಿವೆ.

'ಬಾಲಕಿಯರು ಗರ್ಭಿಣಿ ಆಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪೋಕ್ಸೊ ಕಾಯ್ದೆ 2012 ಸೆಕ್ಷನ್ 19ರಡಿ ಪೊಲೀಸ್ ಠಾಣೆಗೆ ದೂರು ನೀಡಬೇಕಿತ್ತು. ಆದರೆ, ಈ ಕೆಲಸ ನಡೆದಿಲ್ಲ' ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ 'ಪ್ರಜಾವಾಣಿ'ಗೆ ತಿಳಿಸಿದರು.



> **ಸಂತ್ರಸ್ತೆಯರಿಗೆ ಪರಿಹಾರ ಕ್ರಮಕ್ಕೆ ಸರ್ಕಾರ ಮುಂದಾಗಬೇಕು. ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳು ನಡೆಯುವುದನ್ನು ಕಟ್ಟುನಿಟ್ಟಾಗಿ ತಡೆಯಬೇಕು**
> **ಶಶಿಧರ ಕೋಸಂಬೆ,** ಸದಸ್ಯ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

'ರಾಜ್ಯದಲ್ಲಿ ಗ್ರಾಮದಿಂದ ರಾಜ್ಯಮಟ್ಟದವರೆಗೆ 59 ಸಾವಿರ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಇದ್ದಾರೆ. ಬಾಲ್ಯ ವಿವಾಹ ತಡೆಗೆ ಸಾಕಷ್ಟು ಜಾಗೃತಿ ಮೂಡಿಸಲಾಗುತ್ತಿದೆ. ಆದರು ಸಹ ನಿಯಂತ್ರಣಕ್ಕೆ ಬಂದಿಲ್ಲ' ಎಂದರು.

'ಶಾರೀರಿಕ ಮತ್ತು ಬೌದ್ಧಿಕವಾಗಿ ಬೆಳವಣಿಗೆ ಆಗದೇ ವಿವಾಹವಾಗುವ ಬಾಲಕಿಯರಿಗೆ ಹಲವು ಸ್ವರೂಪಗಳಲ್ಲಿ ಅನಾರೋಗ್ಯ ಸಮಸ್ಯೆ ಕಾಡುತ್ತದೆ. ಗರ್ಭಿಣಿಯರಾದರೆ ರಕ್ತಹೀನತೆ ಮತ್ತು ಪೌಷ್ಟಿಕಾಂಶದ ಕೊರತೆ ತಲೆದೋರುತ್ತದೆ. ತಾಯಿ ಮತ್ತು ಮಗು ಸಾವನ್ನಪ್ಪುವ ಸಾಧ್ಯತೆ ಇರುತ್ತದೆ. ಜನಿಸುವ ಮಕ್ಕಳು ಅಪೌಷ್ಟಿಕತೆಯಿಂದ ಬಳಲುವ ಸಾಧ್ಯತೆ ಇರುತ್ತದೆ' ಎಂದರು.

'ಬಾಲಕಿಯರು ಗರ್ಭಿಣಿ ಆಗುವುದನ್ನು ತಡೆಯಲು ಸಾಧ್ಯವಿಲ್ಲ. ಅವರ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡುತ್ತೇವೆ. ಬಾಲಕಿಯರು ಗರ್ಭಿಣಿ ಆಗುವುದು ತಡೆಯಬೇಕಿದ್ದರೆ, ಬಾಲ್ಯ ವಿವಾಹಗಳನ್ನು ಸಂಪೂರ್ಣವಾಗಿ ನಿಯಂತ್ರಿಸಬೇಕು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹೆಚ್ಚು ಒತ್ತು ನೀಡಬೇಕು' ಎಂದು ವಿಜಯಪುರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆರ್‌ಸಿಎಚ್ ಅಧಿಕಾರಿ ಡಾ. ಗುಂಡಬಾವಡಿ ಕೆ.ಡಿ ತಿಳಿಸಿದರು.

ಬಾಲ ಗರ್ಭಿಣಿಯರು ವಿಷಯಕ್ಕೆ ಸಂಬಂಧಿಸಿದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೆಂಗಳೂರು ಕೇಂದ್ರ ಕಚೇರಿಯ ಆರ್‌ಸಿಎಚ್ ವಿಭಾಗದ ಉಪ ನಿರ್ದೇಶಕ ಡಾ.ಎನ್. ರಾಜಕುಮಾರ್ ಅವರನ್ನು ಸಂಪರ್ಕಿಸಲಾಯಿತು. ಆದರೆ, ಅವರಿಂದ ಮಾಹಿತಿ ಲಭ್ಯವಾಗಲಿಲ್ಲ.

2023ರ ಜನವರಿಯಿಂದ ನವೆಂಬರ್‌ವರೆಗೆ ಆಯಾ ವಯಸ್ಸಿನ ಬಾಲಕಿಯರು ಗರ್ಭಿಣಿ ಆಗಿರುವುದು

ಜಿಲ್ಲೆ	ವಯಸ್ಸು					
	14	15	16	17	18	ಒಟ್ಟು
ಬಾಗಲಕೋಟೆ	8	9	34	154	988	1193
ಬಳ್ಳಾರಿ	17	43	93	366	1377	1896
ಬೆಳಗಾವಿ	9	17	64	386	2278	2754
ಬೆಂಗಳೂರು ಗ್ರಾ	2	4	17	75	368	466
ಬೆಂಗಳೂರು ನಗರ	10	19	60	367	2359	2815
ಬೀದರ್	16	24	65	207	831	1143
ಚಾಮರಾಜನಗರ	2	3	10	31	317	363
ಚಿಕ್ಕಬಳ್ಳಾಪುರ	4	3	20	71	469	567
ಚಿಕ್ಕಮಗಳೂರು	1	6	16	60	352	435
ಚಿತ್ರದುರ್ಗ	13	55	164	350	830	1412
ದಕ್ಷಿಣ ಕನ್ನಡ	1	2	2	8	122	135
ದಾವಣಗೆರೆ	8	9	39	133	668	857
ಧಾರವಾಡ	1	1	1	40	446	489
ಗದಗ	1	2	8	31	261	303
ಹಾಸನ	4	14	27	113	701	859
ಹಾವೇರಿ	1	3	16	88	605	713
ಕಲಬುರ್ಗಿ	7	17	37	261	1189	1511
ಕೊಡಗು	4	6	9	35	216	270
ಕೋಲಾರ	3	11	42	157	656	869
ಕೊಪ್ಪಳ	2	8	24	89	448	571
ಮಂಡ್ಯ	4	6	29	113	694	846
ಮೈಸೂರು	5	6	37	129	1193	1370
ರಾಯಚೂರು	9	27	76	248	892	1252
ರಾಮನಗರ	1	4	13	51	363	432
ಶಿವಮೊಗ್ಗ	1	4	22	61	508	596
ತುಮಕೂರು	4	13	44	216	1098	1375
ಉಡುಪಿ	0	3	4	5	44	56
ಉತ್ತರ ಕನ್ನಡ	0	0	4	17	163	184
ವಿಜಯಪುರ	11	35	95	349	1514	2004
ಯಾದಗಿರಿ	19	36	78	177	611	921
ಒಟ್ಟು	168	390	1150	4388	22561	28657

(ಆಧಾರ: ಆರ್‌ಸಿಎಚ್ ಪೋರ್ಟಲ್)

ಶುಕ್ರವಾರ, ಜನವರಿ 12, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 12 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ನಟ ಚಿಕ್ಕಣ್ಣ 'ಉಪಾಧ್ಯಕ್ಷ'ರಾಗಿ ಅಧಿಕಾರ ಸ್ವೀಕರಿಸಲು ಜ.26ಕ್ಕೆ ಮುಹೂರ್ತ ನಿಗದಿಯಾಗಿದೆ.



ಆಳ-ಅಗಲ ಮಧ್ಯ ಭಾರತವೇ 'ಸ್ವಚ್ಛ ಭಾರತ'

ಶೈವ-ಶಾಕ್ತರಿಗೆ ಅವಮಾನ: ಸಿ.ಎಂ 12

ಶಿವಸೇನಾ ಬಣಗಳ ವಾಕ್ಸಮರ ತೀವ್ರ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,721 ▲	21,647 ▲	₹64,200 (ಬೆಂಗಳೂರು) ▼	₹73,800 (ಬೆಂಗಳೂರು) ▲	83.01 ▲

ಲೋಕಸಭೆ: 'ಕೈ', ಕಮಲ ಸಜ್ಜು

'ಕಟ್ಟಾಳು'ಗಳ ಸ್ಪರ್ಧೆಗೆ ಅಪಸ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ 25 ಅನ್ನು ಉಳಿಸಿಕೊಳ್ಳಲೇಬೇಕೆಂದು ಪಣ ತೊಟ್ಟಿರುವ ಬಿಜೆಪಿ ನಾಯಕರು, ಹೊಸ ಪ್ರಯೋಗಕ್ಕೆ ಮುಂದಾಗಿದ್ದಾರೆ. ಎರಡು ದಿನ ನಡೆದ ಕ್ಲಸ್ಟರ್‌ವಾರು ಸಭೆಗಳಲ್ಲಿ ಪಾಲ್ಗೊಂಡಿದ್ದ ಪ್ರಮುಖರು, 'ಹಿಂದುತ್ವವಾದಿ ಉಗ್ರ ಕಟ್ಟಾಳು'ಗಳ ಸ್ಪರ್ಧೆಗೆ ಅಪಸ್ವರ ತೆಗೆದಿದ್ದಾರೆ.




ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸಮ್ಮುಖದಲ್ಲಿ ನಗರ ಹೊರವಲಯದ ರಮಾಡ ರೆಸಾರ್ಟ್‌ನಲ್ಲಿ ಈ ಸಭೆ ನಡೆಯಿತು. ಬುಧವಾರ 13 ಹಾಗೂ ಗುರುವಾರ 15 ಲೋಕಸಭಾ ಕ್ಷೇತ್ರಗಳಲ್ಲಿನ ಸದ್ಯದ ರಾಜಕೀಯ ಸ್ಥಿತಿ ಬಗ್ಗೆ ಅಭಿಪ್ರಾಯ ಸಂಗ್ರಹಿಸಲಾಯಿತು. ಹಾಲಿ ಸಂಸದರು, ಆಕಾಂಕ್ಷಿಗಳು, ಹಾಲಿ-ಮಾಜಿ ಶಾಸಕರು ಪಾಲ್ಗೊಂಡು ತಮ್ಮ ಭಾವನೆಗಳನ್ನು ಹಂಚಿಕೊಂಡರು.

12ನೇ ಪುಟ ನೋಡಿ

ಇನ್ನೊಂದು ಸುದ್ದಿ 12

ಜೈಶಂಕರ್, ನಿರ್ಮಲಾ ರಾಜ್ಯದಿಂದ ಕಣಕ್ಕೆ?

ರಾಜ್ಯಸಭೆ ಪ್ರತಿನಿಧಿಸುತ್ತಿರುವ ಕೇಂದ್ರ ವಿದೇಶಾಂಗ ಸಚಿವ ಜೈಶಂಕರ್ ಹಾಗೂ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ರಾಜ್ಯದಿಂದ ಕಣಕ್ಕೆ ಇಳಿಸುವ ಸಾಧ್ಯತೆ ದಟ್ಟವಾಗಿದೆ.





ಬಿಜೆಪಿಯ ಭದ್ರಕೋಟೆಯಾಗಿರುವ ದಕ್ಷಿಣ ಕನ್ನಡ ಕ್ಷೇತ್ರದಿಂದ ನಿರ್ಮಲಾ ಹಾಗೂ ಉತ್ತರ ಕನ್ನಡ ಕ್ಷೇತ್ರದಿಂದ ಜೈಶಂಕರ್ ಅವರನ್ನು ಅಭ್ಯರ್ಥಿಗಳನ್ನಾಗಿಸಿದರೆ ಗೆಲುವು ಸಲೀಸು ಎಂಬ ಲೆಕ್ಕಾಚಾರ ಪಕ್ಷದ ವರಿಷ್ಠರದ್ದಾಗಿದೆ. ಬೆಂಗಳೂರು ದಕ್ಷಿಣ ಅಥವಾ ಕೇಂದ್ರ ಕ್ಷೇತ್ರಗಳು ಸುರಕ್ಷಿತವಾಗಿರುವುದರಿಂದ ಜೈಶಂಕರ್ ಈ ಎರಡೂ ಕ್ಷೇತ್ರಗಳಿಂದಲೂ ಸ್ಪರ್ಧಿಸುವ ಸಂಭವ ಇದೆ ಎಂದು ಮೂಲಗಳು ಹೇಳಿವೆ.

ಏತನ್ಮಧ್ಯೆ, ಬೆಂಗಳೂರು ದಕ್ಷಿಣದಿಂದ ಸಂಸದ ತೇಜಸ್ವಿ ಸೂರ್ಯ ಬದಲು ತೇಜಸ್ವಿನಿ ಅನಂತಕುಮಾರ್ ಅವರನ್ನು ಅಭ್ಯರ್ಥಿಯಾಗಿಸುವ ಬಗ್ಗೆ ಬಿ.ಎಸ್. ಯಡಿಯೂರಪ್ಪ ಆಸ್ಥೆ ಹೊಂದಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

ಲೋಕಸಭೆಗೆ ಯತ್ನಾಳ ತಳ್ಳುವ ಯತ್ನ

ಯಡಿಯೂರಪ್ಪ ಮತ್ತು ವಿಜಯೇಂದ್ರ ವಿರುದ್ಧ ಕಿಡಿಕಾರುತ್ತಲೇ ಇರುವ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಬಾಗಲಕೋಟೆಯಿಂದ ಕಣಕ್ಕೆ ಇಳಿಸಿ, ಲೋಕಸಭೆಗೆ ದೂಡುವ ಬಗ್ಗೆಯೂ ರಾಜ್ಯ ಘಟಕದಲ್ಲಿ ಗಂಭೀರ ಚಿಂತನೆ ನಡೆದಿದೆ.

ಯಡಿಯೂರಪ್ಪ ಮನೆಯಲ್ಲಿ ಈಚೆಗೆ ನಡೆದ ಸಭೆಯಲ್ಲಿ ಈ ಚರ್ಚೆಯಾಗಿದೆ. ರಾಜ್ಯದಲ್ಲಿದ್ದರೆ ತಮ್ಮ ಹೇಳಿಕೆ ಮತ್ತು ನಡವಳಿಕೆಯಿಂದ ಸದನದ ಒಳಹೊರಗೆ ಮುಜುಗರ ಮಾಡುತ್ತಲೇ ಇರುತ್ತಾರೆ. ಅವರನ್ನು ಲೋಕಸಭೆಗೆ ಕಳುಹಿಸಿದರೆ ಇರುಸುಮುರುಸು ಕಡಿಮೆಯಾದೀತು ಎಂಬ ಲೆಕ್ಕಾಚಾರ ಇದರ ಹಿಂದಿದೆ ಎನ್ನಲಾಗಿದೆ.

3 ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಕಾಂಗ್ರೆಸ್ ಟಿಕೆಟ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬೆಂಗಳೂರಿನ ನಾಲ್ಕು ಕ್ಷೇತ್ರಗಳ ಪೈಕಿ ಮೂರರಲ್ಲಿ ಮಹಿಳೆಯರನ್ನು ಕಣಕ್ಕಿಳಿಸಲು ಕಾಂಗ್ರೆಸ್ ಹೈಕಮಾಂಡ್ ಚಿಂತನೆ ನಡೆಸಿದೆ.

ಬೆಂಗಳೂರು ಉತ್ತರ, ದಕ್ಷಿಣ ಮತ್ತು ಕೇಂದ್ರ ಈ ಮೂರು ಕ್ಷೇತ್ರಗಳಿಗೆ ಮಹಿಳೆಯರಿಗೆ ಟಿಕೆಟ್ ನೀಡುವ ಕುರಿತಂತೆ ಚರ್ಚೆ ನಡೆದಿದೆ. ಬೆಂಗಳೂರು ಉತ್ತರದಿಂದ ಕುಸುಮಾ ಹನುಮಂತರಾಯಪ್ಪ, ಬೆಂಗಳೂರು ದಕ್ಷಿಣದಿಂದ ಸಚಿವ ರಾಮಲಿಂಗಾ ರೆಡ್ಡಿಯವರ ಮಗಳು ಸೌಮ್ಯ ರೆಡ್ಡಿ, ಬೆಂಗಳೂರು ಕೇಂದ್ರದಿಂದ ಸಚಿವ ದಿನೇಶ್ ಗುಂಡೂರಾವ್ ಅವರ ಪತ್ನಿ ಟಬು ರಾವ್ ಅವರಿಗೆ ಮಣೆ ಹಾಕಲು ಪಕ್ಷದ ವಲಯದಲ್ಲಿ ಚರ್ಚೆ ನಡೆದಿದೆ.



ಮಹಿಳೆಯರಿಗೆ ಆದ್ಯತೆ, ಯುವ ಸಮುದಾಯಕ್ಕೆ ಅವಕಾಶ, ಒಕ್ಕಲಿಗ, ಅಲ್ಪಸಂಖ್ಯಾತ, ರೆಡ್ಡಿ ಸಮುದಾಯಕ್ಕೆ ಪ್ರಾತಿನಿಧ್ಯ ಎಂಬ ಸಮೀಕರಣದಡಿ ಟಿಕೆಟ್ ನೀಡುವ ಬಗ್ಗೆ ಚರ್ಚೆ ನಡೆದಿದೆ ಎಂದು ಗೊತ್ತಾಗಿದೆ.

ರಾಜ್ಯ ನಾಯಕರ ಜೊತೆ ನಡೆದ ಚರ್ಚೆ ಮತ್ತು ಅಭಿಪ್ರಾಯ ಸಂಗ್ರಹ ಸಂದರ್ಭದಲ್ಲಿಯೂ ಈ ಮೂರು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಟಿಕೆಟ್ ನೀಡುವ ಕುರಿತು ಒಲವು ವ್ಯಕ್ತವಾಗಿದೆ. ರಾಮಲಿಂಗಾ ರೆಡ್ಡಿ, ದಿನೇಶ್ ಗುಂಡೂರಾವ್ ಮತ್ತು ಡಿ.ಕೆ. ಸಹೋದರರ (ಡಿ.ಕೆ. ಶಿವಕುಮಾರ್ ಮತ್ತು ಡಿ.ಕೆ. ಸುರೇಶ್) ಪ್ರಭಾವ ಬಳಸಿಕೊಂಡು, ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಓಟಕ್ಕೆ ತಡೆ ಒಡ್ಡಬಹುದೆಂಬ ಲೆಕ್ಕಾಚಾರ ಕಾಂಗ್ರೆಸ್ ನಾಯಕರದ್ದು ಎನ್ನಲಾಗಿದೆ.

ರಾಜ್ಯ ರಾಜಕಾರಣದಲ್ಲೇ ಮುಂದುವರಿಕೆ: ಈ ಮಧ್ಯೆ, ರಾಜ್ಯ ರಾಜಕಾರಣದಲ್ಲೇ ಮುಂದುವರೆಯುವಂತೆ ಕೃಷ್ಣ ಬೈರೇಗೌಡ ಮತ್ತು ದಿನೇಶ್ ಗುಂಡೂರಾವ್ ಅವರಿಗೆ ಹೈಕಮಾಂಡ್ ಸೂಚನೆ ನೀಡಿದೆ ಎಂಬ ಮಾಹಿತಿ ಲಭ್ಯವಾಗಿದೆ. ಬೆಂಗಳೂರು ಉತ್ತರ ಕ್ಷೇತ್ರಕ್ಕೆ ಕೃಷ್ಣ ಬೈರೇಗೌಡ ಅವರ ಹೆಸರು ಪ್ರಸ್ತಾಪವಾಗಿತ್ತು.

12ನೇ ಪುಟ ನೋಡಿ



ಎಳ್ಳ ಅಮಾವಾಸ್ಯೆ ಸಂಭ್ರಮ

ಕಲಬುರಗಿ ತಾಲ್ಲೂಕಿನ ಜಂಬಗಾ ಬಿ. ಗ್ರಾಮದಲ್ಲಿ ಗುರುವಾರ ಎಳ್ಳ ಅಮಾವಾಸ್ಯೆ ಅಂಗವಾಗಿ ರೈತರೊಬ್ಬರು ಹೊಲದಲ್ಲಿ ಕುಟುಂಬದ ಸದಸ್ಯರೊಂದಿಗೆ ಚರಗಾ ಚೆಲ್ಲಿದರು –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಿದ ಸಂತ್ರಸ್ತೆ

ಅತ್ಯಾಚಾರ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಹಾನಗಲ್ (ಹಾವೇರಿ ಜಿಲ್ಲೆ): ತಾಲ್ಲೂಕಿನ ನಾಲ್ಕರ್ ಕ್ರಾಸ್ ಬಳಿ ಹೋಟೆಲ್‌ನಲ್ಲಿ ಮುಸ್ಲಿಂ ಮಹಿಳೆ ಮತ್ತು ಹಿಂದೂ ಪುರುಷನ ಮೇಲಿನ ಹಲ್ಲೆ ಪ್ರಕರಣಕ್ಕೆ ಗುರುವಾರ ತಿರುವು ಸಿಕ್ಕಿದ್ದು, ಸಂತ್ರಸ್ತೆಯ ಹೇಳಿಕೆ ಆಧಾರದಲ್ಲಿ ಪೊಲೀಸರು 'ಸಾಮೂಹಿಕ ಅತ್ಯಾಚಾರ'ದ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹಲ್ಲೆಗೊಳಗಾದ ಮಹಿಳೆಯನ್ನು ಗುರುವಾರ ಪೊಲೀಸರು ಹಾನಗಲ್‌ಗೆ ಕರೆತಂದು ಇಲ್ಲಿನ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದರು. ನ್ಯಾಯಾಧೀಶ ಬಿ.ವೆಂಕಟಪ್ಪ ಅವರು ಮಹಿಳೆಯ '164' ಹೇಳಿಕೆಯನ್ನು ಇನ್ ಕ್ಯಾಮೆರಾ (ನ್ಯಾಯಾಧೀಶರ ಕೊಠಡಿಯಲ್ಲಿ ವಿಚಾರಣೆ) ಪ್ರಕ್ರಿಯೆ ಮೂಲಕ ದಾಖಲಿಸಿಕೊಂಡರು.

'ನ್ಯಾಯಾಲಯದ ಪ್ರಕ್ರಿಯೆ ಬಳಿಕ ಮಹಿಳೆಯನ್ನು ಹಾನಗಲ್ ಪೊಲೀಸ್ ಠಾಣೆಗೆ ಕರೆತರಲಾಯಿತು. ಬುಧವಾರ ದಾಖಲಾದ ಪ್ರಕರಣಕ್ಕೆ ಸಾಮೂಹಿಕ ಅತ್ಯಾಚಾರ ಆರೋಪದ 376–ಡಿ ಸೆಕ್ಷನ್ ಸೇರಿಸಲಾಗಿದೆ. ಮಹಿಳೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುವುದು ಮತ್ತು ಹೆಚ್ಚಿನ ತನಿಖೆ ನಡೆಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ ಹೇಳಿದರು.

ಏನಿದು ಪ್ರಕರಣ: 'ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನವರಾದ ಪುರುಷ ಮತ್ತು ಮಹಿಳೆ ಶನಿವಾರ ನಾಲ್ಕರ್ ಕ್ರಾಸ್ ಬಳಿ ಹೋಟೆಲ್‌ನಲ್ಲಿ ಕೊಠಡಿ ಬಾಡಿಗೆಗೆ ಪಡೆದು ತಂಗಿದ್ದ ವೇಳೆ ಮುಸ್ಲಿಂ ಯುವಕರ ಗುಂಪು, ಇಬ್ಬರ ಮೇಲೆಯೂ ಹಿಗ್ಗಾಮುಗ್ಗಾ ಥಳಿಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

12ನೇ ಪುಟ ನೋಡಿ

'ಏಳು ಜನರಿಂದ ಕೃತ್ಯ'

'ನಾನು ಹೋಟೆಲ್ ಕೊಠಡಿಗೆ ಆಗ ತಾನೆ ಹೋಗಿ ಕೂತಿದ್ದೆ. ಅಷ್ಟರಲ್ಲಿ ಕೊಠಡಿಯೊಳಗೆ ನುಗ್ಗಿದ ಯುವಕರು ಹಲ್ಲೆ ನಡೆಸಿ, ನನ್ನನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಕಾಡಿಗೆ ಕರೆದೊಯ್ದರು. ಅಲ್ಲಿ ನನಗೆ ಮನಬಂದಂತೆ ಥಳಿಸಿ, ಏಳು ಯುವಕರು ಒಬ್ಬರ ನಂತರ ಒಬ್ಬರು ಅತ್ಯಾಚಾರ ಮಾಡಿದರು. ಕಾಲಿಗೆ ಬಿದ್ದು ಬೇಡಿದರೂ ಬಿಡಲಿಲ್ಲ. ಆನಂತರ ಕಾರಿನಲ್ಲಿ ಕರೆದೊಯ್ದು ಬಸ್ ಹತ್ತಿಸಿದರು' ಎಂದು ಸಂತ್ರಸ್ತೆ ಮಾತನಾಡಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

'ಯುವನಿಧಿ' ಯೋಜನೆಗೆ ಚಾಲನೆ ಇಂದು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಕಳೆದ ಸಾಲಿನಲ್ಲಿ ಡಿಪ್ಲೊಮಾ ಮತ್ತು ಪದವಿ ಪೂರೈಸಿ, ಉದ್ಯೋಗದ ಹುಡುಕಾಟದಲ್ಲಿರುವ ಯುವ ಜನತೆಗೆ ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ನೀಡುವ ಸರ್ಕಾರದ 5ನೇ ಗ್ಯಾರಂಟಿ 'ಯುವನಿಧಿ' ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಶುಕ್ರವಾರ ಚಾಲನೆ ನೀಡಲಿದ್ದಾರೆ.

ನಗರದ ಫ್ರೀಡಂ ಪಾರ್ಕ್ ಆವರಣದಲ್ಲಿ ಬೃಹತ್ ವೇದಿಕೆ ಸಜ್ಜುಗೊಂಡಿದೆ. ನಿರುದ್ಯೋಗಿಗಳ ಖಾತೆಗೆ ಹಣ ವರ್ಗಾಯಿಸುವ ಮೂಲಕ ಮುಖ್ಯಮಂತ್ರಿಯವರು ಯೋಜನೆಗೆ ಚಾಲನೆ ನೀಡಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಪ್ರಮುಖ ಸಚಿವರು ಪಾಲ್ಗೊಳ್ಳಲಿದ್ದಾರೆ.

ಕಾರ್ಯಕ್ರಮಕ್ಕೆ ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು, ಹಾವೇರಿ, ಗದಗ ಮತ್ತು ಉಡುಪಿ ಮತ್ತಿತರ ಜಿಲ್ಲೆಗಳಿಂದ 1 ಲಕ್ಷಕ್ಕೂ ಅಧಿಕ ಸಂಖ್ಯೆಯ ಯುವಜನರು ಹಾಗೂ ಕಾರ್ಯಕರ್ತರನ್ನು ಕರೆತರಲು ಸಂಘಟಕರು ಮುಂದಾಗಿದ್ದಾರೆ. ಹೊರ ಜಿಲ್ಲೆಗಳಿಂದ ಬರುವವರಿಗಾಗಿ 1,000 ಬಸ್‌ಗಳ ವ್ಯವಸ್ಥೆ ಮಾಡಲಾಗಿದ್ದು, ಎಲ್ಲರಿಗೂ ಊಟೋಪಹಾರ ಇದೆ.

12ನೇ ಪುಟ ನೋಡಿ

ಮ್ಯಾನ್ಮಾರ್‌ನಲ್ಲಿ ಸೇನೆ– ಬಂಡುಕೋರರ ನಡುವೆ ಹೋರಾಟ ತೀವ್ರ

ಭಾರತ ಪ್ರವೇಶಿಸಿದ್ದ 416 ಸೈನಿಕರು

ಪ್ರಜಾವಾಣಿ ವಾರ್ತೆ

ನವದೆಹಲಿ: ಮ್ಯಾನ್ಮಾರ್ ಸೇನೆ ಮತ್ತು ಅಲ್ಲಿನ ಬಂಡುಕೋರ ಗುಂಪುಗಳ ಮಧ್ಯೆ ನಡೆಯುತ್ತಿರುವ ಶಸ್ತ್ರಸಜ್ಜಿತ ಹೋರಾಟವು 'ಗಡಿ ಭಾಗದಲ್ಲಿ ಕಳವಳ'ಕ್ಕೆ ಕಾರಣವಾಗಿದೆ ಎಂದು ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಹೇಳಿದ್ದಾರೆ.



ಮನೋಜ್ ಪಾಂಡೆ

ಭಾರತ–ಮ್ಯಾನ್ಮಾರ್ ಗಡಿಯಲ್ಲಿ ಭದ್ರತೆಗೆ ಅಸ್ಸಾಂ ರೈಫಲ್ಸ್‌ನ 20 ತುಕಡಿಗಳನ್ನು ನಿಯೋಜಿಸಲಾಗಿದ್ದು, ಭದ್ರತೆಯನ್ನು ಇನ್ನಷ್ಟು ಹೆಚ್ಚಿಸಲು ಸೇನೆಯು ಯೋಜನೆ ರೂಪಿಸಿದೆ. ಗಡಿಯುದ್ದಕ್ಕೂ ಬೇಲಿ ಹಾಕುವ ಚಿಂತನೆಯೂ ನಡೆದಿದೆ.

'ಸಂಘರ್ಷ ತೀವ್ರಗೊಂಡ ಬಳಿಕ ಕಳೆದ ಎರಡು ತಿಂಗಳಲ್ಲಿ ಮ್ಯಾನ್ಮಾರ್‌ನ 416 ಸೈನಿಕರು ಗಡಿ ದಾಟಿ ಭಾರತಕ್ಕೆ ಬಂದಿದ್ದರು. ಕೆಲವು ಪ್ರಜೆಗಳು ಆಶ್ರಯ ಅರಸಿ ಮಿಜೋರಾಂ ಮತ್ತು ಮಣಿಪುರ ಪ್ರವೇಶಿಸಿದ್ದಾರೆ. ಅಲ್ಲಿನ ಕೆಲವು ಬಂಡುಕೋರ ಗುಂಪುಗಳು ಮಣಿಪುರಕ್ಕೆ ನುಸುಳಲು ಪ್ರಯತ್ನಿಸುತ್ತಿವೆ' ಎಂದು ಪಾಂಡೆ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಭಾರತದ ಗಡಿ ಪ್ರವೇಶಿಸಿದ್ದ ಎಲ್ಲ 416 ಸೈನಿಕರನ್ನು ಸ್ವದೇಶಕ್ಕೆ ಮರಳಿ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಜುಂಟಾ ವಿರೋಧಿ ಗುಂಪುಗಳು ಭಾರತ–ಮ್ಯಾನ್ಮಾರ್ ಗಡಿ ಸಮೀಪದ ಕೆಲವು ಪಟ್ಟಣಗಳು ಮತ್ತು ಸೇನಾ ನೆಲೆಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿರುವುದಾಗಿ ವರದಿಯಾಗಿದೆ.

ಈಶಾನ್ಯದ ರಾಜ್ಯಗಳಾದ ನಾಗಾಲ್ಯಾಂಡ್ ಮತ್ತು ಮಣಿಪುರ ಸೇರಿದಂತೆ ಭಾರತವು ಮ್ಯಾನ್ಮಾರ್ ನೊಂದಿಗೆ ಒಟ್ಟು 1,640 ಕಿ.ಮೀ ಗಡಿಯನ್ನು ಹಂಚಿಕೊಂಡಿದೆ.

2021ರ ಫೆಬ್ರುವರಿಯಲ್ಲಿ ನಡೆದ ದಂಗೆಯಲ್ಲಿ ಸೇನೆಯು ಆಡಳಿತವನ್ನು ತನ್ನ ವಶಕ್ಕೆ ಪಡೆದುಕೊಂಡಾಗಿನಿಂದ ಪ್ರಜಾಪ್ರಭುತ್ವ ವ್ಯವಸ್ಥೆಯ ಮರುಸ್ಥಾಪನೆಗೆ ಒತ್ತಾಯಿಸಿ ಮ್ಯಾನ್ಮಾರ್‌ನಲ್ಲಿ ವ್ಯಾಪಕ ಪ್ರತಿಭಟನೆಗಳು ನಡೆಯುತ್ತಿವೆ. ಬಂಡುಕೋರ ಗುಂಪುಗಳನ್ನು ಸದೆಬಡಿಯಲು ಸೇನೆಯು ಹಲವು ವೈಮಾನಿಕ ದಾಳಿಗಳನ್ನು ನಡೆಸಿವೆ.

> **ಭಾರತ-ಮ್ಯಾನ್ಮಾರ್ ಗಡಿಯಲ್ಲಿ ಈಗ ಉಂಟಾಗಿರುವ ಪರಿಸ್ಥಿತಿ ಕಳವಳಕ್ಕೆ ಕಾರಣವಾಗಿದೆ. ಗಡಿಯಲ್ಲಿನ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ**
> **ಜನರಲ್ ಮನೋಜ್ ಪಾಂಡೆ**
> ಸೇನಾ ಮುಖ್ಯಸ್ಥ

ಮೈತೇಯಿ ಸಮುದಾಯದ ನಾಲ್ವರ ಹತ್ಯೆ

ಗುವಾಹಟಿ: ಸಂಘರ್ಷ ಪೀಡಿತ ಮಣಿಪುರದಲ್ಲಿ ಮೈತೇಯಿ ಸಮುದಾಯಕ್ಕೆ ಸೇರಿದ ನಾಲ್ವರು ಮರ ಕಡಿಯುವವರನ್ನು ಕುಕಿ ಸಮುದಾಯದವರು ಬುಧವಾರ ಗುಂಡಿಕ್ಕಿ ಕೊಂದಿದ್ದಾರೆ ಎನ್ನಲಾಗಿದೆ.

ಕೊಲೆಗಾರರನ್ನು ಸೆರೆ ಹಿಡಿಯಲು ಭದ್ರತಾ ಪಡೆಗಳು ಕಾರ್ಯಾಚರಣೆ ಆರಂಭಿಸಿವೆ ಎಂದು ಮೂಲಗಳು ತಿಳಿಸಿವೆ.

ಸಂತ್ರಸ್ತರು ವಿಷ್ಣುಪುರ ಜಿಲ್ಲೆಯ ಅಕಸೋಯಿ ಗ್ರಾಮದ ನಿವಾಸಿಗಳು. ಮರಮುಟ್ಟು ಸಂಗ್ರಹಿಸಲು ಅವರು ವಿಷ್ಣುಪುರ ಮತ್ತು ಚುರಚಾಂದ್‌ಪುರ ಜಿಲ್ಲೆಗಳ ನಡುವೆ ಇರುವ ಅರಣ್ಯ ಪ್ರದೇಶಕ್ಕೆ ಹೋಗಿದ್ದರು. ಆ ವೇಳೆ ಅವರನ್ನು ಅಪಹರಿಸಿ, ಹತ್ಯೆಗೈಯಲಾಗಿದೆ. ಮೃತರ ವಿಡಿಯೊ ಮತ್ತು ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ಈ ಪ್ರಕರಣ ಬಹಿರಂಗವಾಗಿದೆ. ಮೃತರಲ್ಲಿ ತಂದೆ– ಮಗ ಕೂಡಾ ಇದ್ದಾರೆ.

13ನೇ ಪುಟ ನೋಡಿ

ಅತ್ತೆ- ಮಾವಂದಿರಿಗೆ ಅರಿವು ಮೂಡಿಸುವುದು ಅಗತ್ಯ: ದೆಹಲಿ ಹೈಕೋರ್ಟ್

'ಹೆಣ್ಣು ಹೆತ್ತಿದ್ದಕ್ಕೆ ಮಹಿಳೆ ಹೊಣೆಯಲ್ಲ'

ನವದೆಹಲಿ (ಪಿಟಿಐ): ಭ್ರೂಣವು ಗಂಡೋ, ಹೆಣ್ಣೋ ಎಂಬುದನ್ನು ತೀರ್ಮಾನಿಸುವುದು ಪುರುಷನ ವರ್ಣತಂತುಗಳೇ ವಿನಾ ಮಹಿಳೆಗೂ ಅದಕ್ಕೂ ಸಂಬಂಧ ಇಲ್ಲ ಎಂಬುದನ್ನು ಅತ್ತೆ–ಮಾವಂದಿರಿಗೆ ತಿಳಿಹೇಳಬೇಕು ಎಂದು ದೆಹಲಿ ಹೈಕೋರ್ಟ್ ಹೇಳಿದೆ. ವಂಶೋದ್ಧಾರಕನನ್ನು ಕೊಡಲಿಲ್ಲ ಎಂದು ಸೊಸೆಯಂದಿರಿಗೆ ಕಿರುಕುಳ ನೀಡುವವರಿಗೆ ಈ ವಿಚಾರವನ್ನು ತಿಳಿಸಬೇಕು ಎಂದು ಕಿವಿಮಾತು ಹೇಳಿದೆ.

ಮಹಿಳೆಯೊಬ್ಬಳು ವರದಕ್ಷಿಣೆ ಕಿರುಕುಳ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದ ವಿಚಾರಣೆಯನ್ನು ಹೈಕೋರ್ಟ್ ನಡೆಸಿತು. ಈ ಮಹಿಳೆ ಕಡಿಮೆ ವರದಕ್ಷಿಣೆ ತಂದಿದ್ದಕ್ಕಾಗಿ ಮಾತ್ರವಲ್ಲದೆ ಇಬ್ಬರು ಹೆಣ್ಣುಮಕ್ಕಳನ್ನು ಹೆತ್ತಿದ್ದಕ್ಕಾಗಿ ಪತಿ, ಅತ್ತೆ–ಮಾವನಿಂದ ಕಿರುಕುಳ ಅನುಭವಿಸಿದ್ದರು.

ಮದುವೆಯಾಗಿ ತಂದೆಯ ಮನೆ ತೊರೆದ ನಂತರದಲ್ಲಿ ಮಗಳು ಚೆನ್ನಾಗಿರಲಿ ಎಂದು ತಂದೆ–ತಾಯಿ ಬಯಸುತ್ತಾರೆ. ಆದರೆ, ಆ ಹೆಣ್ಣಿಗೆ ಪ್ರೀತಿ ಮತ್ತು ಬೆಂಬಲ ನೀಡುವ ಬದಲು ಆಕೆಯು ಅತ್ತೆ–ಮಾವ, ನಾದಿನಿ, ಮೈದುನರಿಂದ ಕಿರುಕುಳ ಅನುಭವಿಸಬೇಕಾಗುತ್ತದೆ. ಇದು ಮನಕಲಕುವ ಸಂಗತಿ ಎಂದು ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮ ಅವರು ಹೇಳಿದ್ದಾರೆ.

ಈ ಪ್ರಕರಣದಲ್ಲಿ ಮಹಿಳೆಯು ಇಬ್ಬರು ಹೆಣ್ಣುಮಕ್ಕಳಿಗೆ ಜನ್ಮ ನೀಡಿದ್ದಾರೆ. ತಾನು ಜನ್ಮ ನೀಡಿದ ಮಕ್ಕಳನ್ನೇ ತೋರಿಸಿ ತನಗೆ ಕಿರುಕುಳ ನೀಡಿದಾಗ ಮನಸ್ಸಿಗೆ ಆಗುವ ಆಘಾತವು ಹೆಚ್ಚಿನದ್ದಾಗಿರುತ್ತದೆ ಎಂದು ಕೋರ್ಟ್ ಹೇಳಿದೆ. 'ಇಲ್ಲಿ ವಿಜ್ಞಾನವನ್ನು ಉಪೇಕ್ಷಿಸಲಾಗುತ್ತಿದೆ. ವಿಜ್ಞಾನದ ಪ್ರಕಾರ, ಅಂಡಾಣು ಯಾವ ವರ್ಣತಂತು ಇರುವ ವೀರ್ಯಾಣುವಿನ ಜೊತೆ ಸೇರುತ್ತದೆ ಎಂಬುದು ಭ್ರೂಣದ ಲಿಂಗವನ್ನು ತೀರ್ಮಾನಿಸುತ್ತದೆ' ಎಂದು ಹೇಳಿದೆ.

ಹೆಣ್ಣು ಮಗಳಿಗೆ ಜನ್ಮ ನೀಡಿದ್ದಕ್ಕಾಗಿ ಕಿರುಕುಳ ಅನುಭವಿಸಿದ ಹತ್ತು ಹಲವು ಪ್ರಕರಣಗಳನ್ನು ಕೋರ್ಟ್ ನೋಡಿದೆ. ವಂಶೋದ್ಧಾರಕನನ್ನು ನೀಡಲಿಲ್ಲ ಎಂದು ಮಹಿಳೆಯರು ತಮ್ಮ ಗಂಡನ ಮನೆಯವರಿಂದ ನಿರಂತರವಾಗಿ ಕಿರುಕುಳ ಅನುಭವಿಸಿದ್ದನ್ನು ಕಂಡಿದೆ ಎಂದು ನ್ಯಾಯಮೂರ್ತಿ ಶರ್ಮ ಹೇಳಿದ್ದಾರೆ.

ಇಂತಹ ಜನರಿಗೆ ಅರಿವು ನೀಡುವ ಅಗತ್ಯ ಇದೆ. ಭ್ರೂಣದ ಲಿಂಗ ಯಾವುದು ಎಂಬುದನ್ನು ತೀರ್ಮಾನಿಸುವುದು ತಮ್ಮ ಮಗನೇ ವಿನಾ ಸೊಸೆ ಅಲ್ಲ ಎಂಬುದನ್ನು ಇಂತಹ ಅತ್ತೆ–ಮಾವಂದಿರಿಗೆ ತಿಳಿಹೇಳಬೇಕಿದೆ ಎಂದು ಶರ್ಮ ಅವರು ಹೇಳಿದ್ದಾರೆ. 'ಈ ಆದೇಶವು ಇಂಥದ್ದೊಂದು ಅರಿವು ಮೂಡಲು ಕಾರಣವಾದರೆ, ಇಂತಹ ಅಪರಾಧ ಎಸಗುವವರ ಮನಸ್ಸು ಪರಿವರ್ತಿಸುವಲ್ಲಿ ದೊಡ್ಡ ನೆರವಾದಂತೆ ಆಗುತ್ತದೆ' ಎಂದು ಆದೇಶದಲ್ಲಿ ಹೇಳಲಾಗಿದೆ.

ವರದಕ್ಷಿಣೆ ಕಿರುಕುಳದ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡ ಮಹಿಳೆಯ ಪತಿಗೆ ಕೋರ್ಟ್ ಜಾಮೀನು ನಿರಾಕರಿಸಿದೆ. ತನ್ನ ಮಗಳಿಗೆ ಗಂಡನ ಮನೆಯವರಿಂದ ಹೆಚ್ಚುವರಿ ವರದಕ್ಷಿಣೆಗಾಗಿ ನಿರಂತರವಾಗಿ ಕಿರುಕುಳ ಆಗುತ್ತಿತ್ತು, ಹೆಣ್ಣುಮಕ್ಕಳಿಗೆ ಜನ್ಮನೀಡಿದ್ದಕ್ಕಾಗಿ ಆಕೆಯನ್ನು ಕೆಟ್ಟದ್ದಾಗಿ ನಡೆಸಿಕೊಳ್ಳಲಾಗುತ್ತಿತ್ತು ಎಂದು ಮಹಿಳೆಯ ತಂದೆ ನೀಡಿರುವ ದೂರಿನಲ್ಲಿ ಹೇಳಲಾಗಿದೆ.

ಯುವತಿಯ ಪೋಷಕರು ಪತಿ ಮತ್ತು ಅತ್ತೆ–ಮಾವಂದಿರಲ್ಲಿ ಇರುವ ವರದಕ್ಷಿಣೆ ನಿರೀಕ್ಷೆಯನ್ನು ಪೂರೈಸದಿದ್ದರೆ ಅದು ಮಹಿಳೆಯ ಮೌಲ್ಯವನ್ನು ಕುಗ್ಗಿಸುತ್ತದೆ ಎಂಬ ಕಲ್ಪನೆಯು ಮಹಿಳೆಯರ ವಿರುದ್ಧ ಆಳವಾಗಿ ಬೇರೂರಿರುವ ತಾರತಮ್ಯವನ್ನು ಬಿಂಬಿಸುತ್ತದೆ ಎಂದು ಅಭಿಪ್ರಾಯಪಟ್ಟಿದೆ. ಅಲ್ಲದೆ ಇಂತಹ ನಿರೀಕ್ಷೆಯು ಲಿಂಗ ಸಮಾನತೆಯ ತತ್ವಗಳನ್ನು ಉಲ್ಲಂಘಿಸುವುದಲ್ಲದೆ ಮಹಿಳೆಯರನ್ನು ಸರಕುಗಳನ್ನಾಗಿ ಪರಿಗಣಿಸಿ, ವಹಿವಾಟಿಗೆ ಉಪಯೋಗಿಸಿಕೊಳ್ಳಬಹುದು ಎಂಬ ಮಟ್ಟಕ್ಕೆ ಇಳಿಸುವಂತಹ ವಾತಾವರಣ ಸೃಷ್ಟಿಗೆ ದಾರಿ ಮಾಡಿಕೊಡುತ್ತದೆ ಎಂದೂ ಹೇಳಿದೆ.

> **ಇಂತಹ ಘಟನೆಗಳು ಮಹಿಳಾ ಸಮಾನತೆಯ ಹಾದಿಯಲ್ಲಿ ಎಡೆಗುಂದಿಸುವ ಗುರುತುಗಳಾಗಿ ಉಳಿದುಬಿಡಬಹುದು**
> **ದೆಹಲಿ ಹೈಕೋರ್ಟ್**



ಚಿನಕುರಳಿ

ಪ್ರಕಾಶ್ ಶೆಟ್ಟಿ



13ಕ್ಕೆ ‘ಸಂಕ್ರಾಂತಿ ಸಾಂಸ್ಕೃತಿಕ ಸಂಭ್ರಮ’

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಸಾಹಿತ್ಯ ಕೂಟದ ಆಶ್ರಯದಲ್ಲಿ ಜ.13ರಂದು ರಾಜಾಜಿನಗರದ ಮೆಟ್ರೊ ನಿಲ್ದಾಣ ಹಿಂಭಾಗದ ಜನನಿ ಹೋಟೆಲ್‌ನ ಸಭಾಂಗಣದಲ್ಲಿ ‘ಸಂಕ್ರಾಂತಿ ಸಾಂಸ್ಕೃತಿಕ ಸಂಭ್ರಮ’ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ಸಂಭ್ರಮ ನಡೆಯಲಿದೆ. ಕರೋಕೆ ಗಾಯನ, ವೇಷಭೂಷಣ ಪ್ರದರ್ಶನ, ಜಾನಪದ ಗೀತೆ, ಭಾವಗೀತೆ, ಭಕ್ತಿಗೀತೆ, ಏಕಪಾತ್ರ ಅಭಿನಯ, ಮಿಮಿಕ್ರಿ ಮತ್ತು ರಂಗಗೀತೆಗಳ ಸಂಭ್ರಮ ನಡೆಯಲಿದೆ. ‘ಕಲಾ ಹೊಂಗಿರಣ ಪ್ರಶಸ್ತಿ’ ಪ್ರದಾನ ಮಾಡಲಾಗುವುದು ಎಂದು ಸಂಸ್ಥೆ ಅಧ್ಯಕ್ಷ ಕೃಷ್ಣಮೂರ್ತಿ ತಿಳಿಸಿದ್ದಾರೆ. ಸಂಪರ್ಕಕ್ಕೆ ಮೊಬೈಲ್: 74060 61929.

ಬೆಂಗಳೂರು ದಕ್ಷಿಣ ಕ್ಷೇತ್ರದ ನಾಗರಿಕರಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಭರವಸೆ

3–4 ತಿಂಗಳಲ್ಲಿ ಕಾವೇರಿ ನೀರು

ಪ್ರಜಾವಾಣಿ ವಾರ್ತೆ


ಮಹಿಳೆಯೊಬ್ಬರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಳಿ ಸಮಸ್ಯೆ ಹೇಳಿಕೊಂಡರು

ಬೊಮ್ಮನಹಳ್ಳಿ: ‘ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳಿಗೆ ಮೂರ್ನಾಲ್ಕು ತಿಂಗಳಲ್ಲಿ ಕಾವೇರಿ ನೀರು ಪೂರೈಕೆ ಮಾಡಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಜರಗನಹಳ್ಳಿ ಸರ್ಕಾರಿ ಆಟದ ಮೈದಾನದಲ್ಲಿ ಗುರುವಾರ ನಡೆದ ‘ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕನಕಪುರ ರಸ್ತೆಯಿಂದ ಎಲೆಕ್ಟ್ರಾನಿಕ್ ಸಿಟಿಯವರೆಗೆ ರಸ್ತೆ ನಿರ್ಮಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು ಎಂದು ಹೇಳಿದರು.

‘ಬೆಂಗ್ಳೂರಿಗೆ ಬಂದು ಬಾಳಾ ವರ್ಷ ಆದ್ರೂ ರೇಷನ್ ಕಾರ್ಡ್ ಇಲ್ಲ, ರೇಷನ್ ಕಾರ್ಡ್ ಕೊಡ್ಸಿ..’ ‘ಟ್ಯಾಂಕರ್ ನೀರಿಗೆ ದುಡ್ಡುಕೊಟ್ಟು ಸಾಕಾಗಿದೆ, ನೀರಿನ ವ್ಯವಸ್ಥೆ ಮಾಡಿಕೊಡಿ...’, ‘ಭಾಗ್ಯಲಕ್ಷ್ಮಿ ಯೋಜನೆಯ ಹಣ ಬರ್ತಿಲ್ಲ, ಬರೋಹಂಗೆ ಮಾಡಿ’ ಎಂದು ಸಾರ್ವಜನಿಕರು ಅಹವಾಲು ಸಲ್ಲಿಸಿದರು.

‘ವಾಸಕ್ಕೆ ಮನೆಯಿಲ್ಲ, ಉದ್ಯೋಗವಿಲ್ಲ, ಸ್ಮಶಾನಕ್ಕೆ ಜಾಗವಿಲ್ಲ, ಮೂಲ ಸೌಲಭ್ಯ ಕೊರತೆ, ಬಹುಮಹಡಿ ಕಟ್ಟಡಕ್ಕೆ ₹1 ಲಕ್ಷ ನೀಡಿ 6 ವರ್ಷವಾದರೂ ಫ್ಲ್ಯಾಟ್ ಸಿಕ್ಕಿಲ್ಲ, ವಿಧವಾ ವೇತನ, ವೃದ್ಧಾಪ್ಯ ವೇತನ, ಪಿಂಚಣಿ ಕೊಡಲು ಹಣ ಕೇಳಿದ್ದಾರೆ’ ಎಂದು ಹಲವು ನಾಗರಿಕರು ದೂರಿದರು. ಅಧಿಕಾರಿಗಳ ನಿರ್ಲಕ್ಷ್ಯ, ಕಚೇರಿಗೆ ಅಲೆದಾಡಿಸುವುದು, ಪೊಲೀಸರ ಕಿರುಕುಳ ಬಗ್ಗೆಯೂ ಗಮನ ಸೆಳೆದರು. ಒಎಫ್‌ಸಿ ಕೇಬಲ್ ಮಾಫಿಯಾ, ಸಾರಕ್ಕಿ ಕೆರೆ ಒತ್ತುವರಿ, ನಕಲಿ ಖಾತಾ ಹಾವಳಿಯಂತಹ ಗಂಭೀರ ಸಮಸ್ಯೆಗಳನ್ನು ಸಚಿವರ ಗಮನಕ್ಕೆ ತಂದರು.

‘ಸುಮಾರು 5 ಸಾವಿರ ಮಂದಿ ಅಹವಾಲುಗಳನ್ನು ಸಲ್ಲಿಸಿದ್ದೀರಿ. ಅಧಿಕಾರಿಗಳ ಬಳಿ ತಿರುಗಿಯೂ ಪರಿಹಾರ ಸಿಗದಿದ್ದಾಗ ನೀವು ನನ್ನ ಬಳಿ ಬಂದಿದ್ದೀರಿ. ನಿಮ್ಮ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡುತ್ತೇನೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಮಾತನಾಡಿ ‘ಬನ್ನೇರುಘಟ್ಟ ರಸ್ತೆಯ ಅಂಜನಾಪುರ ರಸ್ತೆ ಸಮಸ್ಯೆಯನ್ನು ಬಗೆಹರಿಸಿ ಕೊಡಿ. ಪಶುವೈದ್ಯಕೀಯ ಆಸ್ಪತ್ರೆಗಳನ್ನು ಸ್ಥಳಾಂತರಿಸಬೇಡಿ. ಕೋಣನಕುಂಟೆ ಸಿಗ್ನಲ್ ಬಳಿ ಮೆಟ್ರೊದವರು ಅಳವಡಿಸಿರುವ ತಂತಿ ಬೇಲಿ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಿ’ ಎಂದು ಮನವಿ ಮಾಡಿದರು. ‘ನಮ್ಮ ಕ್ಷೇತ್ರದಲ್ಲಿ ನೀರಿನ ಸಮಸ್ಯೆ ಕೂಡ ಹೆಚ್ಚಾಗಿದೆ. ಸಮಸ್ಯೆ ಬಗೆಹರಿಸುವಂತೆಯೂ ಅವರು ಕೇಳಿದರು.

ಬೆಂಗಳೂರು ಗ್ರಾಮಾಂತರ ಲೋಕಸಭೆ ಕ್ಷೇತ್ರದ ಸಂಸದ ಡಿ.ಕೆ. ಸುರೇಶ್ ಮಾತನಾಡಿ, ‘ಕನಕಪುರ ರಸ್ತೆ ಸುತ್ತಮುತ್ತ ಅಪಾರ್ಟ್‌ಮೆಂಟ್‌ಗಳು ಹೆಚ್ಚಾಗಿದ್ದು, ಸಂಚಾರ ದಟ್ಟಣೆ ಅಧಿಕವಾಗಿದೆ. ಬೆಳಿಗ್ಗೆ ಹಾಗೂ ಸಂಜೆಯ ‘ಪೀಕ್ ಅವರ್’ನಲ್ಲಿ ಎರಡು ಸಾವಿರ ಕಾರುಗಳು ಒಂದು ಗಂಟೆ ಅವಧಿಯಲ್ಲಿ ಸಂಚರಿಸುತ್ತವೆ. ದಟ್ಟಣೆ ನಿಯಂತ್ರಿಸಬೇಕು. ಎಂಟು ದಿನಕ್ಕೊಮ್ಮೆ ಕುಡಿಯುವ ನೀರು ಬಿಡುತ್ತಿದ್ದಾರೆ. ಈ ಬಗ್ಗೆ ಅಧಿಕಾರಿಗಳು ಗಮನಹರಿಸಬೇಕು’ ಎಂದರು.

ಬಾಂಬ್ ಬೆದರಿಕೆ: ತಾಂತ್ರಿಕ ತನಿಖೆ

ಬೆಂಗಳೂರು: ‘ಇ-ಮೇಲ್ ಮೂಲಕ ಶಾಲೆಗಳು ಹಾಗೂ ಮ್ಯೂಸಿಯಂಗಳಿಗೆ ಬಾಂಬ್ ಬೆದರಿಕೆ ಕರೆಗಳು ಬರುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ತಾಂತ್ರಿಕ ತನಿಖೆ ನಡೆಯುತ್ತಿದೆ’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಹೇಳಿದರು.

‘ರಾಜ್ಯದಲ್ಲಿ ಮತೀಯ ಗೂಂಡಾ ಗಿರಿಗೆ ಅವಕಾಶ ಇಲ್ಲ. ಆ ರೀತಿ ಯ ಘಟನೆಗಳು ನಡೆದರೆ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಹಾವೇರಿಯ ಹಾನಗಲ್ ನಲ್ಲಿ ನಡೆದ ಅತ್ಯಾಚಾರ ಪ್ರಕರಣ ದಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ. ಮತೀಯ ಗೂಂಡಾಗಿರಿಯಂತಹ ಘಟನೆಗಳಿಗೆ ಅವಕಾಶ ನೀಡದಂತೆ ಎಲ್ಲ ಎಸ್.ಪಿಗಳಿಗೆ ಸೂಚನೆ ನೀಡಲಾಗಿದೆ’ ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಬಹುಮಾನಕ್ಕೆ ಕೃತಿಗಳ ಆಹ್ವಾನ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು 2022ನೇ ಸಾಲಿನ ಪುಸ್ತಕ ಬಹುಮಾನಕ್ಕೆ ವಿವಿಧ ಪ್ರಕಾರಗಳ ಕೃತಿಗಳನ್ನು ಆಹ್ವಾನಿಸಿದೆ.

ಕಾವ್ಯ (ವಚನಗಳು ಮತ್ತು ಹನಿಗವನಗಳು), ಕಾದಂಬರಿ, ಸಣ್ಣಕತೆ, ನಾಟಕ, ಲಲಿತ ಪ್ರಬಂಧ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ಆತ್ಮಕತೆ, ಸಾಹಿತ್ಯ ವಿಮರ್ಶೆ, ಗ್ರಂಥ ಸಂಪಾದನೆ (ಪ್ರಾಚೀನ ಕೃತಿಗಳ ಸಂಪಾದನೆ), ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಮಾನವಿಕ ವಿಷಯಗಳು, ಸಂಶೋಧನೆ, ಅನುವಾದ, ಸಂಕೀರ್ಣ ಸೇರಿದಂತೆ 22 ವಿಭಾಗಗಳಲ್ಲಿ ಕೃತಿಗಳನ್ನು ಆಹ್ವಾನಿಸಿದ್ದು, ಪ್ರತಿ ಪ್ರಕಾರದಲ್ಲಿ ವಿಮರ್ಶಕರು ಆಯ್ಕೆ ಮಾಡಿದ ಒಂದು ಕೃತಿಗೆ ಪ್ರಶಸ್ತಿ ನೀಡಲಾಗುತ್ತದೆ.

ಕೃತಿಗಳು 2022ರ ಜನವರಿ 1 ರಿಂದ ಡಿಸೆಂಬರ್ 31 ರೊಳಗೆ ಪ್ರಥಮ ಆವೃತ್ತಿಯಾಗಿ ಪ್ರಕಟವಾಗಿರಬೇಕು. ಜನಪದ ಪ್ರಕಾರ ಹಾಗೂ ಪಿಎಚ್.ಡಿ ಪದವಿಗಾಗಿ ಸಿದ್ಧಪಡಿಸಿದ ಸಂಶೋಧನಾ ಗ್ರಂಥಗಳನ್ನು ಪ್ರಶಸ್ತಿಗೆ ಪರಿಗಣಿಸುವುದಿಲ್ಲ. ಕೃತಿಯ ನಾಲ್ಕು ಪ್ರತಿಗಳನ್ನು ಫೆ.20ರೊಳಗೆ ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2 ನೇ ಮಹಡಿ, ಜೆ.ಸಿ.ರಸ್ತೆ, 560002 ಈ ವಿಳಾಸಕ್ಕೆ ಕಳುಹಿಸುವಂತೆ ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ ಎನ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ವಿವರಕ್ಕೆ: sahithyaacademy.karnataka.gov.in

ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಸ್ಪರ್ಧಾತ್ಮಕ ಪರೀಕ್ಷಾ ಸಂಸ್ಥೆಯು ಯುಪಿಎಸ್‌ಸಿ ಹಾಗೂ ಕೆಪಿಎಸ್‌ಸಿ ಪೂರ್ವಭಾವಿ ಪರೀಕ್ಷಾ ತರಬೇತಿ ಮತ್ತು ಮಾರ್ಗದರ್ಶನಕ್ಕೆ ಅರ್ಜಿ ಆಹ್ವಾನಿಸಿದೆ.

ಐಎಎಸ್, ಕೆಎಎಸ್, ಪರೀಕ್ಷೆಗಳ ತರಬೇತಿಗಾಗಿ (ಆನ್‌ಲೈನ್/ಆಫ್‌ಲೈನ್) ಅರ್ಹ ಅಭ್ಯರ್ಥಿಗಳಿಗೆ ವಿದ್ಯಾರ್ಥಿವೇತನದ ಮೂಲಕ ಕೋರ್ಸ್ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತದೆ. ಆಸಕ್ತ ಅಭ್ಯರ್ಥಿಗಳು ಇದೇ 25ರೊಳಗೆ ಹೆಸರು ನೋಂದಣಿ ಮಾಡಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ http://www.ksfkarnataka.comಗೆ ಭೇಟಿ ನೀಡಿ ಅಥವಾ 080–25202299/76250 00990ಗೆ ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.



ಸ್ಥಳೀಯರಿಗೆ ಟೋಲ್ ಶುಲ್ಕದಿಂದ ವಿನಾಯಿತಿ ನೀಡಬೇಕೆಂದು ಆಗ್ರಹಿಸಿ ಸೋಮನಹಳ್ಳಿ ಗೇಟ್ ಬಳಿ ರೈತ ಸಂಘದ ನೇತೃತ್ವದಲ್ಲಿ ಸುತ್ತಮುತ್ತಲಿನ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಸರ್ವೀಸ್ ರಸ್ತೆಗೆ ಅಭಿವೃದ್ಧಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ರಸ್ತೆಯ ಸೋಮನಹಳ್ಳಿ ಬಳಿ ನಿರ್ಮಾಣ ಹಂತದಲ್ಲಿರುವ ಟೋಲ್ ಸಂಗ್ರಹ ಕೇಂದ್ರದಲ್ಲಿ ಸ್ಥಳೀಯ ವಾಹನ ಸವಾರರಿಗೆ ಪ್ರತ್ಯೇಕ ಸರ್ವಿಸ್ ರಸ್ತೆ ನಿರ್ಮಿಸದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಕ್ರಮವನ್ನು ಖಂಡಿಸಿ ಸ್ಥಳೀಯರು ಬುಧವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಕಗ್ಗಲಿಪುರ ಘಟಕ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಸೋಮನಹಳ್ಳಿ, ನೆಲಗುಳಿ, ತರಳು ಸೇರಿದಂತೆ ವಿವಿಧ ಹಳ್ಳಿಗಳ ಸಾರ್ವಜನಿಕರು ಭಾಗವಹಿಸಿದ್ದರು.

‘ಸೋಮನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುನಿನಗರ, ಮುಕ್ಕೋಡ್ಲು, ಗಿರಿಗೌಡನ ದೊಡ್ಡಿ, ತೋಪೂರು, ಗಾಡಿ ಪಾಳ್ಯ, ನೆಲಗುಳಿ ಪಂಚಾಯಿತಿ ವ್ಯಾಪ್ತಿಯ ನಾಗ ನಾಯಕನಹಳ್ಳಿ, ಬೋಳಾರೆ, ಜಟ್ಟಿಪಾಳ್ಯ, ಕೆರೆ ಚೂಡಹಳ್ಳಿ ಮತ್ತು ತರಳು ಗ್ರಾಮ ಪಂಚಾಯಿತಿಯ ತಟಗುಪ್ಪೆ ಗ್ರಾಮಗಳಲ್ಲಿ ಸುಮಾರು 30 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದೆ. ಟೋಲ್ ನಿರ್ಮಾಣವಾದರೆ ಕಗ್ಗಲಿಪುರ ಮತ್ತು ಬೆಂಗಳೂರು ನಗರಕ್ಕೆ ತೆರಳ ಬೇಕಾದರೆ ಟೋಲ್ ಶುಲ್ಕ ಪಾವತಿಸಿ ಹೋಗಬೇಕಾದ ಅನಿವಾರ್ಯತೆ ಎದುರಾಗಲಿದೆ’ ಎಂದು ಪ್ರತಿಭಟನ ಕಾರರು ದೂರಿದರು.

ಇಲ್ಲಿ ನಿರ್ಮಿಸುತ್ತಿರುವ ಟೋಲ್ ಕೇಂದ್ರದಲ್ಲಿ ಸ್ಥಳೀಯ ವಾಹನ ಸವಾರರಿಗೆ ಪ್ರತ್ಯೇಕ ಸರ್ವೀಸ್ ರಸ್ತೆ ನಿರ್ಮಿಸ ಕೊಡುವವರೆಗೂ ಸ್ಥಳೀಯ ವಾಹನಗಳಿಂದ ಟೋಲ್ ಸಂಗ್ರಹಿ ಸಬಾರದು ಎಂದು ನಿರ್ಮಾಣ ಹಂತದಲ್ಲಿ ಟೋಲ್ ಸಂಗ್ರಹ ಕೇಂದ್ರಕ್ಕೆ ಪ್ರತಿಭಟನಾಕಾರರು ಫಲಕ ಅಳವಡಿಸಿದ್ದಾರೆ.

ಪ್ರತಿಭಟನೆಯಲ್ಲಿ ಕಗ್ಗಲಿಪುರ ರೈತ ಸಂಘದ ಅಧ್ಯಕ್ಷ ನದೀಮ್ ಪಾಷ, ರೈತರಾದ ಮಂಜುನಾಥ್, ವೆಂಕಟೇಶ್, ಶ್ರೀನಿವಾಸ್, ಸೋಮನಹಳ್ಳಿ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷ ಕೇಶವಮೂರ್ತಿ ಮಾಜಿ ಅಧ್ಯಕ್ಷ ವಿಜಯ ಕುಮಾರ್ ಭಾಗವಹಿಸಿದ್ದರು.

ಸಾಹಿತ್ಯ ಕೃತಿಗಳ ಆಹ್ವಾನ

ಬೆಂಗಳೂರು: ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು ಉದಯೋನ್ಮುಖ ಲೇಖಕ ಹಾಗೂ ಲೇಖಕಿಯರನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಸಂಬಂಧ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ಆಹ್ವಾನಿಸಿದೆ.

ಕನಿಷ್ಠ 10 ಕಥೆಗಳ ಕಥಾ ಸಂಕಲನ,120 ಪುಟಗಳು ಮೀರದಂತೆ ಕಾದಂಬರಿ, 80 ಪುಟಗಳ ಚಿತ್ರ ಸಹಿತ ವಿಜ್ಞಾನ ಸಾಹಿತ್ಯ ಕೃತಿಗಳು, ಕನಿಷ್ಠ 80 ಪುಟಗಳ ಮಕ್ಕಳ ಸಾಹಿತ್ಯದ ಅಪ್ರಕಟಿತ ಕೃತಿಗಳನ್ನು ಕಳುಹಿಸಬಹುದಾಗಿದೆ. ಆಯ್ಕೆಯಾದ ಪುಸ್ತಕಗಳನ್ನು ಸಂಘದ ಮೂಲಕ ಪ್ರಕಟಿಸಿ, 50 ಗೌರವ ಪ್ರತಿಗಳೊಂದಿಗೆ ಬಿಡುಗಡೆ ಸಮಾರಂಭದಲ್ಲಿ ಬರಹಗಾರರನ್ನು ಗೌರವಿಸಲಾಗುವುದು ಎಂದು ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ತಿಳಿಸಿದ್ದಾರೆ.

ಅಪ್ರಕಟಿತ ಕೃತಿಗಳನ್ನು ಸುರೇಶ್ ಬಿ.ಕೆ., ಸಹ ಕಾರ್ಯದರ್ಶಿ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, #176, 12ನೇ ಮುಖ್ಯರಸ್ತೆ, ಅಗ್ರಹಾರ ದಾಸರಹಳ್ಳಿ, ಮಾಗಡಿ ಮುಖ್ಯರಸ್ತೆ, ಬೆಂಗಳೂರು-5600079 ಈ ವಿಳಾಸಕ್ಕೆ ಫೆ.28ರೊಳಗೆ ಕಳುಹಿಸಬೇಕು. ಇ ಮೇಲ್ ವಿಳಾಸ apgroups2012@gmail.com ಮೂಲಕವೂ ಕಳುಹಿಸಬಹುದು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

15ರಂದು ‘ಸಂಕ್ರಾಂತಿ ಜಾತ್ರೆ’

ಚಿಕ್ಕಬಳ್ಳಾಪುರ: ಆವಲಗುರ್ಕಿ ಬಳಿಯ ಈಶಾ ಯೋಗ ಕೇಂದ್ರದ ಆದಿಯೋಗಿ ಸನ್ನಿಧಿಯಲ್ಲಿ ಜ.15ರಂದು ‘ಸಂಕ್ರಾಂತಿ ಜಾತ್ರಾ ಮಹೋತ್ಸವ ಹಾಗೂ ಸಾಂಸ್ಕೃತಿಕ ಹಬ್ಬ’ ಆಯೋಜಿಸಲಾಗಿದೆ. ಅಂದು ಸಂಜೆ 5ರಿಂದ ರಾತ್ರಿ 8ರವೆಗೆ ಅದ್ದೂರಿಯಾಗಿ ಕಾರ್ಯಕ್ರಮ ನಡೆಯಲಿವೆ. 21 ಅಡಿ ಎತ್ತರದ ನಂದಿಯ ಮೂರ್ತಿ ಮತ್ತು 54 ಅಡಿ ಎತ್ತರದ ತ್ರಿಶೂಲವನ್ನು (ಮಹಾಶೂಲ) ಯೋಗ ಕೇಂದ್ರದಲ್ಲಿ ಸ್ಥಾಪಿಸುವ ‘ಶಿವಾಭರಣ’ ಕಾರ್ಯಕ್ರಮ ಸಹ ಇದೇ ವೇಳೆ ನಡೆಯಲಿದೆ.

'ಕೋವಿಡ್: ಅಂತ್ಯಕ್ರಿಯೆಗೆ ನಿರಾಕರಿಸಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆಗೆ ಸಾಮಾನ್ಯ ಚಿತಾಗಾರ, ಸ್ಮಶಾನ, ರುದ್ರಭೂಮಿಯಲ್ಲಿ ನಿರಾಕರಿಸಬಾರದು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. ಕೋವಿಡ್ ಮಾರ್ಗಸೂಚಿಯಂತೆ ಕೊರೊನಾ ಸೋಂಕಿತ ಮೃತರ ಅಂತ್ಯಕ್ರಿಯೆಯನ್ನು ರಾಜ್ಯದ ಚಿತಾಗಾರ, ಸ್ಮಶಾನ, ರುದ್ರಭೂಮಿಯಲ್ಲಿ ನಡೆಸಬೇಕು. ಸಿಬ್ಬಂದಿ ಮುಖಗವಸು, ಕೈಗವಸು, ಪಿಪಿಇ ಕಿಟ್ ಧರಿಸಬೇಕು. ಅಂತ್ಯಕ್ರಿಯೆ ನಡೆದ ಬಳಿಕ ಸುರಕ್ಷಾ ಸಾಧನಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು ಎಂದು ತಿಳಿಸಿದ್ದಾರೆ.

ನಾಳೆ ಕೆ–ಸೆಟ್: ತೀವ್ರ ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆ-ಸೆಟ್) ಶನಿವಾರ (ಜ. 13) ನಡೆಯಲಿದೆ.

41 ವಿವಿಧ ವಿಷಯಗಳಿಗೆ ನಡೆಯಲಿರುವ ಈ ಪರೀಕ್ಷೆಗೆ ಒಟ್ಟು 1,17,302 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದ್ದಾರೆ.

ಬೆಂಗಳೂರು ನಗರ, ಧಾರವಾಡ, ಹಾವೇರಿ, ಬಳ್ಳಾರಿ, ದಾವಣಗೆರೆ, ತುಮಕೂರು, ಮೈಸೂರು, ಮಂಡ್ಯ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರೀಕ್ಷಾ ಕೇಂದ್ರಗಳಿವೆ. ಎಲ್ಲ ಕೇಂದ್ರಗಳಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

'ಶನಿವಾರ ಬೆಳಿಗ್ಗೆ 10ರಿಂದ 11 ಗಂಟೆಯವರೆಗೆ ಸಾಮಾನ್ಯ ಪರೀಕ್ಷೆ (ಪ್ರತಿಕೆ-1) ಇರಲಿದೆ. ಮಧ್ಯಾಹ್ನ 12ರಿಂದ 2ರವರೆಗೆ ಅದೇ ಕೇಂದ್ರಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಪರೀಕ್ಷೆ (ಪ್ರತಿಕೆ- 2) ನಡೆಯಲಿದೆ. ಒಮ್ಮೆ ಪರೀಕ್ಷಾ ಕೇಂದ್ರದ ಒಳಗೆ ಅಭ್ಯರ್ಥಿಗಳು ಹೋದ ಬಳಿಕ ಎರಡೂ ಪತ್ರಿಕೆಗಳ ಪರೀಕ್ಷೆ ಮುಗಿದ ನಂತರವೇ ಹೊರಬರಲು ಅವಕಾಶ ನೀಡಲಾಗುವುದು. ಕಟ್ಟುನಿಟ್ಟಿನ ತಪಾಸಣೆ ಇರುವ ಕಾರಣ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಎರಡು ಗಂಟೆ ಮೊದಲೇ ಬರಬೇಕೆಂದು ಸೂಚಿಸಿದ್ದಾರೆ.

'ವಾಣಿಜ್ಯ ಶಾಸ್ತ್ರದ ಪರೀಕ್ಷೆಯನ್ನು ಅತಿ ಹೆಚ್ಚು 16 ಸಾವಿರ ಮಂದಿ, ಕನ್ನಡ ವಿಷಯವನ್ನು 11 ಸಾವಿರ ಮಂದಿ ತೆಗೆದುಕೊಂಡಿದ್ದಾರೆ. ಭಾಷಾಶಾಸ್ತ್ರದ ವಿಷಯದಲ್ಲಿ ಅತಿ ಕಡಿಮೆ 25 ಮಂದಿ ಪರೀಕ್ಷೆ ಬರೆಯುತ್ತಿದ್ದಾರೆ. ಪರೀಕ್ಷೆಗೆ ಹಾಜರಾಗುವ ಒಟ್ಟು ಅಭ್ಯರ್ಥಿಗಳ ಪೈಕಿ ಅತಿ ಹೆಚ್ಚು ಅಂಕ ಪಡೆದ ಶೇ 6ರಷ್ಟು ಮಂದಿ ಅಂತಿಮವಾಗಿ ಕೆ-ಸೆಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆಯಲಿದ್ದಾರೆ. ಇದರಲ್ಲಿ ರೋಸ್ಟರ್ ನಿಯಮಗಳನ್ನು ಪಾಲಿಸಲಾಗುವುದು' ಎಂದರು.

800 ಇ-ಮೇಲ್: 'ನೋಂದಣಿ ಸಂಖ್ಯೆ ಕಳೆದುಕೊಂಡ 800ಕ್ಕೂ ಹೆಚ್ಚು ಮಂದಿ ಕೆ-ಸೆಟ್ ಪರೀಕ್ಷೆಯ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡಿಲ್ಲ. ಅಂಥವರ ಇ-ಮೇಲ್‌ಗಳಿಗೆ ನೋಂದಣಿ ಸಂಖ್ಯೆ ರವಾನಿಸುವ ಕೆಲಸವನ್ನು ಕೆಇಎ ಮಾಡಿದೆ. ಆ ಮೂಲಕ, ಎಲ್ಲರೂ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ' ಎಂದೂ ರಮ್ಯಾ ತಿಳಿಸಿದ್ದಾರೆ.



‘ಬಯಸದೇ ಬಂದ ಭಾಗ್ಯವಿದು’

ನಟ ಚಿಕ್ಕಣ್ಣ ಅಭಿನಯದ ‘ಉಪಾಧ್ಯಕ್ಷ’ ಚಿತ್ರ ಜ.26ರಂದು ತೆರೆ ಕಾಣುತ್ತಿದೆ. ಮೊದಲ ಸಲ ಅವರು ನಾಯಕನಾಗಿ ಕಾಣಿಸಿಕೊಂಡಿರುವ ಚಿತ್ರವಿದು. ತಮ್ಮ ಇನ್ನಷ್ಟು ಕನಸುಗಳನ್ನು ಅವರು ಹಂಚಿಕೊಳ್ಳುತ್ತಾ ಹೋದರು...

ವಿನಾಯಕ ಕೆ.ಎಸ್.

- **ಸಿನಿಮಾ ಮತ್ತು ನಿಮ್ಮ ಪಾತ್ರದ ಕುರಿತು ಹೇಳಬಹುದೇ?**

ಸೂಪರ್ ಹಿಟ್ ‘ಅಧ್ಯಕ್ಷ’ ಸಿನಿಮಾದ ಮುಂದುವರಿದ ಭಾಗವಿದು. ಆ ಸಿನಿಮಾದ ಉಪಾಧ್ಯಕ್ಷನ ಪಾತ್ರವೇ ಇಲ್ಲಿದೆ. ‘ಅಧ್ಯಕ್ಷ’ದ ನಾಯಕ ಶರಣ್ ಹೊರತಾಗಿ ಮಿಕ್ಕೆಲ್ಲ ಪಾತ್ರಗಳು ಈ ಸಿನಿಮಾದಲ್ಲಿ ಮುಂದುವರಿಯುತ್ತವೆ. ಗೆಜ್ಜೆಪುರದಲ್ಲಿ ನಡೆಯುವ ಹಾಸ್ಯಭರಿತ ರಾಜಕೀಯ ಕಥೆಯನ್ನು ಒಳಗೊಂಡಿದೆ. ‘ಅಧ್ಯಕ್ಷ’ದಲ್ಲಿ ನಾಯಕ ಊರಿನ ಶಿವರುದ್ರೇಗೌಡರ ಮಗಳನ್ನು ಮದುವೆಯಾಗಿರುತ್ತಾನೆ. ಹೀಗಾಗಿ ಅಧ್ಯಕ್ಷರನ್ನು ಇಲ್ಲಿ ಗೌರವಾಧ್ಯಕ್ಷರನ್ನಾಗಿ ಮಾಡಲಾಗಿದೆ. ‘ಉಪಾಧ್ಯಕ್ಷ’ ಗೌಡರ ವಿರುದ್ಧ ನಿಲ್ಲುತ್ತಾನೆ. ಹಾಸ್ಯವನ್ನು ಬಿಟ್ಟು ಬೇರೇನೂ ಯೋಚಿಸಿಲ್ಲ. ಸಂಪೂರ್ಣ ಹಾಸ್ಯಮಯ ಸಿನಿಮಾ. ‘ಅಧ್ಯಕ್ಷ’ದಲ್ಲಿ ಇರದೇ ಇದ್ದ ಒಂದಷ್ಟು ಪಾತ್ರಗಳನ್ನು ಇಲ್ಲಿ ಅಳವಡಿಸಿಕೊಂಡಿದ್ದೇವೆ. ಸಾಧು ಕೋಕಿಲ, ಧರ್ಮಣ್ಣ ಕಡೂರು, ಶಿವರಾಜ್ ಕೆ.ಆರ್. ಪೇಟೆ ಮೊದಲಾದವರು ಚಿತ್ರದಲ್ಲಿದ್ದಾರೆ.

- **ಹಿಂದೊಮ್ಮೆ ಅಸಮಾಧಾನದ ಮಾತುಗಳನ್ನಾಡಿದ್ದಿರಿ. ಈ ಸಿನಿಮಾದಿಂದಲೇ ಬೇಸರದ ಘಟನೆಗಳು ನಡೆದವಾ?**

ಕೋವಿಡ್‌ಗಿಂತ ಮೊದಲು ಈ ಸಿನಿಮಾ ಪ್ರಾರಂಭವಾಗಿದ್ದು. ಈಗಾಗಲೇ ‘ಉಪಾಧ್ಯಕ್ಷ’ ಜನರಿಗೆ ಚಿರಪರಿಚಿತ ಪಾತ್ರ. ಕಥೆಯೂ ಇಷ್ಟವಾಗಿತ್ತು. ಗೆದ್ದೇ ಗೆಲ್ಲುತ್ತೇವೆ ಎಂಬ ವಿಶ್ವಾಸದಿಂದ ಪ್ರಾರಂಭಿಸಿದ ಸಿನಿಮಾ ಇದು. ಇದಕ್ಕಾಗಿ ಹಲವು ಸಿನಿಮಾಗಳನ್ನು ಬಿಟ್ಟೆ. ಇದರಲ್ಲಿಯೇ ಮುಳುಗಿದ್ದರಿಂದ ಮತ್ತೊಂದಷ್ಟು ಸಿನಿಮಾಗಳನ್ನು ಮಾಡಲು ಸಾಧ್ಯವಾಗಲಿಲ್ಲ. ಈ ಸಿನಿಮಾ ವಿಳಂಬವಾಯಿತು ಎಂಬ ಕಾರಣಕ್ಕೆ ಬೇರೆ ರೀತಿಯ ಮಾತುಗಳು ಬಂದವು. ಉದ್ಯಮದಲ್ಲಿ ನಕಾರಾತ್ಮಕ ಮಾತುಗಳನ್ನು ಹಬ್ಬಿಸುವವರು ಇರುತ್ತಾರೆ. ಅಂಥವರ ವಿರುದ್ಧ ಅಸಮಾಧಾನ ಹೊರಹಾಕಿದ್ದಷ್ಟೆ. ಸಿನಿಮಾದಿಂದಾಗಲೀ, ತಂಡದಿಂದಾಗಲೀ ಯಾವುದೇ ಬೇಸರವಾಗಿರಲಿಲ್ಲ. ಇದು ನಮ್ಮ ಸಿನಿಮಾ.

- **ಇಲ್ಲಿಯವರೆಗೆ ಎಷ್ಟು ಸಿನಿಮಾಗಳು ಆಗಿವೆ? ಈ ಪಯಣ ಹೇಗಿದೆ?**

200ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದೇನೆ. ಚಿತ್ರೋದ್ಯಮ ನಾನು ಕಾಣದೇ ಇದ್ದ ಕನಸು. ಹೀಗೆ ಆಗ್ತೀನಿ ಅಂತ ಗೊತ್ತಿರಲಿಲ್ಲ. ಬಯಸದೇ ಬಂದ ಭಾಗ್ಯವಿದು. ಅಚಾನಕ್ಕಾಗಿ ‘ಕಿರಾತಕ’ ಚಿತ್ರದಲ್ಲಿ ಅವಕಾಶ ಸಿಕ್ಕಿತು. ‘ರಾಜಾಹುಲಿ’ ಚಿತ್ರದಲ್ಲಿ ಜನ ಗುರುತಿಸಿದರು. ‘ಅಧ್ಯಕ್ಷ’ ವೃತ್ತಿ ಜೀವನದ ಟರ್ನಿಂಗ್ ಪಾಯಿಂಟ್. ನಾಯಕ ಆಗಬೇಕು ಅಂತ ಕನಸು ಕಂಡಿಲ್ಲ. ಸಿಗದಿರುವ ಅವಕಾಶಕ್ಕೆ ಕೊರಗುವುದಕ್ಕಿಂತ ಸಿಕ್ಕಿದ್ದಕ್ಕೆ ಸಂತೋಷಪಡುವವನು ನಾನು. ಒಂದೊಮ್ಮೆ ಚಿತ್ರರಂಗಕ್ಕೆ ಬಂದಿಲ್ಲದೇ ಇದ್ದಿದ್ದರೆ ಎಲ್ಲೋ, ಏನೋ ಮಾಡಿಕೊಂಡು ಒಂದಷ್ಟು ದುಡ್ಡು ಮಾಡಿಕೊಂಡು ಜೀವನದಲ್ಲಿ ಸೆಟೆಲ್ ಆಗಿರುತ್ತಿದ್ದೆ. ಆದರೆ ಈ ಹೆಸರು, ಗೌರವ, ಪ್ರೀತಿ ಗಳಿಸಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಪಯಣವನ್ನು ಬಹಳ ಸಂತೋಷದಿಂದ ಆಸ್ವಾದಿಸುತ್ತಿರುವೆ.

- **ಈ ಸಿನಿಮಾ ಯಶಸ್ವಿಯಾದರೆ ನಾಯಕನಾಗಿಯೇ ಮುಂದುವರಿಯುತ್ತೀರಾ?**

ಯಶಸ್ವಿಯಾದರೆ ಎಂಬ ಮಾತಿಲ್ಲ, ಖಂಡಿತ ಯಶಸ್ವಿಯಾಗುತ್ತದೆ. ಹಾಗಂತ ನಾಯಕನಾಗಿಯೇ ಇರುತ್ತೇನೆ ಎಂದಲ್ಲ. ಕಾಮಿಡಿ ಇರುವ ಒಂದೊಳ್ಳೆ ಕಥೆ ಬಂತು, ಒಪ್ಪಿಕೊಂಡೆ. ಒಳ್ಳೆಯ ಪಾತ್ರಗಳಲ್ಲಿ ನಗಿಸುವುದನ್ನು ಮುಂದುವರಿಸುತ್ತೇನೆ. ಚೆನ್ನಾಗಿರುವ ಕಥೆ ಬಂದರೆ ನಾಯಕನಾಗಿ ಮಾಡುತ್ತೇನೆ. ಎರಡಲ್ಲಿಯೂ ಮುಂದುವರಿಯುವೆ.

- **ನಿಮ್ಮ ಮುಂದಿನ ಯೋಜನೆಗಳ ಬಗ್ಗೆ ಮಾಹಿತಿ ನೀಡಬಹುದಾ?**

ಕಳೆದ ಮೂರು ವರ್ಷಗಳಿಂದ ಹೊಸ ಸಿನಿಮಾಗಳನ್ನು ಒಪ್ಪಿಕೊಂಡಿಲ್ಲ. ಆದರೆ ಮೊದಲೇ ಒಪ್ಪಿಕೊಂಡಿದ್ದ ಹಲವು ಸಿನಿಮಾಗಳು ಪೂರ್ಣಗೊಂಡು ಬಿಡುಗಡೆಗೆ ಸಿದ್ಧ ಇವೆ. ಧ್ರುವ ಸರ್ಜಾ ಅಭಿನಯದ ‘ಮಾರ್ಟಿನ್’ ಸಿನಿಮಾದಲ್ಲಿ ಒಳ್ಳೆ ಪಾತ್ರ ಮಾಡಿರುವೆ. ನಟ ಗುರುನಂದನ್ ಜೊತೆ ಒಂದು ಸಿನಿಮಾ ಪೂರ್ಣಗೊಂಡಿದೆ. ಅನೀಶ್ ತೇಜೇಶ್ವರ್ ಸಿನಿಮಾದಲ್ಲಿ ನಟಿಸಿದ್ದೇನೆ. ಹೀಗೆ ಕೆಲವಷ್ಟು ಸಿನಿಮಾಗಳು ಸಿದ್ಧವಾಗಿವೆ. ‘ಉಪಾಧ್ಯಕ್ಷ’ ಬಿಡುಗಡೆ ನಂತರ ಮುಂದಿನ ಯೋಜನೆಗಳತ್ತ ಆಲೋಚಿಸುವೆ. ❖

ಪ್ರಜಾವಾಣಿ ನೋಡಿಯೊ
ಸಿನಿಮಾತು
ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಬಿಡುಗಡೆಗೆ ಸಜ್ಜಾಗುತ್ತಿದೆ ‘ಕಾಂಗರೂ’



ರಂಜನಿ ರಾಘವನ್

ಆದಿತ್ಯ ಹಾಗೂ ರಂಜನಿ ರಾಘವನ್ ನಟಿಸಿರುವ, ಕಿಶೋರ್ ಮೇಗಳಮನೆ ನಿರ್ದೇಶನದ ‘ಕಾಂಗರೂ’ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಡಬ್ಬಿಂಗ್ ಕೆಲಸವನ್ನೂ ಚಿತ್ರತಂಡ ಮುಗಿಸಿದೆ.

ಬೆಂಗಳೂರು, ಚಿಕ್ಕಮಗಳೂರು, ಹೊರನಾಡು ಮುಂತಾದೆಡೆ ಚಿತ್ರೀಕರಣ ನಡೆದಿದೆ. ‘ಕಾಂಗರೂ’ ಕನ್ನಡ, ತೆಲುಗು, ತಮಿಳು ಹಾಗೂ ಮಲಯಾಳಂ ಭಾಷೆಗಳಲ್ಲಿ ನಿರ್ಮಾಣವಾಗುತ್ತಿದೆ. ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರದ ಈ ಚಿತ್ರದ ಮೋಷನ್ ಪೋಸ್ಟರ್ ಸದ್ಯದಲ್ಲೇ ಬಿಡುಗಡೆಯಾಗಲಿದೆ. ಆದಿತ್ಯ ಅವರು ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ರಂಜನಿ ರಾಘವನ್ ಸೈಕಿಯಾಟ್ರಿಸ್ಟ್ ಆಗಿ ಕಾಣಿಸಿಕೊಂಡಿದ್ದಾರೆ. ❖

ಬಿಬಿಎಂಪಿಗೆ ರಾಷ್ಟ್ರಮಟ್ಟದಲ್ಲಿ 125ನೇ ರ್‍ಯಾಂಕ್ • ರಾಜ್ಯಮಟ್ಟದಲ್ಲಿ 3ನೇ ಸ್ಥಾನ


ಸ್ವಚ್ಛ ಸರ್ವೇಕ್ಷಣೆ: ಪ್ರಗತಿ ಸಾಧಿಸಿದ ಬೆಂಗಳೂರು

ಬೆಂಗಳೂರು: ಸ್ವಚ್ಛ ಸರ್ವೇಕ್ಷಣೆ –2023 ವಾರ್ಷಿಕ ಸ್ವಚ್ಛತಾ ಸಮೀಕ್ಷೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ರಾಷ್ಟ್ರ ಮಟ್ಟದಲ್ಲಿ 125ನೇ ರ್‍ಯಾಂಕ್ ಪಡೆದಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 25ರಷ್ಟು ಹೆಚ್ಚು ಅಂಕಗಳನ್ನು ಗಳಿಸಿದೆ.

ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಆಯೋಜಿಸುವ ಸ್ವಚ್ಛ ಸರ್ವೇಕ್ಷಣೆ ಸಮೀಕ್ಷೆಯಲ್ಲಿ ತ್ಯಾಜ್ಯ ಸಂಗ್ರಹ, ವಿಂಗಡಣೆ, ಸಂಸ್ಕರಣೆಯಲ್ಲಿ ಬಿಬಿಎಂಪಿ ಪ್ರಗತಿ ಸಾಧಿಸಿದ್ದರೂ ರಾಜ್ಯದಲ್ಲಿ ಮೂರನೇ ಸ್ಥಾನ ಪಡೆದಿದೆ. ಮೊದಲನೆಯ ಸ್ಥಾನದಲ್ಲಿ ಮೈಸೂರು ಮಹಾನಗರ ಪಾಲಿಕೆ ಮತ್ತು ಹೊಸದುರ್ಗ ಪುರಸಭೆಗಳಿವೆ. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಮತ್ತು ಬೈಲಹೊಂಗಲ ಪುರಸಭೆಯ ಎರಡನೇ ಸ್ಥಾನದಲ್ಲಿವೆ.

2022ರಲ್ಲಿ 40 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯಿರುವ ಸ್ಥಳೀಯ ಸಂಸ್ಥೆಗಳ ವರ್ಗದಲ್ಲಿ 45 ನಗರಗಳ ಪೈಕಿ ಬಿಬಿಎಂಪಿ 43ನೇ ಸ್ಥಾನ ಗಳಿಸಿತ್ತು. 2021ರಲ್ಲಿ 10 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯಿರುವ ವರ್ಗದಲ್ಲಿ 48 ನಗರಗಳಲ್ಲಿ 28ನೇ ಸ್ಥಾನ ಗಳಿಸಿತ್ತು. 2023ರಲ್ಲಿ 1 ಲಕ್ಷಕೂ ಹೆಚ್ಚಿನ ಜನಸಂಖ್ಯೆ ವರ್ಗದಲ್ಲಿ 446 ಸ್ಥಳೀಯ ಸಂಸ್ಥೆಗಳಲ್ಲಿ 125ನೇ ಸ್ಥಾನವನ್ನು ಬಿಬಿಎಂಪಿ ಗಳಿಸಿದೆ.

ನೈರ್ಮಲ್ಯ ವರ್ಗದ ಸಮೀಕ್ಷೆಯಲ್ಲಿ ಬಿಬಿಎಂಪಿ ಪ್ರಥಮ ಬಾರಿಗೆ 2023ರಲ್ಲಿ ಉನ್ನತ ಸ್ಥಾನ ಪಡೆದಿದೆ. 'ಒಡಿಎಫ್ + +'ನಿಂದ 'ವಾಟರ್ +' ನಗರವೆಂಬ ಶ್ರೇಯಾಂಕ ಪಡೆದಿದೆ. ಜನರು ಸ್ವಚ್ಛತೆಯಲ್ಲಿ ಭಾಗವಹಿಸುವ 'ನಾಗರಿಕರ ಧ್ವನಿ' ವರ್ಗದಲ್ಲಿ 2022ಕ್ಕಿಂತ ಶೇ 30ರಷ್ಟು ಹೆಚ್ಚು ಅಂಕಗಳನ್ನು ಗಳಿಸಿದೆ.




ಕಳೆದ ವರ್ಷಗಳ ಸ್ಥಾನ	
2017	210
2018	216
2019	194
2020	214
2021	28
2022	43

ಈ ಬಾರಿ 'ಫಸ್ಟ್ ಕ್ಲಾಸ್', ಮುಂದಿನ ಬಾರಿ 'ಡಿಸ್ಟಿಂಕ್ಷನ್' !

'ಸ್ವಚ್ಛತೆಯಲ್ಲಿ ಉತ್ತಮ ಶ್ರೇಯಾಂಕಗಳಿಸುವಲ್ಲಿ ತಳಮಟ್ಟದಲ್ಲಿ ತ್ಯಾಜ್ಯ ನಿರ್ವಹಣೆ ಮಾಡುವವರ ಪಾತ್ರ ಅತ್ಯಂತ ದೊಡ್ಡದು. ಕಳೆದ ಬಾರಿ ಶೇ 36ರಷ್ಟು ಶ್ರೇಯಾಂಕ ಗಳಿಸಿ 'ಜಸ್ಟ್ ಪಾಸ್' ಆಗಿದ್ದ ಬಿಬಿಎಂಪಿ ಈ ವರ್ಷ ಶೇ 61ರಷ್ಟು ಅಂಕ ಗಳಿಸಿ 'ಫಸ್ಟ್ ಕ್ಲಾಸ್' ಆಗಿದೆ. ಇದನ್ನು ಉಳಿಸಿಕೊಂಡು, ಮುಂದೆ 'ಡಿಸ್ಟಿಂಕ್ಷನ್' ಪಡೆಯುವತ್ತ ಎಲ್ಲರೂ ಪ್ರಯತ್ನಿಸಬೇಕು' ಎಂದು ಬಿಬಿಎಂಪಿ ಸ್ವಚ್ಛ ಸರ್ವೇಕ್ಷಣೆಗೆ ಸಲಹೆಗಾರರಾದ ರಾಮ್‌ಪ್ರಸಾದ್ ಹೇಳಿದರು.

ನಗರದ 'ರಿಪೋರ್ಟ್ ಕಾರ್ಡ್'



1. ಮನೆಯಿಂದ ತ್ಯಾಜ್ಯ ಸಂಗ್ರಹ
2. ಮೂಲದಲ್ಲೇ ಕಸ ವಿಂಗಡಣೆ
3. ತ್ಯಾಜ್ಯ ಉತ್ಪಾದನೆ/ ಸಂಸ್ಕರಣೆ
4. ಭೂಭರ್ತಿ ತಾಣಗಳ ಪುನಶ್ಚೇತನ
5. ವಸತಿ ಪ್ರದೇಶಗಳ ಸ್ವಚ್ಛತೆ
6. ಮಾರುಕಟ್ಟೆ ಪ್ರದೇಶಗಳ ಶುಚಿತ್ವ
7. ಜಲಮೂಲಗಳ ಶುದ್ಧತೆ
8. ಸಾರ್ವಜನಿಕ ಶೌಚಾಲಯಗಳ ನೈರ್ಮಲ್ಯ

ಪ್ರಜಾವಾಣಿ ಗ್ರಾಫಿಕ್

ಬಿಡಿಎ: ಸದೃಢ ರಸ್ತೆ ನಿರ್ಮಾಣಕ್ಕೆ ಮೊದಲ ಬಾರಿಗೆ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆ

ಕೆಂಪೇಗೌಡ ಬಡಾವಣೆ ರಸ್ತೆಗೆ 'ಎಸ್‌ಎಸ್‌ಟಿ'

• ಆರ್. ಮಂಜುನಾಥ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮೊದಲ ಬಾರಿಗೆ ತನ್ನ ಬಡಾವಣೆಗಳಲ್ಲಿ ಸಾಯಿಲ್ ಸ್ಟೆಬಿಲೈಸೇಷನ್ ಟೆಕ್ನಾಲಜಿ (ಎಸ್‌ಎಸ್‌ಟಿ- ಮಣ್ಣು ಸ್ಥಿರೀಕರಣ ತಂತ್ರಜ್ಞಾನ) ಬಳಸಿ ರಸ್ತೆ ನಿರ್ಮಿಸಲು ಮುಂದಾಗಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯ (ಎನ್‌ಪಿಕೆಎಲ್) 5, 6 ಮತ್ತು 7ನೇ ಬ್ಲಾಕ್‌ಗಳ ರಸ್ತೆಗಳನ್ನು ಮಣ್ಣು ಸ್ಥಿರೀಕರಣ ತಂತ್ರಜ್ಞಾನದಲ್ಲಿ ಅಭಿವೃದ್ಧಿಗೊಳಿಸಲು ನಿರ್ಧರಿಸಿ, ಟೆಂಡರ್ ಆಹ್ವಾನಿಸಲಾಗಿದೆ. ಮುಂದಿನ 9 ತಿಂಗಳಲ್ಲಿ ರಸ್ತೆಗಳು ನಿರ್ಮಾಣವಾಗಲಿವೆ.

ಎನ್‌ಪಿಕೆಎಲ್‌ನ ಮೂರು ಬ್ಲಾಕ್‌ಗಳ 30 ಅಡಿ, 40 ಅಡಿ ಹಾಗೂ 50 ಅಡಿ ರಸ್ತೆಗಳು ಎಸ್‌ಎಸ್‌ಟಿ ತಂತ್ರಜ್ಞಾನದಲ್ಲಿ ನಿರ್ಮಾಣವಾಗಲಿವೆ. ಸಾಮಾನ್ಯ ಡಾಂಬರು ರಸ್ತೆಗಳಿಗಿಂತ ಹೆಚ್ಚು ಸದೃಢ ಹಾಗೂ ಬಾಳಿಕೆ ಬರುವ ತಂತ್ರಜ್ಞಾನ ಇದಾಗಿದ್ದು, ಕಾಂಕ್ರೀಟ್ ರಸ್ತೆಗಿಂತ ಶೇ 10ರಷ್ಟು ವೆಚ್ಚವೂ ಕಡಿತವಾಗಲಿದೆ.

'2022ರ ಡಿಸೆಂಬರ್ ನಲ್ಲಿ ಮಾಗಡಿ ರಸ್ತೆಯ ಕಡಬಗೆರೆ ಕ್ರಾಸ್‌ನಿಂದ ಕಾಚೋಹಳ್ಳಿವರೆಗಿನ ರಸ್ತೆಯಲ್ಲಿ ಎಸ್‌ಎಸ್ ತಂತ್ರಜ್ಞಾನ ವನ್ನು ರಾಜ್ಯದಲ್ಲೇ ಮೊದಲ ಬಾರಿಗೆ ಬಿಡಿಎ ಅಳವಡಿಸಿಕೊಂಡಿತ್ತು.


ಜಯರಾಮ್

ಜರ್ಮನ್ ಮೂಲದ ಐದು ಯಂತ್ರಗಳನ್ನು ಬಳಸಿ 15 ಕಿ.ಮೀ ರಸ್ತೆಯನ್ನು ₹40 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈಗ ಇದೇ ತಂತ್ರಜ್ಞಾನವನ್ನು ಎನ್‌ಪಿಕೆಎಲ್‌ನ ರಸ್ತೆಗಳಲ್ಲಿ ಬಳಸಲು ತೀರ್ಮಾನಿಸಲಾಗಿದೆ' ಎಂದು ಬಿಡಿಎ ಆಯುಕ್ತ ಎನ್. ಜಯರಾಮ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕೆಂಪೇಗೌಡ ಬಡಾವಣೆಗಳಲ್ಲಿ ಖಾಲಿ ನಿವೇಶನಗಳು ಹೆಚ್ಚಿದ್ದರೂ ವಾಸವಿರುವ ನಾಗರಿಕರು ರಸ್ತೆ ನಿರ್ಮಿಸುವಂತೆ ಒತ್ತಾಯಿಸುತ್ತಿದ್ದಾರೆ. ನಿವೇಶನಗಳು ಕಟ್ಟಡಗಳಾದ ಮೇಲೆ ಡಾಂಬರು ರಸ್ತೆ ಮಾಡಲು ನಿರ್ಧರಿಸಲಾಗಿತ್ತು. ಆದರೆ, ನಾಗರಿಕರ ಒತ್ತಾಯದ ಮೇರೆಗೆ ಸದೃಢ ರಸ್ತೆಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ' ಎಂದರು.

'ಮುಖ್ಯರಸ್ತೆಗಳನ್ನು ಮಾತ್ರ ಕಾಂಕ್ರೀಟ್ ಅಥವಾ ಎಸ್‌ಎಸ್‌ಟಿ ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಆದರೆ, ದೀರ್ಘಕಾಲ ಬಾಳಿಕೆ ಬಂದು, ನಿರ್ವಹಣೆ ವೆಚ್ಚ ಕಡಿಮೆಯಾಗುವ ಎಸ್‌ಎಸ್‌ಟಿ ಮಾದರಿ ರಸ್ತೆಗಳನ್ನೇ ಎಲ್ಲೆಡೆ ನಿರ್ಮಿಸಲು ಇದೀಗ ಉದ್ದೇಶಿಸಲಾಗಿದೆ' ಎಂದರು.

ಏನಿದು ತಂತ್ರಜ್ಞಾನ?: ಒಂದು ಅಡಿ ಆಳದವರೆಗೆ ಡಾಂಬರ್, ಜಲ್ಲಿ ಮತ್ತು ಮಣ್ಣನ್ನು ಯಂತ್ರಗಳಿಂದ ಪುಡಿ ಮಾಡಿ ಪೇಸ್ಟ್ ರೀತಿ ಮಾರ್ಪಡಿಸಲಾಗುತ್ತದೆ. ಅದಕ್ಕೆ ಸಿಮೆಂಟ್, ರಾಸಾಯನಿಕ ಮತ್ತು ನೀರನ್ನು ಸೇರಿಸಿ ಮಣ್ಣನ್ನು ಸ್ಥಿರೀಕರಿಸಲಾಗುತ್ತದೆ. ಅದನ್ನು ಮೂರು ದಿನ ಕ್ಯೂರಿಂಗ್ ಮಾಡಲಾಗುತ್ತದೆ. ಅದರ ಮೇಲೆ ಜಿಯೋ ಟೆಕ್ಸ್‌ಟೈಲ್‌ನ ತೆಳುವಾದ ಪ್ಲಾಸ್ಟಿಕ್ ಶೀಟ್ ಹಾಕಲಾಗುತ್ತದೆ. ಅದರ ಮೇಲೆ ಡಾಂಬರ್ ಹಾಕಲಾಗುತ್ತದೆ ಎಂದು ಬಿಡಿಎ ಎಂಜಿನಿಯರ್‌ಗಳು ಮಾಹಿತಿ ನೀಡಿದರು.


ಕಡಬಗೆರೆ ಕ್ರಾಸ್‌ನಿಂದ ಕಾಚೋಹಳ್ಳಿವರೆಗಿನ ಮುಖ್ಯರಸ್ತೆಯಲ್ಲಿ ಮಣ್ಣು ಸ್ಥಿರೀಕರಣ ತಂತ್ರಜ್ಞಾನದಲ್ಲಿ ನಿರ್ಮಿಸಲಾಗಿರುವ ರಸ್ತೆ

ಎನ್‌ಪಿಕೆಎಲ್ ಹಂತಗಳು

5ನೇ ಹಂತ	6ನೇ ಹಂತ	7ನೇ ಹಂತ
4,407 ನಿವೇಶನಗಳು	5,139 ನಿವೇಶನಗಳು	5,308 ನಿವೇಶನಗಳು
29 ಕಿ.ಮೀ ಎಸ್‌ಎಸ್‌ಟಿ ರಸ್ತೆ	28 ಕಿ.ಮೀ ಎಸ್‌ಎಸ್‌ಟಿ ರಸ್ತೆ	29 ಕಿ.ಮೀ ಎಸ್‌ಎಸ್‌ಟಿ ರಸ್ತೆ
₹40.35 ಕೋಟಿ ವೆಚ್ಚ	₹40.36 ಕೋಟಿ ವೆಚ್ಚ	₹40.33 ಕೋಟಿ ವೆಚ್ಚ

ಸಂಕ್ರಾಂತಿ ನಂತರ ಅರ್ಜಿ ಆಹ್ವಾನ

'ಶಿವರಾಮ ಕಾರಂತ ಬಡಾವಣೆಯ ನಿವೇಶನಗಳ ಹಂಚಿಕೆ ಪ್ರಕ್ರಿಯೆ ಆರಂಭಿಸಲು ಸಿದ್ಧತೆ ನಡೆಸುತ್ತಿದ್ದು, ಸಂಕ್ರಾಂತಿ ನಂತರ ಅರ್ಜಿ ಆಹ್ವಾನಿಸಲಾಗುತ್ತದೆ' ಎಂದು ಬಿಡಿಎ ಆಯುಕ್ತ ಎನ್. ಜಯರಾಮ್ ತಿಳಿಸಿದರು.

'ಪ್ರತಿ ಚದರ ಅಡಿಗೆ ₹4,900ರಂತೆ ಮಾರಾಟ ಮಾಡಲು ದರ ನಿಗದಿಪಡಿಸಲಾಗಿದ್ದು, ಅರ್ಜಿ ಸಲ್ಲಿಸಲು 45 ದಿನ ಕಾಲಾವಕಾಶ ನೀಡಲಾಗುತ್ತದೆ. ಮೂಲೆ ನಿವೇಶನ, ನಾಗರಿಕ ಸೌಲಭ್ಯ (ಸಿಎ) ನಿವೇಶನ ಹೊರತುಪಡಿಸಿ ರೈತರು ಹಾಗೂ ನಾಗರಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ. ನಿವೇಶನಗಳ ಲಭ್ಯತೆ ಪ್ರಮಾಣವನ್ನು ಮುಂದಿನವಾರ ಪ್ರಕಟಿಸಲಾಗುವುದು' ಎಂದು ಹೇಳಿದರು.

ಸ್ತಬ್ಧಚಿತ್ರ ತಿರಸ್ಕಾರ: ಮುಖ್ಯಮಂತ್ರಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗವಹಿಸಲು ರಾಜ್ಯದ ಸ್ತಬ್ಧಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡಬೇಕು' ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

ತಮ್ಮ 'X' ಖಾತೆಯಲ್ಲಿ ಪತ್ರ ಹಂಚಿಕೊಂಡಿರುವ ಸಿಎಂ, 'ಪಥ ಸಂಚಲನದಲ್ಲಿ ಕರ್ನಾಟಕದ ಸ್ತಬ್ಧಚಿತ್ರಕ್ಕೆ ಅವಕಾಶ ನೀಡುವಂತೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ನಾನು ಪತ್ರ ಬರೆದಿದ್ದೇನೆ. ಪತ್ರದಲ್ಲಿ 7 ಕೋಟಿ ಕನ್ನಡಿಗರ ಭಾವನೆಯನ್ನು ವ್ಯಕ್ತಪಡಿಸಿದ್ದೇನೆ. ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಕರ್ನಾಟಕದ ಸ್ತಬ್ಧಚಿತ್ರವನ್ನು ನಿರಾಕರಿಸುವುದು ಕೇವಲ ಪ್ರಮಾದವಲ್ಲ. ಇದು ನಮ್ಮ ರಾಜ್ಯದ ಘನತೆಗೆ ಧಕ್ಕೆಯಾಗಿದೆ. ನಮ್ಮ ಸಾಧನೆಗಳು ರಾಷ್ಟ್ರೀಯ ವೇದಿಕೆಗೆ ಅರ್ಹವಾಗಿವೆ' ಎಂದಿದ್ದಾರೆ.

'ಕರ್ನಾಟಕದ ಸ್ತಬ್ಧಚಿತ್ರ ಕಳೆದ 14 ವರ್ಷಗಳಿಂದ ಪಥ ಸಂಚಲನದಲ್ಲಿ ಪ್ರದರ್ಶನಗೊಳ್ಳುತ್ತಿದೆ. ಪ್ರಶಸ್ತಿಗಳನ್ನು ಪಡೆದಿವೆ. ಈ ಬಾರಿ ರಾಜ್ಯದಿಂದ ಸಲ್ಲಿಸಿದ್ದ ಐದು ವಿಷಯಗಳಲ್ಲಿ 'ಬ್ರ್ಯಾಂಡ್ ಬೆಂಗಳೂರು' ವಿಷಯವು ಆಯ್ಕೆಯಾಗಿತ್ತು. ರಕ್ಷಣಾ ಸಚಿವಾಲಯ ಕರೆದ ಎಲ್ಲ ಸಭೆಗಳಲ್ಲಿ ಕರ್ನಾಟಕದ ಪ್ರತಿನಿಧಿಗಳು ಭಾಗವಹಿಸಿದ್ದರು. ಕೊನೆಯ ಸುತ್ತಿನ ಸಭೆಯ ಬಳಿಕ ಕರ್ನಾಟಕದ ಸ್ತಬ್ಧಚಿತ್ರವನ್ನು ಪರಿಗಣಿಸಿಲ್ಲ. ಬೆಂಗಳೂರು ಹೇಗೆ ಅಭಿವೃದ್ಧಿಯಲ್ಲಿ ಪ್ರಗತಿ ಸಾಧಿಸಿದೆ. ಸಂಸ್ಕೃತಿ ಮತ್ತು ಸಂಪ್ರದಾಯದಲ್ಲಿ ಹೇಗೆ ದೃಢವಾಗಿ ಬೇರೂರಿದೆ ಎಂಬುದನ್ನು ಸ್ತಬ್ಧಚಿತ್ರ ಕಟ್ಟಿಕೊಡುತ್ತಿದೆ' ಎಂದು ಪತ್ರದಲ್ಲಿ ಸಿಎಂ ಉಲ್ಲೇಖಿಸಿದ್ದಾರೆ.

ಪ್ರವಾಹ ತಡೆಗೆ ₹3500 ಕೋಟಿ ನೆರವು ಕೋರಿಕೆ

ನವದೆಹಲಿ: ಬೆಂಗಳೂರಿನಲ್ಲಿ ಪ್ರವಾಹ ತಡೆಗಟ್ಟಲು ಕರ್ನಾಟಕ ಸರ್ಕಾರವು ವಿಶ್ವ ಬ್ಯಾಂಕ್‌ನಿಂದ ₹3500 ಕೋಟಿ ನೆರವು ಕೇಳಿದೆ. ಈ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರ ಸಹಮತ ವ್ಯಕ್ತಪಡಿಸಬೇಕು ಎಂದು ರಾಜ್ಯ ಸರ್ಕಾರ ಕೋರಿದೆ.

ಕೇಂದ್ರ ಹಣಕಾಸು ಸಚಿವಾಲಯದ ಕಾರ್ಯದರ್ಶಿ ಅಜಯ್ ಸೇಠ್ ಅವರನ್ನು ಗುರುವಾರ ಭೇಟಿ ಮಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸಮಾಲೋಚಿಸಿದರು.

ನಗರ ಪ್ರವಾಹ ತಡೆಗಟ್ಟಲು ರಾಜಕಾಲುವೆಗಳ ಅಭಿವೃದ್ಧಿ, ಸಂಸ್ಕರಿಸಿದ ಕೊಳಚೆ ನೀರನ್ನು ನಗರದ ಹೊರಗೆ ಸಾಗಿಸುವುದು, ಪ್ರವಾಹದ ಸಂದರ್ಭದಲ್ಲಿ ರಾಜಕಾಲುವೆಗಳ ನೀರನ್ನು ತಾತ್ಕಾಲಿಕವಾಗಿ ಹರಿಸಲು ರಾಜ್ಯ ಸರ್ಕಾರ ಯೋಜನೆ ರೂಪಿಸಿದೆ. ವಿಶ್ವ ಬ್ಯಾಂಕ್‌ನಿಂದ ನೆರವು ಪಡೆಯುವ ಈ ಯೋಜನೆಗೆ ಸಚಿವ ಸಂಪುಟ ಡಿಸೆಂಬರ್‌ನಲ್ಲಿ ಒಪ್ಪಿಗೆ ನೀಡಿದೆ. ಪ್ರಸ್ತಾವ ಕೇಂದ್ರ ಸರ್ಕಾರಕ್ಕೆ ಸಲ್ಲಿಕೆಯಾಗಿದ್ದು, ಕೇಂದ್ರ ಸಹಮತ ಸಿಗಬೇಕಿದೆ. ಐದಾರು ಇಲಾಖೆಗಳ ಸ್ಕ್ರೀನಿಂಗ್ ಕಮಿಟಿ ಪರಿಶೀಲಿಸಿದ ಬಳಿಕ ಕೇಂದ್ರ ಸಹಮತ ಸೂಚಿಸಲಿದೆ. ಒಂದು ತಿಂಗಳಲ್ಲಿ ಪ್ರಕ್ರಿಯೆ ಮುಗಿಸಿಕೊಡುವುದಾಗಿ ಭರವಸೆ ನೀಡಿದ್ದಾರೆ' ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಕಸಾಪ: 51 ದತ್ತಿ ಪ್ರಶಸ್ತಿಗೆ ಆಯ್ಕೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) 2022ನೇ ಸಾಲಿನ 51 ವಿವಿಧ ದತ್ತಿ ಪ್ರಶಸ್ತಿಗಳಿಗೆ 57 ಬರಹಗಾರರನ್ನು ಆಯ್ಕೆ ಮಾಡಿದೆ.

2022ರ ಜನವರಿಯಿಂದ ಡಿಸೆಂಬರ್ ಅಂತ್ಯದೊಳಗೆ ಪ್ರಕಟಗೊಂಡ ಕೃತಿಗಳನ್ನು ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ರಾಜ್ಯದ ವಿವಿಧೆಡೆ ಹಾಗೂ ಹೊರರಾಜ್ಯದಿಂದ 4 ಸಾವಿರ ಕೃತಿಗಳು ಪ್ರಶಸ್ತಿಗೆ ಬಂದಿದ್ದವು. ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದಲ್ಲಿ 25 ಜನ ಪರಿಣಿತರ ಸಮಿತಿ ದತ್ತಿ ಪ್ರಶಸ್ತಿಗೆ ಕೃತಿಗಳನ್ನು ಆಯ್ಕೆ ಮಾಡಿವೆ. ಈ ದತ್ತಿ ಪ್ರಶಸ್ತಿಗಳು ₹ 250ರಿಂದ ₹ 10 ಸಾವಿರದವರೆಗೆ ನಗದು ಬಹುಮಾನ ಹೊಂದಿವೆ. ಪ್ರಶಸ್ತಿಗಳನ್ನು ಶೀಘ್ರದಲ್ಲಿಯೇ ವಿತರಿಸಲಾಗುವುದು ಎಂದು ಪರಿಷತ್ತು ತಿಳಿಸಿದೆ.

'ಈ ಪುಸ್ತಕ ದತ್ತಿ ಪ್ರಶಸ್ತಿಗಳಿಂದ ಪುಸ್ತಕ ಸಂಸ್ಕೃತಿ ನಮ್ಮಲ್ಲಿ ಇನ್ನಷ್ಟು ಬೆಳೆಯಲಿದೆ. ಬರಹಗಾರರನ್ನು ಪ್ರೋತ್ಸಾಹಿಸಲು ಪರಿಷತ್ತಿನಲ್ಲಿ ಪುಸ್ತಕ ದತ್ತಿಗಳನ್ನು ಸ್ಥಾಪಿಸಬೇಕು. ಒಂದು ಲಕ್ಷ ರೂಪಾಯಿಗೆ ಕಡಿಮೆ ಇಲ್ಲದಂತೆ ಪರಿಷತ್ತಿನಲ್ಲಿ ದತ್ತಿ ಇಟ್ಟರೆ, ಅದರ ಬಡ್ಡಿಯಿಂದ ಪುಸ್ತಕ ಬಹುಮಾನ ನೀಡಬಹುದು. ಈ ಬಗ್ಗೆ ವಿವರವನ್ನು ಪರಿಷತ್ತಿನ ಕೇಂದ್ರ ಕಚೇರಿಯಿಂದ ಪಡೆಯಬಹುದು' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಹೇಳಿದ್ದಾರೆ.

ಪ್ರಶಸ್ತಿಯ ವಿವರಕ್ಕೆ ಕೋಡ್ ಸ್ಕ್ಯಾನ್ ಮಾಡಿ

ದತ್ತಿ ಪ್ರಶಸ್ತಿಗೆ ಆಯ್ಕೆಯಾದ ಕೃತಿಗಳ ವಿವರಕ್ಕಾಗಿ www.prajavani.net **ನೋಡಿ.**

'ಪತ್ರಿಕಾ ವಿತರಕರ ಸಾಮಾಜಿಕ ಭದ್ರತೆಗಾಗಿ ವಿಮೆ'

ಬೆಂಗಳೂರು: 'ಪತ್ರಿಕಾ ವಿತರಕರಿಗೆ ಸಾಮಾಜಿಕ ಭದ್ರತೆ ನೀಡುವ ನಿಟ್ಟಿನಲ್ಲಿ ಸರ್ಕಾರ ಜೀವವಿಮಾ ಯೋಜನೆಯನ್ನು ಜಾರಿಗೊಳಿಸಿದೆ' ಎಂದು ಕಾರ್ಮಿಕ ಇಲಾಖೆ (ವಿಭಾಗ-1) ಸಹಾಯಕ ಕಾರ್ಮಿಕಾಧಿಕಾರಿ ಎಂ.ಎನ್. ದೇವರಾಜು ತಿಳಿಸಿದ್ದಾರೆ.

ಯಶವಂತಪುರ ಎಪಿಎಂಸಿ ಯಾರ್ಡ್ ಸಭಾಂಗಣದಲ್ಲಿ ಗುರುವಾರ ಕಾರ್ಮಿಕ ಇಲಾಖೆ ಮತ್ತು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಸಹಯೋಗದಲ್ಲಿ ಏರ್ಪಡಿಸಿದ್ದ ಗಿಗ್ ಕಾರ್ಮಿಕರ ವಿಮಾ ಯೋಜನೆ ನೋಂದಣಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಇ-ಶ್ರಮ್' ಪೋರ್ಟಲ್‌ನಲ್ಲಿ ಎಲ್ಲರೂ ನೋಂದಣಿ ಮಾಡಿಸಿಕೊಳ್ಳಬೇಕು. ನೋಂದಣಿ ಪ್ರಕ್ರಿಯೆ ನಿರಂತರವಾಗಿ ಇರಲಿದೆ' ಎಂದು ಅವರು ತಿಳಿಸಿದರು.

ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯುಜೆ) ಅಧ್ಯಕ್ಷ ಶಿವಾನಂದ ತಗಡೂರು ಅವರು ಮಾತನಾಡಿ, 'ಈ ವಿಮಾ ಯೋಜನೆಯು ಪ್ರತಿಯೊಬ್ಬರಿಗೂ ತಲುಪುವಂತಾಗಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದರು.

ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಶಂಭುಲಿಂಗ ಕೆ. ಮಾತನಾಡಿ,'ಯೋಜನೆಯಲ್ಲಿರುವ ಷರತ್ತುಗಳಲ್ಲಿ ವಯೋಮಿತಿಯನ್ನು ಗರಿಷ್ಠ 60 ವರ್ಷದಿಂದ 70 ವರ್ಷಗಳಿಗೆ ವಿಸ್ತರಿಸಬೇಕು. ಆಗ ಎಲ್ಲರಿಗೂ ಈ ಸೌಲಭ್ಯ ಸಿಗುತ್ತದೆ. ಇಲ್ಲದಿದ್ದರೆ ಅನೇಕ ಪತ್ರಿಕಾ ವಿತರಕರು ಯೋಜನೆಯಿಂದ ವಂಚಿತರಾಗಲಿದ್ದಾರೆ' ಎಂದು ಹೇಳಿದರು.

'ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಲಾಗುವುದು' ಎಂದು ಕಾರ್ಮಿಕಾಧಿಕಾರಿಗಳು ಭರವಸೆ ನೀಡಿದರು.

ಕಾರ್ಮಿಕ ಇಲಾಖೆ ಅಧಿಕಾರಿಗಳಾದ ಶಿವಾನಂದ, ಶಿವಕುಮಾರ್, ಹಿರಿಯ ಕಾರ್ಮಿಕ ನಿರೀಕ್ಷಕರಾದ ಬಾಲಾಜಿ, ಸುಧೀಂದ್ರ, ಹೊನ್ನಪ್ಪ ಮತ್ತಿತರರು ಹಾಜರಿದ್ದರು.

ಒಂದೇ ದಿನ ಸುಮಾರು 300ಕ್ಕೂ ಹೆಚ್ಚು ಜನರು ನೋಂದಣಿ ಮಾಡಿಸಿಕೊಂಡರು. ಇವತ್ತೂ (ಶುಕ್ರವಾರ) ನೋಂದಣಿ ಕಾರ್ಯ ಮುಂದುವರಿಯಲಿದೆ.


ಯಶವಂತಪುರದ ಎಪಿಎಂಸಿ ಯಾರ್ಡ್ ಸಭಾಂಗಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಪತ್ರಿಕಾ ವಿತರಕರು ನೋಂದಣಿ ಮಾಡಿಸಿದರು.

ಹಿಂದೂಗಳ ಭಾವನೆಗೆ ಕಾಂಗ್ರೆಸ್ ಧಕ್ಕೆ: ಬಿಎಸ್‌ವೈ

ಬೆಂಗಳೂರು: ರಾಮಲಲ್ಲಾ ಪ್ರತಿಷ್ಠಾಪನೆಗೆ ಆಮಂತ್ರಣ ನೀಡಿದರೂ ಹೋಗುವುದಿಲ್ಲ ಎಂಬ ತೀರ್ಮಾನ ಮಾಡುವ ಮೂಲಕ ಕಾಂಗ್ರೆಸ್ ಪಕ್ಷವು ಕೋಟ್ಯಂತರ ಹಿಂದೂಗಳ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಇಡೀ ದೇಶವೇ ರಾಮಮಂದಿರ ಉದ್ಘಾಟನೆಯ ಸಂಭ್ರಮದಲ್ಲಿದೆ. ರಾಮರಾಜ್ಯ ಹಾಗೂ ರಾಮನ ಕನಸು ನನಸಾಗಬೇಕಿದೆ. ಅಂತಹ ಸಂದರ್ಭದಲ್ಲಿ ಕಾಂಗ್ರೆಸ್ ಕೈಗೊಂಡ ನಿರ್ಧಾರವನ್ನು ನಾನು ಖಂಡಿಸುತ್ತೇನೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಸಿದ್ದರಾಮಯ್ಯ ಒಂದು ಒಳ್ಳೆಯ ಕೆಲಸಕ್ಕೆ ಕಲ್ಲು ಹಾಕುವ ಕೆಲಸ ಮಾಡುತ್ತಿದ್ದಾರೆ. ಮುಂದೆ ಅವರೇ ಪಶ್ಚಾತ್ತಾಪಪಡುತ್ತಾರೆ' ಎಂದರು.

'ಸ್ಟೂಡೆಂಟ್ ಲಿಟ್ ಫೆಸ್ಟ್' ಕಾರ್ಯಕ್ರಮದಲ್ಲಿ ಪ್ರಕಾಶ್ ಬೆಳವಾಡಿ ಅಭಿಮತ

'ಎಐ ತಂತ್ರಜ್ಞಾನದೊಂದಿಗೆ ಸ್ಪರ್ಧೆ ಕಷ್ಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಸಾಹಿತ್ಯ, ಸಿನಿಮಾ ಕ್ಷೇತ್ರಕ್ಕೂ ಕಾಲಿಟ್ಟಿದ್ದು, ಭವಿಷ್ಯದಲ್ಲಿ ಇದರೊಂದಿಗೆ ಸ್ಪರ್ಧಿಸುವುದು ಬಹಳ ಕಷ್ಟವಿದೆ' ಎಂದು ರಂಗಕರ್ಮಿ ಪ್ರಕಾಶ್ ಬೆಳವಾಡಿ ಕಳವಳ ವ್ಯಕ್ತಪಡಿಸಿದರು.

ಫ್ರೀ ಸ್ಪೇಸ್ ಫೋರಂ ಹಾಗೂ 'ಪ್ರಜಾವಾಣಿ' 'ಡೆಕ್ಕನ್ ಹೆರಾಲ್ಡ್' ಮಾಧ್ಯಮ ಸಹಯೋಗದಲ್ಲಿ ಆಯೋಜಿರುವ 'ಸ್ಟೂಡೆಂಟ್ ಲಿಟ್ ಫೆಸ್ಟ್–2024' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಎಐ ತಂತ್ರಜ್ಞಾನ ಬಳಸಿಕೊಂಡು ಮಾನವರಿಗಿಂತಲೂ ಉತ್ತಮವಾಗಿ ಕಥೆ, ಕಾದಂಬರಿ, ಚಿತ್ರಕಥೆಯನ್ನು ರಚಿಸಬಹುದು. ಇದು ಭವಿಷ್ಯದ ಎಲ್ಲ ತಂತ್ರಜ್ಞಾನಗಳಿಗೆ ಅನ್ವಯವಾಗಲಿದೆ. ನಾವು ಅದರೊಂದಿಗೆ ಸ್ಪರ್ಧೆ ಮಾಡುವುದು ಕಷ್ಟವಿದೆ. ಭವಿಷ್ಯದಲ್ಲಿ ಯಾವ ಕೆಲಸಕ್ಕೂ ಭದ್ರತೆ ಇಲ್ಲದಂತಾಗಲಿದೆ. ಮುಂದಿನ ಎರಡು ವರ್ಷಗಳಲ್ಲಿ ಈ ತಂತ್ರಜ್ಞಾನ ಮಾನವರಿಗೆ ಸವಾಲಾಗಲಿದೆ' ಎಂದು ತಿಳಿಸಿದರು.

ಸಂಗೀತ ಸಂಯೋಜಕ ರಿಕ್ಕಿ ಕೇಜ್, 'ವಿಶ್ವವು ಇಂದು ಹವಾಮಾನ ವೈಪರೀತ್ಯ, ಅರಣ್ಯನಾಶ, ವಾಯು ಮಾಲಿನ್ಯ, ಅನಿಯಮಿತ ಪ್ಲಾಸ್ಟಿಕ್ ಬಳಕೆಯಂತಹ ಹಲವಾರು ಸಮಸ್ಯೆಗಳಿಂದ ಬಳಲುತ್ತಿದೆ. ಇದರ ಜೊತೆಗೆ ಬಡತನ, ಹಸಿವು, ಅಪೌಷ್ಟಿಕತೆ, ಲಿಂಗ ತಾರತಮ್ಯ ಎಂಬ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಇವುಗಳನ್ನು ಪರಿಹರಿಸಲು ಸಾಹಿತ್ಯ ಸೇರಿದಂತೆ ವಿವಿಧ ಕ್ಷೇತ್ರಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಬೇಕು' ಎಂದರು.

ಯುವಕ ಸಂಘದ ಅಧ್ಯಕ್ಷ ಟಿ.ವಿ. ರಾಜು, ಸ್ಯಾನ್‌ಫ್ರಾನ್ಸಿಸ್ಕೊ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ವಂಸಿ ಜುಲೂರಿ, ಚಾಣಕ್ಯ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ರಾಜೇಶ್ ಅರುಚಾಮಿ ಪಾಲ್ಗೊಂಡಿದ್ದರು.


ಸ್ಟೂಡೆಂಟ್ ಲಿಟ್ ಫೆಸ್ಟ್‌ನಲ್ಲಿ ಭಾಗವಹಿಸಿದ್ದ (ಎಡದಿಂದ) ರಿಕ್ಕಿ ಕೇಜ್, ಪ್ರಕಾಶ್ ಬೆಳವಾಡಿ, ವಂಸಿ ಜೂಲೂರಿ, ಎ.ಕೆ. ಪ್ರದ್ಯೂಮನ್


'ವಿದ್ಯಾರ್ಥಿ ಸಾಹಿತ್ಯ ಸಂಭ್ರಮ'ದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿಯರು.

–ಪ್ರಜಾವಾಣಿ ಚಿತ್ರಗಳು

ಸ್ಟೂಡೆಂಟ್ ಲಿಟ್ ಫೆಸ್ಟ್‌ನಲ್ಲಿ ಇಂದು

ಬೆಳಿಗ್ಗೆ 10ರಿಂದ ದಿನಪೂರ್ತಿ ಸಾಹಿತ್ಯ, ಸಂಸ್ಕೃತಿ, ಇತಿಹಾಸ ಸೇರಿದಂತೆ ವಿವಿಧ ವಿಷಯಗಳ ಕುರಿತು ವಿಶೇಷ ಉಪನ್ಯಾಸ, ಗೋಷ್ಠಿಗಳಿವೆ. ಶತಾವಧಾನಿ ಆರ್. ಗಣೇಶ್, ಸಿನಿಮಾ ನಿರ್ದೇಶಕ ದುಷ್ಯಂತ್ ಶ್ರೀಧರ್ ಅವರ ವಿಶೇಷ ಉಪನ್ಯಾಸವಿದೆ.

ಮಧ್ಯಾಹ್ನದ ಗೋಷ್ಠಿಗಳಲ್ಲಿ ಲೇಖಕ ಚಂದ್ರಚೂರ್ ಗೋಷ್, ಪತ್ರಕರ್ತ ಅನೂಜ್ ಧರ್, ಚಾಣಕ್ಯ ವಿಶ್ವವಿದ್ಯಾಲಯದ ಕಾನೂನು ಶಾಲೆಯ ಡೀನ್ ಚೇತನ್ ಸಿಂಘೈ, ಲೇಖಕರಾದ ಸದ್ಯೋಜಾತ ಭಟ್, ಸಾಯಿಸ್ವರೂಪ, ಕವಿ ಎಂ.ಆರ್. ದತ್ತಾತ್ರಿ ಅವರು ಭಾಗವಹಿಸಲಿದ್ದಾರೆ. ಉಪನ್ಯಾಸಗಳ ಜೊತೆಗೆ ಸಾಕ್ಷ್ಯಚಿತ್ರಗಳ ಪ್ರದರ್ಶನವೂ ಇದೆ. ಸಮಾರೋಪ ಕಾರ್ಯಕ್ರಮದಲ್ಲಿ ಕಿರುತೆರೆ ನಿರ್ದೇಶಕ ಎಸ್.ಎನ್. ಸೇತುರಾಮ್, ಸಂಗೀತಗಾರ ಪ್ರವೀಣ್ ಗೋಡ್ಖಿಂಡಿ, ಸಿನಿಮಾ ನಿರ್ದೇಶಕ ಯೋಗರಾಜ ಭಟ್, ಯುವಕದ ಸಂಘದ ಕಾರ್ಯದರ್ಶಿ ನಾಗರಾಜ್ ರೆಡ್ಡಿ, ಅಶೋಕ ಎಚ್.ಎಸ್., ಭಾಗವಹಿಸಲಿದ್ದಾರೆ.


ದೇಶದ ಸಾಹಿತ್ಯ ಕ್ಷೇತ್ರದಲ್ಲಿ ಮೊದಲ ಬಾರಿಗೆ ವಿದ್ಯಾರ್ಥಿಗಳಿಗಾಗಿ ಸಾಹಿತ್ಯ ಸಮ್ಮೇಳನ ಆಯೋಜಿಸಿರುವುದು ಶ್ಲಾಘನೀಯ. ಕಥೆ–ಕವನ ಹಾಗೂ ಕಾದಂಬರಿಗಳು ಯಾವ ರೀತಿ ಬರೆಯಬೇಕು ಎಂಬ ಕೌಶಲ ಉತ್ತಮ ಪಡಿಸಿಕೊಳ್ಳಲು ಸಹಕಾರಿಯಾಗಿದೆ.

ಚಿನ್ಮಯಿ, ಚಾಣಕ್ಯ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ

ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಅಭಿರುಚಿ ಬೆಳೆಸಲು ಈ ಸಮ್ಮೇಳನ ಸಹಕಾರಿಯಾಗಿದೆ. ಯುವ ಸಮುದಾಯವನ್ನು ಸಾಹಿತ್ಯ ಕ್ಷೇತ್ರಕ್ಕೆ ಪರಿಚಯಿಸಲು ಇದೊಂದು ಉತ್ತಮ ವೇದಿಕೆಯಾಗಲಿದೆ.

ಹರೀಶ್, ಎಂಬಿಎ ವಿದ್ಯಾರ್ಥಿ


ನಗರದಲ್ಲಿ ಇಂದು

'ವಚನ ಚಿಂತನ ವಿಶ್ವ ದರ್ಶನ' ಅಂತರರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಅರವಿಂದ ಜತ್ತಿ, ಆಶಯ ನುಡಿ: ಅಗಸ್ಟಿನ್ ಜಾರ್ಜ್, ಅಧ್ಯಕ್ಷತೆ: ಪಿ.ವಿ. ನಾರಾಯಣ, ಸಂಪನ್ಮೂಲ ವ್ಯಕ್ತಿಗಳು: ಮೊರಬದ ಮಲ್ಲಿಕಾರ್ಜುನ, ಶ್ರೀಶೈಲ ಹಾದಿಮನಿ, ಆಯೋಜನೆ: ಕನ್ನಡ ವಿಭಾಗ, ಕ್ರಿಸ್ತು ಜಯಂತಿ ಕಾಲೇಜು, ಕೆ. ನಾರಾಯಣಪುರ, ಕೊತ್ತನೂರು, ಬೆಳಿಗ್ಗೆ 10ರಿಂದ

'ಇತಿಹಾಸ ವಿಷಯದ ಕಾರ್ಯಾಗಾರ': ಉದ್ಘಾಟನೆ: ಆನಂದರಾಜ್ ಎ., ಅಧ್ಯಕ್ಷತೆ: ವಿಮಲಾ ರೋಸಿ, ಉಪಸ್ಥಿತಿ: ಮಂಜುನಾಥ ಎಸ್., ಸಂಪನ್ಮೂಲ ವ್ಯಕ್ತಿಗಳು: ಎಸ್.ಕೆ. ಅರುಣಿ, ಬೈರೇಗೌಡ ಬಿ.ಪಿ., ಹಂ.ಗು. ರಾಜೇಶ್, ಅತಿಥಿಗಳು: ಆರ್. ರಾಜಗೋಪಾಲ್, ನಿಂಗೇಗೌಡ ಎ.ಎಚ್., ತಿಮ್ಮಯ್ಯ, ಜಿ.ಎಸ್. ಪುರುಶೋತ್ತಮ್, ಜಿ. ನಾಗಣ್ಣ, ಸಿಸ್ಟರ್ ಜೋಸೆಫಿನ್, ಆಯೋಜನೆ: ಶಾಲಾ ಶಿಕ್ಷಣ ಇಲಾಖೆ, ಸ್ಥಳ: ತೆರೇಸಾ ಪದವಿ ಪೂರ್ವ ಕಾಲೇಜು, ರಾಯನ್ ಸರ್ಕಲ್, ಚಾಮರಾಜಪೇಟೆ, ಬೆಳಿಗ್ಗೆ 10

ಸ್ವಾಮಿ ವಿವೇಕಾನಂದ ಜಯಂತಿ, ರಾಷ್ಟ್ರೀಯ ಯುವದಿನ: ಅತಿಥಿಗಳು: ಶ್ರೀನಿವಾಸ್ ಬಳ್ಳಿ, ಎಲ್. ಗೋಮತಿ ದೇವಿ, ನರಸಿಂಹಮೂರ್ತಿ, ಎನ್. ತಿಪ್ಪೇಸ್ವಾಮಿ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 11

'ನ್ಯಾಯ ವಿತರಣೆ ಮತ್ತು ವಾಸ್ತವಿಕ ಸಮಾನತೆ' ಕುರಿತು ಉಪನ್ಯಾಸ: ಅರುಣ್ ಕುಮಾರ್ ಮಿಶ್ರಾ, ಆಯೋಜನೆ: ಸಿಟಿಜನ್ ಫಾರ್ ಸೋಶಿಯಲ್ ಜಸ್ಟೀಸ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

'ಉತ್ತಮ ಬೆಂಗಳೂರು ನಿರ್ಮಾಣದಲ್ಲಿ ಯುವ ಸಮುದಾಯದ ಪಾತ್ರ': ಅತಿಥಿಗಳು: ಎಂ.ವಿ. ರಾಜೀವ ಗೌಡ, ಆಯೋಜನೆ: ಬಿ. ಪ್ಯಾಕ್, ಸ್ಥಳ: ಸೇಂಟ್ ಆನ್ಸ್ ಪ್ರಥಮ ದರ್ಜೆ ಕಾಲೇಜು, ಮಿಲ್ಲರ್ಸ್ ರಸ್ತೆ, ಮಧ್ಯಾಹ್ನ 12.30ರಿಂದ

'ಸಿಂಗಾರೆವ್ವ ಮತ್ತು ಅರಮನೆ' ನಾಟಕಗಳ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಪ್ರದರ್ಶನ: ಆಯೋಜನೆ: ಕ್ರಿಯೇಟಿವ್ ಥಿಯೇಟರ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಮಧ್ಯಾಹ್ನ 3.30, ಹಾಗೂ ಸಂಜೆ 7ಕ್ಕೆ

ವಾರ್ಷಿಕೋತ್ಸವ: ಉದ್ಘಾಟನೆ: ಶಾಕ್ತ್ರಂ ಶ್ರೀಶಕ್ತಿಬಾಲ ಅಮ್ಮ, ಅಧ್ಯಕ್ಷತೆ: ನಾಗವೇಣಮ್ಮ ರಾಮಪ್ರಸಾದ್, ಅತಿಥಿಗಳು: ಎಚ್.ಎಸ್. ನಟರಾಜಶೆಟ್ಟಿ, ಬಳೇಪೇಟೆ ವೆಂಕಟೇಶ್, ಯುಮುನ, ಆಯೋಜನೆ: ಸಾಯಿ ಮಾನ ಗುರುಕುಲ ಬುದ್ಧಿಮಾಂದ್ಯ ಮಕ್ಕಳ ಶಾಲೆ, ಸ್ಥಳ: ಬಸವೇಶ್ವರ ಭವನ, ಚೌಡೇಶ್ವರಿನಗರ, ಲಗ್ಗೆರೆ, ಸಂಜೆ 4

59ನೇ ಸಾಹಿತ್ಯಮಾಲೆ ಸಂಚಿಕೆ ಲೋಕಾರ್ಪಣೆ: ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಅನಿಲ ಕೆ. ಸೋಗಿ, ಸನ್ಮಾನ: ಮೂಡ್ನಾಕೂಡು ಚಿನ್ನಸ್ವಾಮಿ, ಉಪಸ್ಥಿತಿ: ಸುಂದರ್ ರಾಜ್ ಕೆ., ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ವಿಭಾ ಎಸ್. ಪ್ರಸಾದ್, ಅತಿಥಿಗಳು: ಎಚ್. ಏಕಾಂತಯ್ಯ, ಅನುರಾಧ ವಿಕ್ರಾಂತ್, ಆಯೋಜನೆ: ಸಪ್ತಸ್ವರ ಆರ್ಟ್ಸ್ ಮತ್ತು ಕ್ರಿಯೇಷನ್ಸ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.45

ಸೂರ್ಯನಾರಾಯಣ ಶಾಸ್ತ್ರಿ ಸ್ಮಾರಕ ಉಪನ್ಯಾಸ: 'ರಾಮದರ್ಶನ' ವಾಲ್ಮೀಕಿ ರಾಮಯಾಯಣದ ಕುರಿತು ಉಪನ್ಯಾಸ: ಪಾವಗಡ ಪ್ರಕಾಶ್ ರಾವ್, ಆಯೋಜನೆ: ಪಟ್ಟಣಗೆರೆ ರಂಗನಾಥ ಶಾಸ್ತ್ರಿ ಕೃಷ್ಣವೇಣಮ್ಮ ಮೆಮೋರಿಯಲ್ ಟ್ರಸ್ಟ್, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 6

'ವಿಷ್ಣು ಪುರಾಣ' ಧಾರ್ಮಿಕ ಪ್ರವಚನ: ಪ್ರಶಾಂತ ಭಾರ್ಗವಾಚಾರ್ಯ, ಆಯೋಜನೆ: ವಿಜಯ ಮಧ್ವ ಸಂಘ, ಸ್ಥಳ: #37/2, ಗಂಗಾಧರ ಬಡಾವಣೆ, ವಿಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಎಚ್‌ಎಲ್‌ಸಿ ನೇಮಕ ಅಧಿಸೂಚನೆ ಕುರಿತು ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಹೇಳಿಕೆ

‘ಕೆಪಿಎಸ್‌ಸಿ: ಹೊಸ ಅಧಿಸೂಚನೆ ಸರಿಯಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಪಿಎಸ್‌ಸಿ ಕಾನೂನು ಕೋಶದ ಮುಖ್ಯಸ್ಥ (ಎಚ್‌ಎಲ್‌ಸಿ) ಹುದ್ದೆಗೆ ನೇಮಕಾತಿಗೆ ಈ ಹಿಂದೆ ಹೊರಡಿಸಿದ್ದ ಅಧಿಸೂಚನೆ ಹಿಂಪಡೆದು, ಕಾರ್ಯದರ್ಶಿ ಹೊಸತಾಗಿ ಅಧಿಸೂಚನೆ ಹೊರಡಿಸಿರುವುದು ನಿಯಮ ಪ್ರಕಾರ ಸರಿಯಲ್ಲ’ ಎಂದು ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಹೇಳಿದ್ದಾರೆ.

‘ಕಾರ್ಯದರ್ಶಿಯವರು ಎಲ್ಲ ನಿಯಮಗಳನ್ನು ಉಲ್ಲಂಘನೆ ಮಾಡಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಧಿಕಾರಿಗಳು ಮತ್ತು ಮುಖ್ಯ ಕಾರ್ಯದರ್ಶಿ ಈ ಬಗ್ಗೆ ಗಮನಹರಿಸಿ, ಕಾರ್ಯದರ್ಶಿಗೆ ತಿಳಿವಳಿಕೆ ನೀಡಬೇಕು’ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ‘ಎಚ್‌ಎಲ್‌ಸಿ ಹುದ್ದೆಗೆ ನೇಮಿಸಲು ಆಯೋಗವೇ ಮಾನದಂಡ ರೂಪಿಸಿಕೊಂಡಿದೆ. ಅದರಂತೆ, ಅಧಿಸೂಚನೆ ಹೊರಡಿಸಿ ಸದಸ್ಯರ ಆಯ್ಕೆ ಸಮಿತಿ ರಚಿಸಿ ಅರ್ಹರನ್ನು ಸಂದರ್ಶನ ಮಾಡಿ ಆಯ್ಕೆ ಮಾಡಲಾಗುತ್ತದೆ. ಎಚ್‌ಎಲ್‌ಸಿ ಆಗಿದ್ದ ಎಸ್.ಎಚ್. ಹೊಸಗೌಡರ್ ಅವರು ಎರಡು ವರ್ಷ ಸೇವೆ ಪೂರ್ಣಗೊಳಿಸಿದ್ದರಿಂದ ಅವರ ಬದಲು ಹೊಸಬರ ನೇಮಕಕ್ಕೆ ಕ್ರಮ ತೆಗೆದುಕೊಳ್ಳಲು ಕಾರ್ಯದರ್ಶಿಗೆ ಸೂಚಿಸಲಾಗಿತ್ತು. ಆಯ್ಕೆ ಸಮಿತಿ ಆಯ್ಕೆ ಮಾಡಿದವರನ್ನು ನೇಮಿಸುವಂತೆ ಶಿಫಾರಸು ಮಾಡಿದರೂ, ಆಧಾರರಹಿತ ಕಾರಣ ನೀಡಿ ನೇಮಕಾತಿ ಆದೇಶ ಹೊರಡಿಸಲು ಕಾರ್ಯದರ್ಶಿ ನಿರಾಕರಿಸಿದ್ದಾರೆ. ಎಚ್‌ಎಲ್‌ಸಿ ಹುದ್ದೆಯ ಆಯ್ಕೆಯಲ್ಲಿ ಕಾರ್ಯದರ್ಶಿಯವರಿಗೆ ಯಾವುದೇ ಪಾತ್ರ ಇಲ್ಲ’ ಎಂದೂ ವಿವರಿಸಿದ್ದಾರೆ.

ನೇಮಕಾತಿ ಆದೇಶ ಹೊರಡಿಸದಿರಲು ಕಾರಣ: ‘ಎಚ್‌ಎಲ್‌ಸಿ ಹುದ್ದೆಗೆ ಆಯ್ಕೆ ಮಾಡಿದವರಿಗೆ ನೇಮಕಾತಿ ಆದೇಶ ಹೊರಡಿಸುವಂತೆ ಶಿಫಾರಸು ಮಾಡಿದ ಕಡತದಲ್ಲಿ, ಈ ನೇಮಕಾತಿ ಪಾರದರ್ಶಕವಾಗಿ ನಡೆದಿದೆ ಎಂದು ಸಾಬೀತುಪಡಿಸುವ ಯಾವುದೇ ದಾಖಲೆಗಳನ್ನು ಆಯೋಗವು ನೀಡಿಲ್ಲ. ಆಯ್ಕೆ ಪ್ರಕ್ರಿಯೆಯಲ್ಲಿ ಆಗಿರುವ ಲೋಪಗಳನ್ನು ಆಯೋಗದ ಗಮನಕ್ಕೆ ತರಲು ಕಾರ್ಯದರ್ಶಿ ಪ್ರಯತ್ನಿಸಿದರೂ ಅದನ್ನು ಸರಿಪಡಿಸಿಕೊಳ್ಳಲು ಕೂಡಾ ಮುಂದಾಗಿಲ್ಲ’ ಎಂಬ ಕಾರಣ ನೀಡಿದ್ದ ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ನೇಮಕಾತಿಗೆ ಮರು ಅಧಿಸೂಚನೆ ಹೊರಡಿಸಿದ್ದಾರೆ.

ಕಾರ್ಯದರ್ಶಿ ಬದಲಿಸಲು ಸಿ.ಎಂ ನಕಾರ

ಎಚ್‌ಎಲ್‌ಸಿ ಹುದ್ದೆಯ ಆಯ್ಕೆ ಪ್ರಕ್ರಿಯೆ ಗೊಂದಲ ಮಧ್ಯೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬುಧವಾರ ಸಂಜೆ ಭೇಟಿ ಮಾಡಿರುವ ಕೆಪಿಎಸ್‌ಸಿ ಅಧ್ಯಕ್ಷ ಮತ್ತು ಕೆಲವು ಸದಸ್ಯರು, ಕಾರ್ಯದರ್ಶಿಯನ್ನು ವರ್ಗಾವಣೆ ಮಾಡುವಂತೆ ಆಗ್ರಹಿಸಿದ್ದಾರೆ. ಆದರೆ, ಈ ಬೇಡಿಕೆಯನ್ನು ತಳ್ಳಿಹಾಕಿರುವ ಮುಖ್ಯಮಂತ್ರಿ, ‘ಕಾರ್ಯದರ್ಶಿಯನ್ನು ಬದಲಿಸುವ ಪ್ರಶ್ನೆಯೇ ಇಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ ಎಂದು ಮುಖ್ಯಮಂತ್ರಿಯ ಸಚಿವಾಲಯದ ಮೂಲಗಳು ತಿಳಿಸಿವೆ.

ಶತ್ರುಗಳಿಗೆ ಸೇರಿದ 2.91 ಲಕ್ಷ ಷೇರು ಮಾರಾಟಕ್ಕೆ ನಿರ್ಧಾರ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ತನ್ನ ಸ್ವಾಧೀನದಲ್ಲಿ ಇರುವ ‘ಶತ್ರುಗಳ ಸ್ವತ್ತು’ ಎಂದು ವರ್ಗೀಕರಿಸಲಾದ 2.91 ಲಕ್ಷ ಷೇರುಗಳನ್ನು ಮಾರಾಟ ಮಾಡುವುದಾಗಿ ಗುರುವಾರ ಹೇಳಿದೆ.

ದೇಶದ 84 ಕಂಪನಿಗಳಲ್ಲಿ ಶತ್ರುಗಳಿಗೆ ಸೇರಿದ ಷೇರುಗಳಿವೆ. ಇವುಗಳ ಒಡೆತನ ಹೊಂದಿದವರು ಸದ್ಯ ಭಾರತದಲ್ಲಿ ಇಲ್ಲ. ಪಾಕಿಸ್ತಾನ ಹಾಗೂ ಚೀನಾಕ್ಕೆ ವಲಸೆ ಹೋಗಿದ್ದಾರೆ ಎಂದು ಹೇಳಿದೆ.

ಮೊದಲ ಹಂತದಲ್ಲಿ 20 ಕಂಪನಿಗಳಲ್ಲಿ ಇರುವ 1.88 ಲಕ್ಷ ಷೇರುಗಳ ಮಾರಾಟಕ್ಕೆ ಮುಂದಾಗಿದೆ. ಎನ್‌ಆರ್‌ಐ, ಹಿಂದೂ ಅವಿಭಕ್ತ ಕುಟುಂಬ, ಅರ್ಹ ಸಾಂಸ್ಥಿಕ ಹೂಡಿಕೆದಾರರು (ಕ್ಯೂಐಬಿ), ಟ್ರಸ್ಟ್‌ಗಳು, ಕಂಪನಿಗಳು ಸೇರಿದಂತೆ ಹತ್ತು ವಿಭಾಗಗಳಲ್ಲಿ ಷೇರುಗಳ ಮಾರಾಟಕ್ಕೆ ಫೆಬ್ರುವರಿ 8ರಂದು ಬಿಡ್ ಆಹ್ವಾನಿಸಲಾಗುವುದು ಎಂದು ತಿಳಿಸಿದೆ.

1947ರಿಂದ 1962ರ ಅವಧಿಯಲ್ಲಿ ಈ ಷೇರುಗಳ ಒಡೆತನ ಹೊಂದಿರುವವರು ಭಾರತವನ್ನು ತ್ಯಜಿಸಿ ಪಾಕಿಸ್ತಾನ ಹಾಗೂ ಚೀನಾ ಹೋಗಿ ಅಲ್ಲಿನ ಪೌರತ್ವ ಪಡೆದಿದ್ದಾರೆ. ಅಂತಹವರಿಗೆ ಸೇರಿರುವ ಈ ಷೇರುಗಳನ್ನು ‘ಶತ್ರುಗಳ ಸ್ವತ್ತು’ ಎಂದು ಕರೆಯಲಾಗುತ್ತದೆ ಎಂದು ತಿಳಿಸಿದೆ.

11,366 ನೌಕರರು ಶೀಘ್ರ ಒಪಿಎಸ್ ವ್ಯಾಪ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ 2006 ಏಪ್ರಿಲ್ 4ಕ್ಕಿಂತ ಪೂರ್ವದಲ್ಲಿ ಹೊರಡಿಸಿದ್ದ ಅಧಿಸೂಚನೆ ಅನ್ವಯ ನೇಮಕಾತಿ ಹೊಂದಿ ತಾಂತ್ರಿಕ ಕಾರಣಗಳಿಂದ ವಿಳಂಬವಾಗಿ ಕರ್ತವ್ಯಕ್ಕೆ ಹಾಜರಾಗಿದ್ದ 11,366 ನೌಕರರನ್ನು ಹಳೇ ಪಿಂಚಣಿ ಯೋಜನೆ ವ್ಯಾಪ್ತಿಗೆ (ಒಪಿಎಸ್) ಸೇರಿಸಲು ಶೀಘ್ರ ಆದೇಶ ಹೊರಡಿಸಲು ಸರ್ಕಾರ ಭರವಸೆ ನೀಡಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು.

ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಎಲ್.ಕೆ. ಅತೀಕ್ ಅವರನ್ನು ನೌಕರರ ಸಂಘದ ಪದಾಧಿಕಾರಿಗಳ ಜತೆ ಭೇಟಿಯಾದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಹೊಸ ಪಿಂಚಣಿ ಯೋಜನೆ ಜಾರಿಗೂ ಮೊದಲು ಹೊರಡಿಸಿದ್ದ ನೇಮಕಾತಿ ಅಧಿಸೂಚನೆ ಅನ್ವಯ ನೇಮಕಾತಿ ಹೊಂದಿರುವ ನೌಕರರನ್ನು ಒಪಿಎಸ್ ವ್ಯಾಪ್ತಿಗೆ ಸೇರಿಸಲು ಈಗಾಗಲೇ ಕೇಂದ್ರ ಸರ್ಕಾರ 2023 ಮಾರ್ಚ್‌ನಲ್ಲೇ ಅಧಿಸೂಚನೆ ಹೊರಡಿಸಿದೆ. ರಾಜ್ಯಗಳಿಗೂ ನಿರ್ದೇಶನ ನೀಡಿದೆ. ಕೇಂದ್ರದ ಆದೇಶದಂತೆ ಕರ್ನಾಟಕ ಸರ್ಕಾರ ಈಗಾಗಲೇ ಐಎಎಸ್ ಶ್ರೇಣಿಯ ಅಧಿಕಾರಿಗಳನ್ನು ಒಪಿಎಸ್ ವ್ಯಾಪ್ತಿಗೆ ತಂದಿದೆ. ಬೇರೆ ರಾಜ್ಯಗಳು ಪ್ರಕ್ರಿಯೆ ಆರಂಭಿಸಿವೆ. 11,366 ನೌಕರರನ್ನು ತಕ್ಷಣ ಒಪಿಎಸ್ ಯೋಜನೆಗೆ ಒಳಪಡಿಸಬೇಕು ಎಂದು ಮನವಿ ಮಾಡಿದ್ದೇವೆ ಎಂದರು.

ಕಡತ ಈಗಾಗಲೇ ಆರ್ಥಿಕ ಇಲಾಖೆ ಅನುಮೋದನೆಯ ಹಂತದಲ್ಲಿದೆ. ಮುಖ್ಯಮಂತ್ರಿ ಜತೆ ಚರ್ಚಿಸಿ, ಶೀಘ್ರ ಆದೇಶ ಹೊರಡಿಸಲಾಗುವುದು ಎಂದು ಅತೀಕ್ ಅವರು ಭರವಸೆ ನೀಡಿದ್ದಾರೆ ಎಂದು ಹೇಳಿದರು.

ಕರ್ನಾಟಕ ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ರಮೇಶ್ ಸಂಗಾ, ಉಪಾಧ್ಯಕ್ಷ ಎ.ಎಸ್.ಹರ್ಷ ಉಪಸ್ಥಿತರಿದ್ದರು.



11,366 ನೌಕರರನ್ನು ಒಪಿಎಸ್ ವ್ಯಾಪ್ತಿಗೆ ತರಲು ಕೋರಿ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪದಾಧಿಕಾರಿಗಳು ಬುಧವಾರ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಎಲ್.ಕೆ. ಅತೀಕ್ ಅವರಿಗೆ ಮನವಿ ಸಲ್ಲಿಸಿದರು

ಶೌಚಾಲಯಗಳ ಸ್ಥಿತಿಗತಿ: ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಲಯದ ನಿರ್ದೇಶನದ ಅನುಸಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಶೌಚಾಲಯಗಳ ಸ್ಥಿತಿಗತಿ ಕುರಿತಂತೆ ಅಧ್ಯಯನ ನಡೆಸಿರುವ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಹೈಕೋರ್ಟ್‌ಗೆ ತನ್ನ ವರದಿ ಸಲ್ಲಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿನ ಸಾರ್ವಜನಿಕ ಶೌಚಾಲಯಗಳ ಸ್ಥಿತಿಗತಿ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ, ‘ಲೆಟ್ಜ್ ಕಿಟ್ ಫೌಂಡೇಷನ್’ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕಾನೂನು ಸೇವಾ ಪ್ರಾಧಿಕಾರದ ಪರ ಹಾಜರಾಗಿದ್ದ ವಕೀಲ ಶ್ರೀಧರ್ ಪ್ರಭು, ‘ನ್ಯಾಯಪೀಠದ ನಿರ್ದೇಶನದ ಅನುಸಾರ ವರದಿಯನ್ನು ಸಿದ್ಧಪಡಿಸಲಾಗಿದೆ. ಇದನ್ನು ಅರ್ಜಿದಾರರ ಪರ ವಕೀಲರಿಗೂ ನೀಡಲಾಗಿದೆ’ ಎಂದು ತಿಳಿಸಿದರು.

ಬಿಬಿಎಂಪಿ ವಕೀಲರು, ‘ಶೌಚಾಲಯಗಳ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ’ ಎಂದು ತಿಳಿಸಿದರು. ‘ಇದಕ್ಕೆ ನ್ಯಾಯಪೀಠ, ‘ಎಷ್ಟು ಶೌಚಾಲಯಗಳ ನಿರ್ಮಾಣಕ್ಕೆ ಟೆಂಡರ್ ಕರೆದಿದ್ದೀರಿ ಎಂಬುದರ ವಿವರ ನೀಡಿ. ಶೌಚಾಲಯಗಳ ಸಂಖ್ಯೆ ನಮೂದಿಸದೆ ಸುಮ್ಮನೆ ಟೆಂಡರ್ ಕರೆದರೆ ಹೇಗೆ? ‘ಇದೇ ಕಾರಣಕ್ಕೆ ಕೋರ್ಟ್ ತಡೆ ನೀಡಬಹುದಲ್ಲವೇ?. ಎಷ್ಟು ಶೌಚಾಲಯಗಳ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ ಎಂಬ ಮಾಹಿತಿ ಒದಗಿಸಿ’ ಎಂದು ಸೂಚಿಸಿ ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿತು. ಅರ್ಜಿದಾರರ ಪರ ಹಿರಿಯ ವಕೀಲ ಪುತ್ತಿಗೆ ರಮೇಶ್ ಹಾಜರಾಗಿದ್ದರು.

ವರದಿಯಲ್ಲಿ ಏನಿದೆ?: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಸದ್ಯ ಒಟ್ಟು 803 ಶೌಚಾಲಯಗಳಿವೆ. ಪಾಲಿಕೆಯು ಹೊಸದಾಗಿ 800 ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಉದ್ದೇಶಿಸಿದೆ. ಹಾಲಿ ಇರುವ 196 ಶೌಚಾಲಯಗಳು ದುಸ್ಥಿತಿಯಲ್ಲಿದ್ದು ಅವುಗಳನ್ನು ನವೀಕರಿಸಬೇಕಾಗಿದೆ’ ಎಂದು ವರದಿಯಲ್ಲಿ ತಿಳಿಸಲಾಗಿದೆ.

‘ರಾಜ್ಯದ 10 ಮಹಾನಗರ ಪಾಲಿಕೆ, 61 ಪುರಸಭೆ ಮತ್ತು 126 ನಗರಸಭೆ ಮತ್ತು 124 ಪಟ್ಟಣ ಪಂಚಾಯ್ತಿ ಸೇರಿದಂತೆ ಒಟ್ಟು 312 ನಗರ ಸ್ಥಳೀಯ ಸಂಸ್ಥೆಗಳಲ್ಲಿ 1,360 ಶೌಚಾಲಯ ಬ್ಲಾಕ್‌ಗಳಿವೆ. ಇವುಗಳಲ್ಲಿ 9,167 ಆಸನಗಳಿವೆ ಮತ್ತು 689 ಆಸನಗಳಿರುವ 108 ಮೂತ್ರಾಲಯಗಳಿವೆ’ ಎಂದು ತಿಳಿಸಲಾಗಿದೆ. ‘ಸ್ವಚ್ಛ ಭಾರತ್ ಮಿಷನ್ ಅಡಿ 3,081 ಆಸನಗಳ 384 ಹೊಸ ಶೌಚಾಲಯ ಬ್ಲಾಕ್‌ಗಳನ್ನು ಹಾಗೂ 2,726 ಮೂತ್ರಾಲಯಗಳಿರುವ 635 ಹೊಸ ಬ್ಲಾಕ್‌ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ’ ಎಂದು ವಿವರಿಸಲಾಗಿದೆ.



ಪ್ರತ್ಯೇಕ ಪರಿವರ್ತನೆ ಅನಗತ್ಯ: ಹೈಕೋರ್ಟ್

ಬೆಂಗಳೂರು: ‘ಪುರಸಭೆ ಮತ್ತು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ಕೃಷಿ ಭೂಮಿಯನ್ನು ವಾಣಿಜ್ಯ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿ ಪರಿವರ್ತನೆ ಮಾಡಿಕೊಳ್ಳಬೇಕಾದ ಅಗತ್ಯವಿಲ್ಲ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಈ ಸಂಬಂಧ ಬೆಳಗಾವಿ ಜಿಲ್ಲೆ ಬೈಲಹೊಂಗಲದ ಉದ್ಯಮಿ ಶ್ರೀಶೈಲ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಈ ಪ್ರಕರಣದಲ್ಲಿ ಉದ್ದೇಶಿತ ಭೂಮಿಯು ಪುರಸಭೆ ವ್ಯಾಪ್ತಿಯಲ್ಲಿದ್ದು ಈ ಭೂಮಿಗೆ ಕರ್ನಾಟಕ ಭೂ ಕಂದಾಯ ಕಾಯ್ದೆಯ ನಿಯಮಗಳು ಅನ್ವಯವಾಗುವುದಿಲ್ಲ. ಆದ್ದರಿಂದ, ಮುಂದಿನ 60 ದಿನಗಳಲ್ಲಿ ಅರ್ಜಿದಾರರ ಆಸ್ತಿಗೆ ಸಂಬಂಧಿಸಿದಂತೆ ನಿಯಮಗಳ ಅನುಸಾರ ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡಿ’ ಎಂದು ಪುರಸಭೆಗೆ ನಿರ್ದೇಶಿಸಿದೆ.

ಪ್ರಕರಣವೇನು?: ಅರ್ಜಿದಾರರು ಪಿತ್ರಾರ್ಜಿತ ಆಸ್ತಿಯಲ್ಲಿ 1.29 ಎಕರೆ ಜಮೀನಿನ ವಾರಸುದಾರರು. ಈ ಜಮೀನನ್ನು ಅವರು ಕೃಷಿಯೇತರ ಚಟುವಟಿಕೆಗಳಿಗೆ ಬಳಕೆ ಮಾಡಿಕೊಳ್ಳಲು ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ಪರಿಗಣಿಸಿದ್ದ ಜಿಲ್ಲಾಧಿಕಾರಿ ಕೃಷಿಯೇತರ ಚಟುವಟಿಕೆಗಳ ಬಳಕೆಗೆ ಅನುಮತಿ ನೀಡಿದ್ದರು.

ಅರ್ಜಿದಾರರು ಈ ಪರಿವರ್ತಿತ ಜಮೀನಿನಲ್ಲಿ 14,436 ಚದರಡಿಯಲ್ಲಿ ಪೆಟ್ರೋಲ್ ಬಂಕ್ ನಿರ್ಮಿಸಿದ್ದರು. ಉಳಿದ ಜಮೀನನ್ನು ವಾಣಿಜ್ಯ ಕಟ್ಟಡದ ನಿರ್ಮಾಣಕ್ಕಾಗಿ ಪ್ರಸ್ತಾವ ಸಲ್ಲಿಸಿದ್ದರು. ಆದರೆ, ಬೈಲಹೊಂಗಲ ಪುರಸಭೆ ವಾಣಿಜ್ಯ ಕಟ್ಟಡಗಳಿಗೆ ನಕ್ಷೆ ಮಂಜೂರು ಮಾಡುವಂತೆ ಕೋರಿದ್ದ ಈ ಮನವಿಯನ್ನು 2022ರ ಅಕ್ಟೋಬರ್ 13ರಂದು ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಶ್ರೀಶೈಲ ಹೈಕೋರ್ಟ್ ಮೆಟ್ಟಿಲೇರಿದ್ದರು.

ಗೃಹಿಣಿ ಕೊಲೆ: ಉತ್ತರಪ್ರದೇಶದಲ್ಲಿ ಆರೋಪಿ ಸೆರೆ

ಬೆಂಗಳೂರು: ಬೆಟ್ಟದಾಸಪುರದ ಪ್ರಭಾಕರ್‌ರೆಡ್ಡಿ ಲೇಔಟ್‌ನಲ್ಲಿ ಮನೆಗೆ ನುಗ್ಗಿ ಗೃಹಿಣಿ ನೀಲಂನನ್ನು ಕೊಲೆ ಮಾಡಿದ್ದ ಆರೋಪಿಯನ್ನು ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಉತ್ತರ ಪ್ರದೇಶ ಮೂಲದ ರಜನೀಶ್ ಕುಮಾರ್(28) ಬಂಧಿತ ಆರೋಪಿ.

ಜ.4ರಂದು ನೀಲಂ ಮನೆಯಲ್ಲಿ ಒಂಟಿಯಾಗಿದ್ದರು. ಆಗ ಮನೆಗೆ ನುಗ್ಗಿದ ಆರೋಪಿ ಕೃತ್ಯ ಎಸಗಿದ್ದು, ₹8 ಸಾವಿರ ನಗದು, ಕಿವಿಯೋಲೆ ದೋಚಿ ಪರಾರಿಯಾಗಿದ್ದ. ನೀಲಂ ಮಗ ಶಾಲೆಯಿಂದ ಸಂಜೆ ಮನೆಗೆ ಬಂದಾಗ ಕೃತ್ಯ ಗೊತ್ತಾಗಿತ್ತು.

‘ಆರೋಪಿ ಪೇಟಿಂಗ್ ಕೆಲಸ ಮಾಡುತ್ತಿದ್ದ. ಎರಡು ವರ್ಷಗಳಿಂದ ಪ್ರಭಾಕರ್ ರೆಡ್ಡಿ ಲೇಔಟ್‌ನಲ್ಲಿ ವಾಸವಾಗಿದ್ದ ನೀಲಂ ಅವರ ಪತಿ ಉತ್ತರ ಪ್ರದೇಶದ ಪ್ರದ್ಯುಮ್ನ ಅವರ ಪರಿಚಯವಾಗಿತ್ತು. ಪ್ರದ್ಯುಮ್ನ ಅವರು ಹಾರ್ಡ್‌ವೇರ್ ಅಂಗಡಿ ಹೊಂದಿದ್ದರು.

ಹಾರ್ಡ್‌ವೇರ್ ಶಾಪ್ ಅನ್ನು ಕೊಲೆಯಾದ ನೀಲಂ ಸಹೋದರ ಪಂಕಜ್ ನೋಡಿಕೊಳ್ಳುತ್ತಿದ್ದರು. ಅವರ ಮನೆಯಲ್ಲೂ ಬಾರಿ ಹಣ ಇರಬಹುದೆಂದು ಭಾವಿಸಿ ಮನೆಯಲ್ಲಿ ದರೋಡೆಗೆ ನಿರ್ಧರಿಸಿದ್ದ. ಕೃತ್ಯ ಎಸಗಿದ್ದ ಎಂದು ಪೊಲೀಸರು ತಿಳಿಸಿದರು.

ಯಲಹಂಕ, ಕೊಮ್ಮಘಟ್ಟ, ಪುಲಕೇಶಿನಗರದಲ್ಲಿ ಅಪಘಾತ

ಪ್ರತ್ಯೇಕ ಅಪಘಾತ: ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದ ನಾಲ್ಕು ಸ್ಥಳಗಳಲ್ಲಿ ನಡೆದ ಪ್ರತ್ಯೇಕ ಅಪಘಾತಗಳಲ್ಲಿ ಮೂವರು ಬೈಕ್ ಸವಾರರು ಹಾಗೂ ಒಬ್ಬ ಪಾದಚಾರಿ ಸೇರಿದಂತೆ ನಾಲ್ವರು ಮೃತಪಟ್ಟಿದ್ದಾರೆ.

ಯಲಹಂಕದ ಬಿಬಿ ಮುಖ್ಯರಸ್ತೆಯ ವಿದ್ಯಾಶಿಲ್ಪ ಅಪ್‌ರ್‍ಯಾಂಪ್ ಬಳಿ ನಡೆದ ಅಪಘಾತದಲ್ಲಿ ಪಾದಚಾರಿ, ಜಕ್ಕೂರು ಲೇಔಟ್ ನಿವಾಸಿ ಎಚ್.ಆರ್. ಸಿದ್ದಲಿಂಗೇಗೌಡ (60) ಅವರು ಮೃತಪಟ್ಟಿದ್ದಾರೆ. ಸಿದ್ದಲಿಂಗೇಗೌಡ ಅವರು ಮಣ್ಣಿನಿಂದ ಕಲಾಕೃತಿ ರಚಿಸಿ ಮಾರಾಟ ಮಾಡುತ್ತಿದ್ದರು.

‘ದೇವನಹಳ್ಳಿ ಕಡೆಯಿಂದ ಹೆಬ್ಬಾಳದ ಕಡೆಗೆ ವೇಗವಾಗಿ ಚಲಿಸುತ್ತಿದ್ದ ಬೊಲೆರೊ ಪಿಕ್‌ಅಪ್ ವಾಹನವು ಜಂಕ್ಷನ್‌ನಲ್ಲಿ ನಡೆದುಕೊಂಡು ಹೋಗುತ್ತಿದ್ದ ಸಿದ್ದಲಿಂಗೇಗೌಡ ಅವರಿಗೆ ಡಿಕ್ಕಿಯಾಗಿತ್ತು. ಇದರಿಂದ ತಲೆಗೆ ಪೆಟ್ಟು ಬಿದ್ದಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಯಲಹಂಕದ ಸಾರ್ವಜನಿಕ ಆಸ್ಪತ್ರೆ ಕರೆದೊಯ್ಯುವ ಮಾರ್ಗದಲ್ಲಿ ಮೃತಪಟ್ಟರು’ ಎಂದು ಸಂಚಾರ ಪೊಲೀಸರು ತಿಳಿಸಿದರು.

ಬೈಕ್ ಸವಾರ ಸಾವು: ಕೊಮ್ಮಘಟ್ಟದ ಬಳಿ ಬೈಕ್‌ವೊಂದು ನಿಯಂತ್ರಣ ತಪ್ಪಿ ಅಪಘಾತಕ್ಕೀಡಾದ ಪರಿಣಾಮ ಬೈಕ್ ಸವಾರ ಮೃತಪಟ್ಟಿದ್ದಾರೆ. ರಾಮಮೂರ್ತಿ(32) ಮೃತಪಟ್ಟವರು.

‘ರಾಮಮೂರ್ತಿ ಅವರು ಕೊಮ್ಮಘಟ್ಟ ರಸ್ತೆಯಲ್ಲಿ ವೇಗವಾಗಿ ಬೈಕ್‌ನಲ್ಲಿ ತೆರಳುತ್ತಿದ್ದರು. ಆಗ ಬೈಕ್ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದ ಪರಿಣಾಮ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯದಲ್ಲಿ ಅವರು ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಸವಾರ ಮದ್ಯ ಸೇವಿಸಿ ವೇಗವಾಗಿ ಬೈಕ್ ಚಲಾಯಿಸುತ್ತಿದ್ದರು. ಇದೇ ಅಪಘಾತಕ್ಕೆ ಕಾರಣವಾಗಿದೆ’ ಎಂದು ಪೊಲೀಸರು ಹೇಳಿದರು.

ಕ್ಯಾಂಟರ್– ಬೈಕ್ ನಡುವೆ ಅಪಘಾತ: ಯಲಹಂಕದ ಮೈಲನಹಳ್ಳಿ ಮುಖ್ಯರಸ್ತೆಯಲ್ಲಿ ಬೈಕ್ ಹಾಗೂ ಕ್ಯಾಂಟರ್ ವಾಹನದ ನಡುವೆ ನಡೆದ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟಿದ್ದಾರೆ.

ಜಾಲಾ ಹೋಬಳಿಯ ಹೂಣಚೂರು ಗ್ರಾಮದ ವೆಂಕಟೇಶಪ್ಪ (60) ಅವರು ಮೃತಪಟ್ಟವರು. ಮೈಲನಹಳ್ಳಿ ಮುಖ್ಯರಸ್ತೆಯಲ್ಲಿ ಎಲ್‌ಡಬ್ಲ್ಯು ಲೇಬರ್ ಕಾಲೊನಿಯಲ್ಲಿ ಅಪಘಾತ ನಡೆದಿದೆ.

ಬುಧವಾರ ಬೆಳಿಗ್ಗೆ 10 ಗಂಟೆ ಸಮಯದಲ್ಲಿ ವೆಂಕಟೇಶಪ್ಪ ಅವರು ತಮ್ಮ ಟಿವಿಎಸ್ ಎಕ್ಸ್‌ಎಲ್ ಸ್ಕೂಟರ್‌ನಲ್ಲಿ ಲೇಬರ್ ಕಾಲೊನಿ ಕಡೆಯಿಂದ ಕಾಡಯರಪ್ಪನಹಳ್ಳಿ ಕಡೆಗೆ ತೆರಳುತ್ತಿದ್ದರು. ಎದುರಿನಿಂದ ವೇಗವಾಗಿ ಬಂದ ಕ್ಯಾಂಟರ್, ಸ್ಕೂಟರ್‌ಗೆ ಡಿಕ್ಕಿ ಹೊಡೆದಿತ್ತು. ಡಿಕ್ಕಿಯಿಂದ ಗಂಭೀರವಾಗಿ ಗಾಯಗೊಂಡಿದ್ದ ಸ್ಕೂಟರ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಚಾಲಕ, ಕ್ಯಾಂಟರ್ ಅನ್ನು ಸ್ಥಳದಲ್ಲಿಯೇ ಬಿಟ್ಟು ಪರಾರಿಯಾಗಿದ್ದಾನೆ. ಆರೋಪಿ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಕಾರು-ಬೈಕ್ ನಡುವೆ ಅಪಘಾತ: ಪುಲಕೇಶಿ ನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕೋಲ್ಸ್ ರಸ್ತೆಯ ಹೇನ್ಸ್ ರಸ್ತೆ ಜಂಕ್ಷನ್‌ನಲ್ಲಿ ಕ್ಯಾಬ್ ಹಾಗೂ ಬೈಕ್ ನಡುವೆ ನಡೆದ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟಿದ್ದಾರೆ.

ಹೆಣ್ಣೂರು ನಿವಾಸಿ ಆರ್.ಗೋಪಿ (25) ಮೃತಪಟ್ಟವರು. ಗೋಪಿ ಅವರು ‘ದಿ ಹಿಂದೂ’ ಪತ್ರಿಕೆಯ ಪ್ರಸರಣ ವಿಭಾಗದಲ್ಲಿ ಕಳೆದ ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದರು.

ಗುರುವಾರ ಬೆಳಿಗ್ಗೆ 5.45ರ ಸಮಯದಲ್ಲಿ ಪಾಟರಿ ಸರ್ಕಲ್ ಕಡೆಯಿಂದ ಹೇನ್ಸ್ ವೃತ್ತದ ಕಡೆಗೆ ತೆರಳುತ್ತಿದ್ದರು. ಬೈಕ್ ಸವಾರ ಹೆಲ್ಮೆಟ್ ಧರಿಸಿ, ಬೈಕ್ ಓಡಿಸುತ್ತಿದ್ದರು. ಕೋಲ್ಸ್ ರಸ್ತೆಯ ಎಚ್.ಪಿ ಪೆಟ್ರೋಲ್ ಬಂಕ್ ಕಡೆಯಿಂದ ನೇತಾಜಿ ಕಡೆಗೆ ತೆರಳುತ್ತಿದ್ದ ಕ್ಯಾಬ್ ಹಾಗೂ ಬೈಕ್ ನಡುವೆ ಅಪಘಾತವಾಗಿತ್ತು. ಇದರಿಂದ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿದ್ದರು. ಸಾರ್ವಜನಿಕರೇ ಅವರನ್ನು ಆಂಬುಲೆನ್ಸ್ ಮೂಲಕ ಬೌರಿಂಗ್ ಆಸ್ಪತ್ರೆಗೆ ಕರೆಯೊಯ್ದಿದ್ದರು. ಅಲ್ಲಿ ಮೃತಪಟ್ಟಿದ್ದಾರೆ.

ಮೃತರ ತಾಯಿ ಸವಿತಾ ದೂರು ನೀಡಿದ್ದು ಕ್ಯಾಬ್ ಚಾಲಕ ಮೌನೇಶ ವಿರುದ್ಧ ಪುಲಕೇಶಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಅವೈಜ್ಞಾನಿಕವಾಗಿ ಹೂಳು ತೆಗೆದರೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯ ಕೆರೆಗಳಲ್ಲಿ ಅವೈಜ್ಞಾನಿಕವಾಗಿ ಹೂಳು ಎತ್ತುವುದನ್ನು ತಡೆಯಲು ಕಟ್ಟುನಿಟ್ಟಿನ ಮತ್ತು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು’ ಎಂದು ಇಲಾಖೆಯ ಅಧಿಕಾರಿಗಳಿಗೆ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಸೂಚನೆ ನೀಡಿದ್ದಾರೆ.

‘ಅಸಮರ್ಪಕ ಮತ್ತು ಅವೈಜ್ಞಾನಿಕವಾಗಿ ಹೂಳು ತೆಗೆಯುವುದರಿಂದ ಕೆರೆಗಳಲ್ಲಿನ ನೀರು ಇಂಗಿ, ನೀರಿನ ಅಭಾವಕ್ಕೆ ಕಾರಣವಾಗುತ್ತಿದೆ. ಅಂತರ್ಜಲ ಮಟ್ಟವೂ ಗಣನೀಯವಾಗಿ ಕ್ಷೀಣಿಸುತ್ತಿದೆ’ ಎಂದು ಅವರು ತಿಳಿಸಿದ್ದಾರೆ.

‘ಕೆಲವು ಪ್ರಕರಣಗಳಲ್ಲಿ ನಿರ್ದಿಷ್ಟ ಮಿತಿಗಿಂತ ಹೆಚ್ಚು ಹೂಳು ಎತ್ತುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೂ ನಷ್ಟ ಉಂಟಾಗುತ್ತಿದೆ. ಹೀಗಾಗಿ, ಇಂತಹ ಚಟುವಟಿಕೆಯ ವಿರುದ್ಧ ಕಾನೂನಾತ್ಮಕವಾಗಿ ಕಠಿಣ ಕ್ರಮ ಕೈಗೊಳ್ಳುವಂತೆ ಎಲ್ಲ ವೃತ್ತಗಳ ಸೂಪರಿಟೆಂಡೆಂಟ್ ಎಂಜಿನಿಯರ್‌ಗಳಿಗೆ ಮತ್ತು ಎಲ್ಲ ವಿಭಾಗಗಳ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಬೇಕು’ ಎಂದು ಇಲಾಖೆಯ ಕಾರ್ಯದರ್ಶಿಗೆ ಸಚಿವರು ಸೂಚನೆ ನೀಡಿದ್ದಾರೆ.

ಸೆಕ್ಯುರಿಟಿ ಗಾರ್ಡ್ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್‌ನ ಎರಡನೇ ಸೆಕ್ಟರ್‌ನಲ್ಲಿ ಕಾರ್ಮಿಕರೊಬ್ಬರನ್ನು ಕೊಲೆ ಮಾಡಲಾಗಿದೆ.

ಆಂಧ್ರಪ್ರದೇಶದ ವೆಂಕಟರಮಣ ನಾಯಕ್(35) ಕೊಲೆಯಾದ ಕಾರ್ಮಿಕ.

ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ಮನೆಯ ಸ್ನಾನಗೃಹದಲ್ಲಿ ಮೃತದೇಹ ಪತ್ತೆಯಾಗಿದೆ. ಪರಿಚಿತರೇ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

ವೆಂಕಟರಮಣ ಅವರು ಹಗಲು ವೇಳೆ ಸ್ಟೋರ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ರಾತ್ರಿ ಎಚ್‌ಎಸ್‌ಆರ್ ಲೇಔಟ್ ಎರಡನೇ ಸೆಕ್ಟರ್ ಮನೆಯೊಂದರಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. ಪತಿಯ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಪತ್ನಿ ದೂರು ನೀಡಿದ್ದಾರೆ. ಎಚ್‌ಎಸ್‌ಆರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹೇಶ್ವರ ರಾವ್ ಬಿಎಂಆರ್‌ಸಿಎಲ್ ಎಂಡಿ

ಪ್ರಜಾವಾಣಿ ವಾರ್ತೆ



ಎಂ. ಮಹೇಶ್ವರ ರಾವ್

ಬೆಂಗಳೂರು: ಬೆಂಗಳೂರು ಮೆಟ್ರೊ ರೈಲ್ ಕಾರ್ಪೊರೇಶನ್ ಲಿಮಿಟೆಡ್‌ನ (ಬಿಎಂಆರ್ ಸಿಎಲ್) 8ನೇ ವ್ಯವಸ್ಥಾಪಕ ನಿರ್ದೇಶಕರಾಗಿ ಎಂ. ಮಹೇಶ್ವರ ರಾವ್ ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡಿದೆ.

ಕರ್ನಾಟಕ ಕೇಡರ್‌ನ 1995ರ ಬ್ಯಾಚ್ ಅಧಿಕಾರಿಯಾಗಿರುವ ಮಹೇಶ್ವರ ರಾವ್ ಹುದ್ದೆಯ ನಿರೀಕ್ಷೆಯಲ್ಲಿದ್ದರು.

ಇಲ್ಲಿವರೆಗೆ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಅಂಜುಂ ಪರ್ವೇಜ್ ಅವರನ್ನು ಅವರೇ ಹೆಚ್ಚುವರಿಯಾಗಿ ನಿಭಾಯಿಸುತ್ತಿದ್ದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ.

ರಾಕೇಶ್ ಸಿಂಗ್ ಅವರು ಮೂರು ತಿಂಗಳು ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ 2021ರಲ್ಲಿ ವರ್ಗಾವಣೆಗೊಂಡಾಗ ‘ಬಿಎಂಆರ್‌ಸಿಎಲ್‌ಗೆ ಪೂರ್ಣಾವಧಿಯ ಎಂ.ಡಿ ಬೇಕು’ ಎಂಬ ಕೂಗು ಎದ್ದಿತ್ತು. ಅಂಜುಂ ಪರ್ವೇಜ್ ಅವರನ್ನು ಬಿಎಂಆರ್‌ಸಿಎಲ್‌ಗೆ ವರ್ಗ ಮಾಡಿದಾಗ ಅವರಿಗೆ ಬೇರೆ ಹೆಚ್ಚುವರಿ ಹುದ್ದೆಗಳನ್ನು ನೀಡದೇ ಈ ಕೂಗಿಗೆ ಸ್ಪಂದಿಸಲಾಗಿತ್ತು. ಆದರೆ, ಮುಂದೆ ಅವರಿಗೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಯ ಹೊಣೆ ನೀಡಲಾಗಿತ್ತು.

‘ನಮ್ಮ ಮೆಟ್ರೊ’ಗೆ ಪೂರ್ಣಕಾಲಿಕ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಕ ಮಾಡಬೇಕು ಎಂದು ಸಂಸದ ತೇಜಸ್ವಿ ಸೂರ್ಯ ಅವರು ಕೇಂದ್ರ ನಗರ ವ್ಯವಹಾರಗಳ ಸಚಿವ ಹರದೀಪ್ ಸಿಂಗ್ ಪುರಿ ಅವರನ್ನು ಒತ್ತಾಯಿಸಿದ್ದರು. ಪೂರ್ಣಾವಧಿ ಎಂಡಿ ಇಲ್ಲದ ಕಾರಣ ಕಾಮಗಾರಿಗಳು ವಿಳಂಬವಾಗುತ್ತಿವೆ ಎಂದು ಸಚಿವರಿಗೆ ಮನವಿಯನ್ನೂ ಸಲ್ಲಿಸಿದ್ದರು.

ಮಹೇಶ್ವರ ರಾವ್ ಅವರನ್ನು ನೇಮಕ ಮಾಡಿದ ಬಗ್ಗೆ ತೇಜಸ್ವಿ ಸೂರ್ಯ ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿದ್ದು, ‘ನಗರದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ತ್ವರಿತವಾಗಿ ನೇಮಕ ಮಾಡಿದ್ದಕ್ಕಾಗಿ ಕೇಂದ್ರ ಸಚಿವ ಹರ್ದಿಪ್ ಸಿಂಗ್ ಪುರಿ ಅವರಿಗೆ ಧನ್ಯವಾದಗಳು. ನಮ್ಮ ನಗರದ ಉನ್ನತ ಸಾರ್ವಜನಿಕ ಮೂಲಸೌಕರ್ಯ ಯೋಜನೆಗಳು ಅವರ ಗಮನಕ್ಕೆ ಬರುತ್ತವೆಂದು ನಾನು ಭಾವಿಸುತ್ತೇನೆ’ ಎಂದು ಬರೆದುಕೊಂಡಿದ್ದಾರೆ.

17ರಿಂದ ಅನಿರ್ದಿಷ್ಟಾವಧಿ ಲಾರಿ ಮುಷ್ಕರ

ಬೆಂಗಳೂರು: ‘ಅಪಘಾತ ನಡೆಸಿ ಪರಾರಿ’ಯಾದ (ಹಿಟ್ ಆ್ಯಂಡ್ ರನ್) ಪ್ರಕರಣದಲ್ಲಿ 10 ವರ್ಷ ಜೈಲು, ₹7 ಲಕ್ಷ ದಂಡ ವಿಧಿಸುವ ರಸ್ತೆ ಸಂಚಾರ ಕಾನೂನು ತಿದ್ದುಪಡಿ ವಿರೋಧಿಸಿ ದಕ್ಷಿಣ ಭಾರತದ ಲಾರಿ ಮಾಲೀಕರ ಸಂಘ ಜ.17ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಿದೆ.

ಕೇಂದ್ರ ಸರ್ಕಾರ ಲಾರಿ ಮಾಲೀಕರನ್ನು ಅಮಾನವೀಯವಾಗಿ ನಡೆಸಿಕೊಳ್ಳುತ್ತಿದೆ. ‘ಹಿಟ್ ಆ್ಯಂಡ್ ರನ್’ ಪ್ರಕರಣವನ್ನು ಬೇಕಾದಂತೆ ತಿರುಚುತ್ತಿದೆ ಎಂದು ಬೆಂಗಳೂರು ಲಾರಿ ಮಾಲೀಕರ ಸಂಘದ ಗೌರವಾಧ್ಯಕ್ಷ ಬಿ. ಚನ್ನಾರೆಡ್ಡಿ ಮತ್ತು ಅಧ್ಯಕ್ಷ ನವೀನ್ ರೆಡ್ಡಿ ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು, ಅಪಘಾತವಾದಾಗ ಚಾಲಕರ ಮೇಲೆ ಹಲ್ಲೆ ನಡೆಯುತ್ತದೆ. ಹಾಗಾಗಿ ವಾಹನ ನಿಲ್ಲಿಸದೇ ಆತ್ಮರಕ್ಷಣೆಗಾಗಿ ಚಾಲಕರು ಸ್ಥಳೀಯ ಠಾಣೆಗಳಿಗೆ ಹೋಗುತ್ತಾರೆ. ಕೇಂದ್ರ ಸರ್ಕಾರ ಈ ಕಾನೂನು ತಿದ್ದುಪಡಿಯನ್ನು ಕೂಡಲೇ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

‘ಅಸೋಸಿಯೇಷನ್‌ನಲ್ಲಿ ಸುಮಾರು 6 ಲಕ್ಷ ಮಾಲೀಕರಿದ್ದಾರೆ. ರಾಜ್ಯದಲ್ಲಿ ಸುಮಾರು 15 ಲಕ್ಷ ಲಾರಿ ಚಾಲಕರಿದ್ದಾರೆ. ಚಾಲಕರಿಗೆ ಮತ್ತು ಮಾಲೀಕರಿಗೆ ತೊಂದರೆ ನೀಡುವ ಇಂಥ ಕಾನೂನು ರದ್ದು ಮಾಡಬೇಕು. ಎಂದು ಒತ್ತಾಯಿಸಿದರು.

ತಮಿಳುನಾಡು ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸೆಲ್ಲಾ ರಾಜಮಣಿ, ಕೇರಳ ಸಂಘದ ಶಾಜು, ಆಂಧ್ರಪ್ರದೇಶದ ಬಾಷಾ ಬಾನ್ ಮತ್ತು ಮಹಾರಾಷ್ಟ್ರ ಸಂಘದ ಅಧ್ಯಕ್ಷ ಶಂಕರ ದಾದಾ, ಕರ್ನಾಟಕ ಚಾಲಕರ ಒಕ್ಕೂಟದ ಅಧ್ಯಕ್ಷ ಮಹಮ್ಮದ್ ಮಸ್ತಾನ ಹಾಜರಿದ್ದರು.

ಇದೇ 18ರಿಂದ ದಕ್ಷಿಣ ಯಾತ್ರೆ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಮೇಶ್ವರ, ಕನ್ಯಾಕುಮಾರಿ, ಮದುರೈ, ತಿರುವನಂತಪುರಕ್ಕೆ ಕರ್ನಾಟಕ ಭಾರತ್ ಗೌರವ್ ದಕ್ಷಿಣ ಯಾತ್ರೆಯು ಜ.18ರಂದು ಆರಂಭಗೊಳ್ಳಲಿದೆ.

ದಕ್ಷಿಣ ಯಾತ್ರಾ ವಿಶೇಷ ರೈಲು ಜ.18ರಂದು ಹೊರಡಲಿದ್ದು, ಜ.23ರಂದು ವಾಪಸ್ಸಾಗಲಿದೆ. ಜ.30ಕ್ಕೆ ಹೊರಡುವ ರೈಲು ಫೆ.4ಕ್ಕೆ ವಾಪಸ್ಸಾಗಲಿದೆ. ಪ್ರವಾಸ ಬಯಸುವವರು ಐಆರ್‌ಸಿಟಿಸಿ/ಐಟಿಎಂಎಸ್ ವೆಬ್‌ಸೈಟ್ ಮೂಲಕ ಬುಕ್ಕಿಂಗ್ ಮಾಡಿಕೊಳ್ಳಬಹುದು ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ತಿಳಿಸಿದ್ದಾರೆ.

ಅತಿ ಕಡಿಮೆ ವೆಚ್ಚದ ಒಂದು ವಾರದ ಯಾತ್ರೆಯು ಇದಾಗಿದ್ದು, ರಾಮೇಶ್ವರ ದೇವಾಲಯ, ಭಗವತಿ ದೇವಾಲಯ, ಮೀನಾಕ್ಷಿ ದೇವಾಲಯ, ಅನಂತಪದ್ಮನಾಭ ದೇವಾಲಯಗಳ ದರ್ಶನ ಪಡೆಯಬಹುದು. ಯಾತ್ರೆಯ ಪ್ಯಾಕೇಜ್ ಮೊತ್ತ ₹ 15,000 ಆಗಿದ್ದು, ಕರ್ನಾಟಕ ಸರ್ಕಾರವು ₹ 5,000 ಸಹಾಯಧನ ನೀಡಲಿದೆ. ಯಾತ್ರಿಗಳು ₹ 10,000 ಪಾವತಿಸಬೇಕು. ಯಾತ್ರೆಯ ವಿಶೇಷ ರೈಲು ಬೆಳಗಾವಿ, ಹುಬ್ಬಳ್ಳಿ, ಹಾವೇರಿ, ದಾವಣಗೆರೆ, ಬೀರೂರು, ತುಮಕೂರು, ಯಶವಂತಪುರದಲ್ಲಿ ನಿಲುಗಡೆ ನೀಡಲಿದೆ.

ಅಲ್ಲಿ ಯಾತ್ರಿಗಳಿಗೆ ಹತ್ತಲು ಮತ್ತು ಇಳಿಯಲು ಅವಕಾಶ ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಯುವನಿಧಿ: 67,951 ಅಭ್ಯರ್ಥಿಗಳು ನೋಂದಣಿ

ಹಾವೇರಿ: ಕಾಂಗ್ರೆಸ್ ರಾಜ್ಯ ಸರ್ಕಾರದ 5ನೇ ಗ್ಯಾರಂಟಿ ಯೋಜನೆ ‘ಯುವನಿಧಿ’ಗೆ ರಾಜ್ಯದಾದ್ಯಂತ 67,951 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿ ಅತಿ ಹೆಚ್ಚು 7,453 ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಅತಿ ಕಡಿಮೆ 560 ಅಭ್ಯರ್ಥಿಗಳು ಮಾತ್ರ ನೋಂದಣಿ ಮಾಡಿಕೊಂಡಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 5,080, ಬಾಗಲಕೋಟೆಯಲ್ಲಿ 3,745, ವಿಜಯಪುರದಲ್ಲಿ 3,552 ಮತ್ತು ಹಾವೇರಿಯಲ್ಲಿ 1,736 ಅಭ್ಯರ್ಥಿಗಳ ನೋಂದಣಿಯಾಗಿದೆ.

ಬೆಂಗಳೂರು ರೇಸ್

ಎಕ್ಸೀಡ್ ಗೆಲ್ಲುವ ನಿರೀಕ್ಷೆ

ಸಿ.ಎಂ.ವರ್ಮಾ ಅಂಡ್ ಬಿ.ಎಂ.ವರ್ಮಾ ಮೆಮೋರಿಯಲ್ ಮಿಲಿಯನ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಕ್ಸೀಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮಾರ್ಕೊ ಪೋಲೊ 9, ರಾಫಲ್ಸ್ 3, ಪ್ರಿನ್ಸೆಸ್ ಜಾಸ್ಮೈನ್ 2
2ನೇ ರೇಸ್: ಶೀ ಈಸ್ ಎ ಲೇಡಿ 1, ಕೊನಿಚಿವ 5, ಅಪೊಲೊ ಲೈಟ್ 3
3ನೇ ರೇಸ್: ಡೊಮಿನ 5, ಜೆರ್ಸಿ ಲೆಜೆಂಡ್ 6, ಸೂಪರ್ ಕೈಂಡ್ 1
4ನೇ ರೇಸ್: ಮಿಸ್ಟಿಕಾಸ್ 12, ಅಲ್ವಿನ 1, ಇಸಾಬೆಲ್ 2
5ನೇ ರೇಸ್: ರೆಮಾಂಟಾಯರ್ 4, ಸ್ಟ್ರೈಕಿಂಗ್ ಮೆಮೋರಿ 1, ಚಿಸಾಕ್ಸ್ 2
6ನೇ ರೇಸ್: ಓನ್ ಲೆಗಸಿ 11, ಗೋಲ್ಡನ್ ಟೈಮ್ 4, ಫ್ಲೋರ್ ವೀಲ್ ಡ್ರೈವ್ 8
7ನೇ ರೇಸ್: ಎಕ್ಸೀಡ್ 1, ಆರ್ಟ್ ಆಫ್ ರೊಮಾನ್ಸ್ 6, ಮಕೊಟೊ 4
8ನೇ ರೇಸ್: ಜೋಕ್ಸಾನ್ 2, ಸಿಂಕೊ ಡೆ ಮಾಯೊ 6, ಸಿಲ್ವರ್ ಟೋಕನ್ 4

ಉತ್ತಮ ಬೆಟ್: ಶೀ ಈಸ್ ಎ ಲೇಡಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ನಗರದಲ್ಲೂ ಅಶ್ವಾರೋಹಿ ಪೊಲೀಸ್ ಗಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಇನ್ನು ಮುಂದೆ ಅಶ್ವಾರೋಹಿ ಪೊಲೀಸ್ ಗಸ್ತು ನಡೆಯಲಿದೆ. ಜನದಟ್ಟಣೆ ಪ್ರದೇಶದಲ್ಲಿ ಹೆಚ್ಚಿನ ನಿಗಾ ವಹಿಸಲು ನಗರ ಪೊಲೀಸ್ ಇಲಾಖೆ ನಿರ್ಧರಿಸಿದ್ದು ಈ ಕ್ರಮ ಕೈಗೊಳ್ಳಲಾಗಿದೆ.

ಮೈಸೂರು ನಗರಕ್ಕೆ ಸಿಮೀತವಾಗಿದ್ದ ಅಶ್ವಾರೋಹಿ ಪೊಲೀಸ್ ಗಸ್ತು ನಗರಕ್ಕೂ ಆಗಮಿಸಿದ್ದು, ‘ಹೊಯ್ಸಳ’, ‘ಚೀತಾ’ದ ಜತೆಗೆ ಅಶ್ವಾರೋಹಿ ದಳದಿಂದಲೂ ನಗರದ ಆಯ್ದ ಸ್ಥಳಗಳಲ್ಲಿ ಗಸ್ತು ನಡೆಯಲಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು ಮಾಹಿತಿ ನೀಡಿದ್ದಾರೆ.

ನಗರದ ಜನಸಂದಣಿ ಪ್ರದೇಶಗಳಲ್ಲಿ ಹೆಚ್ಚು ನಿಗಾ ವಹಿಸಲು ಮೈಸೂರಿನ ಒಂದು ತುಕಡಿಯನ್ನು ನಗರಕ್ಕೆ ಕರೆಸಿಕೊಳ್ಳಲಾ ಗಿದೆ. ಹೆಚ್ಚಿನ ನಿಗಾ ವಹಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಹೆಚ್ಚು ಜನರು ಸೇರುವ ಕಬ್ಬನ್ ಉದ್ಯಾನ, ವಿಧಾನಸೌಧ, ಮೆಜೆಸ್ಟಿಕ್, ಎಂ.ಜಿ.ರಸ್ತೆ, ಚರ್ಚ್ ರಸ್ತೆ ಸೇರಿದಂತೆ ಹಲವು ಕಡೆ ಈ ಅಶ್ವಾರೋಹಿ ದಳದಿಂದ ಗಸ್ತು ನಡೆಯಲಿದೆ ಎಂದರು.

ಜನದಟ್ಟಣೆ ನಡುವೆ ಅನುಚಿತವಾಗಿ ವರ್ತಿಸುವವರು, ಅಪರಾಧ ಕೃತ್ಯಗಳನ್ನು ಎಸಗುವವರ ಮೇಲೆ ಎತ್ತರದಿಂದಲೇ ಹದ್ದಿನ ಕಣ್ಣಿಡುವ ಮೂಲಕ ಸುರಕ್ಷತೆಗೆ ಹೆಚ್ಚು ಆದ್ಯತೆ ನೀಡಲಾಗುತ್ತದೆ ಎಂದರು.

ತ್ಯಾಜ್ಯ: ಸ್ವಯಂಪ್ರೇರಿತ ಪ್ರಕರಣ ದಾಖಲು

ಬೆಂಗಳೂರು: ಕೆರೆಗುಡ್ಡದಹಳ್ಳಿ ವ್ಯಾಪ್ತಿಯಲ್ಲಿ ತ್ಯಾಜ್ಯ ವಿಲೇವಾರಿ ಮಾಡದ ಚಿಕ್ಕಬಾಣಾವರ ಪುರಸಭೆ ಅಧಿಕಾರಿಗಳ ವಿರುದ್ಧ ಲೋಕಾಯುಕ್ತರು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಮಂಗಳವಾರ ದಾಸರಹಳ್ಳಿ ವಲಯದಲ್ಲಿ ಪರಿಶೀಲನೆ ನಡೆಸುತ್ತಿದ್ದ ಸಂದರ್ಭದಲ್ಲಿ ಸ್ಥಳೀಯರಾದ ರಾಖಿ ಸುಧಾಕರ್ ಅವರು, ‘ಕೆರೆಗುಡ್ಡದಹಳ್ಳಿ ಕೆರೆ ವ್ಯಾಪ್ತಿಯಲ್ಲಿ ಬಿದ್ದಿರುವ ಕಸದ ರಾಶಿಯನ್ನು ಒಂದೂವರೆ ವರ್ಷದಿಂದ ತೆರವು ಮಾಡಿಲ್ಲ. ಚಿಕ್ಕಬಾಣಾವರ ಪುರಸಭೆಯ ಪ್ರತಿನಿಧಿಗಳಿಂದ ಹಿಡಿದು ಪುರಸಭೆಯ ಮುಖ್ಯ ಅಧಿಕಾರಿಗೆ ಹಲವು ಬಾರಿ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ’ ಎಂದು ದೂರಿದ್ದರು.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಲೋಕಾಯುಕ್ತರು, ‘ಮೌಖಿಕವಾಗಿ ಸ್ಥಳೀಯರು ದೂರು ನೀಡಿದ್ದು, ಚಿಕ್ಕಬಾಣಾವರ ಪುರಸಭೆ ಮುಖ್ಯ ಅಧಿಕಾರಿ ಸೇರಿದಂತೆ ಇತರೆ ಅಧಿಕಾರಿಗಳು ಕರ್ತವ್ಯ ಲೋಪ ಎಸಗಿದ್ದಾರೆ. ತ್ಯಾಜ್ಯ ತೆರವು ಮಾಡದೆ, ಅನಾರೋಗ್ಯಕರ ಪರಿಸರಕ್ಕೆ ಮಾರಕವಾಗಿದ್ದಾರೆ ಎಂದು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಲಾಗಿದೆ’ ಎಂದು ತಿಳಿಸಿದ್ದಾರೆ.

ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾಧಿಕಾರಿ, ನಗರಾಭಿವೃದ್ಧಿ ಯೋಜನಾ ನಿರ್ದೇಶಕ, ಪೌರಾಡಳಿತ ಇಲಾಖೆ ನಿರ್ದೇಶಕ, ಚಿಕ್ಕಬಾಣಾವರ ಪುರಸಭೆ ಮುಖ್ಯ ಅಧಿಕಾರಿ, ಪರಿಸರ ಅಧಿಕಾರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

‘ಕೃಷಿ ಉತ್ಪನ್ನಗಳಿಗೆ ಏಕೀಕೃತ ಬ್ರ್ಯಾಂಡಿಂಗ್ ಮಾರುಕಟ್ಟೆ ಕಲ್ಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಫುಡ್ ಪಾರ್ಕ್‌ಗಳನ್ನು ರೈತರು ಸಮರ್ಪಕವಾಗಿ ಬಳಸಿಕೊಂಡು, ಸುಮಾರು ₹ 1 ಲಕ್ಷ ಕೋಟಿ ಮೌಲ್ಯದ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳಿಗೆ ಏಕೀಕೃತ ಬ್ರ್ಯಾಂಡ್‌ನೊಂದಿಗೆ ಮಾರುಕಟ್ಟೆ ಕಲ್ಪಿಸುವ ಕೆಲಸವನ್ನು ಪರಸ್ಪರ ಸಮನ್ವಯದಲ್ಲಿ ವಿವಿಧ ಇಲಾಖೆಗಳು ಸಾಧಿಸಬೇಕು’ ಎಂದು ಅಭಿವೃದ್ಧಿ ಆಯುಕ್ತರಾದ ಶಾಲಿನಿ ರಜನೀಶ್ ಹೇಳಿದರು.

ಕೃಷಿ ಉತ್ಪನ್ನಗಳಿಗೆ ಏಕೀಕೃತ ಬ್ರ್ಯಾಂಡಿಂಗ್ ಒದಗಿಸುವ ಉದ್ದೇಶದಿಂದ ಗುರುವಾರ ಆಯೋಜಿಸಲಾಗಿದ್ದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘ಬಾಗಲಕೋಟೆ, ಹಿರಿಯೂರು, ಜೇವರ್ಗಿ ಮತ್ತು ಮಾಲೂರು ತಾಲ್ಲೂಕುಗಳಲ್ಲಿ ಸ್ಥಾಪಿಸಿರುವ ಫುಡ್ ಪಾರ್ಕ್‌ಗಳನ್ನು ಬಳಸಿಕೊಳ್ಳಬೇಕು’ ಎಂದರು.

‘ಅಗತ್ಯವಿರುವ ತಂತ್ರಜ್ಞಾನ ಆಧರಿಸಿ ಎಲ್ಲ 31 ಜಿಲ್ಲೆಗಳ ಬೆಳೆಗಳಿಗೆ ಈ ಫುಡ್ ಪಾರ್ಕ್‌ಗಳನ್ನು ವಿಂಗಡಿಸಬೇಕು. ತ್ವರಿತವಾಗಿ ಹಾಳಾಗುವ ಕೃಷಿ, ತೋಟಗಾರಿಕೆ ಉತ್ಪನ್ನಗಳನ್ನು ಸಂಸ್ಕರಿಸಿ, ಮೌಲ್ಯವರ್ಧನೆ ಚಟುವಟಿಕೆಗಳಲ್ಲಿ ರೈತರನ್ನು ತೊಡಗಿಸಬೇಕು. ರಫ್ತು ಉತ್ತೇಜಿಸಿ, ಉದ್ಯೋಗ ಸೃಜನೆ, ರೈತರ ಆದಾಯ ಹೆಚ್ಚಳಕ್ಕೆ ರೂಪುರೇಷೆ ಸಿದ್ಧಪಡಿಸಿಕೊಂಡು ಅನುಷ್ಠಾನಗೊಳಿಸಬೇಕು’ ಎಂದೂ ಸಲಹೆ ನೀಡಿದರು.

‘ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿರುವ ರಾಜ್ಯ ಉಗ್ರಾಣ ನಿಗಮದ ಗೋದಾಮುಗಳನ್ನು ಫುಡ್ ಪಾರ್ಕ್‌ಗಳ ಜೊತೆ ಮ್ಯಾಪಿಂಗ್ ಮಾಡಿ ಕೃಷಿ ಉತ್ಪನ್ನಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ ಮಾರುಕಟ್ಟೆ ಕಲ್ಪಿಸಬೇಕು. ರೈತ ಉತ್ಪಾದಕ ಸಂಸ್ಥೆಗಳು, ಸ್ವಸಹಾಯ ಸಂಘಗಳ ಸದಸ್ಯರನ್ನು ಈ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಅವರ ಕೌಶಲ ಹೆಚ್ಚಿಸಬೇಕು. ಬ್ಯಾಂಕುಗಳು, ಉದ್ಯಮಿಗಳ ನಡುವೆಯೂ ಸಮನ್ವಯ ಸಾಧಿಸಬೇಕು’ ಎಂದರು.

ಕೃಷಿ ಇಲಾಖೆಯ ಕಾರ್ಯದರ್ಶಿ ವಿ. ಅನ್ಬುಕುಮಾರ್, ‘ಕೃಷಿ, ತೋಟಗಾರಿಕೆ, ಪಶುಸಂಗೋಪನಾ ವಿಶ್ವವಿದ್ಯಾಲಯಗಳು, ಕೃಷಿ ವಿಜ್ಞಾನ ಕೇಂದ್ರಗಳಲ್ಲಿನ ತಜ್ಞರು ಆಹಾರ ಯೋಜನೆಗಳ ತಯಾರಿಕೆ, ಮಾರುಕಟ್ಟೆ ಕಾರ್ಯದಲ್ಲಿ ಭಾಗಿಯಾಗಬೇಕು’ ಎಂದರು.

रजिस्ट्री सं. डी.एल.- 33004/99 REGD. No. D. L.-33004/99

भारत का राजपत्र
The Gazette of India

सी.जी.-डी.एल.-अ.-26122023-250893
CG-DL-E-26122023-250893

असाधारण
EXTRAORDINARY

भाग II—खण्ड 3—उप-खण्ड (ii)
PART II—Section 3—Sub-section (ii)

प्राधिकार से प्रकाशित
PUBLISHED BY AUTHORITY

सं. 5214] नई दिल्ली, शुक्रवार, दिसम्बर 22, 2023/पौष 1, 1945
No. 5214] NEW DELHI, FRIDAY, DECEMBER 22, 2023/PAUSHA 1, 1945

ಭಾರತ ಸರ್ಕಾರ
ವಿಶೇಷ ಭೂ–ಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ ರಾ.ಹೆ.169 ಹಾಗೂ ಸಹಾಯಕ ಆಯುಕ್ತರ ಕಛೇರಿ
ಕುಂದಾಪುರ ಉಪ ವಿಭಾಗ, ಕುಂದಾಪುರ

ನಂ.ಎನ್.ಹೆಚ್.ಎಲ್.ಎ.ಕ್ಯೂ.ಸಿ.ಆರ್/1/2023–24

ಸಾರ್ವಜನಿಕ ತಿಳುವಳಿಕೆ

ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ಮತ್ತು ಕಾಲಕಾಲಕ್ಕೆ ಮಾಡಿದ ತಿದ್ದುಪಡಿಗಳ ಅನುಗುಣವಾಗಿ ಸೆಕ್ಷನ್ 3ಡಿ(1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ (ಇನ್ನು ಮುಂದೆ ಉಲ್ಲೇಖಿತ ಕಾಯ್ದೆ ಎಂದು ನಮೂದಿಸಲಾಗಿದೆ) ಭಾರತ ಸರಕಾರವು ತನ್ನ ಗೆಜೆಟ್ ಅಧಿಸೂಚನೆ ನಂ.ಎಸ್.ಒ.595(ಇ) ದಿನಾಂಕ:06 ಫೆಬ್ರವರಿ 2023ರಲ್ಲಿ ಈ ಕೆಳಗೆ ಪ್ರಕಟಿಸಿರುವ ಕಿ.ಮೀ.153.00 ರಿಂದ ಕಿ.ಮೀ.168.270 (ಮಾಳಗೇಟ್‌ನಿಂದ ಕಾರ್ಕಳ ಸೆಕ್ಷನ್) ವರೆಗಿನ ರಸ್ತೆ (ಅಗಲೀಕರಣ/ದ್ವಿಪಥ ಪೇವ್ಡ್ ಶೋಲ್ಡರ್/ಚತುಷ್ಪಥ ಲೇನಿಂಗ್ ಇತ್ಯಾದಿ) ನಿರ್ಮಾಣಕ್ಕಾಗಿ ಸಂರಕ್ಷಣೆ ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಂಡಿರುತ್ತಾರೆ. ಆದ್ದರಿಂದ ರಾಷ್ಟ್ರೀಯ ಹೆದ್ದಾರಿ ಕಾಯ್ದೆ ಕಲಂ 3ಜಿ ಉಪಕಲಂ(1) (2) (3) ಮತ್ತು (4) ಹಾಗೂ 1997 ರ ತಿದ್ದುಪಡಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆಯಲ್ಲಿ ನಮೂದಿಸಿರುವ ಜಮೀನುದಾರರಿಗೆ ಹಾಗೂ ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅಧಿಸೂಚನೆಯಲ್ಲಿ ನಮೂದಿಸಿರುವ ಜಮೀನುಗಳನ್ನು ಕೇಂದ್ರ ಸರಕಾರವು ವಶಪಡಿಸಿಕೊಂಡಿರುವುದರಿಂದ ಸದರಿ ಜಮೀನುಗಳಿಗೆ ಪರಿಹಾರ ನಿರ್ಧರಿಸಿ ಪಾವತಿಸಲು ಸದರಿ ಜಮೀನಿನ ಬಗ್ಗೆ ಅವರ ಹಿತಾಸಕ್ತಿ ವಿವರಣೆಯ ಸಂಭಂದಪಟ್ಟ ಅಧಿಕೃತ ದಾಖಲೆಗಳನ್ನು ಅಂದರೆ, (1) ಮೂಲ ದಾಖಲೆ ಪತ್ರ (2) ಕ್ರಯ/ವಿಭಾಗ/ಹಕ್ಕು ದಾಖಲೆಗೆ ಸಂಭಂಧಿಸಿದ ಇತರೇ ಯಾವುದೇ ದಾಖಲೆ ಪತ್ರಗಳು (3) ಚಾಲ್ತಿ ಸಾಲಿನ ಆರ್.ಟಿ.ಸಿ (4) ಮ್ಯುಟೇಶನ್ ಪ್ರತಿ 5) ಋಣಭಾರ ರಾಹಿತ್ಯ ಧೃಡಪತ್ರ (6) ಕಂದಾಯ ಪಾವತಿಸಿದ ರಶೀದಿಯೊಂದಿಗೆ ಈ ಪ್ರಕಟಣೆಯಲ್ಲಿ ನಮೂದಿಸಿರುವ ವೇಳೆ ಹಾಗೂ ದಿನಾಂಕದಂದು ಸ್ವತಃ ನೀವಾಗಲಿ ಅಥವಾ ನಿಮ್ಮ ಅಧಿಕೃತ ಪ್ರತಿನಿಧಿಯಾಗಲಿ ಅಥವಾ ನಿಮ್ಮ ಪರ ನ್ಯಾಯವಾದಿಗಳ ಮೂಲಕವಾಗಲಿ ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ ರಾ.ಹೆ.169 ಹಾಗೂ ಸಹಾಯಕ ಆಯುಕ್ತರು ಕುಂದಾಪುರ ಇವರ ಮುಂದೆ ಖುದ್ದಾಗಿ ಹಾಜರುಪಡಿಸತಕ್ಕದ್ದು.

ಕ್ರ. ಸಂ.	ತಾಲೂಕಿನ ಹೆಸರು	ಗ್ರಾಮದ ಹೆಸರು	ದಿನಾಂಕ ಮತ್ತು ಸಮಯ ಮತ್ತು ಸ್ಥಳ
1	ಕಾರ್ಕಳ	1) ಮಾಳ 2) ಮುಡಾರು 3) ಮಿಯಾರು 4) ಕಾರ್ಕಳ ಕಸಬಾ 5) ಸಾಣೂರು	ದಿನಾಂಕ:30.01.2024 ಬೆಳಿಗ್ಗೆ 11:00 ಘಂಟೆಯಿಂದ 1:00 ಘಂಟೆವರೆಗೆ ಸಹಾಯಕ ಆಯುಕ್ತರ ಕಛೇರಿ ಕುಂದಾಪುರ

ಸಹಿ/–
ರಶ್ಮಿ ಎಸ್.ಆರ್. ಕೆ.ಎ.ಎಸ್.,
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
ರಾ.ಹೆ.169 ಮತ್ತು ಸಹಾಯಕ ಆಯುಕ್ತರು,
ಕುಂದಾಪುರ

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 22ನೇ ಡಿಸೆಂಬರ್ 2023

ಎಸ್.ಓ.5444(ಇ).– ಕೇಂದ್ರ ಸರಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಶೆಡ್ಯೂಲ್‌ನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಉಡುಪಿ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 169ರ ರಸ್ತೆ ಕಿ.ಮೀ 153.00 ರಿಂದ ಕಿ.ಮೀ 168.270 (ಮಾಳಗೇಟ್ ನಿಂದ ಕಾರ್ಕಳ ಸೆಕ್ಷನ್) ವರೆಗಿನ ರಸ್ತೆ (ಅಗಲೀಕರಣ/ ದ್ವಿಪಥ ಪೇವ್ಡ್ ಶೋಲ್ಡರ್/ಚತುಷ್ಪಥ ಲೇನಿಂಗ್ ಇತ್ಯಾದಿ) ನಿರ್ಮಾಣಕ್ಕಾಗಿ ಸಂರಕ್ಷಣೆ, ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂ–ಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ ಎಂಬುವುದು ಕಂಡುಬಂದಿರುತ್ತದೆ. ಆದಕಾರಣ ಕೇಂದ್ರ ಸರಕಾರದ ಅಧಿಸೂಚನೆಯ ಮೂಲಕ, ಎಸ್.ಓ.595(ಇ) ದಿನಾಂಕ: 06.02.2023, ಭಾರತದ ಗೆಜೆಟ್, ಎಕ್ಸ್‌ಟ್ರಾಆರ್ಡಿನರಿ, ಭಾಗ II, ವಿಭಾಗ 3, ಉಪ ವಿಭಾಗ(II) ರಲ್ಲಿ ಪ್ರಕಟಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956(1956ರ 48) ಸೆಕ್ಷನ್ 3ಎ ನ ಉಪ–ವಿಭಾಗ (1) ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಲಗತ್ತಿಸಿರುವ ಅನುಸೂಚಿ(ಶೆಡ್ಯೂಲ್)ಯಂತೆ ವಿವರಿಸಿರುವ ಜಮೀನುಗಳನ್ನು ಭೂ–ಸ್ವಾಧೀನಪಡಿಸಿಕೊಳ್ಳಲು ಈ ಮೂಲಕ ಅಧಿಸೂಚನೆ ನೀಡಿದೆ.

ಸದರಿ ಅಧಿಸೂಚನೆಯನ್ನು ಕನ್ನಡ ದಿನಪತ್ರಿಕೆ ಪ್ರಜಾವಾಣಿ ಮತ್ತು ಆಂಗ್ಲ ದಿನಪತ್ರಿಕೆ ಟೈಮ್ಸ್ ಆಫ್ ಇಂಡಿಯಾ ದಿನಾಂಕ: 01–03–2023 ರಂದು ರಾಷ್ಟ್ರೀಯ ಹೆದ್ದಾರಿ ಉಪ ಕಾಯ್ದೆ 3 ಕಾಯ್ದೆ 3(ಎ)ರ ಪ್ರಕಾರ ಪ್ರಚಾರಪಡಿಸಿ ಆಕ್ಷೇಪಣೆ ಆಹ್ವಾನಿಸಲಾಗಿತ್ತು.

ಅದರಂತೆ ಆಕ್ಷೇಪಣೆಗಳನ್ನು ಸ್ವೀಕರಿಸಿ ಮತ್ತು ಪರಿಶೀಲನೆ ನಡೆಸಿ ಸಕ್ಷಮ ಪ್ರಾಧಿಕಾರಿಯವರು ಸೂಕ್ತ ಆದೇಶ ಹೊರಡಿಸಿರುತ್ತಾರೆ, ಮತ್ತು ಸಕ್ಷಮ ಪ್ರಾಧಿಕಾರ ಸೆಕ್ಷನ್ 3ರ ಸಬ್ ಸೆಕ್ಷನ್ 3(ಡಿ)1 ರ ಅನುಸಾರ ಕೇಂದ್ರ ಸರಕಾರಕ್ಕೆ ವರದಿ ಸಲ್ಲಿಸಿರುವರು.

ಆದ್ದರಿಂದ ಈಗ ಸಕ್ಷಮ ಪ್ರಾಧಿಕಾರಿಯವರಿಂದ ಬಂದ ವರದಿ ಪ್ರಕಾರ ಮತ್ತು ಸೆಕ್ಷನ್ 3(ಡಿ)ರ ಸಬ್ ಸೆಕ್ಷನ್ (1)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಶೆಡ್ಯೂಲ್‌ನಲ್ಲಿ ತೋರಿಸಿದ ಭೂಮಿಯನ್ನು ಮೇಲೆ ತಿಳಿಸಿದ ಉಪಯೋಗಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕೇಂದ್ರ ಸರಕಾರವು ಘೋಷಿಸಿದೆ.

ಮತ್ತು ಈಗ ಸೆಕ್ಷನ್ 3(ಡಿ)ರ ಸಬ್ ಸೆಕ್ಷನ್(2)ರ ಅನುಸಾರ ರಾಜ್ಯ ಪತ್ರದಲ್ಲಿ ಅಧಿಸೂಚನೆ ಪ್ರಕಟಗೊಂಡ ಮೇಲೆ ಶೆಡ್ಯೂಲ್‌ನಲ್ಲಿ ವಿವರಿಸಿರುವ ಭೂಮಿಯ ಯಾವುದೇ ಋಣಭಾರವಿಲ್ಲದೇ ಕೇಂದ್ರ ಸರಕಾರದ ಸ್ವಾಧೀನಕ್ಕೆ ಒಳಪಟ್ಟಿರುತ್ತದೆ ಎಂದು ಕೇಂದ್ರ ಸರಕಾರವು ಘೋಷಿಸಿರುತ್ತದೆ.

ಅನುಸೂಚಿ

ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ–169 ರ ರಸ್ತೆ ಕಿ.ಮೀ 153.00 ರಿಂದ ಕಿ.ಮೀ 168.270 (ಮಾಳಗೇಟ್‌ನಿಂದ ಕಾರ್ಕಳ ಸೆಕ್ಷನ್)ರ ವರೆಗೆ ಭೂಸ್ವಾಧೀನಗೊಳ್ಳಲಿರುವ ಕಟ್ಟಡ ಅಥವಾ ಕಟ್ಟಡ ರಹಿತ ಜಮೀನುಗಳ ಸಂಕ್ಷಿಪ್ತ ವಿವರ.

ರಾಜ್ಯ : ಕರ್ನಾಟಕ ಜಿಲ್ಲೆಯ ಹೆಸರು: ಉಡುಪಿ ತಾಲ್ಲೂಕು: ಕಾರ್ಕಳ

ಕ್ರ.ಸಂ (1)	ಸರ್ವೆ ಸಂಖ್ಯೆ (2)	ಜಮೀನಿನ ವಿವರಣೆ (3)	ಜಮೀನಿನ ತರಹೆ (4)	ವಿಸ್ತೀರ್ಣ (ಹೆಕ್ಟರ್‌ಗಳಲ್ಲಿ) (5)	ಭೂಮಾಲೀಕರು/ಹಿತಾಸಕ್ತಿದಾರರ ಹೆಸರು (6)
ತಾಲ್ಲೂಕು : ಕಾರ್ಕಳ					
ಗ್ರಾಮ: ಮಾಳ					
1	214/10	ಖಾಸಗಿ	ಖುಷ್ಕಿ	0.0182	ರಶ್ಮಿ ಜೋಸ್ C/o ಸಿಬಿ ಥಾಮಸ್
2	214/14	ಖಾಸಗಿ	ಖುಷ್ಕಿ	0.0536	ಜಾಯ್ ಕೊಲೆಂಚರಿ ಓಸೆಫ್ S/o ಕೆ.ಎ. ಓಸೆಫ್
3	214/8	ಖಾಸಗಿ	ಖುಷ್ಕಿ	0.0202	ಸಾಧು ಹೆಗ್ಡೆ, ಅಣ್ಣಿ, ಸೋಮವತಿ, ನಾರಾಯಣ, ಪ್ರಭಾಕರ, ಪ್ರೀತಿ, ಶೃತಿ, ಶ್ವೇತ, ಅಕ್ಷತ
4	214/9	ಖಾಸಗಿ	ಖುಷ್ಕಿ	0.1214	ಜಾಖೋಬ್ ಜೇವಿಯಾರ್ S/o ಕೆ.ಎಂ.ಚಾಕೊ
5	216/2	ಖಾಸಗಿ	ಖುಷ್ಕಿ	0.1156	ಬಾಬು ದೇವಾಡಿಗ, ಅಶೋಕ ದೇವಾಡಿಗ, ಶಾಂತ ದೇವಾಡಿಗ, ಸುಮತಿ ದೇವಾಡಿಗ, ಶ್ವೇತ, ಶರತ್, ಸೀಮಾ
6	216/3	ಖಾಸಗಿ	ತರಿ	0.1583	ಬಾಬು ದೇವಾಡಿಗ, ಅಶೋಕ ದೇವಾಡಿಗ, ಶಾಂತ ದೇವಾಡಿಗ, ಸುಮತಿ ದೇವಾಡಿಗ, ಶ್ವೇತ, ಶರತ್, ಸೀಮಾ, ಎಂ.ಪಿ ರತ್ನಾಕರ್ ಹೆಗ್ಡೆ (ಚಾಲ ಜೇಣಿ).
7	317/1ಸಿ1ಎ2	ಖಾಸಗಿ	ಖುಷ್ಕಿ	0.004	ಕರಿಯ ಪೂಜಾರಿ S/o ಸೇಸಪ್ಪ ಪೂಜಾರಿ
8	317/1ಸಿ2	ಖಾಸಗಿ	ಖುಷ್ಕಿ	0.0324	ಅನಂತ ಶೆರಿಗರ್, ಇತರ ಆಸಕ್ತಿ ವ್ಯಕ್ತಿಗಳು – ಮಾಲ ಕೇರ್ವಶೆ ವಿಎಸ್‌ಎಸ್‌ಎಸ್ ಲಿ., ಮಾಲ ಕಾರ್ಪೊರೇಷನ್ ಬ್ಯಾಂಕ್, ಮಾಲ ಅಂಡ್ ಪಿಸಿಎಆರ್‌ಡಿ ಬ್ಯಾಂಕ್ ಕಾರ್ಕಳ
9	317/1ಡಿ	ಖಾಸಗಿ	ಖುಷ್ಕಿ	0.0243	ಅನಂತ ಶೆರಿಗರ್, ಇತರ ಆಸಕ್ತಿ ವ್ಯಕ್ತಿಗಳು – ಮಾಲ ಕೇರ್ವಶೆ ವಿಎಸ್‌ಎಸ್ ಲಿ., ಮಾಲ ಕಾರ್ಪೊರೇಷನ್ ಬ್ಯಾಂಕ್, ಮಾಲ ಅಂಡ್ ಪಿಸಿಎಆರ್‌ಡಿ ಬ್ಯಾಂಕ್ ಕಾರ್ಕಳ
10	317/1ಇ1	ಸರ್ಕಾರಿ	ಖುಷ್ಕಿ	0.0486	ಸರ್ಕಾರಿ
11	317/1ಇ2	ಖಾಸಗಿ	ಖುಷ್ಕಿ	0.0243	ಕರಿಯ ಪೂಜಾರಿ S/o ಸೇಸಪ್ಪ ಪೂಜಾರಿ
12	317/1ಎಫ್	ಖಾಸಗಿ	ಖುಷ್ಕಿ	0.0364	ರತ್ನ ನಾಯಕ್ C/o ದೇವರಾಯ ನಾಯಕ್
13	324/2	ಖಾಸಗಿ	ಖುಷ್ಕಿ	0.1659	ಶಿವಣ್ಣ ಶೆಟ್ಟಿಗರ್ S/o ಬಾಬು ಶೆಟ್ಟಿಗರ್, ಇತರ ಆಸಕ್ತಿ ವ್ಯಕ್ತಿಗಳು –ಮಾಲ ಕೇರ್ವಶೆ ವಿಎಸ್‌ಎಸ್‌ಎಸ್ ಲಿ., ಮಾಲ ಕಾರ್ಕಳ ಪಿಎಲ್‌ಡಿ ಬ್ಯಾಂಕ್
14	381/3	ಖಾಸಗಿ	ಖುಷ್ಕಿ	0.0347	ಮೈಥಿಲಿ ಅಲಿಯಾಸ್ ರಂಜಿತ ಡೊಂಗ್ರೆ, ವಿಗ್ನೇಶ್ ಡೊಂಗ್ರೆ, ಪಾರ್ವತಿ ಡೊಂಗ್ರೆ, ಇತರೆ ಆಸಕ್ತಿ ವ್ಯಕ್ತಿಗಳು – ಕಾರ್ಕಳ ಪಿಎಲ್‌ಡಿ ಬ್ಯಾಂಕ್
15	430/11	ಖಾಸಗಿ	ಖುಷ್ಕಿ	0.0202	ರಾಜೇಂದ್ರ ಪ್ರಭು ಅಲಿಯಾಸ್ ರಾಘವೇಂದ್ರ ಪ್ರಭು S/O ಸುಬ್ರಾಯ ಪ್ರಭು, ಇತರ ಆಸಕ್ತಿ ವ್ಯಕ್ತಿಗಳು – ಸಿಂಡಿಕೇಟ್ ಬ್ಯಾಂಕ್ ಬಾಜಗೊಳಿ
16	433/4	ಖಾಸಗಿ	ಖುಷ್ಕಿ	0.089	ಹೇಮಾವತಿ ನಾಯಕ್, ಮಂಜುಳ, ಅಶೋಕ್ ನಾಯಕ್, ಹರೀಶ್ ನಾಯಕ್, ಸಾವಿತ್ರಿ, ಇತರ ಆಸಕ್ತಿ ವ್ಯಕ್ತಿಗಳು – ಮಾಲ ಕೇರ್ವಶೆ ವಿಎಸ್‌ಎಸ್‌ಎಸ್ ಮಾಲ, ಕಾರ್ಕಳ ಪಿಎಲ್‌ಡಿ ಬ್ಯಾಂಕ್ & ಎಸ್‌ಸಿಡಿಸಿಸಿ ಬ್ಯಾಂಕ್
17	505/1	ಖಾಸಗಿ	ಖುಷ್ಕಿ	0.0182	ಪ್ರೇಮ, ಚಿನ್ನಮ್ಮ
18	505/2	ಖಾಸಗಿ	ಖುಷ್ಕಿ	0.0121	ಸರ್ಕಾರಿ
19	505/3	ಖಾಸಗಿ	ಖುಷ್ಕಿ	0.0647	ಸತೀಶ್ ನಾಯಕ್, ಕೇಶವ ನಾಯಕ್, ಗೀತಾ ಅಲಿಯಾಸ್ ಗುಲಾಬಿ, ಲಲಿತ, ಶಾಂತ, ಅಶೋಕ್ ನಾಯಕ್, ಇತರ ಆಸಕ್ತಿ ವ್ಯಕ್ತಿಗಳು – ಎಸ್‌ಸಿಡಿಸಿಸಿ ಬ್ಯಾಂಕ್ ಮತ್ತು ಪಿಎಲ್‌ಡಿ ಬ್ಯಾಂಕ್ ಕಾರ್ಕಳ
20	506	ಖಾಸಗಿ	ಖುಷ್ಕಿ	0.1143	ಸರ್ಕಾರಿ, ಮೀನಾಕ್ಷಿ ಗೌಡ್ತಿ, ಜಯಕಾರ್ ಗೌಡ, ಸುಮತಿ ರವಿ, ಜಯಂತಿ, ಇತರ ಆಸಕ್ತಿ ವ್ಯಕ್ತಿಗಳು –ಎಲ್‌ಎಎಂಪಿಎಸ್ ಸೊಸೈಟಿ ಕಾರ್ಕಳ
21	510/1	ಖಾಸಗಿ	ಖುಷ್ಕಿ	0.0769	ವಸಂತಿ, ಸುಜಾತ, ರಾಜೇಶ್, ಸುನಿತ, ದಿನೇಶ್ ನಾಯಕ್
22	510/10	ಖಾಸಗಿ	ಖುಷ್ಕಿ	0.0475	ಮಾಲತಿ ನಾಯಕ್, ಇತರ ಆಸಕ್ತಿ ವ್ಯಕ್ತಿಗಳು – ನವೋದಯ ಮಲ್ಟಿಪರ್ಪಸ್ ಎಸ್‌ಎಸ್‌ಎಲ್ ಕಾರ್ಕಳ
23	510/11	ಖಾಸಗಿ	ಖುಷ್ಕಿ	0.0405	ದಿವಾಕರ್ ನಾಯಕ್
24	510/12	ಖಾಸಗಿ	ಖುಷ್ಕಿ	0.0354	ಕುಶಾಲ
25	510/13	ಖಾಸಗಿ	ಖುಷ್ಕಿ	0.0182	ಶಾಲಿನಿ ನಾಯಕ್
26	510/4	ಖಾಸಗಿ	ಖುಷ್ಕಿ	0.0303	ಶ್ರೀಮತಿ ಸುಮತಿ, ಇತರ ಆಸಕ್ತಿ ವ್ಯಕ್ತಿಗಳು – ಸಿಂಡಿಕೇಟ್ ಬ್ಯಾಂಕ್ ಕಾರ್ಕಳ
27	510/5	ಖಾಸಗಿ	ಖುಷ್ಕಿ	0.0486	ಶ್ರೀಮತಿ ಪ್ರೇಮ
28	510/6	ಖಾಸಗಿ	ಖುಷ್ಕಿ	0.0536	ಶ್ರೀಮತಿ ಸುಮತಿ, ಶ್ರೀಮತಿ ಪ್ರೇಮ
29	573/1	ಖಾಸಗಿ	ಖುಷ್ಕಿ	0.0779	ರಾಜೀವಿ, ಸುಮಿತ್ರ, ರತಿ, ಸುಂದರ, ನಾಗಣ್ಣ, ಶೇಖರ
30	64/2ಎ2	ಖಾಸಗಿ	ತರಿ	0.0828	ಸಂಜೀವ ಹೆಗ್ಡೆ S/o ಬಾಬಣ್ಣ ಹೆಗ್ಡೆ, ಸಾಧು ಹೆಗ್ಡೆ, ಅಣ್ಣಿ, ಸೋಮವತಿ, ನಾರಾಯಣ, ಪ್ರಭಾಕರ, ಪ್ರೀತಿ, ಶೃತಿ, ಶ್ವೇತ, ಅಕ್ಷತ
31	64/2ಬಿ1	ಖಾಸಗಿ	ತರಿ	0.004	ಪ್ರಶಾಂತ್ ಹೆಗ್ಡೆ, ಇತರ ಆಸಕ್ತಿ ವ್ಯಕ್ತಿಗಳು – ಜ್ಯೋತಿ ಕ್ರೆಡಿಟ್ ಕೊ–ಆಪರೇಟೀವ್ ಸೊಸೈಟಿ ಸನೂರ್, ಮಾಲ ಕೇರ್ವಶೆ ವಿಎಸ್‌ಎಸ್‌ಎಸ್ ಲಿ., ಮಾಲ
32	64/2ಬಿ2	ಖಾಸಗಿ	ತರಿ	0.1537	ಮೈಥಿಲಿ ಅಲಿಯಾಸ್ ರಂಜಿತ ಡೊಂಗ್ರೆ, ವಿಗ್ನೇಶ್ ಡೊಂಗ್ರೆ, ಪಾರ್ವತಿ ಡೊಂಗ್ರೆ ಇತರೆ ಆಸಕ್ತಿ ವ್ಯಕ್ತಿಗಳು – ಕಾರ್ಕಳ ಪಿಎಲ್‌ಡಿ ಬ್ಯಾಂಕ್
33	64/5ಎ1	ಖಾಸಗಿ	ಖುಷ್ಕಿ	0.1072	ಸಾಧು ಹೆಗ್ಡೆ, ಅಣ್ಣಿ, ಸೋಮವತಿ, ನಾರಾಯಣ, ಪ್ರಭಾಕರ, ಪ್ರೀತಿ, ಶೃತಿ, ಶ್ವೇತ, ಅಕ್ಷತ
34	64/5ಎ2	ಖಾಸಗಿ	ಖುಷ್ಕಿ	0.0344	ಜಾಯ್ ಕೊಲೆನ್‌ಚೆರಿ ಓಸೆಫ್ S/o ಕೆ ಎ ಓಸೆಫ್
35	64/5ಬಿ	ಖಾಸಗಿ	ಖುಷ್ಕಿ	0.0587	ಬಾಬಣ್ಣ ಹೆಗ್ಡೆ S/o ತಿಮ್ಮಯ್ಯ ಹೆಗ್ಡೆ, ಪ್ರಶಾಂತ್ ಹೆಗ್ಡೆ, ಇತರೆ ಆಸಕ್ತಿ ವ್ಯಕ್ತಿಗಳು – ಜ್ಯೋತಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಸನೂರ್, ಮಾಲ ಕೇರ್ವಶೆ ವಿಎಸ್‌ಎಸ್‌ಎಸ್ ಲಿ., ಮಾಲ
36	64/6	ಖಾಸಗಿ	ತರಿ	0.0202	ಬಾಬಣ್ಣ ಹೆಗ್ಡೆ S/o ತಿಮ್ಮಯ್ಯ ಹೆಗ್ಡೆ, ಪ್ರಶಾಂತ್ ಹೆಗ್ಡೆ, ಇತರೆ ಆಸಕ್ತಿ ವ್ಯಕ್ತಿಗಳು – ಜ್ಯೋತಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಸನೂರ್, ಮಾಲ ಕೇರ್ವಶೆ ವಿಎಸ್‌ಎಸ್‌ಎಸ್ ಲಿ., ಮಾಲ
ಗ್ರಾಮ : ಮಿಯಾರು					
37	257/12	ಖಾಸಗಿ	ಖುಷ್ಕಿ	0.0212	ಶ್ರೀಮತಿ ರಮಣಿ W/o ಎಂ.ಎಸ್ ಪೂಜಾರಿ
38	257/ 1ಎ1ಬಿ1	ಖಾಸಗಿ	ತರಿ	0.0688	ವಾಲ್ಟರ್ ಡಿಸೋಜಾ S/o ಡೇವಿಡ್ ಡಿಸೋಜಾ, ಶ್ರೀಮತಿ ಹಿಲ್ಡಾ ರುದ್ರಿಕ್, ಜಾರ್ಜ್ ಅಶೋಕ್ ಪಿಂಟೋ S/o ಬೆನ್ನಿ ಪಿಂಟೋ, ರಜನಿ D/o ಬಾಬು ಪೂಜಾರಿ, ಜೆರಾಲ್ಡ್ ಮೆಂಡೋಕ, ಲಿಯೋ ಗ್ರೇಗರ್ ಪಿರೇರಾ, ವಿಜಯ S/o ಬಾಬು ಪೂಜಾರಿ, ಕೆ.ಸಿ.ಕುಮಾರನ್ ನಾಯರ್, ಶ್ರೀಮತಿ ದೋರಾ ಡಿಸೋಜಾ, ಡೊಮಿನಿಕ್ ಮೆನೆಜಸ್, ಅಲೋಸಿಯಾಸ್ ಫ್ರಾನ್ಸಿಸ್ ಡಿಸೋಜಾ, ಲಾವಿನ ಡಿಸೋಜಾ, ಕೆ.ಕೃಷ್ಣಪ್ಪ ಕರ್ಕೆರ, ಶ್ರೀಮತಿ ಪುಷ್ಪ, ಹೆಲನ್ ಡೊಮಿನಿಕ್ ಮೆನೆಜಸ್, ಡಾಮಿಶ್ ಮೆನೆಜಸ್, ಡೆರಿಲ್ ಮೆನೆಜಸ್, ಡಿಯೋನ್ ಮೆನೆಜಸ್, ಇತರ ಆಸಕ್ತಿ ವ್ಯಕ್ತಿಗಳು – ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಕಾರ್ಕಳ
39	257/1ಸಿ	ಖಾಸಗಿ	ಖುಷ್ಕಿ	0.0223	ರೀಟಾ ರೊಜಾರಿಯೋ, ಮೆಟಿಲ್ಡಾ ಕ್ಯಾಸ್ಟಲಿನೊ, ಜಾಯ್‌ಸನ್ ಮೆಲ್ವಿನ್
40	257/1ಇ	ಖಾಸಗಿ	ಖುಷ್ಕಿ	0.002	ಪ್ರಭಾಕರ್ ಪ್ರಭು ಆರ್ S/o ವೆಂಕಟೇಶ್ ಪ್ರಭು, ಕೆ.ಕೃಷ್ಣಪ್ಪ ಕರ್ಕೆರ, ಆಲ್‌ಪೋನ್ಸ್ ಡಿ ಅಲ್ಮೆಡ S/o ವೆಲೆರಿಯನ್ ಡಿ. ಅಲ್ಮೆಡ, ಜೆನಿತ ರೋಡ್ರಿಜಸ್, ಸತೀಶ್ ರಾವ್ S/o ವೆಂಕಟೇಶ್ ರಾವ್, ಇತರ ಆಸಕ್ತಿ ವ್ಯಕ್ತಿಗಳು – ಟಿಎಪಿಸಿಎಂಎಸ್ ಕಾರ್ಕಳ, ಎಂಎಸಿ ಟ್ಯಾಕ್ಸ್ ಸಿಆರ್–17/09–10 ಫಾರ್‌ಫಿಟ್ಟೆಡ್
41	257/4	ಖಾಸಗಿ	ಖುಷ್ಕಿ	0.0111	ಅಂತೋನಿ ತೊರೊ S/o ಲಾರೆನ್ಸ್ ತೊರೊ
42	257/7	ಖಾಸಗಿ	ಖುಷ್ಕಿ	0.0121	ಕೆ. ಸುರೇಂದ್ರ ಕಿನಿ S/o ಕೃಷ್ಣ ಕಿನಿ
43	29/6ಎ	ಖಾಸಗಿ	ತರಿ	0.0182	ಕರಿಯ ಪೂಜಾರಿ, ಆನಂದ ಪೂಜಾರಿ, ಅಚ್ಚಣ್ಣ ಪೂಜಾರಿ, ಒಬಯ್ಯ ಪೂಜಾರಿ, ರತನ್, ಸುಂದರ, ಶೇಖರ ಹೊಸಮನೆ ಮಿಯ್ಯಾರು
44	300/3	ಖಾಸಗಿ	ಖುಷ್ಕಿ	0.001	ಕರಿಯ ಪೂಜಾರಿ, ಆನಂದ ಪೂಜಾರಿ, ಅಚ್ಚಣ್ಣ ಪೂಜಾರಿ, ಒಬಯ್ಯ ಪೂಜಾರಿ, ರತನ್, ಸುಂದರ, ಶೇಖರ
45	330/2	ಖಾಸಗಿ	ಖುಷ್ಕಿ	0.0091	ಜಯರಾಮ್ ಶೆಟ್ಟಿ S/o ತಿಮ್ಮಪ್ಪ ಶೆಟ್ಟಿ, ಸರೋಜಿನಿ ಜೆ ಶೆಟ್ಟಿ D/o ಜಯರಾಮ್ ಶೆಟ್ಟಿ
46	330/4	ಖಾಸಗಿ	ಖುಷ್ಕಿ	0.0101	ಜಯರಾಮ್ ಶೆಟ್ಟಿ S/o ತಿಮ್ಮಪ್ಪ ಶೆಟ್ಟಿ, ಸರೋಜಿನಿ ಜೆ ಶೆಟ್ಟಿ D/o ಜಯರಾಮ್ ಶೆಟ್ಟಿ
47	330/5	ಖಾಸಗಿ	ಖುಷ್ಕಿ	0.0243	ಅಪೋಲಿನ್ ಸಿಲ್ವ ಅಲಿಯನ್ ಅಪೋಲಿನ್ ಡಿಸಿಲ್ವ C/o ಆಲ್‌ಬರ್ಟ್ ಡಿಸಿಲ್ವ, ಮೆಬೆಲ್ ಸಿಲ್ವ, ಹೆಲನ್ ಸಿಲ್ವ ಅಲಿಯಾಸ್ ಡಾಮಿನಿಕ್ ಮೆನೆಜಸ್
48	330/6ಬಿ	ಖಾಸಗಿ	NAK	0.0101	ಸಿಮಾನ್ ಡೆನಿಸ್ ಪಿರೆರಾ
49	38/2	ಖಾಸಗಿ	ಖುಷ್ಕಿ	0.001	ಎಂ.ಬಾಬುರಾಯ, ಎಂ ಗಣೇಶ್ S/o ಎಂ. ಬಾಬುರಾಯ, ಎಂ.ಕೃಷ್ಣ, ಎಂ.ಹರಿಶ್ಚಂದ್ರ, ಎಂ.ಅಶೋಕ್, ಎಂ.ಗಣೇಶ್ ರಾವ್, ಜಯಲಕ್ಷ್ಮಿ ಪ್ರಭು, ರಾಘವೇಂದ್ರ ಪ್ರಭು, ರಾಜಾರಾಂ, ರಮಾನಂದ ಪ್ರಭು, ಜ್ಯೋತಿ ಕಾಮತ್, ಸುಜಾತ, ಲಿಕಿತ್, ಸುಶ್ಮಿತ, ಇತರ ಆಸಕ್ತಿ ವ್ಯಕ್ತಿಗಳು – ರಾಜಪುರ ಸರಸ್ವತ್ ಕ್ರೆಡಿಟ್ ಕೋ–ಸೊಸೈಟಿ ಕಾರ್ಕಳ & ಪಿಎಲ್‌ಡಿ ಬ್ಯಾಂಕ್ ಕಾರ್ಕಳ
50	39/1ಎ	ಖಾಸಗಿ	ತರಿ	0.0273	ಎಂ.ಹರಿಶ್ಚಂದ್ರ S/o ಬಾಬುರಾಯ
51	39/2ಎ	ಖಾಸಗಿ	ತರಿ	0.0293	ಎಂ.ಕೃಷ್ಣ S/o ಎಂ.ಬಾಬುರಾಯ
52	40/10	ಖಾಸಗಿ	ಖುಷ್ಕಿ	0.0051	ಅಚಿಜಲಿ ಉಮಾನಾಥ್ W/o ಉಮಾನಾಥ್ ಡಿ, ವೇದವ್ಯಾಸ್ ಮಾಲ ಗೋರೆ S/o ಕೊಚಿ ಪುರುಶೋತಮ್ ಗೋರೆ
53	40/13	ಖಾಸಗಿ	ಖುಷ್ಕಿ	0.0172	ಅಚಿಜಲಿ ಉಮಾನಾಥ್ W/o ಉಮಾನಾಥ್ ಡಿ, ವೇದವ್ಯಾಸ್ ಮಾಲ ಗೋರೆ S/o ಕೊಚಿ ಪುರುಶೋತಮ್ ಗೋರೆ
54	40/1ಸಿ1	ಖಾಸಗಿ	ಖುಷ್ಕಿ	0.0162	ಸುನಿತ ಪೈ, ಸುಗುಣ ಕಾಮತ್, ಎಂ. ವೆಂಕಟರಾಮ ಕಾಮತ್
55	40/2	ಖಾಸಗಿ	ಖುಷ್ಕಿ	0.0405	ಕೃಷ್ಣ ಬಾಯಿ C/o ಸೀತಾರಾಂ ಶಾನ್‌ಬೋಗ್, ರಾಮಯ್ಯ ಶೆಟ್ಟಿ (ಚಾಲಗೇನಿ)
56	40/5ಸಿ1	ಖಾಸಗಿ	ಖುಷ್ಕಿ	0.0142	ಎಂ.ಮುರಳಿಧರ್ ಕಾಮತ್
57	66/16	ಖಾಸಗಿ	ಭಾಗಾಯ್ತು	0.0475	ಸೇಂಟ್ ಡೊಮೆನಿಕ್ ಚರ್ಚ್ ಮಿಯಾರು
58	66/2ಎ	ಖಾಸಗಿ	ಭಾಗಾಯ್ತು	0.0314	ಶ್ಯಾಮ್ ಎಸ್ ಶೆಟ್ಟಿ S/o ನಂದು ಶೆಟ್ಟಿ
59	66/2ಸಿ	ಖಾಸಗಿ	ಭಾಗಾಯ್ತು	0.0101	ಅಂತೋನಿ ಮೆನೆಜಸ್ S/o ಕಾಶ್ಮೀರ್ ಮೆನೆಜಸ್ ಆನಂದ್ S/o ಚಂದು ಮೂಲ್ಯ, ಶ್ರೀಮತಿ ಲಿಲ್ಲಿ ಡಿಸೋಜಾ C/o ಬೆನ್ ಸಿಕೇರಾ, ತೇಜ್‌ಪಾಲ್ ಎಂ.ಜಿನ ಗೌಡ, ಜ್ಯೋತಿ ತೇಜ್‌ಪಾಲ್, ಸ್ಟ್ಯಾನಿ ಲೆವಿಸ್ ಮೆನೆಜಾಸ್ ಇತರ ಆಸಕ್ತಿ ವ್ಯಕ್ತಿಗಳು – ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕಾರ್ಕಳ ಶಾಖೆ
60	66/3ಎ	ಖಾಸಗಿ	ಭಾಗಾಯ್ತು	0.0051	ಆನಂದ್ S/o ಚಂದು ಮೂಲ್ಯ
61	66/7ಎ	ಖಾಸಗಿ	ಭಾಗಾಯ್ತು	0.0081	ಆನಂದ್ S/o ಚಂದು ಮೂಲ್ಯ, ಅಂತೋನಿ ಮೆನೆಜೆಸ್ S/o ಕಾಶ್ಮೀರ್ ಮೆನೆಜಸ್
62	68/1ಎ1	ಖಾಸಗಿ	ಖುಷ್ಕಿ	0.0303	ಬಾಬುರಾಯ ನಾಯಕ್, ಸುಮಿತ್ರ ಪೈ, ರತ್ನ ಭಾಯಿ, ಶ್ರೀನಿವಾಸ ನಾಯಕ್, ವೆಂಕಟೇಶ್ ನಾಯಕ್, ಪಾಂಡುರಂಗ ನಾಯಕ್, ಮಂಜುನಾಥ ನಾಯಕ್, ಸರೋಜಿನಿ ಅಲಿಯಾಸ್ ನಿರ್ಮಲ ಕಾಮತ್, ಸರಸ್ವತಿ ನಾಯಕ್, ನಿರ್ಮಲ ಕಾಮತ್, ನಳಿನಿ ಅಲಿಯಾಸ್ ಅನುರಾಧ, ಸೀತಾರಾಂ ನಾಯಕ್, ಸುಧಾ ಎನ್. ಶೆಣೈ, ಸಂಧ್ಯ ಮೋರೆ, ವೃಂದ ನಾಯಕ್.
63	68/1ಬಿ1	ಖಾಸಗಿ	ತರಿ	0.0101	ಬಾಬುರಾಯ ನಾಯಕ್, ಸುಮಿತ್ರ ಪೈ, ರತ್ನ ಬಾಯಿ, ಶ್ರೀನಿವಾಸ ನಾಯಕ್, ವೆಂಕಟೇಶ್ ನಾಯಕ್, ಪಾಂಡುರಂಗ ನಾಯಕ್, ಮಂಜುನಾಥ ನಾಯಕ್, ಸರೋಜಿನಿ ಅಲಿಯಾಸ್ ನಿರ್ಮಲ ಕಾಮತ್, ಸರಸ್ವತಿ ನಾಯಕ್, ನಿರ್ಮಲ ಕಾಮತ್, ನಳಿನಿ ಅಲಿಯಾಸ್ ಅನುರಾಧ, ಸೀತಾರಾಂ ನಾಯಕ್, ಸುಧಾ ಎನ್. ಶೆಣೈ, ಸಂಧ್ಯ ಮೋರೆ, ವೃಂದ ನಾಯಕ್.
64	68/2ಎ	ಖಾಸಗಿ	NAK	0.0293	ಎಂ.ಮಂಜುನಾಥ್
65	68/3	ಖಾಸಗಿ	ಖುಷ್ಕಿ	0.003	ವಿಜಯ ನಾಯಕ್, ಮೋಹನ್ ಕಾಮತ್, ಏಕನಾಥ್ ಕಾಮತ್, ಮಾಲತಿ ಪೈ, ಮಾಧವ ಕಾಮತ್, ಸುಮನ ಶೆಣೈ, ರಜಿನಿ ಕಾಮತ್, ಗಣೇಶ್ ಕಾಮತ್
66	69/2ಎ	ಖಾಸಗಿ	ಖುಷ್ಕಿ	0.0253	ಹೆಚ್.ವಿಠ್ಠಲ್ ಪೈ, ಗೋಪಾಲ್ ಕೃಷ್ಣ ನಾಯಕ್ (ಮೂಲಗೇನಿ), ಆರ್. ನರಸಿಂಹ ಶೆಣೈ, ಆರ್.ವಾಸುದೇವ ಶೆಣೈ, ಪಾಂಡುರಂಗ ವಿ. ನಾಯಕ್
67	69/4ಎ	ಖಾಸಗಿ	ತರಿ	0.0091	ವಿಠ್ಠಲ್ ಪೈ, ಗೋಪಾಲ್ ಕೃಷ್ಣ ನಾಯಕ್, (ಮೂಲಗೇನಿ), ತುಳಸಿ ಅಮ್ಮ
ಗ್ರಾಮ : ಮುಡಾರು					
68	158/1	ಖಾಸಗಿ	ಖುಷ್ಕಿ	0.0121	ಕಸ್ತೂರಿ, ರತ್ನವತಿ, ರವೀಂದ್ರ ಕುಮಾರ್, ರಮ್ಯ, ರಶ್ಮಿ, ಇತರೆ ಆಸಕ್ತಿ ವ್ಯಕ್ತಿಗಳು – ಸಿಂಡಿಕೇಟ್ ಬ್ಯಾಂಕ್, ಮಿಯಾರ್ ಮತ್ತು ಸಿವಿಲ್ ನ್ಯಾಯಾಧೀಶರ ಮತ್ತು ಜೆಎಂಎಫ್‌ಸಿ ಹೊಳೆನರಸೀಪುರ ನ್ಯಾಯಾಲಯದ ತೀರ್ಪಿನ ಪ್ರಕಾರ ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ
69	158/3	ಖಾಸಗಿ	ಖುಷ್ಕಿ	0.0081	ಇಂದಿರ ಸಮಗಾರ್ತಿ, ಕೃಷ್ಣ, ಚಂದ್ರಶೇಖರ ಸಮಾಗರ, ವಸಂತ, ರಘುವೀರ, ರವಿಪ್ರಸಾದ್, ಭಾರತಿ
70	158/4	ಖಾಸಗಿ	ಖುಷ್ಕಿ	0.0091	ಹೇಮಾ, ಮಂಜುಳ, ಮಮತ ಎಸ್, ಮಂಗಳ ಎಸ್, ಶುಭ ಎಸ್, ಚಂದ್ರಿಕ ಎಸ್, ಇತರೆ ಆಸಕ್ತಿ ವ್ಯಕ್ತಿಗಳು – ಮುಡಾರು ಗ್ರಾಮ ಪಂಚಾಯತ್
71	158/5	ಖಾಸಗಿ	ಖುಷ್ಕಿ	0.0111	ರಾಜೀವ ಗೌಡ S/o ಪದ್ಮಯ್ಯ ಗೌಡ
72	158/6	ಖಾಸಗಿ	ಖುಷ್ಕಿ	0.0142	ಅಚ್ಚುತ ಗೌಡ S/o ಪದ್ಮಯ್ಯ ಗೌಡ, ಇತರೆ ಆಸಕ್ತಿ ವ್ಯಕ್ತಿಗಳು – ರಾಜಾಪುರ ಸರಸ್ವತ್ ಕ್ರೆಡಿಟ್ ಕೋ–ಸೊಸೈಟಿ ಬಾಜಗೊಲಿ
73	158/7	ಖಾಸಗಿ	ಖುಷ್ಕಿ	0.0152	ವಿನಯ ಪಾಲ್, ವಿಜಯ S/o ಅಚ್ಚುತ ಗೌಡ
74	158/8	ಖಾಸಗಿ	ಖುಷ್ಕಿ	0.0202	ವಾಸು ಗೌಡ, ದಿನೇಶ್ ರುಕ್ಮ ಗೌಡಾಸ್ ಮಕ್ಕಳು
75	158/9	ಖಾಸಗಿ	ಖುಷ್ಕಿ	0.0121	ಶೀನಾ ಗೌಡ ಅಲಿಯಾಸ್ ಶೀನಾ ಸಮಗರ
76	171/1ಎ2	ಖಾಸಗಿ	ಖುಷ್ಕಿ	0.001	ನಜುಬುನಿಸ W/o ಅಬ್ದುಲ್ ಗನಿಸಾಬ್ ಕರ್ಮಾರ್‌ಕಟ್ಟೆ
77	171/1ಎ5	ಖಾಸಗಿ	ಖುಷ್ಕಿ	0.0101	ವಿನ್ನಿಫ್ರೆಡ್ ಗ್ರೇಸಿ ಪಿಂಟೋ, ಎಲ್ವಿನ ರೀನ ಕಾರ್‌ಡೆಜೊ, ಗ್ರೇಶನ್ ಫ್ರಾನ್ಸಿಸ್ ಕಾರ್‌ಡೆಜೊ, ರೆಯಾನ್ ರಾಬಿನ್ ಕಾರ್‌ಡೆಜೊ
78	171/1ಎ6	ಖಾಸಗಿ	NAK	0.0061	ಲ್ಯಾನ್ಸಿ ರಾಬರ್ಟ್ ಕಾರ್‌ಡೆಜೊ C/o ರಾಬರ್ಟ್ ಕಾರ್‌ಡೆಜೊ
79	171/1ಸಿ	ಖಾಸಗಿ	NAK	0.0152	ಯಶೋಧ D/o ಲಿಂಗಪ್ಪ ಶೆರಿಗರ್
80	171/2ಸಿ	ಖಾಸಗಿ	ಖುಷ್ಕಿ	0.0445	ವೀಣಾ ಎಸ್ ಶೆಟ್ಟಿ W/o ಶಿವಾನಂದ ಶೆಟ್ಟಿ, ಶಿವಪ್ರಸಾದ್ ಸನೂರು
81	171/3ಎ	ಸಾಮಾನ್ಯ (ಖಾಸಗಿ/ ಸರ್ಕಾರಿ)	ಖುಷ್ಕಿ	0.0243	ಸರ್ಕಾರಿ, ಹೆಚ್ ವೆಂಕಟೇಶ್ ಪ್ರಭು S/o ಮಂಜುನಾಥ್ ಪ್ರಭು ಬೆಂಗಳೂರು, ಕೆ. ಮೋಹನ್‌ದಾಸ್ ಪೈ S/o ವೆಂಕಟೇಶ್ ಪೈ ಕಾರ್ಕಳ, ಲೂಸಿ ಕರ್ರೋಜ W/o ರಾಬರ್ಟ್ ಕರ್ರೋಜ, ವೀಣಾ ಎಸ್ ಶೆಟ್ಟಿ W/o ಶಿವಾನಂದ ಶೆಟ್ಟಿ, ಶಿವಪ್ರಸಾದ್ ಸನೂರ್
82	171/4	ಖಾಸಗಿ	ಖುಷ್ಕಿ	0.0061	ಸಿರಿಲ್ ಕರ್ರೋಜ C/o ರಾಬರ್ಟ್ ಕರ್ರೋಜ, ಇತರೆ ಆಸಕ್ತಿ ವ್ಯಕ್ತಿಗಳು – ಸಿಂಡಿಕೇಟ್ ಬ್ಯಾಂಕ್ ಬಜಗೊಲಿ
83	171/5	ಖಾಸಗಿ	ಖುಷ್ಕಿ	0.004	ವಿನಿಫ್ರೆಡ್ ಗ್ರೇಸಿ ಪಿಂಟೋ, ಎಲ್ವಿನ ರೀನಾ ಕರ್ರೋಜಾ, ಗ್ರೆಶನ್ ಕರ್ರೋಜಾ ಗ್ರಾಶನ್ ಫ್ರಾನ್ಸಿಸ್ ಕರ್ರೋಜಾ, ರಿಯಾನ್ ರಾಬಿನ್ ಕರ್ರೋಜಾ
84	176/1	ಖಾಸಗಿ	ಖುಷ್ಕಿ	0.004	ಪದ್ಮರಾಜ್ ಹೆಗ್ಡೆ, ಚಂದ್ರರಾಜ್ ಹೆಗ್ಡೆ, ಡಿ ಯುವರಾಜ್ ಹೆಗ್ಡೆ, ಪಂಡಿರಾಜ್ ಹೆಗ್ಡೆ, ಕುಸುಮಾಜಿ, ಚಂದ್ರಮ್ಮ, ಕೃಷ್ಣಪ್ಪ ಭಂಡಾರಿ S/o ಕೂಕ್ರ ಭಂಡಾರಿ, ಬಿನಾಯ್ ಅಂತೋನಿ S/o ಅಂತೋನಿ ಸತೀಶ್ ಭಟ್ S/o ನಾರಾಯಣ ಭಟ್, ಅಶೋಕನಾಡ ಅಜ್ರಿ, ಜಯಮ್ಮ, ಇಂದಿರಾ, ಅಶ್ವಿನಿ, ಅಕ್ಷತಾ, ಆಶಾಲತ, ಇತರೆ ಆಸಕ್ತಿ ವ್ಯಕ್ತಿಗಳು – ಕಾರ್ಪೊರೇಷನ್ ಬ್ಯಾಂಕ್ ಮಾಳ
85	176/10	ಖಾಸಗಿ	ಖುಷ್ಕಿ	0.0051	ಪ್ರಕಾಶ್ ಮಡಿವಾಳ S/o ಶಾಂತ ಇತರೆ ಆಸಕ್ತಿ ವ್ಯಕ್ತಿಗಳು –ಗುರು ಮಚಿದೇವ ಮಲ್ಟಿ ಪರ್ಪೋಸ್ ಕೊ–ಆಪರೇಟೀವ್ ಸೊಸೈಟಿ ಲಿ., ಬಜಗೊಲಿ, ಕಾರ್ಕಳ ಪಿಎಲ್‌ಡಿ ಬ್ಯಾಂಕ್ ಅಂಡ್ ಮಾಲ ಕೇರ್ವಶೆ ವಿಎಸ್‌ಎಸ್ ಲಿ., ಟಿಎಪಿಸಿಎಂಎಸ್ ಕಾರ್ಕಳ
86	176/12	ಖಾಸಗಿ	ಖುಷ್ಕಿ	0.0111	ಅಶೋಕ್ ಭಂಡಾರಿ S/o ಸುಂದರ ಭಂಡಾರಿ
87	176/13	ಖಾಸಗಿ	ಖುಷ್ಕಿ	0.0202	ಟಾಮ್ ಜೋಸೆಫ್ S/o ಕೆ.ಟಿ. ಜೋಸೆಫ್
88	176/16	ಖಾಸಗಿ	ಖುಷ್ಕಿ	0.0445	ಸಿ ಎಂ ಜಾಯ್ S/o ಜೆ ಜೆ ಮೈಕಲ್
89	176/17	ಖಾಸಗಿ	ಖುಷ್ಕಿ	0.0091	ಪ್ರದೀಪ್ ಕುಮಾರ್ S/o ಶಾಂತಿರಾಜ್ ಭಂಡಾರಿ
90	176/18	ಖಾಸಗಿ	ಖುಷ್ಕಿ	0.0162	ಪ್ರದೀಪ್ ಕುಮಾರ್ S/o ಶಾಂತಿರಾಜ್ ಭಂಡಾರಿ

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರ ಕಾರ್ಯಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಶಾಂತಿನಿಲಯ, ಕಾನ್ವೆಂಟ್ ಜಂಕ್ಷನ್ ಮಡಿಕೇರಿ, ಕೊಡಗು ಜಿಲ್ಲೆ–571201
email: dcpokodagu@gmail.com | ದೂರವಾಣಿ: 08272–228800

ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ಮಡಿಕೇರಿಯ ಸರ್ಕಾರಿ ಬಾಲಮಂದಿರಗಳಲ್ಲಿ ಪ್ರಸ್ತುತ ಪೋಷಣೆ ಹಾಗೂ ರಕ್ಷಣೆ ಪಡೆಯುತ್ತಿರುವ **ಕು॥ ವಿಶಾಲ್ ಆರ್. ಕು॥ ಅಂಕಿತಾ ಆರ್.** ಹಾಗೂ **ಕುಮಾರ** ಈ ಮಕ್ಕಳ ಪೋಷಕರು ಹಾಗೂ ಸಂಬಂಧಿಕರು ಇದುವರೆಗೂ ಪತ್ತೆಯಾಗಿರುವುದಿಲ್ಲ. ಈ ಮಗುವಿನ ಪೋಷಕರು ಅಥವಾ ಸಂಬಂಧಿಕರು ಯಾರಾದರೂ ಇದ್ದಲ್ಲಿ ಕೂಡಲೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಛೇರಿ, ಶಾಂತಿ ನಿಲಯ ಕಾನ್ವೆಂಟ್ ಜಂಕ್ಷನ್, ಮಡಿಕೇರಿ ಹಾಗೂ ದೂರವಾಣಿ: 08272–228800ಯನ್ನು ಸಂಪರ್ಕಿಸಲು ತಿಳಿಯಪಡಿಸಲಾಗಿದೆ. ಮಗುವಿನ ಪೋಷಕರು ಯಾರೂ ಬಾರದಿದ್ದಲ್ಲಿ ಈ ಮಗುವನ್ನು ಕಾನೂನು ಪ್ರಕಾರ ದತ್ತು ನೀಡಲು ಕ್ರಮಕೈಗೊಳ್ಳಲಾಗುವುದು.



ಕು॥ ವಿಶಾಲ್ ಆರ್.
ವಯಸ್ಸು ಸಂಸ್ಥೆಗೆ ಬಂದಾಗ: 08 ವರ್ಷ, ಪ್ರಸ್ತುತ ವಯಸ್ಸು: 13 ವರ್ಷ ತಂದೆಯ ಹೆಸರು ರಘು, ತಾಯಿಯ ಹೆಸರು: ದಿ॥ ಸುನೀತ, ದಿನಾಂಕ: 14–06–2019ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ, ಸರ್ಕಾರಿ ಬಾಲಕರ ಬಾಲಮಂದಿರಕ್ಕೆ ದಾಖಲಾಗಿರುತ್ತಾನೆ.
ಮಾತನಾಡುವ ಭಾಷೆ: ಕನ್ನಡ. ಈ ಹಿಂದೆ ವಾಸವಿದ್ದ ವಿಳಾಸ: C/o ಕರವಂಡ ಸುರೇಶ ಕೆ.ಟಿ ದೊಡ್ಡಪುಲಿಕೋಟು ಗ್ರಾಮ ಬಲ್ಲಮಾವಟಿ ಅಂಚೆ, ಮಡಿಕೇರಿ ತಾಲ್ಲೂಕು. ಕೊಡಗು ಜಿಲ್ಲೆ. ಪ್ರಸ್ತುತ 13 ವರ್ಷದ ಕೋಲು ಮುಖ, ಗೋಧಿ ಮೈ ಬಣ್ಣದ ಗಂಡು ಮಗುವಾಗಿರುತ್ತದೆ.



ಕು॥ ಅಂಕಿತಾ ಆರ್.
ವಯಸ್ಸು ಸಂಸ್ಥೆಗೆ ಬಂದಾಗ: 9 ವರ್ಷ 10ತಿಂಗಳು, ಪ್ರಸ್ತುತ ವಯಸ್ಸು: 10 ವರ್ಷ 05 ತಿಂಗಳು. ತಂದೆಯ ಹೆಸರು ರಘು, ತಾಯಿಯ ಹೆಸರು: ದಿ॥ ಸುನೀತ ದಿನಾಂಕ 25–04–2023ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕರ ಬಾಲಮಂದಿರಕ್ಕೆ ದಾಖಲಾಗಿರುತ್ತಾಳೆ
ಮಾತನಾಡುವ ಭಾಷೆ: ಕನ್ನಡ ಕುರುಬ, ಈ ಹಿಂದೆ ವಾಸವಿದ್ದ ವಿಳಾಸ: C/o ಕರವಂಡ ಸುರೇಶ ಕೆ.ಟಿ. ದೊಡ್ಡಪುಲಿಕೋಟು ಗ್ರಾಮ ಬಲ್ಲಮಾವಟಿ ಅಂಚೆ, ಮಡಿಕೇರಿ ತಾಲ್ಲೂಕು. ಕೊಡಗು ಜಿಲ್ಲೆ. ಪ್ರಸ್ತುತ 10 ವರ್ಷದ ದುಂಡು ಮುಖ, ಗೋಧಿ ಮೈ ಬಣ್ಣದ ಹೆಣ್ಣು ಮಗುವಾಗಿರುತ್ತದೆ.

ಬಾಲಕ ಸಂಸ್ಥೆಗೆ ದಾಖಲಾದಾಗ



ಪ್ರಸ್ತುತ ಬಾಲಕನ ಪೋಟೋ



ಬಾಲಕನ ಹೆಸರು:– ಕುಮಾರ
ವಯಸ್ಸು ಸಂಸ್ಥೆಗೆ ಬಂದಾಗ: 3 ವರ್ಷ, ಪ್ರಸ್ತುತ ವಯಸ್ಸು: 13 ವರ್ಷ, ತಂದೆಯ ಹೆಸರು ಕುಮಾರ (ಮಗು ತಿಳಿಸಿರುವಂತೆ), ತಾಯಿಯ ಹೆಸರು: ತಿಳಿದಿರುವುದಿಲ್ಲ.
ದಿನಾಂಕ 15–07–2014 ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕರ ಬಾಲಮಂದಿರಕ್ಕೆ ದಾಖಲಾಗಿರುತ್ತಾನೆ.
ಮಾತನಾಡುವ ಭಾಷೆ: ಕನ್ನಡ, ಈ ಹಿಂದೆ ವಾಸವಿದ್ದ ವಿಳಾಸ: C/o ಜಿ.ಎಂ.ಪ್ರವೀಣ್, ತಂದೆ ಮಂದಪ್ಪ, ಬಿರುನಾಣಿ ಗ್ರಾಮ ಮತ್ತು ಅಂಚೆ, ಪೊನ್ನಂಪೇಟೆ ತಾಲ್ಲೂಕು. ಕೊಡಗು ಜಿಲ್ಲೆ.
ಪ್ರಸ್ತುತ 13 ವರ್ಷದ ಕೋಲು ಮುಖ, ಗೋಧಿ ಮೈ ಬಣ್ಣದ ಗಂಡು ಮಗುವಾಗಿರುತ್ತದೆ.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಡಿಕೇರಿ,
ಕೊಡಗು ಜಿಲ್ಲೆ

1	2	3	4	5	6
91	176/3	ಖಾಸಗಿ	ಖುಷ್ಕಿ	0.0728	ರವಿರಾಜ್ ಅಧಿಕಾರಿ S/o ಆದಿರಾಜ್ ಅಧಿಕಾರಿ, ಮಹಾವೀರ್ ಜೈನ್, ಕೆ ವಸಂತಿ ಭಂಡಾರಿ, ಶ್ರೀಮತಿ ರಜನಿ w/o ರಾಜೇಂದ್ರ ಬಲ್ಲಾಳ್, ರೇಖಾ ಎಸ್ ಭಂಡಾರಿ, ಶಕುಂತಲ ವರ್ಮ, ಮಹಾವೀರ್ ಜೈನ್ ನಲ್ಲೂರು, ಸುಮನ ವರ್ಮ, ವಿನ್ನಿ ಕ್ಯಾತರಿನ್ ಡಿಸೋಜಾ, ವಾಲೀಶ್ ಶೈನ್ ಡಿಸೋಜಾ, ಎಲ್ ರಾಯ್ ಸಿಡ್ನಿ ಡಿಸೋಜಾ, ಮನೀಶ್ ವರ್ಮ ಇತರೆ ಆಸಕ್ತಿ ವ್ಯಕ್ತಿಗಳು – ಎಸ್‌ಸಿಡಿಸಿಸಿ ಬ್ಯಾಂಕ್ ನರವಿ, ಟಿಎಪಿಸಿಎಂಎಸ್ ಕಾರ್ಕಳ
92	176/4	ಖಾಸಗಿ	ಖುಷ್ಕಿ	0.0364	ಕಮಲ ಬಂಡಾರ್ತಿ, ರಮೇಶ್, ಉಷಾ
93	176/6	ಖಾಸಗಿ	ಖುಷ್ಕಿ	0.0182	ಅಶೋಕ್ ಕುಮಾರ್ ಎಂ. S/o ಬುಜಬಲಿ ಮುದ್ಯ
94	176/7	ಖಾಸಗಿ	ಖುಷ್ಕಿ	0.0253	ಶಶಿ ಪ್ರಕಾಶ್ ಪ್ರಭು S/o ಗಣೇಶ್ ಪ್ರಭು
95	176/8	ಖಾಸಗಿ	ಖುಷ್ಕಿ	0.0263	ಚಿಕ್ಕಿ ಬಂಡಾರ್ತಿ, ಜಾಯ್ ಎಲ್ವಿನ್ ಮಾರ್ಟಿಜ್ D/o ಜೆರೊಮ್ ಮಾರ್ಟಿನ್
96	176/9	ಖಾಸಗಿ	ಖುಷ್ಕಿ	0.0243	ದಯಾನಂದ ಆಚಾರ್ಯ S/o ಶೀನಾ ಆಚಾರ್ಯ ಮಿಯಾರು ಇತರೆ ಆಸಕ್ತಿ ವ್ಯಾಕ್ತಿಗಳು – ಕೆನರಾ ಬ್ಯಾಂಕ್, ಕಾರ್ಕಳ
97	201/3ಎ1	ಖಾಸಗಿ	NAK	0.0647	ರಾಮ್‌ಪ್ರಕಾಶ್ ಶೆಟ್ಟಿ S/o ಸುಂದರ ಶೆಟ್ಟಿ, ದಾಮೋದರ್ ಕುಲೆಂಜಿಲೋಡಿ S/o ಬಾಬು ಆಚಾರ್ಯ, ಅಲ್‌ಫೋನ್ಸ್ ನಜೀರತ್ D/o ಲುವಿಸ್ ನಜೀರತ್, ವೆಲೆರಿಯನ್ ಡಿಸೋಜಾ S/o ಡಿನ್ನಿಸ್ ಡಿಸೋಜಾ
98	201/3ಬಿ1	ಖಾಸಗಿ	ಖುಷ್ಕಿ	0.0526	ರಾಮ್‌ಪ್ರಕಾಶ್ ಶೆಟ್ಟಿ S/o ಸುಂದರ ಶೆಟ್ಟಿ, ದಯಾನಂದ ಬಿ ಪೂಜಾರಿ S/o ಬಾಬು ಪೂಜಾರಿ
99	201/3ಬಿ3	ಖಾಸಗಿ	ಖುಷ್ಕಿ	0.0233	ಎಂ ಸಿ ಗೋಪಾಲ್ ಶೆಟ್ಟಿ S/o ಚಂದು ಶೆಟ್ಟಿ
100	201/3ಬಿ4	ಖಾಸಗಿ	ಖುಷ್ಕಿ	0.002	ಶ್ಯಾಮ ಎಸ್ ಶೆಟ್ಟಿ S/o ನಂದು ಶೆಟ್ಟಿ
101	201/3ಬಿ5	ಖಾಸಗಿ	NAK	0.0111	ಎಂ ಡಿ ವಸಂತ S/o ದೇವಪಾಲ್ ಜೈನ್
102	201/3ಬಿ6	ಖಾಸಗಿ	ಖುಷ್ಕಿ	0.004	ಸಂತೋಶ್ ಪೂಜಾರಿ S/o ರಾಜು ಪೂಜಾರಿ, ಇತರೆ ಆಸಕ್ತಿ ವ್ಯಕ್ತಿಗಳು – ರಾಜಪುರ ಸರಸ್ವತ್ ಕ್ರೆಡಿಟ್ ಕೊ ಸೊಸೈಟಿ ಬಜಗೋಲಿ
103	206/2ಎ1	ಖಾಸಗಿ	ಖುಷ್ಕಿ	0.001	ಶಾಕುಂತಲ @ ಜಯಶ್ರೀ ಭಟ್ C/o ಮಾಧವ ಕಾಮತ್, ರೊನಾಲ್ಡ್ ನೆರಿ ಪಿರೇರ S/o ಜಾನ್ ಪಿರೇರ
104	206/2ಎ15	ಖಾಸಗಿ	ಖುಷ್ಕಿ	0.0081	ಫ್ರಕ್‌ಸಿಡಿಸ್ ಮೆನೆಜಸ್ S/o ಫ್ರಾನ್ಸಿಸ್ ಮೆನೆಜಸ್
105	206/ 2ಎ16	ಖಾಸಗಿ	ಖುಷ್ಕಿ	0.0081	ಭಾಸ್ಕರ್ ಮಾಹಾಬಲ ಶೆಟ್ಟಿ S/o ಮಾಹಾಬಲ ಶೆಟ್ಟಿ, ಮಲ್ಲಿಕ ಭಾಸ್ಕರ್ ಶೆಟ್ಟಿ D/o ಭಾಸ್ಕರ್ ಮಾಹಬಲ ಶೆಟ್ಟಿ
106	206/2ಎ2	ಖಾಸಗಿ	ಖುಷ್ಕಿ	0.0081	ಭಾಸ್ಕರ್ ಮಾಹಾಬಲ ಶೆಟ್ಟಿ S/o ಮಾಹಾಬಲ ಶೆಟ್ಟಿ,
107	206/2ಬಿ	ಖಾಸಗಿ	NAK	0.0091	ಕುಶಾಲ ಜೆ ಶೆಟ್ಟಿ C/o ಗೋಪಿನಾಥ್, ಪ್ರಕಾಶ್ ವಿ ಕಾಮತ್ S/o ವಿಠ್ಠಲ್ ಕಾಮತ್, ಇತರೆ ಆಸಕ್ತಿ ವ್ಯಕ್ತಿಗಳು – ಟಿಎಪಿಸಿಎಂಎಸ್ ಕಾರ್ಕಳ
108	206/4	ಖಾಸಗಿ	ಖುಷ್ಕಿ	0.0283	ಶಿವಚಂದ್ರ ಸುಬ್ಬಣ್ಣ ಶೆಟ್ಟಿ S/o ಸುಬ್ಬಣ್ಣ ಶೆಟ್ಟಿ, ತ್ರಿವೇಣಿ ಶಿವಚಂದ್ರ ಶೆಟ್ಟಿ
109	222/54	ಖಾಸಗಿ	ಖುಷ್ಕಿ	0.0061	ರೋಲಿತಾ ಡಿಸೋಜಾ D/o ಅಂತೋನಿ ಮೆನ್‌ಡೋನ್ಕಾ
110	222/55	ಖಾಸಗಿ	ಖುಷ್ಕಿ	0.003	ಟೆಲ್ಮಾ ಪ್ರಿಯಾ ಮೆಂಡೋನ್ಕಾ, ರೆಲ್ವಿಯಾ ಪ್ರವಿತ ಮೆನ್‌ಡೋನ್ಕಾ, ರೀವನ್ ಪ್ರಿನ್ಸೆಸ್ ಮೆನ್‌ಡೋನ್ಕಾ
111	222/7	ಖಾಸಗಿ	ತರಿ	0.002	ಆಲಿಸ್ ಮೆನ್‌ಡೋನ್ಕಾ ರೋಲಿತ ಮೆನ್‌ಡೋನ್ಕಾ, ಟೆಲ್ಮಾ ಪ್ರಿಯಾ ಮೆಂಡೋನ್ಕಾ, ರೆಲ್ವಿಯಾ ಪ್ರವಿತ ಮೆನ್‌ಡೋನ್ಕಾ, ರೀವನ್ ಪ್ರಿನ್ಸೆಸ್ ಮೆನ್‌ಡೋನ್ಕಾ
112	222/8ಎ	ಖಾಸಗಿ	ಖುಷ್ಕಿ	0.004	ವಿಮಲ ಪಿ, ಸುಜಯ, ಸುಕೀರ್ತಿ, ಇತರೆ ಆಸಕ್ತಿ ವ್ಯಕ್ತಿಗಳು – ಎಸ್‌ಸಿಡಿಸಿಸಿ ಬ್ಯಾಂಕ್ ಬಜಗೋಲಿ
113	222/8ಬಿ	ಖಾಸಗಿ	ಭಾಗಾಯ್ತು	0.004	ವಸಂತ ಎಸ್ ರಾವ್ S/o ಶ್ರೀನಿವಾಸ್ ಶರ್‌ವೀಗರ್, ಇತರೆ ಆಸಕ್ತಿ ವ್ಯಕ್ತಿಗಳು – ಕರ್ನಾಟಕ ಬ್ಯಾಂಕ್ ಬಜಗೋಲಿ
114	227/ 1ಎ1ಎ	ಖಾಸಗಿ	ಖುಷ್ಕಿ	0.0182	ಕಿಟ್ಟಿ, ಮೋಹನ, ಅಶೋಕ್ ಕುಮಾರ್, ನಿತ್ಯಾನಂದ, ರಘುಚಂದ್ರ, ಅರುಣಾಕ್ಷಿ
115	227/5	ಖಾಸಗಿ	ಖುಷ್ಕಿ	0.0081	ಜಲಜ ಭೋಜ ಮಡಿವಾಳ, ಚಂದ್ರಶೇಖರ್ ಮಡಿವಾಳ, ದಿವಾಕರ, ಪ್ರಮಿಳ, ಶಕುಂತಲ, ಮಮತ, ಇತರೆ ಆಸಕ್ತಿ ವ್ಯಕ್ತಿಗಳು – ಮಾಲ ಕೇರ್ವಶೆ ವಿಎಸ್‌ಎಸ್ ಲಿ.,
116	229/1ಎ5	ಖಾಸಗಿ	ಖುಷ್ಕಿ	0.0061	ಸಂಗೀತ ಹೆಗ್ಡೆ W/o ಅಜಿತ್ ಕುಮಾರ್ ಜೈನ್
117	229/3ಎ1	ಖಾಸಗಿ	ಖುಷ್ಕಿ	0.0162	ಯಾಸ್ಮಿನ್ ಎನ್ ಶೇಕ್ W/o ನಾಸಿರ್ ಅಹಮದ್
118	229/3ಎ2	ಖಾಸಗಿ	ಖುಷ್ಕಿ	0.0324	ಪದ್ಮನಾಭ್ ನಾಯಕ್ S/o ನಾರ್ನು ನಾಯಕ್
119	248/1ಸಿ	ಖಾಸಗಿ	ಖುಷ್ಕಿ	0.0081	ಎ ವಿಠ್ಠಲರಾಯ ಹೆಗ್ಡೆ S/o ಅಂಕಡಿ ಲಕ್ಷ್ಮಣ ಹೆಗ್ಡೆ, ಇತರೆ ಆಸಕ್ತಿ ವ್ಯಕ್ತಿಗಳು – ಸಂಪತ್ ಕುಮಾರ್ S/o ಎಂ ನಾರಾಯಣ್ ನಾಯಕ್, ರಾಘವೇಂದ್ರ ಹೆಗ್ಡೆ S/o ರವಿ ಹೆಗ್ಡೆ, ನಾರಾಯಣ್, ಸುಧೀರ್ ಭಟ್ S/o ಸುರೇಶ್ ಭಟ್, ಇತರೆ ಆಸಕ್ತಿವುಳ್ಳ ವ್ಯಕ್ತಿಗಳು – ಕಾರ್ಪೊರೇಷನ್ ಬ್ಯಾಂಕ್ ಕಾರ್ಕಳ
120	296/5	ಖಾಸಗಿ	ಖುಷ್ಕಿ	0.0131	ಮಾಹಾವೀರ್ ಜೈನ್ ನಲ್ಲೂರು
121	321/5	ಖಾಸಗಿ	ಖುಷ್ಕಿ	0.0486	ಆಶಾ ಜೋಸ್ D/o ಜೋಸ್ ವರ್ಗೀಸ್ ಇತರೆ ಆಸಕ್ತಿವುಳ್ಳ ವ್ಯಕ್ತಿಗಳು – ಫೆಡೆರಲ್ ಬ್ಯಾಂಕ್ ಕಾರ್ಕಳ
122	377/19	ಖಾಸಗಿ	ಖುಷ್ಕಿ	0.0314	ಗುಣಪಾಲ್, ಶುಭಾಶ್‌ಚಂದ್ರ, ಸುಮತಿ ಸುಮನ
123	377/20ಎ1	ಖಾಸಗಿ	ಖುಷ್ಕಿ	0.0566	ಗುಣಪಾಲ್, ಶುಭಾಶ್‌ಚಂದ್ರ, ಸುಮತಿ ಸುಮನ
124	377/20ಸಿ1	ಖಾಸಗಿ	ಖುಷ್ಕಿ	0.0263	ಭಂಡಾರಿ ವನಿತ ಗಣೇಶ್ W/o ಗಣೇಶ್ ಶೆಟ್ಟಿ
125	377/21ಸಿ1	ಖಾಸಗಿ	ಖುಷ್ಕಿ	0.0253	ಆಶಾ ಜಿ ಪೈ ಇತರೆ ಆಸಕ್ತಿವುಳ್ಳ ವ್ಯಕ್ತಿಗಳು – ಮಾಲ ಕರ್ವಶೆ ವಿಎಸ್‌ಎಸ್‌ಎಸ್ ಲಿ.,
126	377/21ಸಿ2	ಖಾಸಗಿ	ಖುಷ್ಕಿ	0.0091	ಭಂಡಾರಿ ವನಿತ ಗಣೇಶ್ C/o ಗಣೇಶ್ ಶೆಟ್ಟಿ
127	399/2	ಖಾಸಗಿ	ಖುಷ್ಕಿ	0.4844	ಕಮಲ ಆಚಾರ್ತಿ D/o ಸುಬ್ಬಯ್ಯ ಆಚಾರಿ, ಮೋನ್ತಿ ಮೇರಿ ಫರ್ನ್ನಾಂಡಿಸ್, ಇತರೆ ಆಸಕ್ತಿವುಳ್ಳ ವ್ಯಕ್ತಿಗಳು – ಬಿಡಿಜಿ ಕಾರ್ಕಳ
128	399/3	ಖಾಸಗಿ	ಖುಷ್ಕಿ	0.0065	ಕೆ ಪ್ರಭಾಕರ್ ಮುದಾರ್, ಸೀತಾರಾಮ ಶೆಟ್ಟಿ S/o ದೆಜು ಶೆಟ್ಟಿ ಕದರಿ, ಸರ್ಕಾರಿ, ಬೊಗ್ಗು ಕೊರಗ S/o ತಾನಿಯ ಕೊರಗ, ಲಲಿತ ಆಚಾರ್ತಿ W/o ಅನಂತಯ್ಯ ಆಚಾರಿ, ನಾರಾಯಣ ಕೊರಗ S/o ಬುನ್ನು ಕದರಿ, ಅಮಿತ್ ಆನಂದ್ ಬನನ್, ರಾಜು ಶೆಟ್ಟಿ S/o ಬಾಬು ಶೆಟ್ಟಿ, ಶಾಲಿನಿ ನಾಯಕ್ W/o ರಾಜು ನಾಯಕ್, ಸುರೇಶ್ ಆಚಾರಿ S/o ಶೀಲಾ ಆಚಾರಿ, ಇತರೆ ಆಸಕ್ತಿವುಳ್ಳ ವ್ಯಕ್ತಿಗಳು – ರಾಜಾಪುರ್ ಸರಸ್ವತ್ ಕ್ರೆಡಿಟ್ ಕೋ ಸೊಸೈಟಿ ಬಜಗೋಲಿ ಅಂಡ್ ರಾಜೀವ ಗಾಂಧಿ ರೂರಲ್ ಹೌಸಿಂಗ್ ಲಿ., ಕರ್ನಾಟಕ ಸರ್ಕಾರ
129	399/6	ಖಾಸಗಿ	ಖುಷ್ಕಿ	0.1457	ಕೆ ಸಾಯಿರಾಮ್ ಪ್ರಭು
130	399/7	ಖಾಸಗಿ	NAK	0.0081	ಕೆ ಸಾಯಿರಾಮ್ ಪ್ರಭು
131	400/2ಎ1	ಖಾಸಗಿ	ತರಿ	0.0243	ವಿಶ್ವನಾಥ್ ಪ್ರಭು S/o ಉಪೇಂದ್ರ ಪ್ರಭು ಕದರಿ, ಇತರೆ ಆಸಕ್ತಿವುಳ್ಳ ವ್ಯಕ್ತಿಗಳು – ಬಿಡಿಜಿ ಬ್ಯಾಂಕ್
132	400/ 2ಎ2	ಖಾಸಗಿ	ಖುಷ್ಕಿ	0.0971	ಚಾರ್ಲ್ಸ್ ಅಲಿಯಾಸ್ ಚಾರ್ಲಿ ಮಸ್ಕರೆನಾಸ್ S/o ಫ್ರಾನ್ಸಿಸ್ ಮಸ್ಕರೆನಾಸ್
133	400/2ಎ3	ಖಾಸಗಿ	ಖುಷ್ಕಿ	0.0121	ವಿ ಮೋಹನ್ S/o ಒ ಪಿ ವಾಸು
134	400/2ಎ4	ಖಾಸಗಿ	ಖುಷ್ಕಿ	0.0142	ಮಂಜುಳ ಪಿ ಹೆಗ್ಡೆ C/o ಪ್ರಕಾಶ್ ಹೆಗ್ಡೆ
135	400/2ಎ5	ಖಾಸಗಿ	ಖುಷ್ಕಿ	0.0258	ಶುಭಲಕ್ಷ್ಮಿ ಪ್ರಭು, ಗುರುಪ್ರಸಾದ್ ಪ್ರಭು, ಮೇಘ ಪೈ
136	400/2ಎ6	ಖಾಸಗಿ	ಖುಷ್ಕಿ	0.0162	ಕೆ ವಿಶ್ವನಾಥ್ ಪ್ರಭು S/o ಉಪೇಂದ್ರ ಪ್ರಭು
137	400/3	ಖಾಸಗಿ	ಖುಷ್ಕಿ	0.2157	ಪಸ್ಕಲ್ ಡಿಸೋಜಾ S/o ಡೇವಿಡ್ ಡಿಸೋಜಾ
138	400/4ಎ	ಖಾಸಗಿ	ತರಿ	0.105	ಜೆನಿವೀವ್ ಡಿಸೋಜಾ, ಡೆನೋರ ಜೆನಿಶ್ ಡಿಸೋಜಾ, ಅನಿಕೇತ್ ಡಿಸೋಜಾ, ಇತರೆ ಆಸಕ್ತಿವುಳ್ಳ ವ್ಯಕ್ತಿಗಳು – ಪಿಎಲ್‌ಡಿ ಬ್ಯಾಂಕ್ & ಟಿಎಪಿಸಿಎಂಎಸ್ ಕಾರ್ಕಳ
139	414/4ಎ	ಖಾಸಗಿ	ಖುಷ್ಕಿ	0.0081	ಸುನಂದ ಪೂಜಾರ್ತಿ D/o ಲಕ್ಷ್ಮಣ್ ಪೂಜಾರಿ, ಇತರೆ ಆಸಕ್ತಿವುಳ್ಳ ವ್ಯಕ್ತಿಗಳು – ಪಿಎಲ್‌ಡಿ ಬ್ಯಾಂಕ್
140	414/5ಎ2	ಖಾಸಗಿ	ಖುಷ್ಕಿ	0.0081	ಭಾಸ್ಕರ್ ಆಚಾರ್ಯ, ಇತರೆ ಆಸಕ್ತಿವುಳ್ಳ ವ್ಯಕ್ತಿಗಳು – ಮಾಲ ಕೇರ್ವಶಿ ವಿಎಸ್‌ಎಸ್‌ಎಲ್ ಟಿಎಪಿಸಿಎಂಎಸ್ ಕಾರ್ಕಳ
141	467/1ಎ1ಎ	ಖಾಸಗಿ	ಖುಷ್ಕಿ	0.0971	ಹನೀಫಾ ಪರೋಕಿ W/o ಎಂ ಎಸ್ ಪರೋಕಿ
142	47/1ಎ3	ಖಾಸಗಿ	ತರಿ	0.0364	ಮಾಲತಿ, ಸುನಿತ ಅಲಿಯಾಸ್ ಸುಜಾತ, ಮಲ್ಲಿಕ
143	47/1ಎ4	ಖಾಸಗಿ	ತರಿ	0.003	ರೇವತಿ ಎನ್ ರಾಜ್ W/o ನೆಮಿರಾಜ್ ಜೈನ್
144	47/1ಎ5	ಖಾಸಗಿ	ತರಿ	0.003	ರತ್ನ ಆರ್ W/o ಆರ್ ಪಿ ಮೂಲ್ಯ
145	47/1ಎ6	ಖಾಸಗಿ	ತರಿ	0.002	ಮಾಲತಿ, ಸುನಿತ ಮಂಜುನಾಥ್, ಮಲ್ಲಿಕ
146	47/1ಸಿ	ಖಾಸಗಿ	ತರಿ	0.0566	ರವಿ ದೇವಾಡಿಗ
147	50/11ಎ2	ಖಾಸಗಿ	ಖುಷ್ಕಿ	0.0172	ಪ್ರೇಮ ಶೆಡ್ತಿ, ಶೇಖರ್ ಶೆಟ್ಟಿ ಅಂಗಡಿಮನೆ
148	50/11ಸಿ	ಖಾಸಗಿ	ಖುಷ್ಕಿ	0.0303	ಪ್ರೇಮ ಎಸ್ ಶೆಟ್ಟಿ, ಸಂಜೀವ ಶೆಟ್ಟಿ, ಸದಾನಂದ ಶೆಟ್ಟಿ, ಆನಂದಿ ಶೆಟ್ಟಿ, ಶಂಕರ ಶೆಟ್ಟಿ, ರತ್ನ ಶೆಡ್ತಿ, ರವಿ ಶೆಟ್ಟಿ, ಸರೋಜಿನಿ ವಿ ಶೆಟ್ಟಿ, ನಾಗವೇಣಿ ಭವಾನಿ ಶೆಟ್ಟಿ ಎನ್, ರಜನಿ ವಿ ಶೆಟ್ಟಿ
149	50/12ಎ	ಖಾಸಗಿ	ಖುಷ್ಕಿ	0.0121	ಲೂಸಿ ಕರ್ರೋಜಾ W/o ರಾಬರ್ಟ್ ಕರ್ರೋಜಾ ಮುದರು, ಹೆಚ್ ವೆಂಕಟೇಶ್ ಪ್ರಭು S/o ಮಂಜುನಾಥ್ ಪ್ರಭು
150	50/12ಸಿ1	ಖಾಸಗಿ	ಖುಷ್ಕಿ	0.003	ಸಂತೋಷ್ S/o ಸುಂದರ್ ಸಪಾಲಿಗ ಅಲಿಯಾಸ್ ಕಂಚನ್
151	50/12ಸಿ2	ಖಾಸಗಿ	ಖುಷ್ಕಿ	0.0111	ಸತುರಿನ್ ಸಲ್‌ಧಾನ್ S/o ಜಾನ್ ಸಲ್‌ಧಾನ್
152	50/13ಸಿ	ಖಾಸಗಿ	ತರಿ	0.0526	ಸುರೇಶ್ ಬಿ, ಸತೀಶ್
153	50/29	ಖಾಸಗಿ	ಖುಷ್ಕಿ	0.001	ಕಮಲಾ ಶೆಟ್ಟಿ, ಸುಂದರಿ ಶೆಟ್ಟಿ
154	50/33	ಖಾಸಗಿ	ಖುಷ್ಕಿ	0.003	ಅಭಿಶೇಕ್ ಎಸ್ ಶೆಟ್ಟಿ S/o ಶೇಖರ್ ಎಸ್ ಶೆಟ್ಟಿ
155	50/34	ಖಾಸಗಿ	ಖುಷ್ಕಿ	0.0182	ಪ್ರೇಮ ಎಸ್ ಶೆಟ್ಟಿ W/o ಶೇಖರ್ ಎಸ್ ಶೆಟ್ಟಿ
156	50/45	ಖಾಸಗಿ	ಖುಷ್ಕಿ	0.0162	ಸಿಪ್ರಿಯನ್ ಡಿಸೋಜಾ D/o ಥಾಮಸ್ ಡಿಸೋಜಾ
157	50/4ಸಿ	ಖಾಸಗಿ	ತರಿ	0.0162	ಸಿಂಧಿಯಾ ಡಿಸೋಜಾ W/o ಸ್ಟೀಫನ್ ಡಿಸೋಜಾ ಇತರೆ ಆಸಕ್ತಿವುಳ್ಳ ವ್ಯಕ್ತಿಗಳು – ಮಾಲ ಕೇರ್ವಶಿ ವಿಎಸ್‌ಎಸ್‌ಎಸ್ ಲಿ.,
158	50/8ಬಿ3	ಖಾಸಗಿ	ಖುಷ್ಕಿ	0.0486	ಸ್ಟೀಫನ್ ಡಿಸೋಜಾ, ಸಿಂಧಿಯಾ ಡಿಸೋಜಾ
159	71/11	ಖಾಸಗಿ	ಖುಷ್ಕಿ	0.001	ಜಿನರಾಜ್ ಇಂದ್ರ S/o ಬ್ರಹ್ಮಯ್ಯ ಇಂದ್ರ
160	71/12	ಖಾಸಗಿ	ತರಿ	0.0091	ಅರಿನ್‌ಜಯ ಇಂದ್ರ S/o ಜಿನರಾಜ್ ಇಂದ್ರ
161	71/5	ಖಾಸಗಿ	ಖುಷ್ಕಿ	0.002	ಎಂ ಧರ್ಮಪಾಲ್ ಇಂದ್ರ S/o ಬ್ರಹ್ಮಯ್ಯ ಇಂದ್ರ, ಎಂ ನಿರ್ವಾಣ್ ಇಂದ್ರ, ಶ್ರಿ ರತ್ನ
ಗ್ರಾಮ : ಕಾರ್ಕಳ					
162	302/10	ಖಾಸಗಿ	ಖುಷ್ಕಿ	0.0445	ಅಮೀರ್ ಹುಸೇನ್ ದಭೀರ್
163	302/11	ಖಾಸಗಿ	ಖುಷ್ಕಿ	0.0405	ಅಫ್ಜಲ್ ಹುಸೇನ್ ದಭೀರ್
164	302/12	ಖಾಸಗಿ	ಖುಷ್ಕಿ	0.0091	ಆಸ್ಮ ಫಾರಾನ
165	302/3	ಖಾಸಗಿ	NAK	0.0101	ಕೈರುನಿಸ ಅಲ್ತಫ್ ಶೇಕ್, ಅನ್ನಿನ ಬಾನು, ಆಸಿಫ್ ಶೇಕ್, ಹಸಿನಾ ಬಾನು, ಅಸ್ರಫ್ ಶೇಕ್
166	302/4	ಖಾಸಗಿ	NAK	0.0061	ಮಹೋಹರ್ ಮನೋಜ್ ಅನ್ನಿ ಶೆಟ್ಟಿ, S/o ಅನ್ನಿ ಚಿನ್ನಯ್ಯ ಶೆಟ್ಟಿ
167	302/5	ಖಾಸಗಿ	ಖುಷ್ಕಿ	0.0142	ಅಲ್ತಫ್ ಹುಸೇನ್ ದಭೀರ್
168	302/6	ಖಾಸಗಿ	ಖುಷ್ಕಿ	0.0263	ಅಶ್ಫಕ್ ಹುಸೇನ್ ದಭೀರ್
169	302/7	ಖಾಸಗಿ	ಖುಷ್ಕಿ	0.0364	ಇಜಾಜ್ ಹುಸೇನ್ ದಭೀರ್
170	302/8	ಖಾಸಗಿ	ಖುಷ್ಕಿ	0.0415	ಆಸಿಫ್ ಹುಸೇನ್ ದಭೀರ್
171	302/9	ಖಾಸಗಿ	ಖುಷ್ಕಿ	0.0415	ಅನೀಸ್ ಹುಸೇನ್ ದಭೀರ್
172	311/24	ಖಾಸಗಿ	ಖುಷ್ಕಿ	0.0243	ಅಸೀಫ್
173	311/25	ಖಾಸಗಿ	ಖುಷ್ಕಿ	0.0293	ಅಸ್ಮತ್
174	311/26	ಖಾಸಗಿ	ಖುಷ್ಕಿ	0.0243	ಅಸ್ಮಾ ಫರಾನ
175	311/27	ಖಾಸಗಿ	ಖುಷ್ಕಿ	0.002	ಅಫ್ಜಲ್ ಹುಸೇನ್ ದಭೀರ್
176	315/2ಬಿ3	ಖಾಸಗಿ	NAK	0.002	ವೀಣಾ ವಿ ನಾಯಕ್ W/o ಕೆ ವಾಮನ್ ನಾಯಕ್, ಮಲ್ಲಿಕಾ ಆರ್ ಶೆಟ್ಟಿ W/o ರಾಜಶೇಖರ್ ಶೆಟ್ಟಿ, ಸುದೀಪ್ ಆಚಾರ್ಯ S/o ವಿಠ್ಠಲ ಆಚಾರ್ಯ
177	315/2ಬಿ4	ಖಾಸಗಿ	ಖುಷ್ಕಿ	0.003	ರಮಣಿ ಎಂ ಪೂಜಾರಿ D/o ಬಾಡು ಪೂಜಾರಿ
178	315/2ಬಿ5	ಖಾಸಗಿ	ಖುಷ್ಕಿ	0.004	ಕೆ ಕೃಷ್ಣ ಕರ್ಕೆರ S/o ಲೇ. ಬಾಡು ಪೂಜಾರಿ ಮಿಯಾರು
ಗ್ರಾಮ: ಸಾಣೂರು					
179	165/ 5ಎ10	ಸಾಮಾನ್ಯ (ಖಾಸಗಿ/ ಸರ್ಕಾರಿ)	ಖುಷ್ಕಿ	0.0051	ಕೆ ವಿಜಯ ಶೆಟ್ಟಿ S/o ಸೂರಪ್ಪ ಶೆಟ್ಟಿ
180	24/14	ಖಾಸಗಿ	ಭಾಗಾಯ್ತು	0.0081	ಅಲ್ಬನ್ ಎಡ್ವಿನ್ ಡಿಸೋಜಾ S/o ಪೀಟರ್ ಡಿಸೋಜಾ
181	24/15	ಖಾಸಗಿ	ಭಾಗಾಯ್ತು	0.0091	ಅಲ್ಬನ್ ಎಡ್ವಿನ್ ಡಿಸೋಜಾ S/o ಪೀಟರ್ ಡಿಸೋಜಾ
182	24/16	ಖಾಸಗಿ	ಭಾಗಾಯ್ತು	0.0152	ಅಲ್ಬನ್ ಎಡ್ವಿನ್ ಡಿಸೋಜಾ S/o ಪೀಟರ್ ಡಿಸೋಜಾ
183	24/20	ಖಾಸಗಿ	ಭಾಗಾಯ್ತು	0.0506	ಸಜಿದಾ ಬೇಗಂ W/o ಜಾವೆದ್ ಹೆಚ್ ಅರಬ್ಬಿ
184	24/21	ಖಾಸಗಿ	ಭಾಗಾಯ್ತು	0.0111	ರಶೀದಾ ಭಾನು W/o ಅಬ್ದುಲ್ ಹಫೀಜ್
185	24/22	ಖಾಸಗಿ	ಭಾಗಾಯ್ತು	0.0061	ಚಾರ್ಲ್ಸ್ ಡಿಸೋಜಾ
186	24/26	ಖಾಸಗಿ	ಖುಷ್ಕಿ	0.0071	ರೊಮನ್ ಪಿಂಟೋ S/o ಲೇ. ಲಿವಿಸ್ ಪಿಂಟೋ ಮಿಯಾರು, ಇತರೆ ಆಸಕ್ತಿವುಳ್ಳ ವ್ಯಕ್ತಿಗಳು – ಸಿಂಡಿಕೇಟ್ ಬ್ಯಾಂಕ್ ಕಾರ್ಕಳ
187	24/6ಎ1	ಖಾಸಗಿ	ತರಿ	0.0455	ಯೋಗೀಶ್ ಶೆಟ್ಟಿಗರ್ S/o ಶೀನಪ್ಪ ಶೆಟ್ಟಿಗರ್, ಲಾರೆನ್ಸ್ ಡೊಮಿನಿಕ್ ಪಿಂಟೋ, ಮಿಕಲ್ ಪಿಂಟೋ, ಕ್ರಿಂಟನ್ ಐಡ ಸೆರಾವ್, ವೆರೋನಿಕ ಟೆಲಿಸ್, ಮಾರ್ಗೇಟ್ ಪಿಂಟೋ, ಗ್ರೇಸಿ ಪಿಂಟೋ, ಸಿಸ್ಲಿಯ ಕೊರೆಯ, ಶಾಬುದ್ದಿನ್ ಸಾಹೇಬ್ – ಮಲ್ಲಿಕ್ ಸಾಹೇಬ್
188	24/6ಎ2	ಖಾಸಗಿ	ತರಿ	0.0445	ಜುಲೆಕಬಿ ಶೇಕ್ W/o ಶೇಕ್ ಪಚಾ ಸಾಹೇಬ್
189	24/6ಎ3	ಖಾಸಗಿ	ತರಿ	0.0445	ಶಬುದ್ದೀನ್ ಸಾಹೇಬ್ S/o ಮಲ್ಲಿಕ್ ಸಾಹೇಬ್
190	24/7ಎ10	ಖಾಸಗಿ	ಭಾಗಾಯ್ತು	0.003	ಕೈರುನ್ನ ಪುಲ್ಕೇರಿ, ಅಂತೋನಿ ಇಲಿಯಾಸ್ ಡಿಸಿಲ್ವ, ಅರೋನ್ ಮಾನ್ಯುಯಲ್ ಡಿಸಿಲ್ವ, ಅನೊರ ಮುಯೆರಿಯಲ್ ಡಿಸಿಲ್ವ
191	24/7ಎ11	ಖಾಸಗಿ	ಭಾಗಾಯ್ತು	0.0081	ಆಲ್ಬನ್ ಎಡ್ವಿನ್ ಡಿಸೋಜಾ S/o ಪೀಟರ್ ಡಿಸೋಜಾ
192	24/7ಎ12	ಖಾಸಗಿ	ಖುಷ್ಕಿ	0.0111	ಮುಮ್‌ತಾಜ್ ಅಹಮದ್ ಹುಸೇನ್, ನೂರ್‌ಜಹಾನ್ ಅಬ್ದುಲ್ ಕಲಿಕ್, ಹಮಿದಾ ಅಬ್ಬು ಸಬಾನ್, ಕಬೀರ್ ಯುಸಫ್ ಶೇಕ್
193	24/7ಎ5	ಖಾಸಗಿ	NAK	0.0061	ರೊಮನ್ ಪಿಂಟೋ S/o ಲೆವಿಸ್ ಪಿಂಟೋ ಮಿಯಾರು
194	24/7ಎ6	ಖಾಸಗಿ	ಭಾಗಾಯ್ತು	0.0071	ಅರುಣ ಆರ್ ಕುಮಾರ್ W/o ಎಂ ಎನ್ ರಾಜೇಂದ್ರ ಕುಮಾರ್
195	24/7ಬಿ1	ಖಾಸಗಿ	ತರಿ	0.0273	ಅರುಣ ವಾಸುದೇವ್ ಶೆಣೈ, ಸುಜಾತ ಸುರೇಂದ್ರ ಪೈ, ಅರುಣ ಆರ್ ಕುಮಾರ್ W/o ಎಂ ಆರ್ ರಾಜೇಂದ್ರ ಕುಮಾರ್
			ಒಟ್ಟು	5.9823	

[F. No. RW/NH-12037/13/2021-22/KNT Zone-South-I/3D]

ಅಭಯ್ ಜೈನ್, ಉಪ ಕಾರ್ಯದರ್ಶಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಎಲ್ಲಿಯವರೆಗೆ ಜೀವಿಸಿರುತ್ತೇವೆಯೋ ಅಲ್ಲಿಯವರೆಗೂ ಕಲಿಯುತ್ತಲೇ ಇರಬೇಕು.

–ರಾಮಕೃಷ್ಣ ಪರಮಹಂಸ

ನ್ಯಾಯ ಯಾತ್ರೆ: ಕಾರ್ಯತಂತ್ರ ಸಂದೇಶ ಸ್ಪಷ್ಟವಾಗಿರಲಿ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮತ್ತೊಂದು ಯಾತ್ರೆಗೆ ಸಜ್ಜಾಗಿದ್ದಾರೆ. ಈ ಬಾರಿಯ ಯಾತ್ರೆಯ ಹೆಸರು ಮತ್ತು ಶೈಲಿಯಲ್ಲಿ ಸ್ವಲ್ಪ ಬದಲಾವಣೆ ಇದೆ. 'ಭಾರತ್ ಜೋಡೊ ನ್ಯಾಯ ಯಾತ್ರೆ' ಎಂದು ಹೆಸರು ಇರಿಸಲಾಗಿದ್ದು, ಯಾತ್ರೆಯು ದೇಶದ ಪೂರ್ವ ಭಾಗದಿಂದ ಪಶ್ಚಿಮದತ್ತ ಸಾಗಲಿದೆ. ಯಾತ್ರೆಯು ಮಣಿಪುರದಿಂದ ಇದೇ 14ರಂದು ಆರಂಭ ಆಗಿ ಮಾರ್ಚ್ 21ರಂದು ಮುಂಬೈನಲ್ಲಿ ಸಮಾರೋಪಗೊಳ್ಳಲಿದೆ. ಕಳೆದ ಜನವರಿಯಲ್ಲಿ ಪೂರ್ಣಗೊಂಡ 'ಭಾರತ್ ಜೋಡೊ ಯಾತ್ರೆ'ಯು ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದಿತ್ತು. ಯಾತ್ರೆಯಿಂದಾಗಿ ಕೆಲವು ರಾಜ್ಯಗಳ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಅನುಕೂಲ ಆಗಬಹುದು ಎಂದು ಭಾವಿಸಲಾಗಿತ್ತು. ಕರ್ನಾಟಕದಲ್ಲಿ 2023ರ ಮೇ ತಿಂಗಳಲ್ಲಿ ಮತ್ತು ತೆಲಂಗಾಣದಲ್ಲಿ ಅದೇ ವರ್ಷ ನವೆಂಬರ್–ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಪಕ್ಷವು ಗೆಲುವು ಸಾಧಿಸಿದೆ. ಯಾತ್ರೆಯು ಹಾದು ಹೋದ ಪ್ರದೇಶಗಳಲ್ಲಿ ಜನರು ಕಾಂಗ್ರೆಸ್ ಪಕ್ಷಕ್ಕೆ ಹತ್ತಿರವಾದರು ಎಂದು ವಿಶ್ಲೇಷಿಸಲಾಗಿದೆ. ಆದರೆ, ಯಾತ್ರೆ ಸಾಗಿದ ಬೇರೆ ಕೆಲವು ರಾಜ್ಯಗಳಲ್ಲಿ ಪಕ್ಷಕ್ಕೆ ಯಾವುದೇ ಅನುಕೂಲ ಆಗಿಲ್ಲ. ಛತ್ತೀಸಗಢ, ಮಧ್ಯಪ್ರದೇಶ ಮತ್ತು ರಾಜಸ್ಥಾನ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೀನಾಯ ಸೋಲು ಉಂಟಾಗಿದೆ. ಈಗಿನ ಯಾತ್ರೆಯು ರಾಜಕೀಯವಾಗಿ ಭಿನ್ನ ವಾತಾವರಣ ಇರುವ ಪ್ರದೇಶಗಳಲ್ಲಿ ಸಾಗಲಿದೆ. ಲೋಕಸಭೆ ಚುನಾವಣೆಗೆ ಇನ್ನೇನು ಕೆಲವು ತಿಂಗಳುಗಳಷ್ಟೇ ಇವೆ. ಆದರೆ, ಪಕ್ಷದ ಶಕ್ತಿ ಮತ್ತು ಪುನಶ್ಚೇತನಗೊಳ್ಳುವ ಸಾಮರ್ಥ್ಯದ ಬಗ್ಗೆ ಹಲವು ಪ್ರಶ್ನೆಗಳು ಇವೆ.



ಬಿಜೆಪಿಯು ಧ್ರುವೀಕರಣ ರಾಜಕಾರಣ ಮಾಡುತ್ತಿರುವ ಸಂದರ್ಭದಲ್ಲಿ ಒಗ್ಗಟ್ಟಿಗಾಗಿ ಯಾತ್ರೆ ಬೇಕಾಗಿದೆ ಎಂದು ಮೊದಲಿನ ಯಾತ್ರೆಯ ಸಂದರ್ಭದಲ್ಲಿ ಪ್ರತಿಪಾದಿಸಲಾಗಿತ್ತು. 'ಜನರಿಗೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನ್ಯಾಯ' ದೊರಕಿಸಿಕೊಡುವುದಕ್ಕಾಗಿ ಈಗಿನ ಯಾತ್ರೆ ಎಂದು ಕಾಂಗ್ರೆಸ್ ಹೇಳಿದೆ. ಚುನಾವಣಾ ರಾಜಕಾರಣಕ್ಕೂ ಯಾತ್ರೆಗೂ ಯಾವುದೇ ಸಂಬಂಧ ಇಲ್ಲ ಎಂದು ರಾಹುಲ್ ಗಾಂಧಿ ಮೊದಲ ಯಾತ್ರೆ ಸಂದರ್ಭದಲ್ಲಿ ಹೇಳಿದ್ದರು. ಪಕ್ಷವೂ ಅದನ್ನೇ ಪ್ರತಿಪಾದಿಸಿತ್ತು. ಈ ಪ್ರತಿಪಾದನೆಯನ್ನು ಹಲವು ಜನರು ನಂಬಿದ್ದರು. ಈ ಯಾತ್ರೆಯಿಂದಾಗಿ ರಾಹುಲ್ ಅವರ ವರ್ಚಸ್ಸು ಬದಲಾಯಿತು. ನೈತಿಕ ಪ್ರಭಾ ವಲಯವನ್ನು ಹೊಂದಿರುವ ಆಧ್ಯಾತ್ಮಿಕ ಕಳಕಳಿಯೂ ಇರುವ ಶ್ರದ್ಧೆಯ ರಾಜಕಾರಣ ಎಂಬ ಹೆಸರು ಅವರಿಗೆ ಬಂತು. ಯಾತ್ರೆಯು ಜನರಿಗೆ ಇಂತಹುದನ್ನು ಮಾಡುವುದು ನಿಜ. 'ಭಾರತ ಜೋಡೊ ಯಾತ್ರೆ'ಯಲ್ಲಿ ಗಳಿಸಿದ ಎಲ್ಲವನ್ನೂ ಅವರು ಉಳಿಸಿಕೊಂಡಿದ್ದಾರೆಯೇ ಎಂಬುದು ಚರ್ಚಾರ್ಹ. ಆದರೆ, ಯಾತ್ರೆಗೆ ಮೊದಲಿನ ರಾಹುಲ್‌ಗಿಂತ ಯಾತ್ರೆಯ ನಂತರದ ರಾಹುಲ್ ಬೇರೆ ಎಂಬುದು ವಾಸ್ತವ.

ಇದೊಂದು ರಾಜಕೀಯೇತರ ಚಟುವಟಿಕೆ ಎಂದು ಅಪ್ರಾಮಾಣಿಕವಾಗಿ ಸಮರ್ಥಿಸಿಕೊಳ್ಳುವುದು ಕಾಂಗ್ರೆಸ್ ಪಕ್ಷಕ್ಕೆ ಅನುಕೂಲವನ್ನೇನೂ ಮಾಡಿಕೊಡುವುದಿಲ್ಲ

ಮುಂಬರುವ ಯಾತ್ರೆಯು ಈಗಿನ ರಾಜಕೀಯ ಸಂದರ್ಭದಲ್ಲಿ ವೈಯಕ್ತಿಕ ಅಥವಾ ಆಧ್ಯಾತ್ಮಿಕ ಆಗಿರಲು ಸಾಧ್ಯವಿಲ್ಲ. ಮುಂದಿನ ಚುನಾವಣೆಯಲ್ಲಿ ಮುಖ್ಯವಾಗಿ ಪ್ರಸ್ತಾಪವಾಗಬಹುದಾದ ವಿಚಾರಗಳನ್ನೇ ಯಾತ್ರೆ ಕೂಡ ಮುಖ್ಯವಾಗಿ ಇರಿಸಿಕೊಂಡಿದೆ. ಆರು ತಿಂಗಳಿಗೂ ಹೆಚ್ಚಿನ ಅವಧಿಯಿಂದ ಹಿಂಸೆಯಲ್ಲಿ ಕುದಿಯುತ್ತಿರುವ ಮಣಿಪುರದಿಂದ ಯಾತ್ರೆಯು ಆರಂಭವಾಗಲಿದೆ. ಕಾಂಗ್ರೆಸ್ ಪಕ್ಷಕ್ಕೆ ಗಂಭೀರ ಸವಾಲುಗಳು ಇರುವ ರಾಜ್ಯಗಳನ್ನು ಇದು ಹಾದುಹೋಗಲಿದೆ. ಹಾಗಿದ್ದರೂ ಇದೊಂದು ರಾಜಕೀಯೇತರ ಚಟುವಟಿಕೆ ಎಂದು ರಾಹುಲ್ ಆಪ್ತರು ಹೇಳಿದ್ದಾರೆ. ಇಂತಹ ಅಪ್ರಾಮಾಣಿಕ ಮತ್ತು ಆಷಾಢಭೂತಿಯಾದ ಹೇಳಿಕೆಯು ಪಕ್ಷಕ್ಕೆ ಅನುಕೂಲವನ್ನೇನೂ ಮಾಡಿಕೊಡುವುದಿಲ್ಲ. ಇದು ಸಾಮಾಜಿಕ ನ್ಯಾಯ ಅಥವಾ ಪ್ರಗತಿಗಾಗಿ ಇರುವ ಯಾತ್ರೆ ಅಲ್ಲ; ಬಿಜೆಪಿಯ ಅಪಾರ ಶಕ್ತಿಯುತವಾದ, ಚುನಾವಣೆ ಗೆಲ್ಲುವ ವ್ಯವಸ್ಥೆಯನ್ನು ಎದುರಿಸುವುದಕ್ಕಾಗಿ ಜನಬೆಂಬಲ ಒಟ್ಟುಗೂಡಿಸಲು ಹಮ್ಮಿಕೊಂಡಿರುವ ಕಾರ್ಯಕ್ರಮ ಇದು. ಕಾಂಗ್ರೆಸ್ ನಾಯಕರ ನಡವಳಿಕೆ ಮತ್ತು ನೀಡುವ ಸಂದೇಶಗಳು ಈ ದಿಸೆಯಲ್ಲಿ ರೂಪುಗೊಂಡಿರಬೇಕು. ಹೇಳಬೇಕಾದುದನ್ನು ಪ್ರಾಮಾಣಿಕವಾಗಿ ಮತ್ತು ದೃಢವಾಗಿ ಮನದಟ್ಟು ಮಾಡಬೇಕು. ಕಾರ್ಯತಂತ್ರ ಮತ್ತು ನೀಡುವ ಸಂದೇಶದಲ್ಲಿ ಅತ್ಯಂತ ಸ್ಪಷ್ಟತೆ ಇರುವ ರಾಜಕೀಯ ಪಕ್ಷವೊಂದನ್ನು ಸಂದಿಗ್ಧದ ಮತ್ತು ಹುಸಿಯಾದ ಸಂದೇಶ ನೀಡುವಿಕೆ ಮೂಲಕ ಎದುರಿಸುವುದು ಸಾಧ್ಯವಿಲ್ಲ.

ದಿನದ ಟ್ವೀಟ್

ಸಂತಸ ತಾರದ ಸೊಬಗು!



ಸಾಮಾನ್ಯವಾಗಿ ಕಾಫಿ ಹೂ ಅರಳುವ ದಿನವೆಂದರೆ ಅದು ಕಾಫಿ ಬೆಳೆಗಾರರಿಗೆ ಸಂಭ್ರಮದ ದಿನ. ಹಣ್ಣು ಕೊಯ್ಲು ಆದಮೇಲೆ, ಬೇಸಿಗೆಯ ಮೊದಲ ಮಳೆಯಾದ 8-9ನೇ ದಿನಕ್ಕೆ ಹೂವರಳಿ, ಅದರ ಕಂಪು ಮತ್ತು ಸೊಬಗು ಸ್ವರ್ಗವನ್ನು ತೋಟಕ್ಕಿಳಿಸಿಬಿಡುತ್ತವೆ. ಆದರೆ ಈ ಬಾರಿ ಅಕಾಲಿಕ ಮಳೆಯಿಂದ ಕೊಯ್ಲಿಗೆ ಮೊದಲೇ ಹೂವರಳಿವೆ. ಸೊಗಸೇನೋ ಇದೆ ಆದರೆ ಬೆಳೆಗಾರರಿಗೆ ಸಂತಸವಿಲ್ಲ.

ಗಿರೀಶ್ ಕಾರ್ಗದ್ದೆ, ಎಂಜಿನಿಯರ್

ಕಿಡಿನುಡಿ



ರಾಮಮಂದಿರ ಉದ್ಘಾಟನೆಗೆ ಹೋಗುವ ವಿಚಾರದಲ್ಲಿ ಇಷ್ಟು ದಿನಗಳ ಕಾಲ ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ಮಾತನಾಡುತ್ತಿದ್ದ ಸಿದ್ದರಾಮಯ್ಯನವರು ಈಗ ದೀಪಕ್ಕೆ ಗೋಡೆ ಕಟ್ಟಲು ಹೊರಟಿದ್ದಾರೆ. ಕರೆ ಬಂದಿಲ್ಲ, ಕರೆ ಬಂದಿಲ್ಲ ಎನ್ನುತ್ತಿದ್ದವರು ಈಗ ಅಯೋಧ್ಯೆಗೆ ಏಕೆ ಹೋಗಬೇಕು, ಇಲ್ಲಿ ರಾಮನಿಲ್ಲವೇ ಎಂದು ಭಂಡತನದ ಪ್ರಶ್ನೆ ಮುಂದಿಟ್ಟಿದ್ದಾರೆ.

ಸುನಿಲ್ ಕುಮಾರ್, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಮಂಗಳವಾರ, 12-1-1999

• **ರೇಷ್ಮೆ ರೈತರಿಗೆ ಲಾಠಿ ಹೆಗಡೆ ಮನೆಗೆ ದಾಳಿ**

ಬೆಂಗಳೂರು, ಜ. 11 – ವಿದೇಶಗಳಿಂದ ಕಚ್ಚಾ ರೇಷ್ಮೆ ಆಮದು ಮಾಡಿಕೊಳ್ಳುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸಿ ಮಾಜಿ ಸಚಿವ ವೈ.ಕೆ. ರಾಮಯ್ಯ ಅವರ ನೇತೃತ್ವದಲ್ಲಿ ಇಂದು ಇಲ್ಲಿ ಮೆರವಣಿಗೆ ನಡೆಸುತ್ತಿದ್ದ ರೈತರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿ, ಅಶ್ರುವಾಯು ಪ್ರಯೋಗಿಸಿದಾಗ ಹಲವಾರು ಮಂದಿ ಗಾಯಗೊಂಡರು.

ರೇಷ್ಮೆ ಬೆಳೆಗಾರರ ಒಂದು ಗುಂಪು 4–5 ವಾಹನಗಳಲ್ಲಿ ಸಿ.ವಿ.ರಾಮನ್ ರಸ್ತೆಯಲ್ಲಿ ಕೇಂದ್ರ ಸಚಿವ ರಾಮಕೃಷ್ಣ ಹೆಗಡೆ ಅವರ ಮನೆಗೆ ಕಲ್ಲು ತೂರಿ ದಾಂದಲೆ ನಡೆಸಿತು. ಈ ಗಲಾಟೆಯಲ್ಲಿ ಹೆಗಡೆ ಅವರ ಮನೆಯ ಮೊದಲ ಮಹಡಿ ಮತ್ತು ನೆಲಮಹಡಿಯ ಗಾಜುಗಳು ಪುಡಿಪುಡಿಯಾಗಿದ್ದು, ಆವರಣದಲ್ಲಿ ನಿಂತಿದ್ದ ಒಂದು ಕಾರನ್ನು ಜಖಂಗೊಳಿಸಲಾಗಿದೆ.

• **ಸುರತ್ಕಲ್ ಗಲಭೆ ತನಿಖೆಗೆ ನ್ಯಾಯಾಂಗ ಆಯೋಗ**

ಮಂಗಳೂರು, ಜ. 11 – 'ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಮತ್ತು ಇತರ ಕಡೆಗಳಲ್ಲಿ ಇತ್ತೀಚೆಗೆ ನಡೆದ ಗಲಭೆಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ತೀರ್ಮಾನಿಸಲಾಗಿದೆ' ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಹೇಳಿದರು.

ರಾಜ್ಯದ ನ್ಯಾಯಾಧೀಶರೊಂದಿಗೆ ಸಮಾಲೋಚಿಸಿ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಯೊಬ್ಬರ ಏಕ ಸದಸ್ಯ ಆಯೋಗವೊಂದನ್ನು ಸದ್ಯದಲ್ಲೇ ಇದಕ್ಕಾಗಿ ನೇಮಿಸಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯ ಗಲಭೆಗಳಿಗೆ ಕಾರಣರಾದ ದುಷ್ಕರ್ಮಿಗಳನ್ನು ಪತ್ತೆ ಮಾಡಿಕೊಡಲು ಆಯೋಗವನ್ನು ಕೇಳಿಕೊಳ್ಳಲಾಗುವುದು ಎಂದು ಅವರು ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

50 ವರ್ಷಗಳ ಹಿಂದೆ

ಶನಿವಾರ, 12-1-1974

• **ಕೇಂದ್ರ ಸಂಪುಟಕ್ಕೆ ಕಾಸು, ಮಾಳವೀಯ: ಸ್ಟೇಟ್ ಸಚಿವರಾಗಿ ಮೌರ್ಯ**

ನವದೆಹಲಿ, ಜ. 11 – ಕೇಂದ್ರ ಮಂತ್ರಿ ಮಂಡಳದ ಕ್ಯಾಬಿನೆಟ್ ಸಚಿವರಾಗಿ ಕೇಶವದೇವ ಮಾಳವೀಯ ಮತ್ತು ಕಾಸು ಬ್ರಹ್ಮಾನಂದ ರೆಡ್ಡಿ ಅವರೂ, ಸ್ಟೇಟ್ ಸಚಿವರಾಗಿ ಬಿ.ಪಿ. ಮೌರ್ಯ ಅವರೂ ಇಂದು ಪ್ರಮಾಣವಚನ ಸ್ವೀಕರಿಸಿದರು.

ಇದರಿಂದ ಕೇಂದ್ರ ಸಚಿವ ಸಂಪುಟದ ಸಂಖ್ಯೆ 60ಕ್ಕೆ ಏರಿತು.

• **ರಾಜಕೀಯ ಭ್ರಷ್ಟಾಚಾರ**


ಲಖನೌ, ಜ. 11 – ಪ್ರಧಾನಿ ಇಂದಿರಾ ಗಾಂಧಿ ಅವರು ಲೆಕ್ಕ–ಜಮಾ ಇಲ್ಲದೆ ಯೋಜನೆಗಳ ಶಂಕುಸ್ಥಾಪನೆ ಅಥವಾ ಉದ್ಘಾಟನೆ ನೆರವೇರಿಸುತ್ತಿರುವುದು ಹಾಗೂ ಸಾರ್ವತ್ರಿಕ ಚುನಾವಣೆಯ ಪೂರ್ವದಲ್ಲಿ ಮತದಾರರಿಗೆ ಆಶಾದಾಯಕ ಭರವಸೆಗಳನ್ನು ನೀಡುತ್ತಿರುವುದನ್ನು 'ರಾಜಕೀಯ ಭ್ರಷ್ಟಾಚಾರ' ಎಂದು ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣ ಅವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, 'ಸರ್ಕಾರ ಪ್ರಕಟಿಸಿರುವ ಕೆಲವು ರಿಯಾಯ್ತಿಗಳು ಮತ್ತು ನಿರ್ಧಾರಗಳು ಜನರಿಗೆ ಸ್ವಲ್ಪ ನೆಮ್ಮದಿಯನ್ನು ತಂದುಕೊಟ್ಟಿವೆ. ಆದರೆ ಮತದಾರರ ತೀರ್ಪನ್ನು ಗೆಲ್ಲುವ ತಾತ್ಕಾಲಿಕ ಹಂತದ ಕ್ರಮವಿದು ಎಂಬುದು ಸಾಮಾನ್ಯರ ಅಭಿಪ್ರಾಯ' ಎಂದರು.

ಸರ್ಕಾರವು ಸಿಕ್ಕಾಪಟ್ಟೆ ಆಶ್ವಾಸನೆಗಳನ್ನು ನೀಡುತ್ತಿರುವುದನ್ನು ನೋಡಿದರೆ, ಮತದಾರರಿಗೆ ಲಂಚ ಕೊಡುವುದೇ ಆಗಿದೆ ಎಂಬುದು ವ್ಯಕ್ತಪಡುತ್ತದೆ ಎಂದು ಹೇಳಿದರು.

ತುರ್ತು ಪರಿಸ್ಥಿತಿ ಸಂದರ್ಭದ ಜನಾಕ್ರೋಶ ಈಗ ಇದೆ ಎಂದುಕೊಳ್ಳುವುದು ಭ್ರಮೆಯಾದೀತು

ಜಯಕ್ಕೆ ಮೋದಿ ವಿರೋಧವಷ್ಟೇ ಸಾಲದು



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

2024ರ ಲೋಕಸಭಾ ಚುನಾವಣೆ ಎದುರಿಸಲು ಪಕ್ಷಗಳು ಸಜ್ಜಾಗಿವೆ, ಯಾವ ವಿಷಯಗಳನ್ನು ಮುಂದಿಟ್ಟುಕೊಂಡು ಪಕ್ಷಗಳು ಜನರ ಎದುರು ಹೋಗಲಿವೆ ಎಂಬುದೂ ಸ್ಪಷ್ಟವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಕೆಟಿಂಗ್ ಕೌಶಲದಲ್ಲಿ ತರಬೇತಿ ಪಡೆದವರಲ್ಲ. ಆದರೆ ಜನಸಮೂಹದ ಆಸಕ್ತಿ ಕೆರಳಿಸಬಲ್ಲ ಸಾಮರ್ಥ್ಯ ಅವರಲ್ಲಿದೆ. ಎಂದಿಗೂ ಕುಂದದ ಶಕ್ತಿ ಅವರಲ್ಲಿದೆ. ಎದುರಾಳಿಗಳ ಮೇಲೆ ಹಠಾತ್ತನೆ ಎರಗುವ, ತಮ್ಮಲ್ಲಿನ ಎಲ್ಲ ಸಂಪನ್ಮೂಲಗಳನ್ನೂ ಸಂಸ್ಥೆಗಳನ್ನೂ ಬಳಸಿಕೊಳ್ಳುವ, ಯಾವುದೇ ಟೀಕೆಗಳು ಹಾಗೂ ಅಳುಕು ತಮ್ಮ ಹಾದಿಗೆ ಅಡ್ಡವಾಗಿ ಬರದಂತೆ ನೋಡಿಕೊಳ್ಳುವ ಚಾಕಚಕ್ಯತೆ ಇದೆ. ರಾಮ ಮಂದಿರವನ್ನು ಉದ್ಘಾಟಿಸುವ ಘೋಷಣೆಯನ್ನು ಮೋದಿ ಅವರು ಮಾಡಿದ್ದಾರೆ. ಚುನಾವಣೆಯಲ್ಲಿ ಜನರ ಬೆಂಬಲ ಪಡೆಯಲು ರಾಮನ ಹೆಸರು ಬಳಕೆಯಾಗಲಿದೆ.

ಬಾಬರಿ ಮಸೀದಿ ಧ್ವಂಸದ ನಂತರ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ರಾಮನ ಜಪವು ಬಿಜೆಪಿಗೆ ರಾಜಕೀಯವಾಗಿ ಲಾಭ ಆಗುವುದಿಲ್ಲ ಎಂದು ಯಾರಾದರೂ ಊಹಿಸಿದ್ದರೇ? ನಿರೀಕ್ಷೆಗಳು ಸುಳ್ಳಾದವು. ಮಂಡಲ್ ಆಯೋಗದ ವರದಿಯ ನಂತರದಲ್ಲಿ ಉದಯಿಸಿದ ಶಕ್ತಿಗಳ ಪರಿಣಾಮವಾಗಿ ಬಿಜೆಪಿಯ ಪ್ರಭಾವವು ಬಾಬರಿ ಮಸೀದಿ ಧ್ವಂಸದ ನಂತರದಲ್ಲಿ ಒಮ್ಮೆ ಉತ್ತರಪ್ರದೇಶದಲ್ಲಿಯೂ ಕುಗ್ಗಿತ್ತು. ಬಿಜೆಪಿಯ ಹಿರಿಯ ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರು ನೇಪಥ್ಯಕ್ಕೆ ಸರಿದ ನಂತರದಲ್ಲಿ ಎಲ್.ಕೆ.ಅಡ್ವಾಣಿ ಅವರಿಗೆ ಪ್ರಧಾನಿ ಸ್ಥಾನ ಪಡೆಯಲು ರಾಮನಾಮ ನೆರವಿಗೆ ಬರಲಿಲ್ಲ. ಭಾರತದ ಅತ್ಯಂತ ಜನಪ್ರೀತಿಯ ಪ್ರಧಾನಿ ವಾಜಪೇಯಿ 2004ರ ಲೋಕಸಭಾ ಚುನಾವಣೆಯಲ್ಲಿ ಸೋನಿಯಾ ಗಾಂಧಿ ನೇತೃತ್ವದ ಮೈತ್ರಿಕೂಟದ ಎದುರು ಸೋಲು ಅನುಭವಿಸಿದರು. ಸೋನಿಯಾ ಅವರು ವಿದೇಶಿ ಮೂಲದ ಮಹಿಳೆ ಎಂಬ ಮೂದಲಿಕೆಗೆ ಒಳಗಾಗಿದ್ದರೂ, ಮನಮೋಹನ್ ಸಿಂಗ್ ಅವರನ್ನು ಪ್ರಧಾನಿ ಸ್ಥಾನಕ್ಕೆ ತರುವ ಮೂಲಕ ಸತತ ಎರಡು ಅವಧಿಗೆ ದೇಶ ಆಳಿದರು.

ಆರ್‌ಎಸ್‌ಎಸ್ ನಿಯಂತ್ರಣದಲ್ಲಿ ಇರುವ ಬಿಜೆಪಿಯು 2014ರ ಲೋಕಸಭಾ ಚುನಾವಣೆಗೂ ಮೊದಲು, ಪಕ್ಷದ ಸಹಸಂಸ್ಥಾಪಕ ಅಡ್ವಾಣಿ ಅವರನ್ನು ತೆರೆಯ ಹಿಂದಕ್ಕೆ ಕಳುಹಿಸಿತು. ರಾಮ ಮಂದಿರ ನಿರ್ಮಿಸುವ ಭರವಸೆ ಇತ್ತು ಪಕ್ಷವನ್ನು ಬಡಿದೆಬ್ಬಿಸಿದ್ದವರು ಅಡ್ವಾಣಿ. ತಮಗೆ ಸೂಕ್ತ ಮಾನ್ಯತೆ ಸಿಗಲಿಲ್ಲ ಎಂದು ಅವರು ರಾಮನ ಮೇಲಿನ ನಂಬಿಕೆ ಕಳೆದುಕೊಂಡಿದ್ದರೇ?! ಬಿಜೆಪಿಯು ಮೋದಿ ಅವರನ್ನು ತನ್ನ ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಿತು. ಮೋದಿ ಅವರು ತಮ್ಮ ಚರಿಷ್ಮಾ, ತಮಗೆ ಇದ್ದ ಸಮರ್ಥ ಆಡಳಿತಗಾರ ಎಂಬ ಹೆಸರು, ಬಲಿಷ್ಠ ಹಿಂದೂ ನಾಯಕ ಎಂಬ ಖ್ಯಾತಿ ಬಳಸಿಕೊಂಡು, ಕಾಂಗ್ರೆಸ್ ಹಾಗೂ ಕೆಲವು ಪ್ರಾದೇಶಿಕ ಪಕ್ಷಗಳು ಪಾಲಿಸಿಕೊಂಡು ಬಂದಿದ್ದ ಮುಸ್ಲಿಂ ತುಷ್ಟೀಕರಣದ ರಾಜಕಾರಣವನ್ನು ಕೊನೆಗೊಳಿಸುವುದಾಗಿ ಭರವಸೆ ನೀಡಿ ಪ್ರವರ್ಧಮಾನಕ್ಕೆ ಬಂದರು.

ರಾಮ ಮಂದಿರದ ವಿಚಾರವು ತೆರೆಮರೆಯಲ್ಲಿ ಇತ್ತಾದರೂ ಮೋದಿ ಅವರು ಗೆಲುವು ಸಾಧಿಸಿದ್ದಕ್ಕೆ ಕಾರಣ ಅವರು ಒಳ್ಳೆಯ ಆಡಳಿತ ಹಾಗೂ ಅಭಿವೃದ್ಧಿಯ ಭರವಸೆ ನೀಡಿದ್ದು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಈ ಭರವಸೆಯು ಜನಸಮೂಹಕ್ಕೆ ಹತ್ತಿರವಾಯಿತು.

ಇಂದು ರಾಮ ಮಂದಿರವನ್ನು ಮೋದಿ ಅವರು ಹಿಂದೂಗಳಿಗೆ ನೀಡುತ್ತಿರುವ ಕೊಡುಗೆ ಎಂಬಂತೆ ಪ್ರಶಂಸಿಸಲಾಗುತ್ತಿದೆ. ಅಯೋಧ್ಯೆಗೆ ಬಂದಿಳಿದ ಮೊದಲ ವಿಮಾನ ಹಾಗೂ ಅಲ್ಲಿ ನಿರ್ಮಿಸಲಾಗಿರುವ ಹೊಸ ವಿಮಾನ ನಿಲ್ದಾಣವನ್ನು ಮೋದಿ ಅವರು ಪರಂಪರೆ ಹಾಗೂ ಅಭಿವೃದ್ಧಿ, ನಂಬಿಕೆ ಮತ್ತು ಆಧುನಿಕತೆಯ ಹಾದಿಯಲ್ಲಿ ಭಾರತ ಇರಿಸಿರುವ ದಾಪುಗಾಲನ್ನು ಸೂಚಿಸುತ್ತಿದೆ ಎಂದು ಹೇಳಿದ್ದಾರೆ.

ಮುಸ್ಲಿಮರ ಕುರಿತು ನಕಾರಾತ್ಮಕ ಚಿತ್ರಣ ಮುಂದಿಟ್ಟು ಹಿಂದೂಗಳ ಮತವನ್ನು ಒಗ್ಗೂಡಿಸುವ ತಂತ್ರಗಾರಿಕೆಯು ದೇಶದ ದಕ್ಷಿಣದಲ್ಲಿ ಕೆಲಸಕ್ಕೆ ಬಂದಿಲ್ಲ. ಪಂಜಾಬ್, ಬಿಹಾರ, ಜಾರ್ಖಂಡ್, ಹಿಮಾಚಲ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಒಡಿಶಾದಲ್ಲಿ ಕೂಡ ಕಳೆದ ಚುನಾವಣೆಗಳಲ್ಲಿ ಅದು ಕೆಲಸಕ್ಕೆ ಬಂದಿಲ್ಲ.

ರಾಹುಲ್ ಗಾಂಧಿ ಅವರು ಭಾರತ್ ಜೋಡೊ ನ್ಯಾಯ ಯಾತ್ರೆ ಆರಂಭಿಸುವುದಾಗಿ ಘೋಷಿಸಿದ್ದಾರೆ. ಇದು ರಾಮ ಮಂದಿರದ ಉದ್ಘಾಟನೆಗೂ ಮೊದಲು ಆರಂಭವಾಗಲಿದೆ. ಇದು 14 ರಾಜ್ಯಗಳಲ್ಲಿ ಸಂಚರಿಸಲಿದ್ದು, ಗುಜರಾತ್‌ನಲ್ಲಿ ಕೊನೆಗೊಳ್ಳಲಿದೆ. ಈ ಯಾತ್ರೆ ಕೂಡ ಹಿಂದಿನ ಭಾರತ್ ಜೋಡೊ ಯಾತ್ರೆಯ ರೀತಿಯಲ್ಲಿಯೇ ಜನರಲ್ಲಿ ಉತ್ಸಾಹ ಮೂಡಿಸುವಂತೆ ಇರಲಿದೆಯೇ? ಹಿಂದಿನ ಯಾತ್ರೆ ಬೀರಿದ್ದಂತಹ ಪರಿಣಾಮ ಬೀರಲಿದೆಯೇ? ಭಾರತ್ ಜೋಡೊ ಯಾತ್ರೆ ಆರಂಭಿಸಿದಾಗ ರಾಹುಲ್ ಅವರ ಬಗ್ಗೆ ಕೆಲವರು ಹಾಸ್ಯ ಮಾಡಿದ್ದರು. ಆದರೆ ಜನರ ಬಗ್ಗೆ ರಾಹುಲ್ ಹೊಂದಿರುವ ನಿಜವಾದ ಕಳಕಳಿಯು ಕೋಟ್ಯಂತರ ಹೃದಯಗಳನ್ನು ಗೆದ್ದುಕೊಂಡಿತು.

ಚೀನಾದಲ್ಲಿ ಮಾವೊ ಕ್ರಾಂತಿಗಾಗಿ ಯಾತ್ರೆ ನಡೆಸಿದ್ದರು, ಭಾರತದಲ್ಲಿ ಮಹಾತ್ಮ ಗಾಂಧಿ ಅಹಿಂಸೆಯ ಮಂತ್ರ ಜಪಿಸುತ್ತ ಬ್ರಿಟಿಷರ ಕಾನೂನುಗಳನ್ನು ವಿರೋಧಿಸಿ ಯಾತ್ರೆ ಕೈಗೊಂಡಿದ್ದರು. ಆಗ, ಸಮುದ್ರದಲ್ಲಿ ಭಾರಿ ಅಲೆಗಳು ಏಳುವಂತೆ ಜನಸ್ಪಂದನ ದೊರೆತಿತ್ತು. ರಾಹುಲ್ ಅವರು ನೀಡಲು ಮುಂದಾಗಿರುವ ಸಂದೇಶ ಏನು? ಇಂಡಿಯಾ ಮೈತ್ರಿಕೂಟ ಹಾಗೂ ಅದರ



ಭಿನ್ನದನಿಯ ನಾಯಕರು ಎಲ್ಲಿದ್ದಾರೆ? ಮೋದಿ ಅವರ ವ್ಯಕ್ತಿತ್ವ, ಹಿಂದೂ ಮೊದಲು ಎಂಬ ಸಿದ್ಧಾಂತ ಹಾಗೂ ಭಾರತದ ಬಗ್ಗೆ ಅವರು ಹೊಂದಿರುವ ದೃಷ್ಟಿಕೋನಕ್ಕೆ ಪರ್ಯಾಯವಾಗಿ ಈ ನಾಯಕರು, ಜನರ ಹೃದಯದಲ್ಲಿ ಸ್ಥಾನ ಪಡೆಯುವಂತಹ ಬಲವಾದ ಸಂದೇಶ ನೀಡುತ್ತಿದ್ದಾರೆಯೇ?

ಇಂದಿರಾ ಗಾಂಧಿ ಹೇರಿದ್ದ ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಜಯಪ್ರಕಾಶ ನಾರಾಯಣ ಅವರು ದೇಶದ ಜನರಿಗೆ ಸಂಪೂರ್ಣ ಕ್ರಾಂತಿಗೆ ಕರೆ ನೀಡಿದಾಗ, ಇಡೀ ದೇಶ ಒಗ್ಗಟ್ಟಿನಿಂದ ಎದ್ದುನಿಂತಿತ್ತು. ಇಂದಿರಾ ಗಾಂಧಿ ಅವರು ಚುನಾವಣೆ ನಡೆಸಲು ಮುಂದಾದಾಗ ಜನತಾ ಪಕ್ಷ ಹಾಗೂ ಇತರ ಹಲವು ವಿರೋಧ ಪಕ್ಷಗಳು ಒಗ್ಗಟ್ಟಾದವು, ಇಂದಿರಾ ಅವರನ್ನು ಸೋಲಿಸಿದವು. ಉದ್ದೇಶದಲ್ಲಿ ಒಗ್ಗಟ್ಟು ಮೂಡಿದ್ದ ಪರಿಣಾಮವಾಗಿ ವಿರೋಧ ಪಕ್ಷಗಳು ಜಯ ಸಾಧಿಸಲು ಸಾಧ್ಯವಾಯಿತು. ಹಿಂದೆ ಇಂದಿರಾ ವಿರುದ್ಧ ಇದ್ದಂತಹ ಕೋಪದ ಅಲೆ ಮೋದಿ ಅವರ ವಿರುದ್ಧ ದೇಶದಾದ್ಯಂತ ಕಾಣಿಸುತ್ತಿದೆಯೇ? ಜನರು 'ಇಂಡಿಯಾ' ಮೈತ್ರಿಕೂಟದ ನಾಯಕರ ಹಿಂದೆ ಸಾಗಬೇಕು ಎಂದಾದರೆ, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಇಂದಿರಾ ಅವರ ವಿರುದ್ಧ ಸೃಷ್ಟಿಯಾದಂತಹ ಜನಾಕ್ರೋಶ ಈಗ ಸೃಷ್ಟಿಯಾಗಬೇಕು. ಅದು, ಇಂದು ಕಂಡುಬರುತ್ತಿದೆಯೇ? ಅಂಥದ್ದೊಂದು ಆಕ್ರೋಶ ಇದೆ ಎಂದು ಭಾವಿಸುವುದು ಭ್ರಮೆಯಾದೀತು.

ಕಾಂಗ್ರೆಸ್ಸಿನಲ್ಲಿ ರಾಹುಲ್ ಗಾಂಧಿ ಅವರು ಈಗಲೂ ಹೈಕಮಾಂಡ್ ಆಗಿಯೇ ಮುಂದುವರಿದಿದ್ದಾರೆ. ರಾಹುಲ್ ಮತ್ತು ಅವರ ತಂಡವು ಈ ಸಂದರ್ಭದಲ್ಲಿ ಯಾತ್ರೆಯನ್ನು ಕೈಗೊಳ್ಳುವ ಬದಲು ತಮ್ಮ ಎಲ್ಲ ಶಕ್ತಿಯನ್ನು, ಸಮಯವನ್ನು 'ಇಂಡಿಯಾ' ಮೈತ್ರಿಕೂಟದ ನಾಯಕರ ಜೊತೆ ಸೀಟು ಹಂಚಿಕೆ ಸೂತ್ರ ಅಂತಿಮಗೊಳಿಸಲು ವಿನಿಯೋಗಿಸಬೇಕಲ್ಲವೇ? ಚುನಾವಣೆ ಎದುರಿಸಲು ಸಾಮಾನ್ಯ ಕನಿಷ್ಠ ಕಾರ್ಯಸೂಚಿ, ತಂತ್ರಗಾರಿಕೆ, ಜನರಿಗೆ ಎಲ್ಲರೂ ಒಟ್ಟಾಗಿ ರವಾನಿಸಬೇಕಿರುವ ಸಂದೇಶ ಏನು ಎಂಬುದನ್ನು ತೀರ್ಮಾನ ಮಾಡಬೇಕಲ್ಲವೇ? ಎಲ್ಲರೂ ಒಟ್ಟಾಗಿ ಕುಳಿತು, 'ಇಂಡಿಯಾ' ಮೈತ್ರಿಕೂಟವನ್ನು ಯಾರು ಮುನ್ನಡೆಸಬೇಕು ಎಂಬುದನ್ನು ತೀರ್ಮಾನಿಸಬೇಕು ಅಥವಾ ತಮ್ಮ ನಾಯಕನನ್ನು ಹೇಗೆ ಆಯ್ಕೆ ಮಾಡುತ್ತೇವೆ ಎಂಬುದನ್ನು ಜನರಿಗೆ ತಿಳಿಸುವ ಕೆಲಸವನ್ನು ಮಾಡಬೇಕು ಅಲ್ಲವೇ?

ಮೋದಿ ಅವರು ಪ್ರತಿಪಾದಿಸುವುದು ಏನು ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಬಲಿಷ್ಠ ಹಿಂದೂ ರಾಷ್ಟ್ರ, ಅಭಿವೃದ್ಧಿ ಹೊಂದಿದ ಹಾಗೂ ಮಿಲಿಟರಿ ದೃಷ್ಟಿಯಿಂದ ಶಕ್ತಿಯುತವಾದ ಭಾರತವನ್ನು ನಿರ್ಮಾಣ ಮಾಡುವುದು ಅವರ ಪ್ರತಿಪಾದನೆಗಳಲ್ಲಿ ಸೇರಿವೆ. ಆದರೆ, ಸಮಾಜದ ಎಲ್ಲ ವರ್ಗಗಳನ್ನೂ ಜೊತೆ ಸೇರಿಸಿಕೊಳ್ಳದೆ, ಬಿಜೆಪಿ ಆಡಳಿತ ಇಲ್ಲದ ರಾಜ್ಯಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅವರು ಇದನ್ನು ಸಾಧಿಸಬಲ್ಲರೇ ಎಂಬುದು ಚರ್ಚೆಗೆ ಅರ್ಹವಾದ ವಿಚಾರ. 'ಇಂಡಿಯಾ' ಮೈತ್ರಿಕೂಟ ಪ್ರತಿಪಾದಿಸುತ್ತಿರುವುದು ಏನು ಎಂಬುದು ಯಾರಿಗಾದರೂ ಗೊತ್ತಿದೆಯೇ? ತುರ್ತು ಪರಿಸ್ಥಿತಿಯ ನಂತರದಲ್ಲಿ ಇಂದಿರಾ ಗಾಂಧಿ ಅವರನ್ನು ವಿರೋಧಿಸುವುದು ಮಾತ್ರವೇ ಅವರನ್ನು ಸೋಲಿಸಲು ಸಾಕಾಗಿತ್ತು. ಆದರೆ ಜಯಪ್ರಕಾಶ ನಾರಾಯಣ ಅವರಂತಹ ನಾಯಕ ಇಲ್ಲದಿರುವಾಗ, ಮೋದಿ ಅವರನ್ನು ವಿರೋಧಿಸಿದ ಮಾತ್ರಕ್ಕೆ ಜಯ ಸಿಗುವುದಿಲ್ಲ.

ಚುರುಮುರಿ



ಮೋಡಿ ಚಿಕಿತ್ಸೆ ಪವಾಡ!

• ಬಿ.ಎನ್.ಮಲ್ಲೇಶ್

'ಡಾಕ್ಟ್ರು ಬರೆದುಕೊಟ್ಟಿದ್ದ ಮೆಡಿಕಲ್ ರಿಪೋರ್ಟ್ ಓದೋಕಾಗದೆ ಕೋರ್ಟ್ ಜಡ್ಜ್ ಒಬ್ರು 'ನೆಟ್ಟಗೆ ಅರ್ಥ ಆಗಂಗೆ ಬರೀರಿ' ಅಂತ ಆ ಡಾಕ್ಟ್ರ ಮೇಲೆ ಸಿಟ್ಟಿಗೆದ್ದಿದ್ರಂತಪ...' ದುಬ್ಬೀರ ಪೇಪರ್‌ನಲ್ಲಿ ಬಂದಿದ್ದ ಸುದ್ದಿ ತೋರ್ಸಿ ನಕ್ಕ.

'ಈ ಡಾಕ್ಟ್ರುಗಳ ಅಕ್ಷರ ಮೆಡಿಕಲ್ ಶಾಪ್‌ನೋರಿಗೆ ಬಿಟ್ರೆ ಹರಿ ಬ್ರಹ್ಮಂಗೂ ಅರ್ಥ ಆಗಲ್ಲ ಕಣಲೆ' ಎಂದ ಗುಡ್ಡೆ.

'ಯಾಕರ್ಥ ಆಗಲ್ಲ? ಅರ್ಥ ಆಗದೆ ಅವ್ರು ಪರೀಕ್ಷೇಲಿ ಬರೆದಿದ್ದನ್ನ ಓದಿ ಮಾರ್ಕ್ಸ್ ಕೊಟ್ಟಿರ್ತಾರಾ?'

'ಗ್ಯಾರಂಟಿ ಅರ್ಥ ಆಗಿರಲ್ಲ, ಏನೋ ಪೇಪರ್ ತುಂಬಾ ಬರೆದಿದಾನೆ, ಹೋಗ್ಲಿ ಅಂತ ಮಾರ್ಕ್ಸ್ ಕೊಟ್ಟಿರ್ತಾರೆ ಅಷ್ಟೆ'.

'ಲೇಯ್ ಗುಡ್ಡೆ, ಡಾಕ್ಟ್ರುಗಳು ಅಂದ್ರೆ ದೇವರಿದ್ದಂಗೆ. ಹತ್ತು ವರ್ಷ ಓದಿ ಬರ್ದೂ ಬರ್ದೂ ಅವರ ಕೈ ಅಕ್ಷರ ಹಂಗಾಗಿರ್ತದೆ ಅಷ್ಟೆ' ತೆಪರೇಸಿ ರೇಗಿದ.

'ಆತು ಬಿಡಪ, ತಪ್ಪಾತು. ಆದ್ರೆ ಮೊನ್ನೆ ಯಾರೋ ಡಾಕ್ಟ್ರು ಬರೆದುಕೊಟ್ಟಿದ್ದ ಒಂದು ಔಷಧಿ ಎಲ್ಲೂ ಸಿಗದೆ ವಾಪಸ್ ಅದೇ ಡಾಕ್ಟರಿಗೆ ಬಂದು ಕೇಳಿದಾಗ 'ರೀ ಅದು ಔಷಧಿ ಅಲ್ಲ ಕಣ್ರೀ, ಹದಿನೈದು ದಿನ ಬಿಟ್ ಬನ್ನಿ ಅಂತ ಬರೆದಿದ್ದೆ ಅಂದ್ರಂತೆ, ಇದಕ್ಕೇನಂತೀಯ?'

'ಅಯ್ಯೋ ಇಂಥವು ಬಾಳದಾವು. ಡಾಕ್ಟ್ರ ಔಷಧಿ ಚೀಟಿ ಓದಿ ಮೆಡಿಕಲ್ ಶಾಪ್‌ನೋನು ರೋಗಿಗೆ ಮಾತ್ರೆ ಕೊಟ್ಟಿದ್ನಂತೆ. ಅದನ್ನ ಒಂದು ವಾರ ತಗಂಡ ರೋಗಿ ಡಾಕ್ಟ್ರ ಹತ್ರ ಹೋಗಿ 'ಸಾ, ಈ ಮಾತ್ರೆನ ಒಂದು ತಿಂಗ್ಳು ತಗಾಳಾಕೆ ಹೇಳಿದ್ರಲ್ಲ, ಒಂದು ವಾರಕ್ಕೇ ವಾಸಿಯಾತು' ಅಂದ್ನಂತೆ. ಡಾಕ್ಟ್ರು ರೋಗಿ ಕೈಲಿದ್ದ ಮಾತ್ರೆ ನೋಡಿ 'ಅಯ್ಯೋ, ನಾನು ಬರೆದಿದ್ದು ಇದಲ್ಲ ಕಣ್ರೀ' ಅಂತ ಗಾಬರಿ ಆದ್ರಂತೆ. ಡಾಕ್ಟ್ರ ಮೋಡಿ ಅಕ್ಷರ ಅರ್ಥ ಆಗದೆ ಮೆಡಿಕಲ್ ಶಾಪ್‌ನೋನು ಇನ್ಯಾವುದೋ ಮಾತ್ರೆ ಕೊಟ್‌ಬಿಟ್ಟಿದ್ನಂತೆ!' ದುಬ್ಬೀರ ನಕ್ಕ.

'ಮೋಡಿ ಅಕ್ಷರ ಮಾಡಿದ ಈ ಪವಾಡಕ್ಕೆ ಮೋಡಿ ಚಿಕಿತ್ಸೆ ಅನ್ನಬೋದಾ?' ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಮಾರ್ದನಿಸುವ ಅಭಯವಾಣಿ

ಯುವಜನರನ್ನು ಅನಗತ್ಯವಾಗಿ ಟೀಕಿಸದೆ ಉತ್ತೇಜಿಸಿದರೆ, ಕಾಲಕ್ರಮೇಣ ಅವರು ಕಟಿಬದ್ಧ ಸಮಾಜಶಿಲ್ಪಿಗಳಾಗುವರು ಎಂಬುದು ಸ್ವಾಮಿ ವಿವೇಕಾನಂದರ ನಂಬಿಕೆಯಾಗಿತ್ತು

• ಬಿ.ಎಸ್.ಭಗವಾನ್


'ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗುವುದರ ಜತೆಗೆ ನಿರ್ಭೀತ ನಡೆ ರೂಢಿಸಿಕೊಂಡರೆ ನೀವು ಏನನ್ನಾದರೂ ಸಾಧಿಸಬಲ್ಲಿರಿ' ಎಂದು ಭಾರತದ ಯುವಜನರನ್ನು ಹುರಿದುಂಬಿಸಿದವರು ಸ್ವಾಮಿ ವಿವೇಕಾನಂದ. 'ಎದ್ದೇಳಿ, ಎಚ್ಚರಗೊಳ್ಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ' ಎಂಬ ಅವರ ಕರೆ ದೇಶದಾದ್ಯಂತ ಅನವರತ ಮಾರ್ದನಿಸುತ್ತಿದೆ.

ಸಾಮಾನ್ಯವಾಗಿ ಒಂದು ದೇಶದ ವೃದ್ಧರನ್ನು ಸಮುದ್ರಕ್ಕೂ ಯುವಕರನ್ನು ನದಿಗೂ ಹೋಲಿಸುವುದುಂಟು. ವೃದ್ಧರಲ್ಲಿ ತುಂಬಿ ತುಳುಕುವ ಅನುಭವಗಳು, ಆದರೆ ಅವರಿಗೆ ವಯಸ್ಸು ಅಡ್ಡಬರುವ ಕಾರಣ ಕಾರ್ಯರೂಪಕ್ಕೆ ತರಲಾರರು. ಯುವಕರದೋ ಬಣ್ಣನೆಗೆ ಸಿಗದ ಉತ್ಸಾಹ, ಹುರುಪು. ಆದರೆ ಅವರ ಲವಲವಿಕೆಯೇ ಅತಿರೇಕವಾಗಿ ಹುಚ್ಚುಹೊಳೆಯಾದರೆ ಗತಿ? ವಿವೇಕಾನಂದರು ಈ ಸೂಕ್ಷ್ಮವನ್ನು ಗ್ರಹಿಸಿ, ಆಬಾಲವೃದ್ಧರನ್ನೆಲ್ಲ ದೇಶದ ಮುನ್ನಡೆಗೆ ಒಗ್ಗೂಡಿಸಿದರು. ವಿಶೇಷವಾಗಿ ಯುವಜನರಿಗೆ, ಪರಿಶುದ್ಧತೆ, ಸಹನೆ ಹಾಗೂ ನಿರಂತರ ಪರಿಶ್ರಮಕ್ಕೆ ಎಲ್ಲ ಅಡೆತಡೆಗಳೂ ಮಣಿಯುತ್ತವೆ ಎಂಬ ಅಭಯವಿತ್ತರು. ಯಶಸ್ಸಿಗೆ ಆತ್ಮವಿಶ್ವಾಸ, ದಿಟ್ಟ ಸಂಕಲ್ಪದ ಹೊರತಾಗಿ ಯಾವುದೇ ಅಡ್ಡಮಾರ್ಗವಿಲ್ಲ ಎಂದವರು ಎಚ್ಚರಿಸಿದರು.

ವಿವೇಕಾನಂದರಿಗೆ ಧರ್ಮವು ಬರೀ ಸಿದ್ಧಾಂತವಾಗಿರಲಿಲ್ಲ, ದಾನವನನ್ನು ಮಾನವನನ್ನಾಗಿಸುವ ಹಾದಿಯಾಗಿತ್ತು. ಬೆಟ್ಟ, ಪರ್ವತವೇರಿ ಧ್ಯಾನಾಸಕ್ತರಾಗಬೇಕಿಲ್ಲ. ಜನಜೀವನದ ನಡುವೆಯೇ ಇದ್ದು ಸೇವೆ ಮಾಡುವ ಅವಕಾಶಗಳು ವಿಪುಲವಾಗಿವೆ ಎಂದು ಅವರು ನಂಬಿದ್ದರು. ಸಮಾಜಸೇವೆ ಅವರ ಚಿಂತನೆಗಳ ಮುಖ್ಯ ರೂಪವಾಗಿತ್ತು. ತಮ್ಮ ಗುರು ರಾಮಕೃಷ್ಣ ಪರಮಹಂಸರಿಂದ ಪಡೆದಿದ್ದ ಉಪದೇಶದ ಅನುಸಾರ, ವಿವೇಕಾನಂದರು ಪ್ರತಿಯೊಬ್ಬರಲ್ಲೂ ದೈವೀ ಸ್ವರೂಪವನ್ನೇ ಕಂಡರು. ಮೂಲತಃ ಮನುಷ್ಯ ದಿವ್ಯ. ಹಾಗಾಗಿ ಮಾನವನನ್ನು ಆರಾಧಿಸುವುದೆಂದರೆ ದೇವರನ್ನು ಆರಾಧಿಸಿದಂತೆಯೆ.

ಮಕ್ಕಳ ತಲೆಯನ್ನು ಬರೀ ಮಾಹಿತಿಗಳಿಂದ ತುಂಬಿಸಿದರೆ ಅವು ಜೀರ್ಣವಾಗದೆ ಕೊಳೆಯುತ್ತವೆ. ಮಕ್ಕಳಿಗಾಗಲೀ ಸಮಾಜಕ್ಕಾಗಲೀ ಅದರಿಂದ ಏನೂ ಪ್ರಯೋಜನವಿಲ್ಲ. ವ್ಯಕ್ತಿತ್ವ ರೂಪಿಸುವ, ಬದುಕು ನೀಡುವ ಮತ್ತು ಚಾರಿತ್ರ್ಯ ನಿರ್ಮಿಸುವ ಶಿಕ್ಷಣವೇ ನಿಜವಾದ ಶಿಕ್ಷಣವೆಂದು ಅವರು ನಿರ್ವಚಿಸಿದರು. ಅವರ ದೃಷ್ಟಿಯಲ್ಲಿ ಸಂಪನ್ನ ಹಾಗೂ ಪ್ರಭಾವಯುತ ವಿಚಾರಗಳ ಸಮೀಕರಣವೇ ಶಿಕ್ಷಣವಾಗಿತ್ತು. ಯುವಜನ ಯಾವುದೇ ದೇಶದಲ್ಲಿ ಜನಸಂಖ್ಯೆಯ ಬಹು ಚಲನಶೀಲ ಮತ್ತು ವಿಶೇಷ ವರ್ಗ. ಅವರನ್ನು ಅನಗತ್ಯವಾಗಿ ಟೀಕಿಸದೆ ಉತ್ತೇಜಿಸಿದರೆ, ನಿಸ್ಸಂಶಯವಾಗಿ ಅವರು ಕಾಲಕ್ರಮೇಣ ಕಟಿಬದ್ಧ ಸಮಾಜಶಿಲ್ಪಿಗಳಾಗುವರು. ಎಂಬುದು ವಿವೇಕಾನಂದರ ನಂಬಿಕೆಯಾಗಿತ್ತು. ಅವರು ಯುವಜನರಿಗೆ ಹೇಳಿದ ಕಿವಿಮಾತು ಹೀಗಿದೆ: 'ಜನರನ್ನು ಶಿಕ್ಷಿತರನ್ನಾಗಿಸಿ. ನೀವು ನಮ್ಮ ಒಡಹುಟ್ಟಿದವರೆಂದು ಹೇಳಿ. ನಿಮ್ಮನ್ನು ಪ್ರೀತಿಸುತ್ತೇವೆ, ಎಂದಿಗೂ ದ್ವೇಷಿಸೆವು ಎಂಬ ಭರವಸೆ ಕೊಡಿ'. ಅವರು ಯುವಜನರಿಂದ ನಿರೀಕ್ಷಿಸಿದ್ದು 'ಕಬ್ಬಿಣದ ಸ್ನಾಯುಗಳು, ಉಕ್ಕಿನ ನರಗಳು'. ನಿಸ್ವಾರ್ಥವೇ ಜಯದ ಗುಟ್ಟೆಂದರು ಅವರು. ಹಣ, ಹೆಸರು, ಖ್ಯಾತಿ, ಪದವಿಗಿಂತಲೂ ಸದ್ಗುಣಕ್ಕೆ ಗಡಸಾದ ವಜ್ರದ ಗೋಡೆಯನ್ನೂ ಸೀಳುವ ಶಕ್ತಿಯಿದೆ ಎಂದು ನಂಬಿದ್ದರು.

ಉದಾತ್ತ ಚಿಂತನೆ ಮತ್ತು ಸರಳ ಬದುಕಿಗೆ ವಿವೇಕಾನಂದರು ನಿದರ್ಶನವಾಗಿದ್ದರು. ಅವರನ್ನು ರಾಷ್ಟ್ರೀಯ ಸಂತನೆಂದೇ ಗುರುತಿಸಲಾಗುತ್ತದೆ. ವಿವೇಕಾನಂದರ ಸಾಹಿತ್ಯವನ್ನು ಓದಿ ತಮ್ಮ ದೇಶಪ್ರೇಮ ಸಾವಿರ ಪಟ್ಟು ವೃದ್ಧಿಸಿತೆಂದು ಗಾಂಧೀಜಿ ಹೇಳಿದ್ದರು. ಪಾಶ್ಚಿಮಾತ್ಯ ಜಗತ್ತಿಗೆ ಭಾರತೀಯ ದರ್ಶನ ಮತ್ತು ಯೋಗವನ್ನು ಪರಿಚಯಿಸಿದ ಧೀಮಂತ. ಅವರ ಹಿರಿಮೆಗೆ, 1893ರ ಸೆ. 11ರಂದು ಷಿಕಾಗೊದಲ್ಲಿ ನೆರವೇರಿದ ಧರ್ಮ ಸಂಸತ್‌ನಲ್ಲಿನ ಅವರ ಭಾಷಣಕ್ಕಿಂತ ಪುರಾವೆ ಅನಗತ್ಯ. ಈ ಸನ್ಯಾಸಿ ಏನು ಮಾತನಾಡಬಹುದು ಎಂದುಕೊಂಡಿದ್ದವರಲ್ಲಿ, 'ಅಮೆರಿಕದ ನನ್ನ ಸಹೋದರಿಯರೇ ಮತ್ತು ಸಹೋದರರೇ...' ಎಂಬ ಆರಂಭಿಕ ಉದ್ಗಾರ ಸೃಷ್ಟಿಸಿದ ತಲ್ಲಣ ಇಂದಿಗೂ ಅಲ್ಲಿ ಮಾಸಿಲ್ಲ.



ಪುರುಷರು, ಮಹಿಳೆಯರು ಎನ್ನುವ ತಾರತಮ್ಯ ಬಿಡಿ ಎಂದ ವಿವೇಕಾನಂದರು, ಎಲ್ಲರೂ ಮನುಷ್ಯರೇ ಎಂದು ತಿಳಿಯಲು ಆಗ್ರಹಿಸಿದರು. ಪುರುಷರು ಮತ್ತು ಮಹಿಳೆಯರು ಒಂದೇ ಹಕ್ಕಿಯ ಎರಡು ರೆಕ್ಕೆಗಳಂತೆ. ಹಕ್ಕಿಗೆ ಒಂದೇ ರೆಕ್ಕೆಯಿಂದ ಹಾರಲಾಗದು. ಮಹಿಳೆಯರ ಸ್ಥಿತಿಗತಿ ಸುಧಾರಿಸದೆ ಜಗತ್ತಿನ ಕಲ್ಯಾಣ ಅಸಾಧ್ಯ. ಅಸ್ಪೃಶ್ಯತೆಯೆಂಬ ಅಂಧಾಚರಣೆಯನ್ನು ಬುಡಸಹಿತ ಕೀಳಬೇಕೆಂದು ವಿವೇಕಾನಂದರು ದೇಶದ ಯುವಜನರಿಗೆ ಒತ್ತಿ ಹೇಳಿದರು.

ಒಮ್ಮೆ ವಿವೇಕಾನಂದರು ಹಿಮಾಲಯ ಪರ್ವತದ ಚಾರಣದಲ್ಲಿದ್ದರು. ವೃದ್ಧನೊಬ್ಬ ಅವರ ಬಳಿ ಬಂದು, ಪರ್ವತವನ್ನು ಏರಲಾಗದ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿದ. ಅದಕ್ಕೆ ಅವರು 'ಕೆಳಗೆ ದಿಟ್ಟಿಸು. ಕಾಣುವ ರಸ್ತೆ ನೀನು ಏರಿಬಂದಿದ್ದು. ಇನ್ನು ಅದೇ ರಸ್ತೆಯಲ್ಲೇ ನೀನು ಏರುವುದು. ಅಂಜದೆ ಹೆಜ್ಜೆ ಹಾಕು' ಎಂದರಂತೆ. ರಾಜಸ್ಥಾನದ ಯಾತ್ರೆಯಲ್ಲಿ ಮೂರು ದಿನಗಳ ಕಾಲ ಹಸಿವಿನಿಂದ ಬಳಲಿದರು. ತಮ್ಮ ಮನೆಯ ಊಟ ಸೇವಿಸುವರೋ ಇಲ್ಲವೋ ಎಂಬ ಅಳುಕಿನಿಂದಲೇ ವ್ಯಕ್ತಿಯೊಬ್ಬ ಊಟ ತಂದಿಟ್ಟ. ವಿವೇಕಾನಂದರು ಸಂತೋಷದಿಂದ ಸವಿದರು. ಅವರ ಬದುಕಿನಲ್ಲಿ ಇಂತಹ ಪ್ರಸಂಗಗಳು ಅದೆಷ್ಟೊ.

ಅಂದಹಾಗೆ, ಇಂದು (ಜ. 12) ವಿವೇಕಾನಂದರ ಜನ್ಮದಿನ. ಈ ಜಯಂತಿಯನ್ನು 'ರಾಷ್ಟ್ರೀಯ ಯುವದಿನ' ಎಂದು ಆಚರಿಸಲಾಗುತ್ತದೆ.

ವಾಚಕರ ವಾಣಿ

ಯುವನಿಧಿ ಸದ್ಬಳಕೆ ಆಗಲಿ

ಎಂಬತ್ತರ ದಶಕದಲ್ಲಿ ರಾಜ್ಯ ಸರ್ಕಾರವು ನಿರುದ್ಯೋಗ ಪದವೀಧರರಿಗೆ ಸ್ಟೈಫಂಡ್ ಹೆಸರಿನಲ್ಲಿ ಮಾಸಿಕ ₹ 150 ಕೊಡುತ್ತಿತ್ತು. ಈ ಫಲಾನುಭವಿಗಳನ್ನು ಯಾವುದಾದರೂ ಸರ್ಕಾರಿ ಕಚೇರಿಗೆ ನೇಮಿಸಿಕೊಂಡು, ಅವರಿಂದ ಅಲ್ಪಸ್ವಲ್ಪ ಕೆಲಸ ಮಾಡಿಸಿಕೊಳ್ಳಲಾಗುತ್ತಿತ್ತು. ಕೊನೆಗೆ ಇವರು ಸಂಘಟಿತರಾಗಿ ಹೋರಾಡಿ, ಸರ್ಕಾರದ ಉದ್ಯೋಗ ನೇಮಕಾತಿಯಲ್ಲಿ ಮೀಸಲಾತಿ ಪಡೆದುಕೊಂಡರು. ಈ ಮೂಲಕ ಕೆಲವರು ಕಾಯಂ ಉದ್ಯೋಗಿಗಳಾಗಿ ಭವಿಷ್ಯ ರೂಪಿಸಿಕೊಂಡರು. ಅಂದಿನ ಸ್ಟೈಫಂಡ್ ಅನ್ನು ಈಗ ಯುವನಿಧಿ ಎಂಬ ಹೊಸ ಹೆಸರಿನಲ್ಲಿ ಈಗಿನ ಸರ್ಕಾರ ಜಾರಿ ಮಾಡಿದೆ. ಪದವಿ ಪಡೆದ ಬಡ ಯುವಜನರಿಗೆ ಈ ಯೋಜನೆ ವರದಾನ. ಆದರೆ ಯೋಜನೆಯ ಫಲಾನುಭವಿಗಳ ಯುವಶಕ್ತಿಯನ್ನು ಸದ್ಬಳಕೆ ಮಾಡಿಕೊಳ್ಳುವುದು ಸೂಕ್ತ. ಅಂತಹವರನ್ನು ಆಯಾ ಹಳ್ಳಿಗಳು ಅಥವಾ ಸಮೀಪದ ಪಟ್ಟಣಗಳ ಕಚೇರಿಗಳಲ್ಲಿ ನೇಮಿಸಿಕೊಂಡರೆ, ಅವರಿಗೂ ವೃತ್ತಿಯಲ್ಲಿ ಅನುಭವ ಸಿಕ್ಕಂತೆ ಆಗುತ್ತದೆ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

ಹೊಳೆಯಲ್ಲಿ ಹುಣಿಸೆಹಣ್ಣು ತೊಳೆಯುವುದೆಂದರೆ...

ನಾನು ಕೆಲಸ ಮಾಡುವ ಕಾಲೇಜಿನಲ್ಲಿ ಸಂಜೆ ಪೇಡಾ ಮಾರಲು ವ್ಯಕ್ತಿಯೊಬ್ಬ ಬರುತ್ತಾನೆ. ನನ್ನ ಸಹೋದ್ಯೋಗಿಗಳು ಆ ಪ್ಯಾಕೆಟ್‌ಗಳನ್ನು ಖರೀದಿಸಿ, ವ್ಯಾಪಾರಿ ನೀಡುವ ಪ್ಲಾಸ್ಟಿಕ್ ಕವರ್‌ನಲ್ಲಿಟ್ಟು ಒಯ್ಯುತ್ತಾರೆ. ಅವರಲ್ಲಿ ಅನೇಕರು ಪಿಎಚ್‌.ಡಿ. ಪದವೀಧರರು, ಕೆಲವರು ಪರಿಸರ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಬೋಧಿಸುವವರು ಮತ್ತು ಸ್ವಚ್ಛ ಭಾರತ ಅಭಿಯಾನದಲ್ಲಿ ಪಾಲ್ಗೊಳ್ಳುವವರು. ಇವರ ನಡುವೆ ನನ್ನದೇ ಹಳೆಯ ಚೀಲ ಹಿಡಿದುಕೊಂಡು ಹೋಗಲು ನಾಚಿಕೆಯೆನಿಸುತ್ತದೆ. ಭಾರತಕ್ಕೆ ಪ್ಲಾಸ್ಟಿಕ್ ವ್ಯಾಪಕವಾಗಿ ಕಾಲಿಡದ ಕಾಲದಿಂದಲೂ ಪರಿಸರದ ಮಹತ್ವ ಮತ್ತು ಪರಿಸರ ಮಾಲಿನ್ಯದ ಕುರಿತು ವಿದ್ಯಾರ್ಥಿಗಳ ಜೊತೆಗೂಡಿ ಅಭಿಯಾನ, ತಿಳಿವಳಿಕೆ ನೀಡುತ್ತಾ ಬಂದಿದ್ದೇನೆ. ಅವರಲ್ಲಿಯೇ ಕೆಲವರು ಈಗ ನನ್ನ ಸಹೋದ್ಯೋಗಿಗಳಾಗಿದ್ದಾರೆ. 'ಹೊಳೆಯಲ್ಲಿ ಹುಣಿಸೆಹಣ್ಣು ತೊಳೆಯುವುದು' ಎಂದರೆ ಇದೇ ಇರಬೇಕು!

ಪ್ರೊ. ಶಶಿಧರ್ ಪಾಟೀಲ್, ಬಾಗಲಕೋಟೆ

ಹೋರಾಟದ ಮನೋಭಾವ ಉತ್ತೇಜಿಸಿದ ತೀರ್ಪು

ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದ 11 ಮಂದಿ ಅಪರಾಧಿಗಳಿಗೆ ಕ್ಷಮಾದಾನ ನೀಡಿ, ಅವರನ್ನು ಬಿಡುಗಡೆ ಮಾಡಿದ್ದ ಗುಜರಾತ್ ಸರ್ಕಾರದ ಕ್ರಮವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿ, ಅಪರಾಧಿಗಳು ಮತ್ತೆ ಜೈಲು ಸೇರಬೇಕೆಂದು ಸೂಚಿಸಿರುವುದು ಸ್ವಾಗತಾರ್ಹ. ಮಹಿಳೆಯರ ಗೌರವ– ಘನತೆ ಬಗೆಗಿನ ನ್ಯಾಯಪೀಠದ ಉಲ್ಲೇಖಗಳು, ಮಹಿಳೆಯರ ಗೌರವಯುತ ಬದುಕುವ ಹಕ್ಕನ್ನು ಪುನರ್‌ವ್ಯಾಖ್ಯಾನಿಸಿವೆ. ದೇಶದ ಮಹಿಳೆಯರು ತಮ್ಮ ಸ್ವತಂತ್ರ ಅಸ್ತಿತ್ವ ರೂಪಿಸಿಕೊಳ್ಳಲು ಹಾಗೂ ದೌರ್ಜನ್ಯದ ವಿರುದ್ಧ ಹೋರಾಡಲು ಈ ತೀರ್ಪು ಮತ್ತಷ್ಟು ಬಲ ನೀಡಿದೆ. ಇಷ್ಟು ವರ್ಷಗಳಾದರೂ ಕಾನೂನಿನ ಅಡಿ ನ್ಯಾಯಕ್ಕಾಗಿ ಹೋರಾಡುತ್ತಿರುವ ಬಿಲ್ಕಿಸ್ ಹಾಗೂ ಅವರ ಕುಟುಂಬದವರ ತಾಳ್ಮೆಯನ್ನು ಮೆಚ್ಚಲೇಬೇಕು. ಅವರ ಈ ನಡೆ, ಮಹಿಳೆಯರು ನ್ಯಾಯಕ್ಕಾಗಿ ಹೋರಾಡುವ ಮನೋಭಾವವನ್ನು ಉತ್ತೇಜಿಸುತ್ತದೆ.

ಸುವರ್ಣ ಸಿ.ಡಿ., ತರೀಕೆರೆ

ಬರೀ ಹೊಡೆದಾಟ ಸಹಿಸುವುದು ಹೇಗೆ?

'ಚಿತ್ರರಂಗ ಮತ್ತು ಪಟ್ಟಭದ್ರರ ಏಕಸ್ವಾಮ್ಯ' ಎಂಬ ಕೇಸರಿ ಹರವೂ ಅವರ ಲೇಖನವನ್ನು (ಪ್ರ.ವಾ., ಜ. 10) ಓದಿದಾಗ, ನನ್ನ ಬಾಲ್ಯದಲ್ಲಿನ ಕೆಲವು ಸನ್ನಿವೇಶಗಳು ನೆನಪಿಗೆ ಬಂದವು. ಆಗ ಸಿನಿಮಾಗಳು ಮನೆ ಮನೆಯ ಕಥೆಗಳಾಗಿದ್ದವು. ಸಮಾಜಕ್ಕೆ ಅವು ಏನಾದರೂ ಸಂದೇಶವನ್ನು ನೀಡುತ್ತಿದ್ದವು. ಈಗಿನ ಮಬ್ಬುಗತ್ತಲೆಯ ಸಿನಿಮಾಗಳು ಅಂತಹ ಸುವಿಚಾರಗಳನ್ನು ಹೊಂದಿರುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಬಹುದು. ಆ ದಿನಗಳಲ್ಲಿ ಚಿತ್ರಮಂದಿರದ ಟಿಕೆಟ್ ದರವು ಎಲ್ಲರಿಗೂ ಕೈಗೆಟಕುವಂತೆ ಇರಲಿಲ್ಲ. ಹೀಗಾಗಿ, ಮನೆಯಲ್ಲಿ ಯಾರಾದರೊಬ್ಬ ಅಥವಾ ಊರಿಗೊಬ್ಬ ಸಿನಿಮಾ ನೋಡಿ ಬಂದರೂ ಎಲ್ಲರೂ ತಾವೇ ಅದನ್ನು ನೋಡಿದ ಹಾಗೆ ಸಂಭ್ರಮಿಸುತ್ತಿದ್ದರು. ಏಕೆಂದರೆ, ಆ ಸಿನಿಮಾದ ಕಥೆ, ಸಂವಾದ, ಹಾಡು, ಕುಣಿತವನ್ನೆಲ್ಲ ಆತ ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಿದ್ದ.

ಈಗ ಅದು ಸಾಧ್ಯವಿಲ್ಲ. ಏಕೆಂದರೆ, ಎಷ್ಟೋ ಸಿನಿಮಾಗಳಲ್ಲಿ ಕಥೆಯೇ ಇರುವುದಿಲ್ಲ! ಹೆಚ್ಚಾಗಿ ಇರುವುದು ಹೊಡೆದಾಟ ಮಾತ್ರ. ಹೊಡೆದಾಟವನ್ನು ವರ್ಣಿಸುವುದು ಹೇಗೆ? ಅದನ್ನು ವಿವರಿಸಲು ಹೋದರೆ, ಅಲ್ಲೂ ಹೊಡೆದಾಟ ಆರಂಭವಾಗಬಹುದು! ಸಿನಿಮಾದಲ್ಲಿ ಫೈಟಿಂಗ್ ಈಗಲೂ ನನಗೆ ರುಚಿಸುತ್ತದೆ. ನೃತ್ಯದಂತೆ ಅದೂ ಮುಖ್ಯ. ಆದರೆ ಆರಂಭದಿಂದ ಅಂತ್ಯದವರೆಗೂ ಏನೂ ಕಥೆ ಇಲ್ಲದೆಯೆ ಬರೀ ಹೊಡೆದಾಟವಾದರೆ ಹೇಗೆ ಸಹಿಸಿಕೊಳ್ಳಲು ಸಾಧ್ಯ?

ಈಶ್ವರ ಶಾಸ್ತ್ರಿ ಮೋಟಿನಸರ, ಶಿರಸಿ

ಪಶು ಆಸ್ಪತ್ರೆ: ಸ್ಥಳಾಂತರ ಸಲ್ಲದು

ನಗರಗಳಲ್ಲಿ ಮುಚ್ಚದೇ ಉಳಿದುಕೊಂಡಿರುವ ಕೆಲವೇ ಕೆಲವು ಸರ್ಕಾರಿ ಪಶು ಆಸ್ಪತ್ರೆಗಳನ್ನು ಗ್ರಾಮೀಣ ಪ್ರದೇಶಗಳಿಗೆ ಸ್ಥಳಾಂತರಿಸುವ ಕಾರ್ಯ ನಡೆಯುತ್ತಿದೆ. ನಗರದಲ್ಲಿ ಇರುವುದು ಹಸು ಮತ್ತು ಎಮ್ಮೆಗಳು ಮಾತ್ರವಲ್ಲ, ಅಸಂಖ್ಯಾತ ಮನೆಗಳಲ್ಲಿ ಸಾಕುಪ್ರಾಣಿಗಳಿವೆ. ಯಾರಿಗೂ ಸೇರದ, ಲೆಕ್ಕವೇ ಇಲ್ಲದಷ್ಟು ಬೆಕ್ಕು, ಬೀದಿನಾಯಿಗಳಿವೆ. ಇವಲ್ಲದೆ, ಹದ್ದು, ಕಾಗೆ, ಪಾರಿವಾಳದಂತಹ ಪಕ್ಷಿಗಳು ಹಲವು ಸಂದರ್ಭಗಳಲ್ಲಿ ಸಂಕಷ್ಟಕ್ಕೆ ಸಿಲುಕುತ್ತವೆ. ಒಂದೆಡೆ, ಸರ್ಕಾರಿ ಪಶು ಆಸ್ಪತ್ರೆಗಳು ಇಲ್ಲವಾಗುತ್ತಿದ್ದರೆ, ಇನ್ನೊಂದೆಡೆ, ಪಶು ಆಹಾರ ಮಳಿಗೆ, ಸಾಕುಪ್ರಾಣಿಗಳ ಖಾಸಗಿ ಆಸ್ಪತ್ರೆಗಳು ಮಾತ್ರ ಅಲ್ಲಲ್ಲಿ ಕಾಣಸಿಗುತ್ತವೆ. ಮನುಷ್ಯರ ಆಹಾರಕ್ಕಿಂತ ಪಶು ಆಹಾರದ ಬೆಲೆಯೇ ಹೆಚ್ಚಾಗಿರುತ್ತದೆ.

ಉಸಿರುಗಟ್ಟಿಸುವಂತಹ ನಗರಗಳಲ್ಲಿ ಸಾಕುಪ್ರಾಣಿಗಳು ಹಲವರಿಗೆ ಬದುಕುವ ಭರವಸೆ ನೀಡುತ್ತಿವೆ. ಬೀದಿನಾಯಿಗಳಿಗೆ ಊಟ, ಔಷಧಿ ನೀಡಿ ಮಾನವೀಯತೆ ಮೆರೆಯುವ ಅಷ್ಟೇ ಪ್ರಮಾಣದ ಜನಸಾಮಾನ್ಯರೂ ಇದ್ದಾರೆ. ಸರ್ಕಾರಕ್ಕೆ ಇವು ಉಸಿರಾಡುವ, ಬದುಕಿಸುವ ಜೀವಿಗಳಾಗಿ ಕಾಣಿಸುತ್ತಿಲ್ಲವೇ? ಮನೋವಿಜ್ಞಾನದಲ್ಲಿ ಸಾಕುಪ್ರಾಣಿಗಳ ಜೊತೆಜೊತೆಗೆ ರೋಗನಿವಾರಣೆ ಚಿಕಿತ್ಸಾ ಪದ್ಧತಿ ಚಾಲ್ತಿಯಲ್ಲಿದೆ. ಪಶುವೈದ್ಯಕೀಯ ಕಾಲೇಜುಗಳಿಂದ ಪ್ರತಿವರ್ಷ ಹೊರಬರುತ್ತಿರುವ ಸಾವಿರಾರು ಪದವೀಧರರಿಗೆ ಸರ್ಕಾರ ಕೆಲಸ ನೀಡುತ್ತಿದೆಯೇ? ಸಕಲ ಜೀವಿಗಳೆಡೆಗೂ ಮಾತೃಹೃದಯ ಹೊಂದಬೇಕಾದ ಸರ್ಕಾರದ ನಡೆ ಜಾಣ ನಿರ್ಲಕ್ಷ್ಯವೇ ಅಥವಾ ಖಾಸಗಿ ಕ್ಷೇತ್ರಕ್ಕೆ ನೀಡುತ್ತಿರುವ ಉತ್ತೇಜನವೇ? ಆಸ್ಪತ್ರೆಗಳಿಗೆ ವೈದ್ಯರನ್ನು ನೇಮಿಸಿ, ಅವಶ್ಯಕ ಸಾಮಗ್ರಿಗಳನ್ನು ನೀಡುವ ಬದಲು, ಅವುಗಳನ್ನು ಮುಚ್ಚುವ ಅಥವಾ ಸ್ಥಳಾಂತರಿಸುವ ನಡೆ ಸರಿಯಲ್ಲ.

ಶಾಂತರಾಜು ಎಸ್., ಮಳವಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಧ್ಯ ಭಾರತವೇ 'ಸ್ವಚ್ಛ ಭಾರತ'



ದೇಶದ ನಗರಗಳಲ್ಲಿ ಯಾವುದು ಹೆಚ್ಚು ಸ್ವಚ್ಛ ಎಂಬುದನ್ನು ನಿರ್ಧರಿಸುವ 2023ನೇ ಸಾಲಿನ ಸ್ವಚ್ಛ ಸರ್ವೇಕ್ಷಣೆಯ ಪ್ರಶಸ್ತಿಗಳು ಗುರುವಾರ ಪ್ರಕಟವಾಗಿವೆ. ದೇಶದ ಅತ್ಯಂತ ಸ್ವಚ್ಛ ನಗರ ಎಂಬ ಹಿರಿಮೆಗೆ ಸತತ ಏಳನೇ ವರ್ಷ ಇಂದೋರ್ ಪಾತ್ರವಾಗಿದೆ. ಈ ಸಾಲಿನಲ್ಲಿ ಗುಜರಾತ್‌ನ ಸೂರತ್ ಸಹ ಆ ಸ್ಥಾನವನ್ನು ಇಂದೋರ್‌ನೊಟ್ಟಿಗೆ ಹಂಚಿಕೊಂಡಿದೆ. ಈ ಸಾಲಿನ ಹೆಚ್ಚಿನ ಪ್ರಶಸ್ತಿಗಳಿಗೆ ಪಾತ್ರವಾಗಿರುವುದು ಮಧ್ಯ ಭಾರತದ ರಾಜ್ಯಗಳು. ದಕ್ಷಿಣದ ಆಂಧ್ರ ಪ್ರದೇಶ ಮತ್ತು ತೆಲಂಗಾಣಕ್ಕೆ ರಾಷ್ಟ್ರಮಟ್ಟದ ಕೆಲವು ಕಿರು ಪ್ರಶಸ್ತಿಗಳು ಬಂದಿವೆ. ದಕ್ಷಿಣದ ಉಳಿದ ಯಾವ ರಾಜ್ಯಕ್ಕೂ ರಾಷ್ಟ್ರಮಟ್ಟದ ಪ್ರಶಸ್ತಿ ಬಂದಿಲ್ಲ

ಸ್ವಚ್ಛತಾ ಪ್ರಶಸ್ತಿಗಳ ವಿವರ


■ ವಿವಿಧ ವಿಭಾಗಗಳಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ

■ ರಾಷ್ಟ್ರಮಟ್ಟದ ಪ್ರಶಸ್ತಿಗಳ ಸಂಖ್ಯೆ

ಅತ್ಯಂತ ಸ್ವಚ್ಛ ರಾಜ್ಯಗಳು

ಮಹಾರಾಷ್ಟ್ರ 1ನೇ ರ್‍ಯಾಂಕ್
ಮಧ್ಯಪ್ರದೇಶ 2ನೇ ರ್‍ಯಾಂಕ್
ಛತ್ತೀಸಗಢ 3ನೇ ರ್‍ಯಾಂಕ್

* ಈ ನಕ್ಷೆಯಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಪಡೆದ ರಾಜ್ಯಗಳನ್ನು ಮಾತ್ರ ತೋರಿಸಲಾಗಿದೆ. ವಲಯವಾರು ವಿಭಾಗ ಮತ್ತು ರಾಜ್ಯದೊಳಗಿನ ಪ್ರಶಸ್ತಿಗಳನ್ನು ನಕ್ಷೆಯಲ್ಲಿ ತೋರಿಸಿಲ್ಲ



ಗುಜರಾತ್ 1
- **ಸೂರತ್:** ದೇಶದ ಅತ್ಯಂತ ಸ್ವಚ್ಛ ನಗರ, 1ನೇ ರ್‍ಯಾಂಕ್ (ಇಂದೋರ್‌ನೊಟ್ಟಿಗೆ ಮೊದಲ ರ್‍ಯಾಂಕ್ ಹಂಚಿಕೊಂಡಿದೆ)

ಮಹಾರಾಷ್ಟ್ರ 4
- **ನವೀಮುಂಬೈ:** ದೇಶದಲ್ಲೇ ಅತ್ಯಂತ ಸ್ವಚ್ಛ ನಗರ, 3ನೇ ರ್‍ಯಾಂಕ್
- **ಸಾಸ್ವಾಡ್:** 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ಅತ್ಯಂತ ಸ್ವಚ್ಛ ನಗರ, 1ನೇ ರ್‍ಯಾಂಕ್
- **ಲೋನಾವಲಾ:** 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ಸ್ವಚ್ಛ ನಗರ, 3ನೇ ರ್‍ಯಾಂಕ್
- **ಪುಣೆ:** 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ಅತ್ಯಂತ ಸ್ವಚ್ಛ ನಗರ, 10ನೇ ರ್‍ಯಾಂಕ್

ಗೋವಾ 1
- **ಪಣಜಿ:** 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ಪಟ್ಟಣಗಳ ವಿಭಾಗ– ಸ್ವಚ್ಛತೆಯಲ್ಲಿ ಗಣನೀಯ ಪ್ರಗತಿ ಸಾಧಿಸಿದ ಪಟ್ಟಣ, 1ನೇ ರ್‍ಯಾಂಕ್

ಆಂಧ್ರಪ್ರದೇಶ 4
- **ವಿಶಾಖಪಟ್ಟಣ:** 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ಅತ್ಯಂತ ಸ್ವಚ್ಛ ನಗರ, 4ನೇ ರ್‍ಯಾಂಕ್
- **ವಿಜಯವಾಡ:** 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ಅತ್ಯಂತ ಸ್ವಚ್ಛ ನಗರ, 6ನೇ ರ್‍ಯಾಂಕ್
- **ತಿರುಪತಿ:** 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ಅತ್ಯಂತ ಸ್ವಚ್ಛ ನಗರ, 8ನೇ ರ್‍ಯಾಂಕ್
- **ಗುಂಟೂರು:** 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ಪಟ್ಟಣಗಳ ವಿಭಾಗ– ಸ್ವಚ್ಛತೆಯಲ್ಲಿ ಗಣನೀಯ ಪ್ರಗತಿ ಸಾಧಿಸಿದ ಪಟ್ಟಣ, 2ನೇ ರ್‍ಯಾಂಕ್

ಚಂಡೀಗಢ 1
- ಸಫಾಯಿಮಿತ್ರ ನಗರಗಳಲ್ಲಿ 1ನೇ ರ್‍ಯಾಂಕ್

ದೆಹಲಿ 1
- **ಉತ್ತರ ದೆಹಲಿ:** 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ಅತ್ಯಂತ ಸ್ವಚ್ಛ ನಗರ ವಿಭಾಗದಲ್ಲಿ 7ನೇ ರ್‍ಯಾಂಕ್

ಉತ್ತರ ಪ್ರದೇಶ 2
- **ವಾರಾಣಸಿ:** ಗಂಗಾ ತಟದ ಅತ್ಯಂತ ಸ್ವಚ್ಛ ನಗರಗಳಲ್ಲಿ 1ನೇ ರ್‍ಯಾಂಕ್
- **ಪ್ರಯೋಗರಾಜ್:** ಗಂಗಾ ತಟದ ಅತ್ಯಂತ ಸ್ವಚ್ಛ ನಗರಗಳಲ್ಲಿ 2ನೇ ರ್‍ಯಾಂಕ್

ಮಧ್ಯಪ್ರದೇಶ 5
- **ಇಂದೋರ್:** ದೇಶದ ಅತ್ಯಂತ ಸ್ವಚ್ಛ ನಗರ, 1ನೇ ರ್‍ಯಾಂಕ್
- **ಭೋಪಾಲ್:** 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ಅತ್ಯಂತ ಸ್ವಚ್ಛ ನಗರ, 5ನೇ ರ್‍ಯಾಂಕ್
- **ನೌರೋಜಾಬಾದ್:** 1 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯ ಪಟ್ಟಣಗಳ ವಿಭಾಗ– ಸ್ವಚ್ಛತೆಯಲ್ಲಿ ಗಣನೀಯ ಪ್ರಗತಿ ಸಾಧಿಸಿದ ಪಟ್ಟಣ, 1ನೇ ರ್‍ಯಾಂಕ್
- **ಅಮರ್‌ಕಂಟಕ್:** 1 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯ ಪಟ್ಟಣಗಳ ವಿಭಾಗ– ಸ್ವಚ್ಛತೆಯಲ್ಲಿ ಗಣನೀಯ ಪ್ರಗತಿ ಸಾಧಿಸಿದ ಪಟ್ಟಣ, 2ನೇ ರ್‍ಯಾಂಕ
- **ಎಂಎಚ್‌ಒಡಬ್ಲ್ಯು ಕಂಟೋನ್ಮೆಂಟ್:** ದೇಶದಲ್ಲೇ ಅತ್ಯಂತ ಸ್ವಚ್ಛ ಕಂಟೋನ್ಮೆಂಟ್

ಛತ್ತೀಸಗಢ 1
- **ಪಟಾನ್:** 1 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯ ಅತ್ಯಂತ ಸ್ವಚ್ಛ ಪಟ್ಟಣ, 2ನೇ ರ್‍ಯಾಂಕ್

ತೆಲಂಗಾಣ 1
- **ಹೈದರಾಬಾದ್:** 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ಅತ್ಯಂತ ಸ್ವಚ್ಛ ನಗರ, 6ನೇ ರ್‍ಯಾಂಕ್

ನಗರಗಳ ಮೌಲ್ಯಮಾಪನ ಮಾನದಂಡ

ವಿಂಗಡಿಸಿದ ಕಸ ಸಂಗ್ರಹ, ಸಂಸ್ಕರಣೆ ಮತ್ತು ವಿಲೇವಾರಿ ಹಾಗೂ ಸಫಾಯಿಮಿತ್ರ ಸುರಕ್ಷಾ. ಹೀಗೆ ಮೂರು ವಿಭಾಗಗಳಲ್ಲಿ ಮಾನದಂಡಗಳನ್ನು ವಿಂಗಡಿಸಲಾಗಿದೆ. ಈ ಮೂರೂ ವಿಭಾಗಗಳಲ್ಲಿ ಮತ್ತೆ ಹಲವು ಉಪವಿಭಾಗಗಳು ಇರುತ್ತವೆ. ಪ್ರತಿಯೊಂದು ವಿಭಾಗಕ್ಕೂ ಇಂತಿಷ್ಟು ಅಂಕ ಎಂದು ನಿರ್ಧರಿಸಲಾಗುತ್ತದೆ. ಇಂಥ ಕೆಲವು ಮಾನದಂಡಗಳನ್ನು ಇಲ್ಲಿ ವಿವರಿಸಲಾಗಿದೆ

ಕಸ ಸಂಗ್ರಹ ಹಾಗೂ ವಿಂಗಡಣೆ

1. **ಮನೆ ಮನೆ ಕಸ ಸಂಗ್ರಹ:** ನಗರದ ಪ್ರತಿ ಮನೆ, ವಾಣಿಜ್ಯ ಅಂಗಡಿಗಳಿಂದ ಪ್ರತಿದಿನವೂ ಕಸ ಸಂಗ್ರಹಿಸುವ ವ್ಯವಸ್ಥೆ ಇರಬೇಕು. ಹೀಗೆ ಸಂಗ್ರಹಿಸುವಾಗಲೇ ಕಸಗಳನ್ನು ಹಸಿ, ಒಣ, ಗಾಜು, ಔಷಧ ತ್ಯಾಜ್ಯ ಸೇರಿದಂತೆ ಇತರೆ ಗೃಹತ್ಯಾಜ್ಯಗಳನ್ನು ವಿಂಗಡಿಸಿಕೊಳ್ಳಬೇಕು.
2. **ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ:** ನಗರದ ಎಲ್ಲ ವಾಣಿಜ್ಯ ಪ್ರದೇಶಗಳು, ಬಸ್, ರೈಲು ನಿಲ್ದಾಣಗಳನ್ನು ದಿನದಲ್ಲಿ ಎರಡು ಬಾರಿ ಸ್ವಚ್ಛಗೊಳಿಸಬೇಕು. ಹಬ್ಬದ ಅಥವಾ ರಜಾ ದಿನಗಳಲ್ಲೂ ಸ್ವಚ್ಛತಾ ಕಾರ್ಯ ನಿಲ್ಲಬಾರದು. ಈ ಎಲ್ಲಾ ಪ್ರದೇಶಗಳನ್ನು ರಾತ್ರಿ ವೇಳೆಯಲ್ಲಿಯೂ ಕಡ್ಡಾಯವಾಗಿ ಸ್ವಚ್ಛಗೊಳಿಸಬೇಕು. ಜನವಸತಿ ಪ್ರದೇಶಗಳಲ್ಲೂ ಪ್ರತಿನಿತ್ಯ ಸ್ವಚ್ಛತೆ ಕೈಗೊಳ್ಳಬೇಕು. ಜೊತೆಗೆ, ಸಾರ್ವಜನಿಕ ಸ್ಥಳಗಳಲ್ಲಿ ಗುಟ್ಕಾ ಉಗುಳುವ 'ಸ್ಥಳ' ಇರಬಾರದು.
3. **ಮಳೆ ನೀರು ಚರಂಡಿ, ನಾಲೆಗಳು ಹಾಗೂ ನೀರಿನ ಮೂಲಗಳ ಸ್ವಚ್ಛತೆ:** ನಗರದಾದ್ಯಂತ ಮಳೆ ನೀರು ಚರಂಡಿ ಇರಬೇಕು. ಜೊತೆಗೆ, ಸೂಕ್ತ ಅಂತರದಲ್ಲಿ ಮಳೆ ನೀರು ಒಳಗೆ ಇಳಿಯುವ ಕಿಂಡಿಗಳನ್ನು ಅಳವಡಿಸಿರಬೇಕು. ಚರಂಡಿ, ನಾಲೆಗಳು ಅಥವಾ ಯಾವುದೇ ನೀರಿನ ಮೂಲದಲ್ಲಿ ಒಂದೂ ಘನತ್ಯಾಜ್ಯ ತೇಲುತ್ತಿರಬಾರದು. ನೀರಿನ ಮೂಲಗಳ ಬಳಿ ಎಲ್ಲಿಯೂ ಕಸ ಸುರಿಯುವ ಪ್ರದೇಶ ಇರಬಾರದು.
4. **ಆರ್‌ಆರ್‌ಆರ್ ಘಟಕಗಳ ಕುರಿತ ಪ್ರಚಾರ:** ತ್ಯಾಜ್ಯದ ಮರುಬಳಕೆ ಮಾಡುವುದರ ಮೂಲಕ ತ್ಯಾಜ್ಯದ ಪ್ರಮಾಣವನ್ನೇ ಕಡಿಮೆ ಮಾಡುವಂಥ ವ್ಯವಸ್ಥೆಯುಳ್ಳ ಘಟಕಗಳ (ಆರ್‌ಆರ್‌ಆರ್: Reduce Reuse Recycle) ಕುರಿತು ಜನರಲ್ಲಿ ಜಾಗೃತಿ ಇರಬೇಕು. ಜೊತೆಗೆ, ನಗರವೊಂದರಲ್ಲಿ ಇಂಥ ಒಂದು ಘಟಕವಾದರೂ ಇರಬೇಕು. 'ಕಸದಿಂದ ರಸ' ಪರಿಕಲ್ಪನೆಯಲ್ಲಿ ನಗರದ ಉದ್ಯಾನವೊಂದರಲ್ಲಿ ಇನ್‌ಸ್ಟಾಲೇಷನ್ ಕಲೆ ಬಳಸಿ ನಿರ್ಮಿಸಿದ ವಿನ್ಯಾಸ ಇರಬೇಕು.
5. **ಸ್ವಚ್ಛತಾ ಕರ್ಮಚಾರಿಗಳಿಗೆ ನೀಡುತ್ತಿರುವ ಅನುಕೂಲಗಳು:** ಸ್ವಚ್ಛತೆ ಕಾರ್ಯಗಳಲ್ಲಿ ಬಳಸಲು ಕಾಲಕಾಲಕ್ಕೆ ಹೊಸ ಕಿಟ್‌ಗಳನ್ನು ಒದಗಿಸುವುದು. ವರ್ಷಕ್ಕೆ ಒಂದು ಬಾರಿ ಆರೋಗ್ಯ ತಪಾಸಣೆ ಮಾಡಿಸಬೇಕು. ಆರೋಗ್ಯ, ವಿಮೆ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದ ಸರ್ಕಾರಿ ಯೋಜನೆಯ ಫಲಾನುಭವಿಗಳನ್ನಾಗಿ ಮಾಡುವುದು. ಉತ್ತಮ ಕೆಲಸ ಮಾಡಿದವರನ್ನು ಪ್ರತಿ ವಾರ್ಡ್‌ನಲ್ಲಿಯೂ ಗುರುತಿಸುವುದು. ಮಹಿಳಾ ಕರ್ಮಚಾರಿಗಳು ಅವರಿಗಾಗಿಯೇ ಇರುವ ಯೋಜನೆಗಳ ಫಲಾನುಭವಿಗಳಾಗುವಂತೆ ಕ್ರಮ ಕೈಗೊಳ್ಳುವುದು. ಲೈಂಗಿಕ ಅಲ್ಪಸಂಖ್ಯಾತ ಕರ್ಮಚಾರಿಗೆ ಪ್ರತ್ಯೇಕ ಯೋಜನೆ ಸಿದ್ಧಪಡಿಸುವುದು. (ಉದಾ: ಒಡಿಶಾ ಸರ್ಕಾರದ ಸ್ವೀಕೃತಿ ಯೋಜನೆ, ಗುಜರಾತ್‌ನ ಗರಿಮಾ ಗೃಹ ಯೋಜನೆ)



ಸಂಸ್ಕರಣೆ ಮತ್ತು ವಿಲೇವಾರಿ

1. **ಸಂಸ್ಕರಣೆಗೆ ಒಳಗಾಗುತ್ತಿರುವ ಹಸಿ ಮತ್ತು ಒಣ ಕಸದ ಪ್ರಮಾಣ:** ಹಸಿ ಮತ್ತು ಒಣ ಕಸಗಳನ್ನು ಯಾವ ಪ್ರಮಾಣದಲ್ಲಿ ಸಂಸ್ಕರಿಸಲಾಗುತ್ತಿದೆ ಮತ್ತು ಈ ಕಸಗಳನ್ನು ಸಂಸ್ಕರಿಸಿ ಯಾವ ಪ್ರಮಾಣದ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ ಎನ್ನುವುದನ್ನು ಪರಿಗಣಿಸಲಾಗುತ್ತದೆ.
2. **ಕಸ ಸುರಿಯುವ ಪ್ರದೇಶದಲ್ಲಿ ಕಸ ವಿಲೇವಾರಿ ಪ್ರಮಾಣ:** ನಗರಗಳಿಂದ ಪಡೆದುಕೊಂಡ ಕಸಗಳನ್ನು ಸಂಸ್ಕರಣೆ ಮಾಡಲೇಬೇಕು. ಮರುಬಳಕೆಗೆ ಸಾಧ್ಯವೇ ಇಲ್ಲ ಎನ್ನುವಂತಹ ಕಸಗಳನ್ನು ಮಾತ್ರವೇ ಕಸ ಸುರಿಯುವ ಪ್ರದೇಶಕ್ಕೆ ಹಾಕಬೇಕು. ಇನ್ನು ಕಸಗಳನ್ನು ಸಂಸ್ಕರಿಸಿದ ಪ್ರಕ್ರಿಯೆಯಲ್ಲಿ ಉಳಿದ ಕಸವನ್ನು ಈ ಪ್ರದೇಶಕ್ಕೆ ಸುರಿಯಬೇಕು. ಹೀಗೆ ಉಳಿದ ಕಸಗಳನ್ನು ಎಷ್ಟು ಪ್ರಮಾಣದಲ್ಲಿ ಸುರಿಯಲಾಗುತ್ತಿದೆ ಎನ್ನುವುದನ್ನು ಗಮನಿಸಲಾಗುತ್ತದೆ.
3. **ಕಸ ಸುರಿಯುವ ಪ್ರದೇಶದ ಪುನಶ್ಚೇತನ:** ಹಲವು ವರ್ಷಗಳಿಂದ ಕಸವನ್ನು ಒಂದು ಪ್ರದೇಶದಲ್ಲಿ ಸುರಿದಿರಲಾಗುತ್ತದೆ. ಆ ಕಸದ ಮರುಬಳಕೆ ಸಾಧ್ಯವಿರುವುದಿಲ್ಲ. ಇಂಥ ಕಸಗಳ ರಾಶಿಯ ಮೇಲೆ ಹುಲ್ಲುಹಾಸುಗಳನ್ನು ಬೆಳೆಸಬೇಕಾಗುತ್ತದೆ. ಇಂಥ ಪುನಶ್ಚೇತನ ಕಾರ್ಯವನ್ನು ಎಷ್ಟು ಪ್ರಮಾಣದಲ್ಲಿ ಮಾಡಲಾಗಿದೆ ಎನ್ನುವುದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಇಂಥ ಪ್ರದೇಶವು ನಗರದಲ್ಲಿ ಕಡಿಮೆ ವಿಸ್ತಾರದಲ್ಲಿ ಇರಬೇಕು.

ಸಫಾಯಿಮಿತ್ರ ಸುರಕ್ಷಾ

1. ಪ್ರತಿ ಮನೆ, ವಾಣಿಜ್ಯ ಸಂಕೀರ್ಣ, ಕಟ್ಟಡಗಳು, ಸಾರ್ವಜನಿಕ ಸ್ಥಳಗಳಲ್ಲಿ ಇರುವ ಶೌಚಾಲಯಗಳ ಒಳಚರಂಡಿ ವ್ಯವಸ್ಥೆ ಹೇಗಿದೆ ಎನ್ನುವುದುನ್ನು ಗಮನಿಸಲಾಗುತ್ತದೆ. ಸಾರ್ವಜನಿಕ ಶೌಚಾಲಯಗಳು ಜನಸ್ನೇಹಿ ಆಗಿವೆಯೇ, ಸ್ವಚ್ಛವಾಗಿವೆಯೇ, ಮಹಿಳೆ ಹಾಗೂ ಪುರುಷರಿಗೆ ಪತ್ಯೇಕ ವ್ಯವಸ್ಥೆ ಇದೆಯೇ, ಇಲ್ಲೆಲ್ಲಾ ಕಸದ ಬುಟ್ಟಿಗಳಿವೆ ಎಂಬುದನ್ನು ನೋಡಲಾಗುತ್ತದೆ. ಇಲ್ಲಿ ಹೌದು ಅಥವಾ ಇಲ್ಲ ಎನ್ನುವ ಉತ್ತರಗಳನ್ನು ಮಾತ್ರ ಕೇಳಲಾಗುತ್ತದೆ. ಹೌದು ಎಂದರೆ ಪೂರ್ತಿ ಅಂಕ, ಇಲ್ಲ ಎಂದರೆ ಯಾವುದೇ ಅಂಕ ಇಲ್ಲ. ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ ಇದೆಯೇ, ದೂರು ನೀಡಬಹುದೇ ಎಂಬೆಲ್ಲಾ ಅಂಶಗಳನ್ನು ಗಮನಿಸಲಾಗುತ್ತದೆ. ಜೊತೆಗೆ, ಸ್ವಚ್ಛತೆಯ ಕುರಿತು ಜನ ಜಾಗೃತಿಯ ಯಾವೆಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂಬುದು ಮುಖ್ಯವಾಗುತ್ತದೆ.

ಆಧಾರ: ಸ್ವಚ್ಛ ಸರ್ವೇಕ್ಷಣೆ–2023ರ ಟೂಲ್‌ಕಿಟ್, ಸ್ವಚ್ಛ ಸರ್ವೇಕ್ಷಣೆ ಪ್ರಶಸ್ತಿಗಳು

23ನೇ ಸ್ಥಾನದಲ್ಲಿ ಮೈಸೂರು

2023ನೇ ಸಾಲಿನ ಸ್ವಚ್ಛತಾ ಸರ್ವೇಕ್ಷಣೆಯಲ್ಲಿ ದೇಶದ ಅತ್ಯಂತ ಸ್ವಚ್ಛ ನಗರಗಳ ಪಟ್ಟಿಯಲ್ಲಿ ಮೈಸೂರು 23ನೇ ಸಾಲಿನಲ್ಲಿದೆ. 2016ನೇ ಸಾಲಿನಲ್ಲಿ ಮೊದಲ ಸ್ಥಾನ ಪಡೆದುಕೊಂಡಿದ್ದ ಮೈಸೂರನ್ನು ನಂತರದ ವರ್ಷಗಳಲ್ಲಿ ಬೇರೆ ರಾಜ್ಯಗಳ ನಗರಗಳು ಸ್ವಚ್ಛತೆಯಲ್ಲಿ ಹಿಂದಿಕ್ಕಿವೆ. ಕಸ ಸಂಗ್ರಹ, ಕಸ ವಿಂಗಡಣೆ, ಕಸ ಸಂಸ್ಕರಣೆ, ಕಸಬಳಕೆ ಮತ್ತು ಕಸ ಮರುಬಳಕೆ ಶೇ 100ರಷ್ಟು ಅನುಷ್ಠಾನ ಸಾಧ್ಯವಾಗದೇ ಇರುವುದೇ ಸ್ವಚ್ಛತೆಯಲ್ಲಿ ಮೈಸೂರು ಹಿಂದುಳಿಯಲು ಕಾರಣ ಎನ್ನುತ್ತದೆ 2023ರ ಸ್ವಚ್ಛತಾ ಸರ್ವೇಕ್ಷೇಣೆ ವರದಿಯ ದತ್ತಾಂಶಗಳು. ಮೈಸೂರಿಗೆ ಸಂಬಂಧಿಸಿದ ವಿವರಗಳು ಇಂತಿವೆ.

- ಮೈಸೂರು ಸಂಪೂರ್ಣವಾಗಿ ಕಸಮುಕ್ತ ನಗರವಾಗಿಲ್ಲ. ಕಸಮುಕ್ತ ನಗರಗಳಿಗೆ ನೀಡಲಾಗುವ 5 + ರ್‍ಯಾಂಕಿಂಗ್‌ನಲ್ಲಿ ಮೈಸೂರು 3 + ರ್‍ಯಾಂಕಿಂಗ್ ಅಷ್ಟೇ ಪಡೆದಿದೆ. ನಗರದ ವ್ಯಾಪ್ತಿಯ ರಸ್ತೆ, ಚರಂಡಿ, ನಾಲೆ, ಕೆರೆಕಟ್ಟೆಗಳಲ್ಲಿ ಕಸವು ಬಿದ್ದಿದ್ದರೆ ಈ ವಿಭಾಗದಲ್ಲಿ ಅಂಕಗಳು ಕಡಿಮೆಯಾಗುತ್ತವೆ
- ಹಸಿ, ಒಣ ಮತ್ತು ಅಪಾಯಕಾರಿ ತ್ಯಾಜ್ಯವನ್ನು ಮೂಲದಲ್ಲೇ ವಿಂಗಡಣೆ ಮಾಡುವ ಕಾರ್ಯವನ್ನು ಮೈಸೂರು ಶೇ 100ರಷ್ಟು ಅನುಷ್ಠಾನಕ್ಕೆ ತಂದಿಲ್ಲ. ನಗರದಲ್ಲಿ ಸಂಗ್ರಹವಾಗುವ ಕಸದಲ್ಲಿ ಶೇ 70ರಷ್ಟನ್ನು ಮಾತ್ರ ಮೂಲದಲ್ಲೇ ವಿಂಗಡಿಸಲಾಗುತ್ತಿದೆ
- ಮೈಸೂರು ನಗರದಲ್ಲಿ ಮನೆ–ಮನೆಯಿಂದ ಕಸ ಸಂಗ್ರಹಿಸುವ ಕಾರ್ಯವೂ ಶೇ 100ರ ಪ್ರಮಾಣದಲ್ಲಿ ಇಲ್ಲ. ಮೈಸೂರಿನಲ್ಲಿ ಈ ಗುರಿಯ ಅನುಷ್ಠಾನದ ಪ್ರಮಾಣ ಶೇ 97.25ರಷ್ಟು
- ನಗರದಲ್ಲಿ ಸಂಗ್ರಹಿಸಿದ ಕಸದಲ್ಲಿ ಸಂಸ್ಕರಣೆ, ಬಳಕೆ ಮತ್ತು ಮರುಬಳಕೆ ಪ್ರಮಾಣವು ಶೇ 94.05ರಷ್ಟಿದೆ. ಮೈಸೂರಿಗಿಂತಲೂ ಉತ್ತಮ ರ್‍ಯಾಂಕ್ ಪಡೆದ ನಗರಗಳಲ್ಲಿ ಈ ಪ್ರಮಾಣ ಇನ್ನೂ ಹೆಚ್ಚು

* ಕರ್ನಾಟಕದಲ್ಲಿನ ಸ್ವಚ್ಛ ನಗರಗಳಲ್ಲಿ ಮೈಸೂರಿಗೆ (1 ಲಕ್ಷಕ್ಕಿಂತಲೂ ಹೆಚ್ಚಿನ ಜನಸಂಖ್ಯೆ) ಮತ್ತು ಹೊಸದುರ್ಗಕ್ಕೆ (1 ಲಕ್ಷಕ್ಕಿಂತಲೂ ಕಡಿಮೆ ಜನಸಂಖ್ಯೆ) ಪ್ರಶಸ್ತಿ ಸಂದಿವೆ

ಸಿನಿ ಬಿಟ್ಸ್

ಹೀಗಿದೆ 'ರಣಾಕ್ಷ'ನ ಫಸ್ಟ್ ಲುಕ್



ರಕ್ಷಾ, ರಘು

'ಮರೆಯದೆ ಕ್ಷಮಿಸು' ಎಂಬ ಚಿತ್ರ ನಿರ್ದೇಶಿಸಿದ್ದ ಕೆ.ರಾಘವ ನಿರ್ದೇಶನವಿರುವ 'ರಣಾಕ್ಷ' ಚಿತ್ರದ ಫಸ್ಟ್‌ಲುಕ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. 'ಕಾಮಿಡಿ ಕಿಲಾಡಿಗಳು' ಖ್ಯಾತಿಯ ಸೀರುಂಡೆ ರಘು, ರಕ್ಷಾ ಹನುಮಂತು ಹಾಗೂ ರೋಹಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

''ರಣಾಕ್ಷ' ಎಂದರೆ ಹದ್ದಿನಂತೆ ಕಣ್ಣಿಟ್ಟು ಕಾಯುವವನು ಎಂದರ್ಥ, ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಜೊತೆಗೆ ಮಾಸ್ ಚಿತ್ರ. ಮೊದಲ ಸಲ ನಟ ರಘು ಕಾಮಿಡಿ ಬಿಟ್ಟು, ಕ್ಲಾಸ್, ಮಾಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಾಯಕಿ ರಕ್ಷಾ ಪಾತ್ರ ವಿಶೇಷವಾಗಿದೆ. ಇಡೀ ಕಥೆ ಹುಡುಗಿ ಮೇಲೆ ನಿಂತಿರುತ್ತೆ. ಸಕಲೇಶಪುರ, ಹೊನ್ನಾವರ, ಮೂಡಬಿದಿರೆ, ಕಾರ್ಕಳ ಸುತ್ತಮುತ್ತ ಶೂಟಿಂಗ್ ನಡೆಸಿದ್ದೇವೆ'' ಎಂದರು ನಿರ್ದೇಶಕರು.

ಎಚ್.ಎಸ್.ರಾಮು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಚಿತ್ರದಲ್ಲಿ 3 ಹಾಡು, 3 ಸಾಹಸ ದೃಶ್ಯಗಳಿದ್ದು, ವಿಶಾಲ್ ಆಲಾಪ್ ಸಂಗೀತ, ದೀಪಕ್ ಕುಮಾರ್ ಛಾಯಾಗ್ರಹಣವಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ಫೆಬ್ರುವರಿಯಲ್ಲಿ ಚಿತ್ರವನ್ನು ತೆರೆಗೆ ತರಲು ತಂಡ ಆಲೋಚಿಸಿದೆ.

'ಕೆಂಡ'ಕ್ಕೆ ಕೈಯಿಟ್ಟ ಕಿಲ್ಲಾಯ್ ಫಿಲ್ಮ್ಸ್

'ಗಂಟುಮೂಟೆ' ಚಿತ್ರದ ಮೂಲಕ ಗಮನ ಸೆಳೆದಿದ್ದ ರೂಪಾ ರಾವ್ ನಿರ್ಮಿಸಿ, ಸಹದೇವ್ ಕೆಲವಡಿ ನಿರ್ದೇಶಿಸಿರುವ 'ಕೆಂಡ' ಚಿತ್ರದ ವಿತರಣೆ ಹಕ್ಕನ್ನು ಕಿಲ್ಲಾಯ್ ಫಿಲ್ಮ್ಸ್ ಪಡೆದುಕೊಂಡಿದೆ. ನ್ಯೂಯಾರ್ಕ್ ಹಾಗೂ ಬರ್ಲಿನ್ ಮೂಲದ ಈ ಸಂಸ್ಥೆ ಆಸ್ಕರ್ ಪ್ರಶಸ್ತಿ ಪಡೆದುಕೊಂಡ ಅನೇಕ ಸಿನಿಮಾಗಳನ್ನು ನಿರ್ಮಾಣ ಮಾಡಿದೆ.

'ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೆ ನಮ್ಮ ಚಿತ್ರವನ್ನು ತೆಗೆದುಕೊಂಡು ಹೋಗಲು ಮತ್ತು ವಿದೇಶಗಳಲ್ಲಿ ಬಿಡುಗಡೆ ಮಾಡಲು ಕಿಲ್ಲಾಯ್ ಫಿಲ್ಮ್ಸ್ ಸಂಸ್ಥೆಗೆ ಹಕ್ಕು ನೀಡಲಾಗಿದೆ. ಇದೊಂದು ಹೊಸ ಬಗೆಯ ಪ್ರಯತ್ನ. ನಮ್ಮ ಸಿನಿಮಾಗಳನ್ನು ಇನ್ನಷ್ಟು ತಲುಪಿಸಲು ಈ ರೀತಿ ಸಹಭಾಗಿತ್ವ ಸಹಕಾರಿ. ಬೇರೆ ಬೇರೆ ದೇಶಗಳ ಭಾಷೆಗಳಿಗೆ ಡಬ್ ಮಾಡಿ ಸಿನಿಮಾ ಬಿಡುಗಡೆ ಮಾಡುವ ಆಲೋಚನೆ ಇದೆ. ಈ ಸಹಭಾಗಿತ್ವ ನಮ್ಮ ದೇಶಕ್ಕೆ ಅನ್ವಯವಾಗುವುದಿಲ್ಲ. ಕನ್ನಡದಲ್ಲಿ ನಾವೇ ಸಿನಿಮಾ ಬಿಡುಗಡೆ ಮಾಡುತ್ತೇವೆ. ಯಾವುದೇ ಭಾರತೀಯ ಚಿತ್ರೋತ್ಸವಗಳಿಗೆ ಸಿನಿಮಾ ಕಳುಹಿಸುವ ಆಲೋಚನೆ ಇಲ್ಲ' ಎನ್ನುತ್ತಾರೆ ಚಿತ್ರದ ನಿರ್ಮಾಪಕಿ ರೂಪಾ ರಾವ್. ಬಹುತೇಕ ರಂಗಭೂಮಿ ಪ್ರತಿಭೆಗಳೇ ಈ ಚಿತ್ರದಲ್ಲಿದ್ದಾರೆ. ಬಿ.ವಿ ಭರತ್, ಪ್ರಣವ್ ಶ್ರೀಧರ್, ವಿನೋದ್ ರವೀಂದ್ರನ್, ಗೋಪಾಲ ದೇಶಪಾಂಡೆ ಮುಂತಾದವರ ತಾರಾಬಳಗವಿದೆ.



ರೂಪಾ ರಾವ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜನವರಿ 12, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಪ್ರತಿಪದ್ ಗಂ. 14-24 ನಕ್ಷತ್ರ: ಉತ್ತರಾಷಾಢ ಗಂ. 15-18 ಯೋಗ: ಹರ್ಷಣ ಗಂ. 14-05 ಕರಣ: ಬವ ಗಂ. 14-24, ಧನು ಮಾಸದ 27 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 1.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 07-00 ಸೂರ್ಯಾಸ್ತ : 06-17
ಮುಸ್ಲಿಂ ದಿನಾಂಕ : 29 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 6, 2

ಮೇಷ: ಉದ್ಯೋಗಾಕಾಂಕ್ಷಿಗಳಿಗೆ ಬಯಸಿದ ಕ್ಷೇತ್ರದಲ್ಲಿ ಸದವಕಾಶ ದೊರೆಯಲಿದೆ. ಗೆಳೆಯನಿಂದ ಆರ್ಥಿಕ ಸಹಾಯ ನಿರೀಕ್ಷಿಸಬಹುದು. ಹೊಸ ಉದ್ಯೋಗಕ್ಕೆ ಹೊಂದಿಕೊಳ್ಳಲು ಕಷ್ಟವಾಗಬಹುದು.

ವೃಷಭ: ರಾಸಾಯನಿಕ ವಸ್ತುಗಳ ರಫ್ತು ವ್ಯವಹಾರ ನಡೆಸುವವರು ನಿಯಮಕ್ಕೆ ಬದ್ಧರಾಗಿರುವುದು ಉತ್ತಮ. ಮಹಿಳಾ ಉದ್ಯೋಗಿಗಳಿಗೆ ಜವಾಬ್ದಾರಿ ದೊರೆಯಲಿದೆ. ನಯ, ವಿನಯ, ಶಿಷ್ಟಾಚಾರಗಳನ್ನು ಕಾಪಾಡಿಕೊಳ್ಳಿ.

ಮಿಥುನ: ಪ್ರಮುಖ ಗುರಿ ಸಾಧನೆಗಳಿಗೆ ಮುಂದಿನ ದಿನಗಳಲ್ಲಿ ಒಳ್ಳೆಯ ಬೇಡಿಕೆ ಸಿಗುವುದು. ಹೊಂದಾಣಿಕೆಯ ಮನೋಭಾವ ಕಡಿಮೆಯಾಗುವುದರಿಂದ ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗದಂತೆ ಜಾಗ್ರತೆ ವಹಿಸಿ.

ಕರ್ಕಾಟಕ: ಯಾವುದೇ ಅನುಮಾನಗಳಿಲ್ಲದೇ ಏಕಮುಖವಾದ ನಿರ್ಧಾರವನ್ನು ತೆಗೆದುಕೊಳ್ಳುವುದು ಅಸಾಧ್ಯವಾಗುವುದು. ಮಕ್ಕಳ ಅಥವಾ ಸಾಕುಪ್ರಾಣಿಗಳ ಆರೋಗ್ಯ ವ್ಯತ್ಯಾಸದಿಂದ ಭಯ ಉಂಟಾಗಲಿದೆ.

ಸಿಂಹ: ವೃತ್ತಿಯಲ್ಲಿ ಅಧಿಕಾರಿಗಳು ಕಾರ್ಯಸಾಧನೆ ಗುರುತಿಸಿ ಹೆಚ್ಚಿನ ಸೌಲಭ್ಯ ಒದಗಿಸಿ ಕೊಡುವರು. ಕೈ ಹಾಕಿದ ಕೆಲಸಗಳು ಯಾವುದೇ ತೊಂದರೆ ಇಲ್ಲದೆ ನೆರವೇರುವುದು. ವಾಹನ ಖರೀದಿಯ ಬಗ್ಗೆ ಚಿಂತನೆ ಬರಲಿದೆ.

ಕನ್ಯಾ: ವೃತ್ತಿಯಲ್ಲಿ ಮೇಲಧಿಕಾರಿಗಳಿಗೂ ನಿಮಗೂ ಹೊಂದಾಣಿಕೆ ಮೂಡುವುದು ಕಷ್ಟವೆನಿಸಲಿದೆ. ದೂರದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವುದು ಉತ್ತಮ. ಹಸಿರು ಬಣ್ಣ ಅದೃಷ್ಟ ತರುವುದು.

ತುಲಾ: ಜನ ಸಂಪರ್ಕ ಬೆಳೆಸಿಕೊಳ್ಳುವುದನ್ನು ಅಭ್ಯಸಿಸಿಕೊಳ್ಳುವುದು ಉತ್ತಮ. ಮನೆ ಕಟ್ಟಡದ ಕೆಲಸಗಳು ಮುಕ್ತಾಯದ ಹಂತಕ್ಕೆ ತಲುಪುವುದು. ಯಾವುದೇ ಅನಿವಾರ್ಯಗಳಿದ್ದರೂ ದೂರದ ಪ್ರಯಾಣ ಸರಿಯಲ್ಲ.

ವೃಶ್ಚಿಕ: ಅನಿಸಿಕೆಗಳನ್ನು ಉತ್ತಮ ರೀತಿಯಲ್ಲಿ ಅಭಿವ್ಯಕ್ತಗೊಳಿಸಲು ಸಾಧ್ಯವಾಗುವುದು ಕಷ್ಟವೆನಿಸುತ್ತದೆ. ವಕೀಲರು ಕೋರ್ಟು ಕೆಲಸಗಳಲ್ಲಿ ಅಧಿಕ ವರಮಾನ ಗಳಿಸುವರು. ಕೋರ್ಟು ವ್ಯವಹಾರಗಳು ಮುಂದುವರಿಯುವುದು.

ಧನು: ವ್ಯವಹಾರದಲ್ಲಿನ ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟವರಿಂದ ವಿಚಾರ ತಿಳಿದುಕೊಳ್ಳುವುದು ಉತ್ತಮ. ನಿರುದ್ಯೋಗಿಗಳಿಗೆ ಬಯಸಿದ ಉದ್ಯೋಗ ಲಭಿಸುವಂಥ ಸಾಧ್ಯತೆ ಇದೆ.

ಮಕರ: ತಪ್ಪುಗಳನ್ನು ತಿದ್ದಿಹೇಳುವಲ್ಲಿ ಹಿರಿಯ ಅಧಿಕಾರಿಗಳು ಈ ದಿನ ನಿಮ್ಮ ನೆರವಿಗೆ ನಿಲ್ಲುವರು. ಟ್ರಾವೆಲ್ ಏಜೆಂಟ್‌ಗಳಿಗೆ ಹೆಚ್ಚಿನ ಅವಕಾಶಗಳು ಲಭ್ಯವಾಗುತ್ತದೆ. ಅಧ್ಯಾಪಕ ವರ್ಗದವರಿಗೆ ಹೆಚ್ಚಿನ ಕೆಲಸ ಇರುವುದು.

ಕುಂಭ: ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವ ವ್ಯಕ್ತಿಗಳಿಗೆ ಅಧಿಕ ಕಮಿಷನ್ ದೊರೆಯಲಿದೆ. ಮಕ್ಕಳ ವಿದ್ಯಾಭ್ಯಾಸವು ಉತ್ತಮವಾಗಿ ನಡೆದು ಸಂತೋಷ ಉಂಟಾಗಲಿದೆ. ಸರ್ಕಾರಿ ಕೆಲಸಗಳು ಈ ದಿನ ಸುಲಭವಾಗಿ ಆಗಲಿದೆ.

ಮೀನ: ನಿರ್ಧಾರಗಳಿಗೆ ಪಾಲುದಾರರಿಂದ ಉತ್ತೇಜನಕಾರಿ ಪ್ರತಿಕ್ರಿಯೆ ದೊರೆಯುವುದು. ಮನೆಯಲ್ಲಿ ಮತ್ತು ಕುಟುಂಬ ಸದಸ್ಯರಲ್ಲಿ ನಿಮ್ಮ ಮಾತಿಗೆ ಮನ್ನಣೆ ದೊರೆಯಲಿದೆ. ವಾಣಿಜ್ಯ ವ್ಯಾಪಾರಗಳಿಂದ ಅಧಿಕ ಲಾಭ.

ಯಾಕೋ ಸಿಕ್ಕಾಕೊಂಡೆ...

ನುಡಿ ಬೆಳಗು



ಪ್ರೊ.ಎಂ. ಕೃಷ್ಣೇಗೌಡ

ಏನಿಲ್ಲವೆಂದರೂ ಇದೊಂದು ಕಾಲು ಶತಮಾನ ಹಿಂದೆ, ಸಿದ್ದಗಂಗೆ ಮಠದಲ್ಲಿ ನಡೆದ ಘಟನೆ.

ಮಠದ ಜಮೀನಿನಲ್ಲಿ ತೆಂಗಿನಕಾಯಿ ಕಳವಾಗುತ್ತಿದ್ದವು. ಅದು ಜಮೀನಿನ ಕಾವಲುಗಾರರ ಗಮನಕ್ಕೂ ಬಂದಿತ್ತು. ಕಳ್ಳನನ್ನು ಹಿಡಿಯಬೇಕೆಂದು ಕಾವಲುಗಾರರು ನಾನಾ ಬಗೆ ಪ್ರಯತ್ನಗಳನ್ನು ಮಾಡಿದರು. ಎಲ್ಲೆಲ್ಲಿಯೋ ಹೊಂಚು ಹಾಕಿಕೊಂಡು ಕೂತರು. ಆದರೆ ಕಸಬುದಾರ ಕಳ್ಳ. ಅವರಿಗೇ ಚಳ್ಳೆಹಣ್ಣು ತಿನ್ನಿಸಿ ಯಾವ ಮಾಯದಲ್ಲೋ ಬಂದು ಕಾಯಿ ಉದುರಿಸಿಕೊಂಡು ಹಾರಿಹೋಗಿಬಿಡುತ್ತಿದ್ದ. ಜಮೀನಿನಲ್ಲಿ ಕಾಯಿ ಕಳವಾಗುತ್ತಿರುವ ವಿಷಯ ಮೇಲುಸ್ತುವಾರಿದಾರರಿಗೂ ತಿಳಿದಾಗ ಅವರು ಕಾವಲುಗಾರರನ್ನು ಕರೆದು ಉಗಿದು ಉಪ್ಪು ಹಾಕಿದ್ದರು. ಕಾವಲುಗಾರರಿಗೆ ಇನ್ನು ಈ ಕಳ್ಳನನ್ನು ಹಿಡಿಯದಿದ್ದರೆ ನಮಗೆ ಉಳಿಗಾಲವಿಲ್ಲ ಅನ್ನಿಸಿತು. ಅವನು ಸಿಕ್ಕಿದರೆ ಕೈಕಾಲು ಮುರಿಯಬೇಕು ಅಂದುಕೊಂಡು ಕಣ್ಣಲ್ಲಿ ಕಣ್ಣಿಟ್ಟು ಕಾದರು.

ಕಳ್ಳ ಸಿಕ್ಕಿ ಬಿದ್ದ. ಎಲ್ಲಿತ್ತೋ ಸಿಟ್ಟು ಕಾವಲುಗಾರರಿಗೆ. ಕಳ್ಳನನ್ನು ಹಿಡಿದು ಚೆನ್ನಾಗಿ ತದುಕಿದರು. ಮುಂಗೈ ಗಾತ್ರದ ಹೊಂಗೆ ಬಡಿಗೆಯಲ್ಲಿ ಮೈತುಂಬಾ ಬಾಸುಂಡೆ ಏಳುವಂತೆ ಬಡಿದು ಮರಕ್ಕೆ ಕಟ್ಟಿಹಾಕಿದರು. ಮೇಲ್ವಿಚಾರಕರಿಗೆ ಸುದ್ದಿ ಹೋಯಿತು. ಅವರೂ ಬಂದರು. ಕಳ್ಳನನ್ನು ಪೋಲೀಸಿಗೆ ಒಪ್ಪಿಸಬೇಕೆಂದುಕೊಂಡು ಅದಕ್ಕೆ ಮೊದಲು ಯಾವುದಕ್ಕೂ 'ಬುದ್ದಿ'ಯೋರಿಗೆ ಒಂದು ಮಾತು ಹೇಳಬೇಕೆಂದು ಸುದ್ದಿ ತಲುಪಿಸಿದರು. 'ನಡೆದಾಡುವ ದೇವರು' ತಮ್ಮ ಮರದ ಪಾದುಕೆಗಳನ್ನು ಟರ ಟರ ಎಳೆದುಕೊಂಡು, ಕಳ್ಳನನ್ನು ಕಟ್ಟಿಹಾಕಿದ್ದ ಮರದ ಬಳಿಗೆ ದಾಪುಗಾಲಿನಲ್ಲಿ ಬಂದರು. ಎಲ್ಲರಿಗೂ ಕುತೂಹಲ. ಈಗ ಏನು ಮಾಡುತ್ತಾರೆ ಬುದ್ದಿಯೋರು?

ಶಿವಕುಮಾರ ಮಹಾಸ್ವಾಮಿಗಳು ಕಳ್ಳನನ್ನು ನೋಡಿದರು. ಕಳ್ಳ, 'ಬುದ್ದೀ...' ಅಂತ ಅಂತ ಒರಲುತ್ತಾ ಕಟ್ಟಿಹಾಕಿದಲ್ಲೇ ಮಿಲುಗಾಡಿದ. ಅವನ ಪರಿಸ್ಥಿತಿಯನ್ನು ಕಂಡ ಬುದ್ದಿಯೋರ ಕಣ್ಣುಗಳು ಒದ್ದೆಯಾದವು. ಕರುಣೆಯ ಕೊಳವಾದರು ಸ್ವಾಮೀಜೀ. ತಮ್ಮ ಸಿಬ್ಬಂದಿಯನ್ನು ನೋಡಿ 'ಛಿ ಪಾಪಿಗಳಾ, ನೀವೇನು ಮನುಷ್ಯರಾ? ರಾಕ್ಷಸರಾ? ಬಾಸುಂಡೆ ಬರುವಂತೆ ಬಡಿದಿದ್ದೀರಲ್ಲೋ....' ಅನ್ನುತ್ತಾ 'ಮೊದಲು ಈ ಕಟ್ಟು ಬಿಚ್ಚಿ' ಅಂತ ಗುಡುಗಿದರು. ಕಟ್ಟು ಬಿಚ್ಚಿದ ಮೇಲೆ ಕಳ್ಳನ ಸಮೀಪ ಹೋಗಿ 'ಅಲ್ಲ ಕಣೋ, ಕದಿಯೋದು ಕದ್ದೆ, ಯಾಕೋ ಸಿಕ್ಕಾಕೊಂಡೆ...? ದಡ್ಡ, ದಡ್ಡ, ಕದ್ದು ಹೀಗೆ ಸಿಕ್ಕಾಕೋತಾರೇನೋ...' ಅಂದರು.

ಮಠದ ಸಿಬ್ಬಂದಿಗೆ ಆಶ್ಚರ್ಯ. ಇದೇನು ಬದ್ದಿಯೋರ ಮಾತು? ಕಳ್ಳನನ್ನು ಯಾಕೆ ಕದ್ದೆ ಅಂತ ಕೇಳುವುದನ್ನು ಬಿಟ್ಟು ಯಾಕೆ ಸಿಕ್ಕಾಕೊಂಡೆ ಅಂತ ಕೇಳ್ತಾ ಇದ್ದಾರಲ್ಲ ಅಂತ. ಆದರೆ ಸ್ವಾಮಿಗಳು 'ಛೆ ಛೆ ಎಂಥಾ ಕೆಲಸ ಆಗೋಯ್ತು?' ಅಂದುಕೊಂಡು ಅವನನ್ನ ತಮ್ಮೊಂದಿಗೇ ಮಠಕ್ಕೆ ಕರಕೊಂಡು ಹೋದರು. ಅವನ ಹೊಟ್ಟೆ ತುಂಬಾ ಊಟ ಹಾಕಿಸಿದರು. ಊಟವಾದ ಮೇಲೆ ಅವನ ಕೈಗೆ ಐವತ್ತೋ ನೂರೋ ಕೊಟ್ಟು 'ಈಗ ಹೋಗು, ಇನ್ನು ಮೇಲೆ ಕಳ್ಳತನ ಮಾಡಿದರೆ ಯಾರ ಕೈಗೂ ಸಿಕ್ಕಾಕೋಬೇಡ' ಅಂದರು. ಕಳ್ಳ ಕಣ್ಣೀರು ಸುರಿಸುತ್ತಾ ಬುದ್ದಿಯೋರ ಪಾದಗಳ ಮೇಲೆ ಬಿದ್ದು ಹೊರಳಾಡಿದ. 'ನಾನೆಲ್ಲೂ ಹೋಗೋದಿಲ್ಲ ಬುದ್ದೀ, ನಿಮ್ಮ ಸೇವೆ ಮಾಡಿಕೊಂಡು ಮಠದಲ್ಲೇ ಇರ್ತೀನಿ' ಅಂತ ಗೋಳುಗರೆದ. ಸ್ವಾಮೀಜೀಯವರು ಅವನಿಗೆ ಮಠದಲ್ಲೇ ಒಂದು ಕೆಲಸವನ್ನೂ ಕೊಟ್ಟರು.


ಕರುಣೆಯ ನ್ಯಾಯಾಲಯದ ಕಾನೂನುಗಳೇ ಬೇರೆ.

ಪದಬಂಧ 5558

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಗಣಪತಿಯ ಇನ್ನೊಂದು ಹೆಸರು (4)
3. ಕಂಬದ ಬೋದಿಗೆಗೆ ಜೋಡಿಸಿರುವ ಅಲಂಕಾರದ ವಿಗ್ರಹ (4)
5. ಮಲಗುವಿಕೆಯನ್ನು ಹೀಗೆನ್ನಿ (3)
6. ಪುಷ್ಪದಲ್ಲಿರುವ ಸಿಹಿ ರಸ (4)
8. ದಾಯಾದಿಯ ಬೀಳ್ಕೊಡುಗೆ (3)
10. ಬೆಳಗಿನ ಜಾವವಿದು (3)
12. ಸರಸ ವಿರಸ ಸಮನಾಗಿರುವಿಕೆ (4)
15. ಕೊನೆಗೆ ಸ್ವರವಿದ್ದರೆ ಇದು ಅಸಾಧ್ಯ! (3)
16. ಬೇರೆಯವರಿಗೆ ವಹಿಸಿಕೊಡುವುದು (4)
17. ಕೊಂಕಿನ ಧಾರೆಯುಳ್ಳ ಕೊಯ್ಯುವ ಸಾಧನ (4)

ಮೇಲಿಂದ ಕೆಳಕ್ಕೆ
1. ಬಿಡುವು ಹೀಗೆ ದೊರಕಿದೆ (3)
2. ಹತ್ತುವರ್ಷಗಳ ಅವಧಿಯು ತಿರುವು ಮುರುವಾಗಿದೆ (3)
3. ಮನದಿಂದ ಮಾಡಿಕೊಂಡಿರುವ ಅರಿಕೆ (3)
4. ಕೈ ಮುಂದು ಮಾಡಿರುವ ಸೆರೆಯಾಳು (2)
7. ಚಪ್ಪಾಳೆಯನ್ನು ಹೀಗೆನ್ನಿ (5)
9. ಈತ ನರಕಾಧಿಪತಿಯ ಸೇವಕ (5)
11. ತುರಗ ಇಲ್ಲಿ ಕಾಣುತ್ತಿದೆ (3)
12. ಸರದೊಡನಿರುವ ಸಾಮಾನು (3)
13. ಸವಾರ ಕೇಳಿದ ಪ್ರಶ್ನೆ! (3)
14. ಮಂತ್ರವನ್ನು ಮತ್ತೆ ಮತ್ತೆ ಉಚ್ಚರಿಸುವುದು (2)



5557ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಸಹನೆ 3.ವಿಷಯ
5.ಮಣಕ 7.ಏಕಾಂತ
8.ನಾಮಕರಣ
11.ಸುಗುಣ 12.ಹೂದಾನಿ
15.ಗುಲಾಮ 16.ತರತಮ

ಮೇಲಿಂದ ಕೆಳಕ್ಕೆ:
1.ಅಧಮ 2.ನೆಪ
3.ವಿಧಾತ 4.ಯಥಾಸ್ಥಿತಿ
6.ಕಯನಾ 7.ಏಕೀಕರಣ
9.ಣಬಾಹೂ 10.ನಸುನಗು
11.ಸುಗಮ 13.ನಿಯಮ
14.ಪ್ಲುತ

ಸುಡೊಕು 5943

2				9		7		
			4		7		5	
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1	3		9	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5942 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

ಅಯೋಧ್ಯೆ: ಪ್ರಾಣ ಪ್ರತಿಷ್ಠಾಪನೆ ಅಡ್ವಾಣಿ ಭಾಗಿ– ವಿಎಚ್‌ಪಿ

ನವದೆಹಲಿ (ಪಿಟಿಐ): ಅಯೋಧ್ಯೆಯಲ್ಲಿ ಜನವರಿ 22ರಂದು ನಡೆಯಲಿರುವ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಸಮಾರಂಭದಲ್ಲಿ ಬಿಜೆಪಿ ಹಿರಿಯ ಮುಖಂಡ ಎಲ್‌.ಕೆ.ಅಡ್ವಾಣಿ ಭಾಗ ವಹಿಸುತ್ತಾರೆ ಎಂದು ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಅಲೋಕ್‌ಕುಮಾರ್ ಗುರುವಾರ ತಿಳಿಸಿದ್ದಾರೆ.

‘ಸಮಾರಂಭಕ್ಕೆ ತಾನು ಬರುವುದಾಗಿ ಅಡ್ವಾಣಿ ತಿಳಿಸಿದ್ದಾರೆ. ಅಗತ್ಯವೆನಿಸಿದ‌ರೆ, ಅವರಿಗಾಗಿ ನಾವು ವಿಶೇಷ ವ್ಯವಸ್ಥೆ ಮಾಡಲಿದ್ದೇವೆ‘ ಎಂದು ತಿಳಿಸಿದ್ದಾರೆ.

ಪಕ್ಷದ ಮತ್ತೊಬ್ಬ ಹಿರಿಯ ಮುಖಂಡ ಮುರಳಿ ಮನೋಹರ ಜೋಷಿ ಸಮಾರಂಭದಲ್ಲಿ ಭಾಗವಹಿಸುವರೇ ಇಲ್ಲವೇ ಎನ್ನುವುದು ಇನ್ನೂ ಖಚಿತವಾಗಿಲ್ಲ. ಈ ಬಗ್ಗೆ ಪ್ರತಿಕ್ರಿಯಿಸಿದ ಅಲೋಕ್‌ಕುಮಾರ್, ‘ಸಮಾರಂಭಕ್ಕೆ ಬರಲು ಪ್ರಯತ್ನಿಸುವುದಾಗಿ ಅವರು ತಿಳಿಸಿದ್ದಾರೆ‘ ಎಂದರು.

ಹಿಂದುತ್ವದ ಸಿದ್ಧಾಂತ, ಸನಾತನ ಧರ್ಮಕ್ಕೆ ವಿರುದ್ಧವಾದುದು – ಇಬ್ಬರು ಶಂಕರಾಚಾರ್ಯರ ಅಭಿಮತ

‘ಅಪೂರ್ಣ ಮಂದಿರದಲ್ಲಿ ಪ್ರತಿಷ್ಠಾಪನೆ ಸಲ್ಲ’

ಪ್ರಜಾವಾಣಿ ವಾರ್ತೆ

ಲಖನೌ: ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನಾ ಸಮಾರಂಭದ ಆಯೋಜನೆ, ಅದಕ್ಕೆ ಆಹ್ವಾನಿಸಿರುವ ಕೆಲ ಅತಿಥಿಗಳ ಕುರಿತು ಹಿಂದುತ್ವದ ಪ್ರಮುಖ ಪ್ರತಿಪಾದಕರು ಹಾಗೂ ಧಾರ್ಮಿಕ ಪ್ರಮುಖರಾದ ನಾಲ್ವರು ‘ಶಂಕರಾಚಾರ್ಯರ’ ನಡುವೆಯೇ ಭಿನ್ನಮತ ವ್ಯಕ್ತವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರೂ ಸೇರಿದಂತೆ ಸಮಾರಂಭಕ್ಕೆ ಆಹ್ವಾನಿಸಿರುವ ಕೆಲವು ಅತಿಥಿಗಳಿಗೆ ಸಂಬಂಧಿಸಿ ಸಂಘಟಕರ ವಿರುದ್ಧ ಇಬ್ಬರು ಶಂಕರಾಚಾರ್ಯರು ಬಹಿರಂಗವಾಗಿಯೇ ಅಸಮಾಧಾನ ಹೊರಹಾಕಿದ್ದಾರೆ.

ಅಯೋಧ್ಯೆಯಲ್ಲಿ ಇದೇ 22ರಂದು ನಡೆಯುವ ಪ್ರಾಣ ಪ್ರತಿಷ್ಠಾಪನೆ ಸಮಾರಂಭವು ‘ಹಿಂದುತ್ವದ ತತ್ವ ಹಾಗೂ ಸಿದ್ಧಾಂತಗಳಿಗೆ ವಿರುದ್ಧವಾಗಿದೆ’ ಎಂದು ಅವರು ಬಲವಾಗಿ ಪ್ರತಿಪಾದಿಸಿದ್ದಾರೆ.

ಉತ್ತರಾಖಂಡದ ಬದರಿಕಾಶ್ರಮ ಜ್ಯೋತಿರ್ಮಠದ ಶಂಕರಾಚಾರ್ಯರಾದ ಸ್ವಾಮಿ ಅವಿಮುಕ್ತೇಶ್ವರಾನಂದ ಮಹಾರಾಜ್ ಅವರು, ‘ಅಪೂರ್ಣ ನಿರ್ಮಾಣದ ಮಂದಿರದಲ್ಲಿ ಮೂರ್ತಿ ಪ್ರತಿಷ್ಠಾಪನೆ ಹಿಂದುತ್ವದ ತತ್ವಗಳು, ಸನಾತನ ಧರ್ಮಕ್ಕೆ ವಿರುದ್ಧವಾದುದು’ ಎಂದಿದ್ದಾರೆ.

ಮಂದಿರ ನಿರ್ಮಾಣದ ಉಸ್ತುವಾರಿ ಹೊಂದಿರುವ ಶ್ರೀರಾಮ ಜನ್ಮಭೂಮಿ ತೀರ್ಥ ಟ್ರಸ್ಟ್‌ನ ಅಧಿಕಾರಿಗಳು ಕೂಡಲೇ ರಾಜೀನಾಮೆ ನೀಡಬೇಕು, ಮಂದಿರವನ್ನು ‘ರಾಮಾನಂದಿ ಪಂಥ’ಕ್ಕೆ (ಟ್ರಸ್ಟ್) ಒಪ್ಪಿಸಬೇಕು. ಪಂಥವು ಮೂರ್ತಿ ಪ್ರತಿಷ್ಠಾಪನೆ ನೆರವೇರಿಸುವ ಹಕ್ಕು ಹೊಂದಿದೆ ಎಂದಿದ್ದಾರೆ.

ಮುಖ್ಯಾಂಶಗಳು

- ಶ್ರೀರಾಮ ಜನ್ಮಭೂಮಿ ತೀರ್ಥ ಟ್ರಸ್ಟ್ ಅಧಿಕಾರಿಗಳ ರಾಜೀನಾಮೆ ಸಲಹೆ
- ‘ರಾಮಾನಂದಿ ಪಂಥ’ಕ್ಕೆ (ಟ್ರಸ್ಟ್) ಮಂದಿರವನ್ನು ಒಪ್ಪಿಸಲು ಆಗ್ರಹ

‘ರಾಮಮಂದಿರವು ರಾಮಾನಂದಿ ಪಂಥಕ್ಕೆ ಸೇರುವುದೇ ಆಗಿದ್ದರೆ, ಅದರ ಕಾರ್ಯದರ್ಶಿ ಹಾಗೂ ಇತರೆ ಪದಾಧಿಕಾರಿಗಳು ಏನು ಮಾಡುತ್ತಿದ್ದಾರೆ’ ಎಂದು ಕಟುವಾಗಿ ಪ್ರಶ್ನಿಸಿದ್ದಾರೆ.

‘ಎಕ್ಸ್’ ಜಾಲತಾಣದಲ್ಲಿ ಅನಿಸಿಕೆ ಹಂಚಿಕೊಂಡಿರುವ ಅವರು, ‘ನಾನು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧವಾಗಿ ಇಲ್ಲ. ನಾನು ಕೂಡಾ ಅವರ ಹಿತೈಷಿಯೇ ಆಗಿದ್ದೇನೆ. ಅದಕ್ಕಾಗಿಯೇ, ಅವರಿಗೆ ಸೂಕ್ತ ಸಲಹೆ ನೀಡುತ್ತಿದ್ದೇನೆ’ ಎಂದು ಹೇಳಿದ್ದಾರೆ.

ಪುರಿ ಮೂಲದ ಗೋವರ್ಧನ ಪೀಠದ ಶಂಕರಾಚಾರ್ಯರಾದ ಸ್ವಾಮಿ ನಿಶ್ಚಲಾನಂದ ಸರಸ್ವತಿ ಅವರು ಕೂಡಾ, ‘ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವು ಸನಾತನ ಧರ್ಮಕ್ಕೆ ಅನುಗುಣವಾಗಿ ನಡೆಯುತ್ತಿಲ್ಲ’ ಎಂದು ನೇರ ಮಾತುಗಳಲ್ಲಿ ಹೇಳಿದ್ದಾರೆ.

‘ಒಬ್ಬ ವ್ಯಕ್ತಿಯ ನಡವಳಿಕೆ, ಅವರು ಎಷ್ಟೇ ಗೌರವಾನ್ವಿತ ಸ್ಥಾನದಲ್ಲಿರಲಿ, ಸರಿಯಲ್ಲ ಎನಿಸಿದಾಗ ವಿರೋಧಿಸಬೇಕು. ಶ್ರೀ ರಾಮಜನ್ಮಭೂಮಿ ಬಗ್ಗೆಯೂ ಈ ಅಂಶ ಮನದಲ್ಲಿರಬೇಕು’ ಎಂದು ‘ಎಕ್ಸ್’ ಜಾಲತಾಣದಲ್ಲಿ ಅನಿಸಿಕೆ ಹಂಚಿಕೊಂಡಿದ್ದಾರೆ.

‘ಮೋದಿ ಜೀ ಅವರು ಮಂದಿರ ಉದ್ಘಾಟಿಸುತ್ತಾರೆ. ಮೂರ್ತಿ ಸ್ಪರ್ಶಿಸುತ್ತಾರೆ. ನಾನೇನು ಮಾಡಲಿ, ಚಪ್ಪಾಳೆ ತಟ್ಟಲಾ? ನನ್ನ ಸ್ಥಾನಕ್ಕೂ ಸ್ವಲ್ಪ ಘನತೆ ಇದೆ. ಧಾರ್ಮಿಕ ಸಿದ್ಧಾಂತಗಳಿಗೆ ಅನುಗುಣವಾಗಿ ನಡೆಯದ ಕಾರ್ಯಕ್ರಮಕ್ಕೆ ಏಕೆ ಹೋಗಬೇಕು’ ಎಂದು ಪ್ರಶ್ನಿಸಿದ್ದಾರೆ.

ಆದರೆ, ಶೃಂಗೇರಿ ಮಠದ ಶಂಕರಾಚಾರ್ಯರಾಗಿರುವ ಸ್ವಾಮಿ ಭಾರತೀ ತೀರ್ಥ ಮತ್ತು ಗುಜರಾತ್ ಮೂಲದ ದ್ವಾರಕಾ ಪೀಠದ ಶಂಕರಾಚಾರ್ಯರಾಗಿರುವ ಸ್ವಾಮಿ ಸದಾನಂದ ಸರಸ್ವತಿ ಅವರು, ಪ್ರಾಣ ಪ್ರತಿಷ್ಠಾಪನೆ ಸಮಾರಂಭಕ್ಕೆ ಪೂರ್ಣ ಬೆಂಬಲ ಘೋಷಿಸಿದ್ದಾರೆ.

‘ಇದು, ಸನಾತನ ಧರ್ಮದ ಬೆಂಬಲಿಗರಿಗೆ ಸಂತಸದ ಸಮಯ’ ಎಂದು ಈ ಇಬ್ಬರು ಅಭಿಪ್ರಾಯ ಪಟ್ಟಿದ್ದಾರೆ.

‘ನಾವೂ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದ ವಿರುದ್ಧವಾಗಿದ್ದೇವೆ ಎಂದು ಕೆಲ ಮಾಧ್ಯಮಗಳಲ್ಲಿ ಬಂದಿರುವ ವರದಿಗಳು ‘ಸರಿಯಾದುದಲ್ಲ’ ಎಂದೂ ತಳ್ಳಿಹಾಕಿದ್ದಾರೆ. ಆದರೆ, ಕಾರ್ಯಕ್ರಮ ದಲ್ಲಿ ಭಾಗವಹಿಸುವ ಕುರಿತು ಇವರು ಖಚಿತವಾಗಿ ಏನನ್ನೂ ಹೇಳದೇ ಮೌನವಹಿಸಿದ್ದಾರೆ.

ಶಂಕರಾಚಾರ್ಯರು ದೊಡ್ಡ ಜನಸಮೂಹದ ಬೆಂಬಲ ಹೊಂದಿದ್ದು, ಇವರನ್ನು ಹಿಂದುತ್ವ ಸಿದ್ಧಾಂತದ ಪ್ರಮುಖ ಪ್ರಭಾವಿಗಳು ಎಂದು ಪರಿಗಣಿಸಲಾಗುತ್ತದೆ. ಶಂಕರಾಚಾರ್ಯರ ನಡುವಿನ ಭಿನ್ನಮತ ಕುರಿತ ಬೆಳವಣಿಗೆಗೆ ಪ್ರತಿಕ್ರಿಯಿಸಲು ಬಿಜೆಪಿ ಮುಖಂಡರು ನಿರಾಕರಿಸಿದ್ದಾರೆ.

‘ರಾಮಾಯಣ ಆಧ್ಯಾತ್ಮಿಕ ವನ’

ಸರಯೂ ನದಿ ತಟದಲ್ಲಿ ನಿರ್ಮಾಣ: ರಾಮನ ವನವಾಸದ ಜೀವನ ದರ್ಶನ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಅಯೋಧ್ಯೆ ರಾಮಮಂದಿರಕ್ಕೆ ಭೇಟಿ ನೀಡಲಿರುವ ಭಕ್ತರು ಮುಂದಿನ ದಿನಗಳಲ್ಲಿ, ರಾಮನ 14 ವರ್ಷದ ವನವಾಸ ಕುರಿತು ವಿವರಿಸುವ ‘ಆಧ್ಯಾತ್ಮ ವನ’ವನ್ನು ಕಣ್ತುಂಬಿಕೊಳ್ಳಬಹುದು.

ಹೌದು, ಅಯೋಧ್ಯೆ ಯೋಜನೆಯ ಭಾಗವಾಗಿ ಸರಯೂ ನದಿಯ ದಂಡೆಯಲ್ಲಿ ರಾಮನ ವ್ಯಕ್ತಿತ್ವ ಸಾರುವ ತೆರೆದ ವಸ್ತುಸಂಗ್ರಹಾಲಯ ಒಳಗೊಳ್ಳುವ ಉದ್ಯಾನವನ್ನು ನಿರ್ಮಿಸಲು ನಿರ್ಧರಿಸಲಾಗಿದೆ.

ಅಯೋಧ್ಯೆ ಮರು ಅಭಿವೃದ್ಧಿ ಪ್ರಾಜೆಕ್ಟ್‌ನ ಮಾಸ್ಟರ್ ಪ್ಲಾನರ್ ದೀಕ್ಷು ಕುಕರೇಜಾ ಅವರು, ‘ರಾಮ, ರಾಮಾಯಣ, ಅಯೋಧ್ಯೆ ಮತ್ತು ಸರಯೂ ನದಿಯು ಹಿಂದೂ ಧರ್ಮದ ಬಹುಮುಖ್ಯ ಭಾಗವಾಗಿವೆ. ಇದರ ಭಾಗವಾಗಿಯೇ ಶ್ರೀರಾಮ ವನವಾಸಕ್ಕೆ ಹೋದ 14 ವರ್ಷಗಳನ್ನು ಚಿತ್ರಿಸುವ ಅಂಶಗಳನ್ನು ಒಳಗೊಂಡ ಪರಿಸರ ಸ್ನೇಹಿ ಉದ್ಯಾನವನ್ನು ಸರಯೂ ನದಿಯ ದಂಡೆ ಮೇಲೆ ನಿರ್ಮಿಸಲಾಗುತ್ತದೆ’ ಎಂದಿದ್ದಾರೆ.

ಛತ್ತೀಸಗಢ: ಉಚಿತ ರೈಲು



ರಾಯಪುರ: ರಾಮಮಂದಿರ ದರ್ಶನಕ್ಕಾಗಿ ಅಯೋಧ್ಯೆಗೆ ಹೋಗ ಬಯಸುವ ಜನರಿಗೆ ವಾರ್ಷಿಕ ಉಚಿತ ರೈಲು ಯಾತ್ರೆ ಯೋಜನೆಗೆ ಬಿಜೆಪಿ ನೇತೃತ್ವದ ಛತ್ತೀಸಗಢ ಸರ್ಕಾರ ಅನುಮೋದನೆ ನೀಡಿದೆ.

ಮುಖ್ಯಮಂತ್ರಿ ವಿಷ್ಣು ದೇವ್ ಸಾಯ್ ಅವರ ನೇತೃತ್ವದಲ್ಲಿ ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ವಾರ್ಷಿಕ 20 ಸಾವಿರ ಜನರು ಈ ರೈಲಿನಲ್ಲಿ ಅಯೋಧ್ಯೆಗೆ ಭೇಟಿ ನೀಡುವ ನಿರೀಕ್ಷೆ ಇದೆ.

ಪ್ರತಿಷ್ಠಾಪನೆ ಸಂಭ್ರಮ: ಹಲವು ಕಾರ್ಯಕ್ರಮ

- ರಾಮಮಂದಿರ ಉದ್ಘಾಟನೆಯಾಗಲಿರುವ ಇದೇ 22ರಂದು 84 ಗಂಗಾ ಸ್ನಾನ ಘಟ್ಟಗಳಿಗೆ ಭಕ್ತರು ಮತ್ತು ಪ್ರವಾಸಿಗರಿಗೆ ಉಚಿತ ಸೇವೆ ನೀಡಲು ನಿರ್ಧರಿಸಿರುವುದಾಗಿ ವಾರಾಣಸಿಯ ಮಾ ಗಂಗಾ ನಿಶಾದ್ ರಾಜ್ ಸೇವಾ ಟ್ರಸ್ಟ್ ಕಾರ್ಯದರ್ಶಿ ಶಂಭು ಸಾಹ್ನಿ ತಿಳಿಸಿದ್ದಾರೆ.
- 22ರಂದು ರಾಜಸ್ಥಾನದ ಜೈಪುರವು ದೀಪಾವಳಿಯಂತೆ ಬೆಳಗಲಿದೆ. ಕನಿಷ್ಠ 5 ಲಕ್ಷ ದೀಪದ ಹಣತೆಗಳನ್ನು ಹಚ್ಚಿ, ಬೆಳಗಲಾಗುವುದು ಎಂದು ಮೇಯರ್ ಡಾ. ಸೌಮ್ಯಾ ಗುಜ್ಜರ್ ತಿಳಿಸಿದ್ದಾರೆ.
- ರಾಷ್ಟ್ರ ರಾಜಧಾನಿ ದೆಹಲಿಯ ವಿವಿಧ ವಸತಿ ಕ್ಷೇಮಾಭಿವೃದ್ಧಿ ಸಂಘಟನೆಗಳು ಹಣತೆ ಬೆಳಗುವುದು ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಿವೆ.
- 4.31 ಕೋಟಿ ಬಾರಿ ‘ರಾಮ’ ನಾಮ ಬರೆದ ಕಾಗದಗಳನ್ನು ಮಧ್ಯಪ್ರದೇಶದ ಛಿಂದ್ವಾರದಿಂದ ಅಯೋಧ್ಯೆಗೆ ಎರಡು ಬಸ್‌ಗಳಲ್ಲಿ ಕಳುಹಿಸಿಕೊಡಲಾಗುತ್ತದೆ ಎಂದು ಕಾಂಗ್ರೆಸ್ ಸಂಸದ ನಕುಲ್‌ನಾಥ್ ಗುರುವಾರ ತಿಳಿಸಿದ್ದಾರೆ. ಬುಧವಾರ ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಕಮಲ್‌ನಾಥ್ ಮತ್ತು ಅವರ ಪುತ್ರ ನಕುಲ್‌ನಾಥ್ ಅವರು 108 ಸಲ ರಾಮ ನಾಮವನ್ನು ಬರೆದಿದ್ದರು.
- ರಾಮಲಲ್ಲಾ ಮೂರ್ತಿ ಪ್ರಾಣ ಪ್ರತಿಷ್ಠಾಪನೆಯಾಗುವ ದಿನದಂದು ಅಯೋಧ್ಯೆ ವಿಮಾನ ನಿಲ್ದಾಣಕ್ಕೆ 100 ಚಾರ್ಟರ್ಡ್ ವಿಮಾನಗಳು ಬರಲಿವೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ.
- 22ರಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ರಾಜ್ಯದಾದ್ಯಂತ ಹಮ್ಮಿಕೊಂಡಿರುವ ಸ್ವಚ್ಛತಾ ಅಭಿಯಾನಕ್ಕೆ ಅಯೋಧ್ಯೆಯಿಂದ ಚಾಲನೆ ನೀಡಲಿದ್ದಾರೆ.



ಅಯೋಧ್ಯೆಯಲ್ಲಿ ‘ಸಂಪೂರ್ಣ ರಾಮಾಯಣ’ ಬಯಲಾಟ ಪ್ರದರ್ಶನ ನೀಡುವುದಕ್ಕಾಗಿ ಕಲಾವಿದರ ತಂಡ ಹೊಸಪೇಟೆಯಿಂದ ಗುರುವಾರ ಹೊರಟಿತು –ಪ್ರಜಾವಾಣಿ ಚಿತ್ರ

ಅಯೋಧ್ಯೆಗೆ ಕಿಷ್ಕಿಂಧೆಯಿಂದ ರಾಮಾಯಣ ಬಯಲಾಟ ತಂಡ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಅಯೋಧ್ಯೆಯಲ್ಲಿ ಶ್ರೀರಾಮನ ಮೂರ್ತಿ ಪ್ರಾಣಪ್ರತಿಷ್ಠೆ ಪ್ರಯುಕ್ತ ಜನವರಿ 14ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಲಿದ್ದು, ಮೊದಲ ನಾಲ್ಕು ದಿನ ‘ಸಂಪೂರ್ಣ ರಾಮಾಯಣ’ ಬಯಲಾಟ ಪ್ರದರ್ಶಿಸಲು ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದ ಆಹ್ವಾನದ ಮೇರೆಗೆ ಬಯಲಾಟ ಕಲಾವಿದರಾದ ಕೆ.ಎಸ್‌.ಸತ್ಯನಾರಾಯಣ ನೇತೃತ್ವದಲ್ಲಿ 16 ಜನರ ತಂಡ ಅಯೋಧ್ಯೆಗೆ ತೆರಳಿತು.

‘ರಾಜ್ಯದಿಂದ ಆಯ್ಕೆಯಾದ ಏಕೈಕ ಸಾಂಸ್ಕೃತಿಕ ತಂಡ ನಮ್ಮದು ಎಂಬ ಮಾಹಿತಿ ಇದೆ. ಈ ಅವಕಾಶ ಸಿಕ್ಕಿದ್ದು ನಮ್ಮ ಪುಣ್ಯ. ನಾವು ಹತ್ತಾರು ವರ್ಷಗಳಿಂದ ಕಾಯುತ್ತಿದ್ದ ಅವಕಾಶ ನಮ್ಮತಂಡಕ್ಕೆ ಒಲಿದು ಬಂದಿರುವುದಕ್ಕೆ ಬಹಳ ಸಂತೋಷವಾಗಿದೆ' ಎಂದು ಸತ್ಯನಾರಾಯಣ ಮಾಧ್ಯಮದವರಿಗೆ ತಿಳಿಸಿದರು.

ಒಂದು ಗಂಟೆ ಪ್ರದರ್ಶನ: ಪ್ರತಿ ದಿನ ಅಲ್ಲಿ ಒಂದು ಗಂಟೆಯ ಬಯಲಾಟ ಪ್ರದರ್ಶನ ನೀಡಬೇಕಿದ್ದು, ಸಂಜೆ 6ರಿಂದ 7ರವರೆಗೆ ಈ ಪ್ರದರ್ಶನ ಇರಲಿದೆ.

ಸತ್ಯನಾರಾಯಣ ಅವರು ರಾಮನ ಪಾತ್ರ ನಿರ್ವಹಿಸಲಿದ್ದರೆ, ಜ್ಯೋತಿ (ಸೀತೆ), ಪರಶುರಾಮ (ಲಕ್ಷ್ಮಣ), ವಿರೂಪಾಕ್ಷಯ್ಯ (ಹನುಮಂತ), ಚನ್ನಬಸವ (ರಾವಣ), ಶಂಕರ (ಸುಗ್ರೀವ), ಮಹೇಶ (ಶೂರ್ಪನಖಿ), ಬಿ.ಶಿವಪ್ಪ (ಸಾರಥಿ) ತಂಡದಲ್ಲಿದ್ದಾರೆ. ಹಾರ್ಮೋನಿಯಂ, ತಬಲ, ಮೃದಂಗ, ತಾಳವಾದ್ಯದ ಕಲಾವಿದರೂ ಜತೆಗಿದ್ದಾರೆ.

ಕಾಂಗ್ರೆಸ್ ವಿರುದ್ಧ ಅಸ್ಸಾಂ ಸಿ.ಎಂ ಕಿಡಿ

ಗುವಾಹಟ (ಪಿಟಿಐ): ‘ಕಾಂಗ್ರೆಸ್ ಪಕ್ಷಕ್ಕೆ ತನ್ನ ಪಾಪ ಕಡಿಮೆ ಮಾಡಿಕೊಳ್ಳುವ ಉತ್ತಮ ಅವಕಾಶವನ್ನು ನೀಡಲಾಗಿತ್ತು. ಆದರೆ, ರಾಮಲಲ್ಲಾ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ನೀಡಲಾಗಿದ್ದ ಆಹ್ವಾನವನ್ನು ನಿರಾಕರಿಸಿದೆ. ಇದರಿಂದ ಕಾಂಗ್ರೆಸ್ ಅನ್ನು ‘ಹಿಂದೂ ವಿರೋಧಿ’ ಎಂದೇ ಇತಿಹಾಸ ಪರಿಗಣಿಸುತ್ತದೆ‘ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಹೇಳಿದ್ದಾರೆ.

ಸೋಮನಾಥ ಮಂದಿರ ವಿಚಾರದಲ್ಲಿ ಪಂಡಿತ್ ನೆಹರೂ ಅವರು ಅನುಸರಿಸಿದ್ದ ನೀತಿಯನ್ನೇ ಕಾಂಗ್ರೆಸ್ ನಾಯಕತ್ವ ಇದೀಗ ರಾಮಮಂದಿರ ವಿಚಾರದಲ್ಲೂ ಮುಂದುವರಿಸಿದೆ. ಹೀಗಾಗಿ ಇತಿಹಾಸವು ಕಾಂಗ್ರೆಸ್ ಅನ್ನು ಹಿಂದೂ ವಿರೋಧಿ ಪಕ್ಷ ಎಂದೇ ಭಾವಿಸಲಿದೆ ಎಂದು ಹೇಳಿದ್ದಾರೆ.

ಪ್ರಾಣ ಪ್ರತಿಷ್ಠಾಪನೆ: ಸಿ.ಎಂಗಳಿಗೆ ಆಹ್ವಾನ ಇಲ್ಲ

ನವದೆಹಲಿ (ಪಿಟಿಐ): ಡಾ.ಬಿ.ಆರ್. ಅಂಬೇಡ್ಕರ್, ಜಗಜೀವನ ರಾಂ, ಕಾನ್ಶಿರಾಂ ಕುಟುಂಬದ ಸದಸ್ಯರು ಅಯೋಧ್ಯೆಯಲ್ಲಿ ಇದೇ 22ರಂದು ನಡೆಯಲಿರುವ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆ ಸಮಾರಂಭದ ಆಹ್ವಾನಿತರಲ್ಲಿ ಸೇರಿದ್ದಾರೆ.

ಆಹ್ವಾನ ಪಡೆದ ಪರಿಶಿಷ್ಟ ಜಾತಿಗೆ ಸೇರಿದ ಪ್ರಮುಖರಲ್ಲಿ ಈ ಕುಟುಂಬದವರು ಇದ್ದಾರೆ ಎಂದು ಮೂಲಗಳು ತಿಳಿಸಿವೆ. ಮೂಲಗಳ ಪ್ರಕಾರ, ರಾಮಜನ್ಮಭೂಮಿ ಆಂದೋಲನದಲ್ಲಿ ಮೃತಪಟ್ಟಿದ್ದ ಕರಸೇವಕರ ಕುಟುಂಬದ ಸದಸ್ಯರನ್ನು ಆಹ್ವಾನಿಸಲಾಗಿದೆ.


ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾಗವಹಿಸ ಲಿರುವ ಈ ಸಮಾರಂಭದಲ್ಲಿ ರೈತರು, ಕಾರ್ಮಿಕರು, ದೇಶದ ವಿವಿಧೆಡೆಯಿಂದ ಬರುವ ಮಠಾಧೀಶರು ಸೇರಿದಂತೆ ಸಾವಿರಾರು ಜನರು ಭಾಗವಹಿಸುವ ನಿರೀಕ್ಷೆ ಇದೆ.

ಆತಿಥೇಯ ರಾಜ್ಯ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಹೊರತುಪಡಿಸಿ, ಬೇರಾವುದೇ ರಾಜ್ಯಗಳ ಮುಖ್ಯಮಂತ್ರಿಗಳನ್ನು ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಆಹ್ವಾನಿಸಿಲ್ಲ ಎಂದು ಮೂಲಗಳು ಸ್ಪಷ್ಟಪಡಿಸಿವೆ.

ಉಳಿದಂತೆ, ರಾಜಕೀಯ ಮುಖಂಡರಿಗೆ ಅವರು ಕೇಂದ್ರ ಅಥವಾ ರಾಜ್ಯಗಳಲ್ಲಿ ಸಚಿವರೇ ಆಗಿರಲಿ, ಆಹ್ವಾನ ನೀಡಲಾಗಿಲ್ಲ ಎಂದು ತಿಳಿಸಿದೆ.

ಷೇರುಪೇಟೆ ವಹಿವಾಟು

63



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,618
ಇಂದಿನ ಅಂತ್ಯ	21,647
▲	28
ದಿನದ ಗರಿಷ್ಠ	21,726

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹565
12 ಮೊಟ್ಟೆಗೆ	₹75

ಮೈಸೂರು

100 ಮೊಟ್ಟೆಗೆ	₹565

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹905 (895)
ಸೂರ್ಯಕಾಂತಿ (ರಿಫೈನ್ಡ್)	₹930 (925)
ಪಾಮೋಲಿನ್	₹840 (835)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹232-479

ದ್ವಿತಳಿ (ಬಿ.ವಿ) ₹271-568

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹153
ಆರ್‌ಎಸ್‌ಎಸ್-5	₹148
ಗುಡ್ ಲಾಟ್	₹131

ವಿನಿಮಯ ದರ

$ ಡಾಲರ್	83.02
£ ಪೌಂಡ್	105.79
€ ಯುರೊ	91.04
¥ ಯೆನ್ (100ಕ್ಕೆ)	57

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8000-9500
ತಿಪಟೂರು	₹8500-9810
ತುರುವೇಕೆರೆ	₹9800-9800

ಕಾರ್ಯಕ್ಷಮತೆ ಹೆಚ್ಚಿಸಿಕೊಂಡ ಹಟ್ಟಿ ಚಿನ್ನದ ಗಣಿ ಕಂಪನಿ

4 ಟನ್ ಚಿನ್ನ ಉತ್ಪಾದನೆಗೆ ಸಿದ್ಧತೆ

• ಚಂದ್ರಕಾಂತ ಮಸಾನಿ

ರಾಯಚೂರು: ಪ್ರಸ್ತುತ ಲಾಭದಲ್ಲಿ ಮುಂದುವರಿದಿರುವ ಹಟ್ಟಿ ಚಿನ್ನದ ಗಣಿ ಕಂಪನಿಯು, ತನ್ನ ಉತ್ಪಾದನಾ ಸಾಮರ್ಥ್ಯವನ್ನು ದ್ವಿಗುಣಗೊಳಿಸಲು ಮುಂದಾಗಿದೆ.

ಕಂಪನಿಯು ವಾರ್ಷಿಕ 2 ಸಾವಿರ ಕೆ.ಜಿ ಚಿನ್ನ ಉತ್ಪಾದನಾ ಸಾಮರ್ಥ್ಯ ಹೊಂದಿದೆ. ಈಗ ಹೆಚ್ಚುವರಿಯಾಗಿ 2 ಸಾವಿರ ಕೆ.ಜಿ ಚಿನ್ನ ಉತ್ಪಾದಿಸುವ ದಿಸೆಯಲ್ಲಿ ತನ್ನ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡಿದೆ.

ಕಂಪನಿಯ ಆವರಣದಲ್ಲಿಯೇ ₹59 ಕೋಟಿ ವೆಚ್ಚದಲ್ಲಿ ಇನ್ನೊಂದು ಹೊಸ ಬಾಲ್ ಮಿಲ್ ನಿರ್ಮಿಸಲಾಗಿದೆ. ಹೊಸ ಘಟಕದಲ್ಲಿ ಮೊದಲ ಹಂತವಾಗಿ 500 ಕೆ.ಜಿ ಉತ್ಪಾದನಾ ಕಾರ್ಯ ಆರಂಭವಾಗಿದ್ದು, ಏಜೆನ್ಸಿ ಮೂಲಕ ಅದರ ನಿರ್ವಹಣೆ ಮಾಡಲಿದೆ.

ತಂತ್ರಜ್ಞಾನ ಮೇಲ್ದರ್ಜೆಗೇರಿಸುವ ಕಾರ್ಯ ಪೂರ್ಣ ಪ್ರಮಾಣದಲ್ಲಿ ಮುಕ್ತಾಯಗೊಂಡ ಬಳಿಕ ಕಂಪನಿಯೇ ನೇರವಾಗಿ ಹೊಸ ಘಟಕದಲ್ಲಿ ಉತ್ಪಾದನೆ ಶುರು ಮಾಡಲಿದೆ. ಎಲ್ಲ ಕಾರ್ಯವೂ ಸುಗಮವಾಗಿ ನಡೆಯಬೇಕು ಎನ್ನುವ ಉದ್ದೇಶದಿಂದ



ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ಹೊಸದಾಗಿ ನಿರ್ಮಿಸಿದ ಬಾಲ್ ಮಿಲ್

ಕಂಟ್ರೋಲ್ ರೂಂ ಸ್ಥಾಪಿಸಲಾಗಿದೆ. ಇದರಿಂದ ಉತ್ಪಾದನೆಯ ಪ್ರತಿಯೊಂದು ಹಂತದ ಮೇಲೂ ನಿಗಾ ಇಡಲು ಸಾಧ್ಯವಾಗಿದೆ.

ಕಂಪನಿಯು 528 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ಶಿವಮೊಗ್ಗ, ಧಾರವಾಡ, ಚಿತ್ರದುರ್ಗ, ಕೋಲಾರದಲ್ಲಿ ಚಿನ್ನದ ನಿಕ್ಷೇಪ ಇದೆ. ಆದರೆ, ಉತ್ಪಾದನಾ ವೆಚ್ಚವೇ ಅಧಿಕವಾಗುತ್ತಿರುವ ಕಾರಣ ಹಟ್ಟಿಯಲ್ಲಿ ಮಾತ್ರ ಉತ್ಪಾದನೆ ಮುಂದುವರಿದಿದೆ.

ಹಟ್ಟಿಯಲ್ಲಿ 2,800 ಮೀಟರ್ ಆಳದಲ್ಲಿ ಚಿನ್ನದ ಅದಿರು ತೆಗೆಯಲಾಗುತ್ತಿದೆ. ಪ್ರತಿ ಟನ್ ಅದಿರಿನಲ್ಲಿ ಸರಾಸರಿ 19 ಗ್ರಾಂ ಚಿನ್ನ ಉತ್ಪಾದನೆಯಾಗುತ್ತಿದೆ. 1984ರ ವರೆಗೆ ಪ್ರತಿ ಟನ್ ಅದಿರಲ್ಲಿ ಕೇವಲ 7 ಗ್ರಾಂ ಚಿನ್ನ ಲಭಿಸುತ್ತಿತ್ತು. ತಂತ್ರಜ್ಞಾನ ಮೇಲ್ದರ್ಜೆಗೇರಿಸಿದ ನಂತರ 2011ರ ವೇಳೆಯಲ್ಲಿ ಹೆಚ್ಚಿನ ಚಿನ್ನ ದೊರೆತಿದೆ. ಈವರೆಗೆ ಇಲ್ಲಿ 85 ಟನ್ ಚಿನ್ನ ಉತ್ಪಾದಿಸಲಾಗಿದೆ.

'ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಹಟ್ಟಿ, ಸಿರವಾರ ತಾಲ್ಲೂಕಿನ ಹಿರಾಬುದ್ದಿನ್ನಿ ಹಾಗೂ ದೇವದುರ್ಗ ತಾಲ್ಲೂಕಿನ ಊಟಿ ಗ್ರಾಮದ ವ್ಯಾಪ್ತಿಯಲ್ಲಿ ಚಿನ್ನದ ನಿಕ್ಷೇಪ ಇದೆ. ಹೊಸದಾಗಿ 14 ಬ್ಲಾಕ್‌ಗಳಲ್ಲಿ ಚಿನ್ನದ ನಿಕ್ಷೇಪ ಇರುವುದನ್ನು ಗುರುತಿಸಿ ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಲಾಗಿದೆ' ಎನ್ನುತ್ತಾರೆ ಸಂಜಯ ಶೆಟ್ಟೆಣ್ಣನವರ್.

ಕಂಪನಿಗೆ ₹268 ಕೋಟಿ ಲಾಭ

ಕಂಪನಿಯು 2021-2022ರಲ್ಲಿ 1,238 ಕೆ.ಜಿ ಚಿನ್ನ ಉತ್ಪಾದಿಸಿ ₹626 ಕೋಟಿ ಲಾಭ ಗಳಿಸಿತ್ತು. ರಾಜ್ಯ ಸರ್ಕಾರಕ್ಕೆ ₹30.8 ಕೋಟಿ ರಾಜಸ್ವ ಪಾವತಿಸಿತ್ತು. 2022-2023ರಲ್ಲಿ 1,411 ಕೆ.ಜಿ ಚಿನ್ನ ಉತ್ಪಾದಿಸಿ, ₹828 ಕೋಟಿ ಲಾಭ ಗಳಿಸುವ ಮೂಲಕ ದಾಖಲೆ ನಿರ್ಮಿಸಿತ್ತು. ಜೊತೆಗೆ ₹39.1 ಕೋಟಿ ರಾಜಸ್ವವನ್ನೂ ಪಾವತಿ ಮಾಡಿತ್ತು.

'2023ರ ಏಪ್ರಿಲ್‌ನಿಂದ ಕಂಪನಿಯು ₹268 ಕೋಟಿ ಲಾಭ ಗಳಿಸಿದೆ' ಎಂದು ವ್ಯವಸ್ಥಾಪಕ ನಿರ್ದೇಶಕ ಸಂಜಯ ಶೆಟ್ಟೆಣ್ಣನವರ್ ಹೇಳಿದರು.

ಮಹೀಂದ್ರದ ಹೊಸ ಕಾರು ಬಿಡುಗಡೆ

ಬೆಂಗಳೂರು: ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ಗುರುವಾರ ಹೊಸ ಎಲೆಕ್ಟ್ರಿಕ್ ಎಕ್ಸ್‌ಯುವಿ 400 ಪ್ರೊ ಶ್ರೇಣಿಯ ಕಾರುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಈ ಕಾರುಗಳ ಎಕ್ಸ್ ಷೋರೂಂ ಬೆಲೆ ₹15.49 ಲಕ್ಷದಿಂದ ಆರಂಭವಾಗಲಿದೆ. ಇಸಿ ಪ್ರೊ (34.5ಕೆಡಬ್ಲ್ಯುಎಚ್ ಬ್ಯಾಟರಿ, 3.3 ಡಬ್ಲ್ಯು ಎಸಿ ಚಾರ್ಜರ್), ಇಎಲ್ ಪ್ರೊ (34.5 ಕೆಡಬ್ಲ್ಯುಎಚ್ ಬ್ಯಾಟರಿ, 7.2 ಡಬ್ಲ್ಯು ಎಸಿ ಚಾರ್ಜರ್) ಮತ್ತು ಇಎಲ್ ಪ್ರೊ (39.4 ಕೆಡಬ್ಲ್ಯುಎಚ್ ಬ್ಯಾಟರಿ, 7.2 ಡಬ್ಲ್ಯು ಎಸಿ ಚಾರ್ಜರ್) ಆವೃತ್ತಿಗಳಲ್ಲಿ ಕಾರುಗಳು ಲಭ್ಯವಿವೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಜನವರಿ 12ರ ಮಧ್ಯಾಹ್ನ 2 ಗಂಟೆಯಿಂದ ಬುಕಿಂಗ್ ಪ್ರಾರಂಭವಾಗಲಿದೆ.

ನೇರ ತೆರಿಗೆ ಸಂಗ್ರಹ ಶೇ 19 ಹೆಚ್ಚಳ

ನವದೆಹಲಿ (ಪಿಟಿಐ): ನೇರ ತೆರಿಗೆಯ ನಿವ್ವಳ ಸಂಗ್ರಹವು 2023-24ರ ಹಣಕಾಸು ವರ್ಷದ ಜನವರಿ 11ರ ವರೆಗೆ ₹14.70 ಲಕ್ಷ ಕೋಟಿಯಷ್ಟು ಆಗಿದೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 19ರಷ್ಟು ಏರಿಕೆಯಾಗಿದೆ.

2023ರ ಏಪ್ರಿಲ್ 1ರಿಂದ 2024ರ ಜನವರಿ 10ರ ವರೆಗೆ ₹2.48 ಲಕ್ಷ ಕೋಟಿ ಮೊತ್ತದ ಮರುಪಾವತಿ ಮಾಡಲಾಗಿದೆ. ಕಂಪನಿಗಳ ವರಮಾನ ತೆರಿಗೆ (ಸಿಐಟಿ) ಮತ್ತು ವೈಯಕ್ತಿಕ ಆದಾಯ ತೆರಿಗೆಯ (ಪಿಐಟಿ) ಬೆಳವಣಿಗೆ ದರವು ಕ್ರಮವಾಗಿ ಶೇ 8.32, ಶೇ 26.11 ರಷ್ಟು ದಾಖಲಾಗಿದೆ ಎಂದು ವಿವರಿಸಿದೆ.

ಇನ್ಫೊಸಿಸ್ ನಿವ್ವಳ ಲಾಭ ಕುಸಿತ

ಇನ್‌ಸೆಮಿ ಕಂಪನಿ ಸ್ವಾಧೀನ ಪ್ರಸ್ತಾವಕ್ಕೆ ಅನುಮೋದನೆ

ಮುಂಬೈ/ ನವದೆಹಲಿ (ಪಿಟಿಐ): 2023-24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಶೇ 8.2ರಷ್ಟು ನಿವ್ವಳ ಲಾಭ ಕಂಡಿದ್ದರೆ, ಇನ್ಫೊಸಿಸ್‌ನ ನಿವ್ವಳ ಲಾಭದಲ್ಲಿ ಶೇ 7.3ರಷ್ಟು ಕುಸಿತವಾಗಿದೆ.

ಇನ್ಫೊಸಿಸ್ ₹6,106 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹6,586 ಕೋಟಿ ನಿವ್ವಳ ಲಾಭಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಕುಸಿತ ಕಂಡಿದೆ.

ಕಂಪನಿಯ ಕಾರ್ಯಾಚರಣಾ ವರಮಾನ ₹38,821 ಕೋಟಿಗೆ ತಲುಪಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ ವರಮಾನವು ₹38,318 ಕೋಟಿ ಇತ್ತು. ಆದಾಯದಲ್ಲಿ ಒಟ್ಟಾರೆ ಶೇ 1.3ರಷ್ಟು ಏರಿಕೆಯಾಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಕಂಪನಿಯ ವರಮಾನವು ಶೇ 1ರಿಂದ ಶೇ 2.5ರಷ್ಟು ಹೆಚ್ಚಾಗಬಹುದು ಎಂದು ಅಂದಾಜು ಮಾಡಲಾಗಿತ್ತು. ಸದ್ಯ ಇದನ್ನು ಪರಿಷ್ಕರಿಸಿದ್ದು, ಶೇ 1.5ರಿಂದ ಶೇ 2ರಷ್ಟು ಹೆಚ್ಚಾಗಬಹುದು ಎಂದು ಅಂದಾಜಿಸಿದೆ.

ಸೆಮಿಕಂಡಕ್ಟರ್ ವಿನ್ಯಾಸ ಸೇವೆ ಒದಗಿಸುವ ಬೆಂಗಳೂರು ಮೂಲದ ಇನ್‌ಸೆಮಿ ಕಂಪನಿಯನ್ನು ₹280 ಕೋಟಿಗೆ ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವಕ್ಕೆ ಅನುಮೋದನೆ ನೀಡಲಾಗಿದೆ. ನಾಲ್ಕನೇ ತ್ರೈಮಾಸಿಕದ ಅಂತ್ಯಕ್ಕೆ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಕಂಪನಿ ತಿಳಿಸಿದೆ.

ಟಿಸಿಎಸ್‌ಗೆ ₹11,735 ಕೋಟಿ ಲಾಭ

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಡಿಸೆಂಬರ್ ತ್ರೈಮಾಸಿಕದಲ್ಲಿ ಒಟ್ಟು ₹11,735 ನಿವ್ವಳ ಲಾಭಗಳಿಸಿದೆ.

ಕಂಪನಿಯ ವರಮಾನವು ₹60,583 ಕೋಟಿಗೆ ತಲುಪಿದೆ. ಆದಾಯದಲ್ಲಿ ಒಟ್ಟಾರೆ ಶೇ 4ರಷ್ಟು ಏರಿಕೆ ಕಂಡಿದೆ. ಇಂಧನ, ಯುಟಿಲಿಟಿ, ತಯಾರಿಕೆ, ಆರೋಗ್ಯ ಸೇರಿದಂತೆ ಹಲವು ವಲಯದಲ್ಲಿನ ಬೆಳವಣಿಗೆಯು ವರಮಾನ ವೃದ್ಧಿಗೆ ಕಾರಣವಾಗಿವೆ ಎಂದು ಕಂಪನಿ ತಿಳಿಸಿದೆ. ಒಟ್ಟು ₹67,238 ಕೋಟಿ ಮೊತ್ತದ ಆರ್ಡರ್‌ಗಳನ್ನು ಸ್ವೀಕರಿಸಲಾಗಿದೆ ಎಂದು ತಿಳಿಸಿದೆ.

₹1.98 ಲಕ್ಷ ಕೋಟಿ ಜಿಎಸ್‌ಟಿ ವಂಚನೆ

ನವದೆಹಲಿ (ಪಿಟಿಐ): 2023ನೇ ಸಾಲಿನಡಿ ದೇಶದಲ್ಲಿ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯವು (ಡಿಜಿಜಿಐ) ₹1.98 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ತೆರಿಗೆ ವಂಚನೆ ಪ್ರಕರಣಗಳನ್ನು ಪತ್ತೆಹಚ್ಚಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಗುರುವಾರ ತಿಳಿಸಿದೆ.


ಸರ್ಕಾರದ ಬೊಕ್ಕಸಕ್ಕೆ ವಂಚಿಸಿದ ಆರೋಪದ ಮೇಲೆ 140 ಮಂದಿಯನ್ನು ಬಂಧಿಸಲಾಗಿದೆ ಎಂದು ತಿಳಿಸಿದೆ.

ಆನ್‌ಲೈನ್ ಗೇಮಿಂಗ್, ಕ್ಯಾಸಿನೊ ಹಾಗೂ ವಿಮಾ ಕ್ಷೇತ್ರದಲ್ಲಿ ಅತಿಹೆಚ್ಚು ವಂಚನೆ ನಡೆದಿದೆ. ಒಟ್ಟು 6,323 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. 2022ನೇ ಸಾಲಿನಡಿ ₹90,499 ಕೋಟಿ ಮೊತ್ತದ ಜಿಎಸ್‌ಟಿ ವಂಚಿಸಿದ್ದ 4,273 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿತ್ತು ಎಂದು ವಿವರಿಸಿದೆ.

ಚಿನ್ನದ ಇಟಿಎಫ್ ₹2,920 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ಬಂಡವಾಳ ಹೂಡಿಕೆಯು 2022ಕ್ಕೆ ಹೋಲಿಸಿದರೆ 2023ರಲ್ಲಿ ಏರಿಕೆಯಾಗಿದೆ. ಜತೆಗೆ, ನಿರ್ವಹಣಾ ಸಂಪತ್ತಿನ ಮೌಲ್ಯವೂ ವೃದ್ಧಿಸಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ತಿಳಿಸಿದೆ. 2022ರಲ್ಲಿ ₹459 ಕೋಟಿ ಹೂಡಿಕೆ ಆಗಿತ್ತು. 2023ರಲ್ಲಿ ₹2,920 ಕೋಟಿ ಹೂಡಿಕೆಯಾಗಿದೆ. ಒಟ್ಟಾರೆ ಆರು ಪಟ್ಟು ಏರಿಕೆಯಾಗಿದೆ.

ಕ್ರಿಪ್ಟೊ ಬಳಕೆಗೆ ನಿಬಂಧನೆ ಸಡಿಲಿಸಲ್ಲ: ದಾಸ್



ಶಕ್ತಿಕಾಂತ ದಾಸ್

ಮುಂಬೈ (ಪಿಟಿಐ): 'ಕ್ರಿಪ್ಟೊ ಕರೆನ್ಸಿಗಳಿಗೆ ಆರ್ಥಿಕ ಸ್ಥಿರತೆಗೆ ಧಕ್ಕೆ ತರುವ ಸಾಮರ್ಥ್ಯವಿದೆ. ಹಾಗಾಗಿ, ಭಾರತದಲ್ಲಿ ಅವುಗಳ ಬಳಕೆಗೆ ವಿಧಿಸಿರುವ ನಿಬಂಧನೆಗಳನ್ನು ಸಡಿಲಿಸುವುದಿಲ್ಲ' ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಷೇರುಪೇಟೆಯ ವಿನಿಮಯ ವಹಿವಾಟು ನಿಧಿಯಲ್ಲಿ ಕ್ರಿಪ್ಟೊಕರೆನ್ಸಿಗಳ ವಹಿವಾಟು ಮುಂದುವರಿಸುವುದಕ್ಕೆ ಸಂಬಂಧಿಸಿ ಕೆಲವು ಬದಲಾವಣೆಗೆ ಅಮೆರಿಕದ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಕಮಿಷನ್ ಅನುಮೋದನೆ ನೀಡಿದೆ.

ಕಾರ್ಯಕ್ರಮದಲ್ಲಿ ಗುರುವಾರ ಪಾಲ್ಗೊಂಡಿದ್ದ ವೇಳೆ ಈ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಬೇರೆಯವರ ಮಾರುಕಟ್ಟೆಗೆ ಉತ್ತಮವಾಗಿರುವ ಅಂಶಗಳು ನಮಗೂ ಉತ್ತಮವಾಗಿರುತ್ತವೆ ಎಂಬ ಪರಿಭಾವಿಸುವುದು ಸರಿಯಲ್ಲ' ಎಂದರು.

'ದೇಶದಲ್ಲಿ ಕ್ರಿಪ್ಟೊಕರೆನ್ಸಿ ಬಳಕೆಗೆ ಆರ್‌ಬಿಐ ವಿಧಿಸಿರುವ ನಿಬಂಧನೆ ಸರಿಯಾಗಿದೆ. ಇದು ನನ್ನ ವೈಯಕ್ತಿಕ ನಿಲುವು ಕೂಡ ಆಗಿದೆ' ಎಂದು ಪ್ರತಿಕ್ರಿಯಿಸಿದರು.

ರೈತ ಮಹಿಳೆಯರಿಗೆ ₹12 ಸಾವಿರ ನೆರವು?

ನವದೆಹಲಿ (ರಾಯಿಟರ್ಸ್): ಕೇಂದ್ರ ಸರ್ಕಾರವು ಫೆಬ್ರುವರಿ 1ರಂದು ಮಂಡಿಸಲಿರುವ ಮಧ್ಯಂತರ ಬಜೆಟ್‌ನಲ್ಲಿ ಕಿಸಾನ್ ಸಮ್ಮಾನ್ ಯೋಜನೆಯಡಿ ರೈತ ಮಹಿಳೆಯರಿಗೆ ವಾರ್ಷಿಕವಾಗಿ ₹12 ಸಾವಿರ ಆರ್ಥಿಕ ನೆರವು ಘೋಷಿಸುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

2024ರ ಲೋಕಸಭಾ ಚುನಾವಣೆಯಲ್ಲಿ ಮಹಿಳಾ ಮತದಾರರನ್ನು ಸೆಳೆಯಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ತಂತ್ರಗಾರಿಕೆ ಹೆಣೆಯುತ್ತಿದೆ. ಈ ನಿಟ್ಟಿನಲ್ಲಿ ನೆರವು ಘೋಷಿಸುವ ಸಾಧ್ಯತೆಯಿದೆ ಎಂದು ಉನ್ನತ ಮೂಲಗಳನ್ನು ಉಲ್ಲೇಖಿಸಿ ರಾಯಿಟರ್ಸ್ ಸುದ್ದಿಸಂಸ್ಥೆ ಹೇಳಿದೆ.

ಪ್ರಸ್ತುತ ಕೇಂದ್ರವು ದೇಶದಾದ್ಯಂತ ರೈತರಿಗೆ ಕಿಸಾನ್ ಸಮ್ಮಾನ್ ಯೋಜನೆಯಡಿ ವಾರ್ಷಿಕ ₹6 ಸಾವಿರ ನೆರವು ನೀಡುತ್ತಿದೆ. ರೈತ ಮಹಿಳೆಯರಿಗೆ ಆರ್ಥಿಕ ನೆರವನ್ನು ದ್ವಿಗುಣಗೊಳಿಸುವ ಉದ್ದೇಶ ಹೊಂದಲಾಗಿದೆ ಎಂದು ಹೇಳಲಾಗಿದೆ. ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್‌ನಲ್ಲಿ ಈ ನೆರವು ಘೋಷಿಸುವ ಸಾಧ್ಯತೆ ಇದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹೆಚ್ಚುವರಿಯಾಗಿ ಸುಮಾರು ₹11,950 ಕೋಟಿ ಹೊರೆಯಾಗಲಿದೆ ಎಂದು ಮೂಲಗಳು ತಿಳಿಸಿವೆ.

'ಯೂರಿಯಾ ದರ ಬದಲಾವಣೆ ಇಲ್ಲ'

ನವದೆಹಲಿ (ಪಿಟಿಐ): ಬೇವು ಲೇಪಿತ ಯೂರಿಯಾ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ ಎಂದು ಕೇಂದ್ರ ಸರ್ಕಾರ ಗುರುವಾರ ಸ್ಪಷ್ಟಪಡಿಸಿದೆ.

ಯೂರಿಯಾ ದರ ಹೆಚ್ಚಿಸಿರುವುದರಿಂದ ರೈತರು ತೊಂದರೆಗೆ ಸಿಲುಕಿದ್ದಾರೆ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರ ಆರೋಪಕ್ಕೆ ಸಂಬಂಧಿಸಿದಂತೆ ಈ ಪ್ರತಿಕ್ರಿಯೆ ನೀಡಿದೆ.

'ಮಣ್ಣಿನಲ್ಲಿ ಗಂಧಕದ ಕೊರತೆ ನೀಗಿಸಲು ಹೊಸದಾಗಿ ಗಂಧಕ ಲೇಪಿತ ಯೂರಿಯಾವನ್ನು (ಯೂರಿಯಾ ಗೋಲ್ಡ್) ಸಂಶೋಧಿಸಲಾಗಿದೆ. ಈ ಗೊಬ್ಬರದ ಪ್ರಮಾಣಕ್ಕೆ ಅನುಗುಣವಾಗಿ ಬೆಲೆ ನಿಗದಿಪಡಿಸಲಾಗಿದೆ. ರೈತರನ್ನು ದಿಕ್ಕುತಪ್ಪಿಸುವುದು ಸರಿಯಲ್ಲ' ಎಂದು ಕೇಂದ್ರ ರಾಸಾಯನಿಕ ಗೊಬ್ಬರಗಳ ಸಚಿವ ಮನ್ಸುಖ್ ಮಾಂಡವೀಯ ಹೇಳಿದ್ದಾರೆ.

ಆರೋಪ ಏನು?: ಬೇವು ಲೇಪಿತ ಯೂರಿಯಾದ ಪ್ರತಿ 45 ಕೆ.ಜಿ ತೂಕದ ಚೀಲಕ್ಕೆ ಸರ್ಕಾರವು ₹266.5 ದರ ನಿಗದಿಪಡಿಸಿದೆ. ಆದರೆ, ಗಂಧಕ ಲೇಪಿತ ಯೂರಿಯಾದ 40 ಕೆ.ಜಿ ತೂಕದ ಚೀಲಕ್ಕೂ ಇಷ್ಟೇ ದರ ನಿಗದಿಪಡಿಸಲಾಗಿದೆ ತೂಕ ಕಡಿತಗೊಳಿಸಿದ್ದರೂ ದರ ಕಡಿಮೆ ಮಾಡಿಲ್ಲ. ಬಿಜೆಪಿಯಿಂದ ರೈತರ ಶೋಷಣೆ ಮುಂದುವರಿದಿದೆ ಎಂದು ಅಖಿಲೇಶ್ ಟೀಕಿಸಿದ್ದರು.

ಮುಂಬೈ ಧಾರಣೆ

ಶೇಂಗಾ

11-01-2024

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11300-11400
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	865 (860)
ಪಾಮ್ ವಾರದ ಡೆಲಿವರಿ	838 (837)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	62,050 (62,000)
ಬೆಳ್ಳಿ ಕೆ.ಜಿ	71,550 (71,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	580

ಅಡಿಕೆ

ಬಂಟ್ವಾಳ

ಕೋಕ	18000-28500
ಹೊಸತು	28500-37000
ಹಳತು	42000-44500

ಕಾರ್ಕಳ

ಹೊಸತು	25000-37000
ಹಳತು	30000-44500

ಕುಮಟ

ಚಿಪ್ಪು	24099-34969
ಕೋಕ	16111-32011
ಹಳೆಚಾಲಿ	36099-39611
ಹೊಸಚಾಲಿ	32689-36329

ಪುತ್ತೂರು

ಹೊಸತು	27000-36500

ಸಾಗರ

ಬಿಳಿಗೋಟು	21569-32309
ಚಾಲಿ	31469-38599
ಕೋಕ	20001-33989
ಕೆಂಪುಗೋಟು	32899-37099
ರಾಶಿ	42699-49429
ಸಿಪ್ಪೆಗೋಟು	10290-20699

ಶಿವಮೊಗ್ಗ

ಬೆಟ್ಟೆ	43010-54899
ಗೊರಬಲು	18100-41069
ರಾಶಿ	33111-49759
ಸರಕು	53300-82696

ಸಿದ್ದಾಪುರ

ಬಿಳಿಗೋಟು	31689-33409
ಚಾಲಿ	38219-40139
ಕೋಕ	30399-33299
ಹೊಸಚಾಲಿ	32199-33989
ಕೆಂಪುಗೋಟು	30699-33019
ರಾಶಿ	44599-48909
ತಟ್ಟಿಬೆಟ್ಟೆ	43109-47069

ಶಿರಸಿ

ಬೆಟ್ಟೆ	39199-44708
ಬಿಳಿಗೋಟು	27709-34609
ಚಾಲಿ	37209-40618
ಕೆಂಪುಗೋಟು	31200-35899
ರಾಶಿ	43699-48401

ಯಲ್ಲಾಪುರ

ಅಪಿ	56855-56855
ಬಿಳಿಗೋಟು	24899-34000
ಚಾಲಿ	35299-40900
ಕೋಕ	23900-31169
ಕೆಂಪುಗೋಟು	30101-36100
ರಾಶಿ	45609-53119
ತಟ್ಟಿಬೆಟ್ಟೆ	37599-44090

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13850	13900	-	181.15
ಎಸಿ	7840	7800	-	
ಆರ್‌ಪಿ	11000	11500	-	ಲಂಡನ್
ಆರ್‌ಸಿ	7020	7000	-	2950 ಡಾಲರ್ಸ್

ಬೀದರ್‌ನಿಂದ ಸ್ಪರ್ಧೆ ಪಾಟೀಲ ಇಂಗಿತ



ಕಲಬುರಗಿ: ಮುಖ್ಯಮಂತ್ರಿಗಳ ಸಲಹೆಗಾರ, ಆಳಂದ ಶಾಸಕ ಬಿ.ಆರ್. ಪಾಟೀಲ ಅವರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬೀದರ್ ಕ್ಷೇತ್ರದಿಂದ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದು, ಅವಕಾಶ ಕಲ್ಪಿಸುವಂತೆ ಕಾಂಗ್ರೆಸ್ ವರಿಷ್ಠರನ್ನು ಕೋರಲು ತೀರ್ಮಾನಿಸಿದ್ದಾರೆ.

ಬೀದರ್ ಲೋಕಸಭಾ ಕ್ಷೇತ್ರವನ್ನು ಹಿಂದೆ ಬಿಜೆಪಿಯ ರಾಮಚಂದ್ರ ವೀರಪ್ಪ ಅವರು ಸುದೀರ್ಘ ಅವಧಿಯವರೆಗೆ ಪ್ರತಿನಿಧಿಸಿದ್ದರು. ನಂತರ ಮಾಜಿ ಮುಖ್ಯಮಂತ್ರಿ ಎನ್. ಧರ್ಮಸಿಂಗ್ ಅವರು ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇರುವುದರಿಂದ ಹೆಚ್ಚಿನ ಕ್ಷೇತ್ರಗಳಲ್ಲಿ ಜಯ ಸಾಧಿಸಲು ಪಕ್ಷ ತಂತ್ರಗಾರಿಕೆ ಹೆಣೆಯುತ್ತಿದೆ. ಈ ಸಂದರ್ಭದಲ್ಲಿ ಬಿ.ಆರ್. ಪಾಟೀಲ ಅವರು ಬೀದರ್‌ನಿಂದ ಸ್ಪರ್ಧಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಭಗವಂತ ಖೂಬಾ ಎದುರು ಸಚಿವ ಈಶ್ವರ ಖಂಡ್ರೆ ಸ್ಪರ್ಧಿಸಿ ಪರಾಭವಗೊಂಡಿದ್ದರು.

ಲೋಕಸಭಾ ಚುನಾವಣೆ: ಕರ್ನಾಟಕದ ಸಚಿವರಿಗೆ ಹೈಕಮಾಂಡ್ ಗುರಿ ನಿಗದಿ

20 ಸ್ಥಾನ ಗೆಲುವಿಗೆ 'ಕೈ' ರಣತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಪಕ್ಷದ ಸಂಭಾವ್ಯ ಅಭ್ಯರ್ಥಿಗಳು ಅಲ್ಲದೆ, ಇತರ ಎಲ್ಲ ಪಕ್ಷಗಳ ಸಂಭಾವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಕೂಡಲೇ ಸಿದ್ಧಪಡಿಸಬೇಕು. ಅವರ ಸಾಮರ್ಥ್ಯ ಹಾಗೂ ದೌರ್ಬಲ್ಯಗಳೇನು ಎಂಬುದನ್ನು ವಿಶ್ಲೇಷಿಸಿ ಪಕ್ಷದ ಚುನಾವಣಾ ವೀಕ್ಷಕರಿಗೆ ಶೀಘ್ರ ವರದಿ ಸಲ್ಲಿಸಬೇಕು ಎಂದು ಚುನಾವಣಾ ಸಂಯೋಜಕರಿಗೆ ಹೈಕಮಾಂಡ್ ಕಟ್ಟಪ್ಪಣೆ ಮಾಡಿದೆ.

ಮುಂಬರುವ ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಕರ್ನಾಟಕ, ತಮಿಳುನಾಡು, ತೆಲಂಗಾಣ, ಕೇರಳ, ಲಕ್ಷದ್ವೀಪ ಹಾಗೂ ಪುದುಚೇರಿಯ ಲೋಕಸಭಾ ಚುನಾವಣಾ ಸಂಯೋಜಕರೊಂದಿಗೆ ಗುರುವಾರ ಇಲ್ಲಿ ಸಭೆ ನಡೆಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ಪ್ರತಿ ಕ್ಷೇತ್ರದಲ್ಲಿ ಗರಿಷ್ಠ ಸಂಖ್ಯೆಯ ಮತದಾರರನ್ನು ತಲುಪಲು ಕಾರ್ಯೋನ್ಮುಖರಾಗಬೇಕು' ಎಂದು ತಾಕೀತು ಮಾಡಿದರು. ಈ ಸಭೆಯಲ್ಲಿ ಕರ್ನಾಟಕದ ಬಹುತೇಕ ಸಚಿವರು ಭಾಗಿಯಾದರು.

'ಕರ್ನಾಟಕದಲ್ಲಿ ಕನಿಷ್ಠ 20 ಕ್ಷೇತ್ರಗಳಲ್ಲಿ ಪಕ್ಷ ಗೆಲುವು ಸಾಧಿಸಬೇಕು. ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರುವುದು ಜಿಲ್ಲಾ ಉಸ್ತುವಾರಿ ಸಚಿವರ ಜವಾಬ್ದಾರಿ. ಇಲ್ಲದಿದ್ದರೆ ಅವರನ್ನು ಹೊಣೆಗಾರರನ್ನು ಮಾಡಲಾಗುವುದು' ಎಂದು ಖರ್ಗೆ ಎಚ್ಚರಿಸಿದರು.

'ಪ್ರತಿಯೊಂದು ಕ್ಷೇತ್ರದಲ್ಲಿ ಹಲವು ಮಂದಿ ಆಕಾಂಕ್ಷಿಗಳು ಇರುತ್ತಾರೆ. ಗೆಲ್ಲುವ ಅಭ್ಯರ್ಥಿಗೆ ಟಿಕೆಟ್ ಕೊಡಲು ಸಾಧ್ಯ. ಟಿಕೆಟ್ ಸಿಗದ ಕಾರಣಕ್ಕೆ ಕೆಲವರು ಅಸಮಾಧಾನ ವ್ಯಕ್ತಪಡಿಸುವುದು ಸಹಜ. ಅಂತಹ ನಾಯಕರನ್ನು ಚುನಾವಣಾ ವೀಕ್ಷಕರು ವಿಶ್ವಾಸಕ್ಕೆ ತೆಗೆದುಕೊಂಡು ಬಂಡೇಳದಂತೆ ನೋಡಿಕೊಳ್ಳಬೇಕು' ಎಂದೂ ಅವರು ಸೂಚಿಸಿದರು.

ಪಕ್ಷ ಸಂಘಟನೆಯನ್ನು ಇನ್ನಷ್ಟು ಬಲಗೊಳಿಸಲು ಚುನಾವಣಾ ಸಂಯೋಜಕರು ಮೂರು ವರದಿಗಳನ್ನು ಸಲ್ಲಿಸಬೇಕು ಎಂದೂ ಹೈಕಮಾಂಡ್ ಹೇಳಿದೆ. ಸಂಘಟನೆಯ ವರದಿಯನ್ನು ಫೆಬ್ರುವರಿ ಮೊದಲ ವಾರದಲ್ಲಿ, ಬ್ಲಾಕ್ ಹಂತದ ವರದಿಯನ್ನು ಎರಡನೇ ವಾರದಲ್ಲಿ ಹಾಗೂ ವಿಧಾನಸಭಾ ಕ್ಷೇತ್ರ ವರದಿಯನ್ನು ಮೂರನೇ ವಾರದಲ್ಲಿ ಸಲ್ಲಿಸಬೇಕು ಎಂದು ತಿಳಿಸಿದೆ.

'ಈ ಹಿಂದಿನ ಲೋಕಸಭಾ, ವಿಧಾನಸಭಾ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮತ ಪ್ರಮಾಣದ ಅಧ್ಯಯನ ನಡೆಸಬೇಕು. ಹಳ್ಳಿಗಳ ಮತ ಪ್ರಮಾಣದ ಕುರಿತು ನಿಗಾ ವಹಿಸಬೇಕು. ಯಾವ ಪ್ರದೇಶಗಳಲ್ಲಿ ಪಕ್ಷಕ್ಕೆ ಹಿನ್ನಡೆಯಾಗಿದೆ ಎಂಬುದನ್ನು ಗಮನಿಸಿ ಮತ ಪ್ರಮಾಣ ಹೆಚ್ಚಿಸಲು ಕಾರ್ಯತಂತ್ರ ರೂಪಿಸಬೇಕು. ಕಳೆದ ಕೆಲವು ಚುನಾವಣೆಯಲ್ಲಿ ಕಠಿಣ ಪರಿಶ್ರಮ ವಹಿಸಿ ಹೆಚ್ಚು ಮತಗಳನ್ನು ತಂದುಕೊಟ್ಟ ಕಾರ್ಯಕರ್ತರನ್ನು ಗುರುತಿಸಿ ಅವರಿಗೆ ಪಕ್ಷದ ಸಂಘಟನೆಯಲ್ಲಿ ಸ್ಥಾನ ನೀಡಬೇಕು. ಈ ಕೆಲಸವನ್ನು ಜರೂರಾಗಿ ಮಾಡಬೇಕು' ಎಂದೂ ಹೈಕಮಾಂಡ್ ನಿರ್ದೇಶನ ನೀಡಿದೆ.

ಪಕ್ಷದ ಕೆಲವೊಂದು ನಾಯಕರು ತಮ್ಮದೇ ಕಾರ್ಯಕರ್ತರೊಂದಿಗೆ ಬೆರೆಯುವುದಿಲ್ಲ ಎಂಬ ಆರೋಪವಿದೆ. ಇತ್ತೀಚಿನ ದಿನಗಳಲ್ಲಿ ಪಕ್ಷದ ಹಿನ್ನಡೆಗೆ ಇದೂ ಒಂದು ಕಾರಣ. ಬೂತ್ ಮಟ್ಟದಲ್ಲೇ ಚುನಾವಣಾ ಸಿದ್ಧತೆಗಳನ್ನು ಆರಂಭಿಸಬೇಕು. ಬಿಜೆಪಿ ಮಾದರಿಯಲ್ಲೇ ಸೂಕ್ಷ್ಮ ನಿರ್ವಹಣೆ ಆಗಬೇಕು. ಪಕ್ಷ ಸಂಘಟನೆ ಹಾಗೂ ಚುನಾವಣಾ ಸಿದ್ಧತೆ ಕುರಿತು ತಳಮಟ್ಟದಿಂದ ಪ್ರತಿ ವಾರ ಪಡೆಯಬೇಕು. ಈ ವರದಿಗಳನ್ನು ವಾರ್ ರೂಮ್ ವಿಶ್ಲೇಷಣೆ ನಡೆಸಬೇಕು. 'ಇದರಿಂದ ಅಭ್ಯರ್ಥಿ ಸುಲಭದಲ್ಲಿ ಕ್ಷೇತ್ರವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಜತೆಗೆ, ಸಂಘಟನೆ ದುರ್ಬಲವಾಗಿರುವ ಪ್ರದೇಶಗಳಿಗೆ ಹೆಚ್ಚಿನ ಗಮನ ಹರಿಸಬಹುದು. ಸಂಯೋಜಕರು ಮುಂದಿನ ನಾಲ್ಕೈದು ತಿಂಗಳು ಸಮರೋಪಾದಿಯಲ್ಲಿ ಕೆಲಸ ಮಾಡಬೇಕು' ಎಂದು ತಾಕೀತು ಮಾಡಿದೆ.

ಡಿಸಿಎಂ ಹುದ್ದೆ ಚರ್ಚೆಯಿಲ್ಲ

ಕರ್ನಾಟಕದಲ್ಲಿ ಮೂರರಿಂದ ನಾಲ್ಕು ಉಪಮುಖ್ಯಮಂತ್ರಿ ಹುದ್ದೆಗಳನ್ನು ಸೃಷ್ಟಿಸುವ ಕುರಿತು ಸಭೆಯಲ್ಲಿ ಯಾವುದೇ ಚರ್ಚೆ ಆಗಿಲ್ಲ.

ಲೋಕಸಭಾ ಚುನಾವಣೆಗೆ ಮುನ್ನ ಪಕ್ಷ ಗೆಲ್ಲಲು ಹೆಚ್ಚುವರಿ ಉಪಮುಖ್ಯಮಂತ್ರಿ ಹುದ್ದೆಗಳನ್ನು ಸೃಷ್ಟಿಸಬೇಕು ಎಂದು ಧ್ವನಿ ಎತ್ತಿರುವ ಸಹಕಾರ ಸಚಿವ ಕೆ.ಎನ್.ರಾಜಣ್ಣ, 'ಈ ವಿಷಯ ಪ್ರಸ್ತಾಪ ಮಾಡಬಾರದು ಎಂದು ಹೈಕಮಾಂಡ್ ಸೂಚಿಸಿದೆ. ಹಾಗಾಗಿ, ಆ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ನನ್ನ ವಿಚಾರಕ್ಕೆ ಈಗಲೂ ಬದ್ಧನಿದ್ದೇನೆ' ಎಂದು ಸ್ಪಷ್ಟಪಡಿಸಿದರು.

ತಿಂಗಳೊಳಗೆ ಮೊದಲ ಪಟ್ಟಿ?

ಕರ್ನಾಟಕದ ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರುಗಳನ್ನು ತಿಂಗಳೊಳಗೆ ಅಖೈರುಗೊಳಿಸಲು ಹೈಕಮಾಂಡ್ ಒಲವು ತೋರಿದೆ.

'ವಿಧಾನಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟಕ್ಕೆ ಮುನ್ನವೇ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಇದರಿಂದ ಚುನಾವಣೆಗೆ ಸಿದ್ಧತೆ ನಡೆಸಲು ಅಭ್ಯರ್ಥಿಗಳಿಗೆ ಹೆಚ್ಚಿನ ಸಮಯ ಸಿಕ್ಕಿತು. ಅದೇ ರೀತಿ, ಲೋಕಸಭಾ ಚುನಾವಣೆಗೆ ಮೊದಲ ಪಟ್ಟಿಯನ್ನು ಶೀಘ್ರದಲ್ಲಿ ಪ್ರಕಟಿಸಬೇಕು ಎಂಬುದು ನಮ್ಮ ಅಪೇಕ್ಷೆ' ಎಂದು ಪಕ್ಷದ ರಾಷ್ಟ್ರೀಯ ನಾಯಕರು ಸಭೆಯಲ್ಲಿ ಹೇಳಿದರು.

'ಹೆಚ್ಚುವರಿ ಡಿಸಿಎಂ ಬೇಡಿಕೆ ಸಲ್ಲ'

ಪ್ರಜಾವಾಣಿ ವಾರ್ತೆ



ಡಿ.ಕೆ. ಸುರೇಶ್

ಬೆಂಗಳೂರು: 'ಹೆಚ್ಚುವರಿ ಉಪ ಮುಖ್ಯಮಂತ್ರಿ ವಿಚಾರದಲ್ಲಿ ರಾಜ್ಯದವರೇ ಆಗಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಸ್ಪಷ್ಟನೆ ನೀಡಿದ ಬಳಿಕವೂ ಅದೇ ಬೇಡಿಕೆ ಮುಂದಿಡುವುದು ಅವರಿಗೆ ಮಾಡುತ್ತಿರುವ ಅವಮಾನ. ಇದು ನಿಲ್ಲಬೇಕು' ಎಂದು ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಎಐಸಿಸಿ ಅಧ್ಯಕ್ಷರಿಗೆ ಇರುಸು ಮುರುಸು ಉಂಟು ಮಾಡುವ ಪ್ರಯತ್ನವನ್ನು ಕೆಲವರು ಮಾಡುತ್ತಿದ್ದಾರೆ' ಎಂದು ಕಿಡಿಕಾರಿದರು.

'ಕೆಪಿಸಿಸಿ ಅಧ್ಯಕ್ಷರಾಗಿರುವ ಡಿ.ಕೆ. ಶಿವಕುಮಾರ್ ಅವರು ಐದಾರು ಕಾರ್ಯಾಧ್ಯಕ್ಷರ ಜೊತೆ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ, ಎಲ್ಲ 30 ಸಚಿವರುಗಳನ್ನು ಉಪ ಮುಖ್ಯಮಂತ್ರಿಗಳಾಗಿ ಮಾಡಿದರೂ ತಪ್ಪೇನು ಇಲ್ಲ. ಆದರೆ, ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆಗೆ ಬೇಡಿಕೆ ಮುಂದಿಡುತ್ತಾ ಎಐಸಿಸಿ ಅಧ್ಯಕ್ಷರಿಗೆ ಮಾಡುತ್ತಿರುವ ಅವಮಾನ ನಿಲ್ಲಬೇಕು' ಎಂದು ಹೇಳಿದ ಅವರು, ಹೆಚ್ಚುವರಿ ಡಿಸಿಎಂ ಹುದ್ದೆಗೆ ಬೇಡಿಕೆ ಇಟ್ಟಿರುವ ಸಚಿವರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

'ಬಾಬರ್ ಸಮಾಧಿಗೆ ನಾಲ್ಕು ಬಾರಿ ಭೇಟಿ ನೀಡಿದ್ದ ನೆಹರೂ ಕುಟುಂಬ'

ಪ್ರಜಾವಾಣಿ ವಾರ್ತೆ



ಶ್ರೀರಾಮುಲು

ಹೊಸಪೇಟೆ (ವಿಜಯನಗರ): 'ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ-ಪ್ರತಿಷ್ಠಾಪನೆ ಕಾರ್ಯಕ್ರಮದ ಆಹ್ವಾನ ಒಪ್ಪದಿರುವ ಕಾಂಗ್ರೆಸ್‌ನ ನಿಜ ಬಣ್ಣ ಬಯಲಾಗಿದೆ. ನೆಹರೂ ಕುಟುಂಬವು ಬಾಬರ್ ಸಮಾಧಿಗೆ ನಾಲ್ಕು ಬಾರಿ ಭೇಟಿ ನೀಡಿ, ಪ್ರಾರ್ಥಿಸಿದ್ದು ಈ ದೇಶ ಮರೆತಿಲ್ಲ' ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಟೀಕಿಸಿದರು.

'ಜವಾಹರಲಾಲ್ ನೆಹರೂ 1957ರ ಸೆಪ್ಟೆಂಬರ್ 19ರಂದು, ಇಂದಿರಾ ಗಾಂಧಿ 1968, 1976ರಲ್ಲಿ ಭೇಟಿ ನೀಡಿದ್ದರು. ಮನಮೋಹನ್ ಸಿಂಗ್ ಮತ್ತು ರಾಹುಲ್ ಗಾಂಧಿ 2005ರಲ್ಲಿ ಭೇಟಿ ನೀಡಿ ಗೌರವ ಸಲ್ಲಿಸಿದ್ದರು' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಕಟ್ಟಾಳು'ಗಳ ಸ್ಪರ್ಧೆಗೆ ಬಿಜೆಪಿಗೆ ಅಪಸ್ವರ

ಒಂದನೇ ಪುಟದಿಂದ...

'ಸಭೆಯ ಕೊನೆಯಲ್ಲಿ ಮಾತನಾಡಿದ ವಿಜಯೇಂದ್ರ ಅವರು, 'ಸಲಹೆಗಳನ್ನಷ್ಟೇ ಇಲ್ಲಿ ಪಡೆದಿದ್ದೇವೆ. ಇದೇ ಅಂತಿಮವಲ್ಲ. ಪ್ರತಿಯೊಂದು ಕ್ಷೇತ್ರಕ್ಕೂ ವೀಕ್ಷಕರ ತಂಡ ಬರಲಿದೆ. ಅವರ ಮುಂದೆಯೂ ತಮ್ಮ ಅಭಿಪ್ರಾಯ ಹಾಗೂ ಹಕ್ಕು ಮಂಡಿಸಬಹುದು. ಎರಡು ದಿನ ನಡೆದ ಸಭೆಯ ಮಾಹಿತಿಯನ್ನು ಕ್ರೋಡೀಕರಿಸಿ ವರಿಷ್ಠರಿಗೆ ವರದಿ ಸಲ್ಲಿಸುತ್ತೇವೆ' ಎಂದು ಮೂಲಗಳು ತಿಳಿಸಿವೆ.

'ಕಟ್ಟಾಳು'ಗಳಿಗೆ ವಿರೋಧ: 'ಹಿಂದುತ್ವದ ಉಗ್ರ ಪ್ರತಿಪಾದಕರಿಗೆ ಮತ್ತೆ ಟಿಕೆಟ್ ನೀಡುವುದಕ್ಕೆ ಸಭೆಯಲ್ಲಿ ಕೆಲವರು ವಿರೋಧ ವ್ಯಕ್ತಪಡಿಸಿದರು. ಅದರಲ್ಲೂ ಉತ್ತರ ಕನ್ನಡದ ಅನಂತಕುಮಾರ ಹೆಗಡೆ, ದಕ್ಷಿಣ ಕನ್ನಡದ ನಳಿನ್ ಕುಮಾರ್ ಕಟೀಲ್, ಉಡುಪಿ–ಚಿಕ್ಕಮಗಳೂರಿನ ಶೋಭಾ ಕರಂದ್ಲಾಜೆ ಅವರ ಸ್ಪರ್ಧೆಗೆ ಕೆಲವರು ಅಪಸ್ವರ ಎತ್ತಿದರು' ಎಂದು ಗೊತ್ತಾಗಿದೆ.

'ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಚರ್ಚೆ ಬಂದಾಗ, ಐದು ವರ್ಷ ಕ್ಷೇತ್ರದಲ್ಲಿ ಕಾಣಿಸಿಕೊಳ್ಳದೇ ಇದ್ದವರು ಚುನಾವಣೆ ಹೊತ್ತಿಗೆ ದಿಢೀರನೇ ಪ್ರತ್ಯಕ್ಷರಾಗಿದ್ದಾರೆ. ಹಿಂದುತ್ವ ಮತ್ತು ಮೋದಿ ಅಲೆಯಷ್ಟೇ ಅಲ್ಲಿ ನೆರವಿಗೆ ಬಾರದು. ಕೇಂದ್ರ ಸರ್ಕಾರದ ಯಾವುದೇ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಸಂಸದರು ಆಸಕ್ತಿಯನ್ನೇ ತೋರಿಲ್ಲ. ವಿಧಾನಸಭೆ ಚುನಾವಣೆ ಗಮನಿಸಿದರೆ ಹಿಂದುತ್ವಕ್ಕಿಂತ ಅಹಿಂದ ಮತಗಳು ಕೆಲಸ ಮಾಡಿರುವುದು ಕಂಡಿದೆ. ಹೀಗಾಗಿ ಅನಂತಕುಮಾರ ಹೆಗಡೆಯವರಿಗೆ ಟಿಕೆಟ್ ನೀಡಬೇಡಿ' ಎಂದು ಕೆಲವರು ಪ್ರತಿಪಾದಿಸಿದರು. ಹಿಂದುತ್ವ ಪ್ರತಿಪಾದಕರಿಗೆ ಟಿಕೆಟ್ ತಪ್ಪಿಸಿದರೆ ಬೇರೆಯದೇ ಸಂದೇಶ ಹೋಗುತ್ತದೆ. ಕ್ಷೇತ್ರದಲ್ಲಿ ಹೆಗಡೆಯವರಷ್ಟು ಪ್ರಭಾವಿಗಳು ಯಾರೂ ಇಲ್ಲ ಎಂದು ಅವರ ಬೆಂಬಲಿಗರ ಅಭಿಪ್ರಾಯ ಹೇಳಿದರು' ಎಂದು ತಿಳಿದುಬಂದಿದೆ.

'ಉಡುಪಿ ಸಂಸದೆ ಹಾಗೂ ಕೇಂದ್ರ ಸಚಿವ ಶೋಭಾ ಅವರು ಕ್ಷೇತ್ರಕ್ಕೆ ಬಂದಿಲ್ಲ. ಆನೆ ಹಾವಳಿ, ಮಳೆ ಹಾನಿ, ಅಡಿಕೆ ಬೆಳೆಗಾರರ ಸಮಸ್ಯೆಯ ಬಗ್ಗೆ ಯಾವತ್ತೂ ಸ್ಪಂದಿಸಿಲ್ಲ. ಕ್ಷೇತ್ರದಲ್ಲಿ ಉತ್ತಮ ವಾತಾವರಣ ಇಲ್ಲ. ಕಾಂಗ್ರೆಸ್‌ನಿಂದ ಜಯಪ್ರಕಾಶ್ ಹೆಗ್ಡೆ ಕಣಕ್ಕೆ ಇಳಿದರೆ ಗೆಲುವು ಸಾಧ್ಯವೇ ಇಲ್ಲ' ಎಂಬ ಅಭಿಪ್ರಾಯ ಬಂದಿತು ಎಂದು ಗೊತ್ತಾಗಿದೆ.

'ಬೆಂಗಳೂರು ದಕ್ಷಿಣದಲ್ಲಿ ತೇಜಸ್ವಿ ಸೂರ್ಯ ಬಗ್ಗೆ ಆಕ್ಷೇಪವಿಲ್ಲ. ಜೈಶಂಕರ್ ಸ್ಪರ್ಧಿಸಿದರೆ ಅವರಿಗೆ ಟಿಕೆಟ್ ತಪ್ಪಲಿದೆ. ಒಂದು ವೇಳೆ, ಹಿಂದೆ ಟಿಕೆಟ್ ನಿರಾಕರಿಸಲಾಗಿದ್ದ ತೇಜಸ್ವಿನಿ ಅನಂತಕುಮಾರ್ ಅವರಿಗೆ ಕೊಟ್ಟರೆ ತೇಜಸ್ವಿ ಸೂರ್ಯಗಿಂತ ಹೆಚ್ಚಿನ ಮತಗಳಲ್ಲಿ ಸಲೀಸಿನಿಂದ ಗೆಲುವು ಸಾಧ್ಯ ಎಂಬ ಅಭಿಪ್ರಾಯ ಪಕ್ಷದ ವೇದಿಕೆಗಳಲ್ಲಿ ಚರ್ಚೆ ನಡೆದಿದೆ. ಆದರೆ, ಎರಡು ದಿನಗಳ ಸಭೆಯಲ್ಲಿ ಈ ಬಗ್ಗೆ ಅಭಿಪ್ರಾಯ ಬಂದಿಲ್ಲ' ಎಂದು ಮುಖಂಡರೊಬ್ಬರು ತಿಳಿಸಿದರು.

ಸಂಸದರಾದ ಪಿ.ಸಿ.ಗದ್ದಿಗೌಡರ್, ಉಮೇಶ ಜಾಧವ್, ಮಂಗಳಾ ಅಂಗಡಿ, ರಮೇಶ ಜಿಗಜಿಣಗಿ, ಜಿ.ಎಂ. ಸಿದ್ದೇಶ್ವರ, ಜಿ.ಎಸ್. ಬಸವರಾಜು, ದೇವೇಂದ್ರಪ್ಪ, ರಾಜಾ ಅಮರೇಶ್ವರ ನಾಯಕ ಅವರ ಬಗ್ಗೆ ಪೂರ್ಣ ಒಲವು ವ್ಯಕ್ತವಾಗಿಲ್ಲ. ಸಿದ್ದೇಶ್ವರಗೆ ನೀಡದೇ ಇದ್ದರೆ ಅವರ ಪುತ್ರನಿಗೆ ಟಿಕೆಟ್ ನೀಡುವುದು ಸೂಕ್ತ ಎಂಬ ಅಭಿಮತ ಬಂದಿತು ಎಂದು ಗೊತ್ತಾಗಿದೆ.

ಟಿಕೆಟ್ ನೀಡಿದರೆ ಸ್ಪರ್ಧಿಸುವುದಾಗಿ ಗದ್ದಿಗೌಡರ್ ಹೇಳಿದ್ದಾರೆ. ಅಲ್ಲಿಂದ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಕಣಕ್ಕೆ ಇಳಿಸುವ ಬಗ್ಗೆ ಯಡಿಯೂರಪ್ಪ ಒಲವು ಹೊಂದಿದ್ದಾರೆ ಎಂದು ಹೇಳಲಾಗಿದೆ. ಮಾಜಿ ಸಚಿವ ಮುರುಗೇಶ ನಿರಾಣಿ ಅವರಿಗೆ ಟಿಕೆಟ್ ನೀಡುವ ಬಗ್ಗೆ ಚರ್ಚೆಯಾಗಿದೆ. ರಾಜಾ ಅಮೇಶ್ವರ ನಾಯಕ ಬಗ್ಗೆ ಸಾಕಷ್ಟು ವಿರೋಧವಿದ್ದು, ಅವರ ಬದಲು ಮಾಜಿ ಶಾಸಕ ರಾಜೂಗೌಡ ಅವರಿಗೆ ಟಿಕೆಟ್ ಕೊಡುವ ಕುರಿತು ಒಲವು ವ್ಯಕ್ತವಾಗಿದೆ ಎಂದು ತಿಳಿದುಬಂದಿದೆ.

ರಾಜಕೀಯದಿಂದ ದೂರ ಉಳಿಯುವುದಾಗಿ ಹೇಳಿರುವ ಕೇಂದ್ರ ಸಚಿವ ನಾರಾಯಣಸ್ವಾಮಿ ಅವರನ್ನು ಮತ್ತೆ ಚಿತ್ರದುರ್ಗದಿಂದಲೇ ಕಣಕ್ಕೆ ಇಳಿಸುವ ಬಗ್ಗೆ ಚರ್ಚೆಯಾಗಿದೆ ಎಂದು ಗೊತ್ತಾಗಿದೆ.

ಅಣ್ಣನಿಗೆ ಖಚಿತಪಡಿಸಿಲ್ಲ–ವಿಜಯೇಂದ್ರ: 'ಟಿಕೆಟ್ ನೀಡುವುದು ಖಚಿತಪಡಿಸಿದರೆ ತಯಾರಿ ನಡೆಸುವುದಾಗಿ ಸಂಸದರೊಬ್ಬರು ಸಭೆಯಲ್ಲಿ ಕೇಳಿಕೊಂಡರು. ಅದಕ್ಕೆ ಪ್ರತಿಕ್ರಿಯಿಸಿದ ವಿಜಯೇಂದ್ರ, ಅಣ್ಣನಿಗೆ (ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ) ಟಿಕೆಟ್ ಖಚಿತಪಡಿಸುವ ಸ್ಥಿತಿಯಲ್ಲಿ ನಾನಿಲ್ಲ. ಏನಿದ್ದರೂ ವರಿಷ್ಠರ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು ಎಂದರು' ಎಂದು ಮೂಲಗಳು ಹೇಳಿವೆ.

ಮಂಡ್ಯದಲ್ಲಿ ಜೆಡಿಎಸ್‌ಗೇ ಗೆಲುವು: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ



ಚಿಕ್ಕಮಗಳೂರು: 'ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಚುನಾವಣೆಗೆ ಜೆಡಿಎಸ್‌ನ ಒಬ್ಬ ಸಾಮಾನ್ಯ ಕಾರ್ಯಕರ್ತ ಸ್ಪರ್ಧೆ ಮಾಡಿದರೂ ಗೆಲ್ಲುವ ವಾತಾವರಣ ಇದೆ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಎರಡು ದಿನಗಳಿಂದ ಇಲ್ಲಿನ ರೆಸಾರ್ಟ್ ಒಂದರಲ್ಲಿ ವಾಸ್ತವ್ಯ ಹೂಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ಕಳೆದ ಬಾರಿಯ ಚುನಾವಣೆ ಬೇರೆಯೇ ಇತ್ತು. ರೈತ ಸಂಘ, ಬಿಜೆಪಿ, ಕಾಂಗ್ರೆಸ್ ಎಲ್ಲರೂ ಪಕ್ಷೇತರ ಅಭ್ಯರ್ಥಿ ಪರ ಮತ ಹಾಕಿದ್ದರು. ಜೆಡಿಎಸ್ ಬಿಟ್ಟು ಎರಡು-ಮೂರು ಪರ್ಸೆಂಟ್ ಇತರೆ ಮತದಾರರು ಮಾತ್ರವೇ ನಮ್ಮ ಪರ ಇದ್ದರು. ಈಗ ವಾತಾವರಣ ಬದಲಾಗಿದೆ' ಎಂದರು.

'ಬಿಜೆಪಿ ಜೊತೆ ಹೊಂದಾಣಿಕೆ ಆಗಿರುವುದರಿಂದ ಈ ಬಾರಿ ನಾವೇ ಚುನಾವಣೆಯಲ್ಲಿ ಗೆಲ್ಲುತ್ತೇವೆ. ಸದ್ಯಕ್ಕೆ ಯಾರು ಎಲ್ಲಿ ಅಭ್ಯರ್ಥಿ ಎಂಬ ತೀರ್ಮಾನ ಆಗಿಲ್ಲ. ಮತ್ತೊಂದು ಸುತ್ತಿನ ಮಾತುಕತೆ ಬಳಿಕ ತೀರ್ಮಾನ ಆಗಲಿದೆ' ಎಂದು ತಿಳಿಸಿದರು.

'ಎರಡು ದಿನಗಳ ರೆಸಾರ್ಟ್ ವಾಸ್ತವ್ಯದ ವೇಳೆ ಮಂಡ್ಯ ಅಷ್ಟೇ ಅಲ್ಲ, ರಾಜ್ಯದ ರಾಜಕೀಯದ ಬಗ್ಗೆ ಚರ್ಚೆಯಾಗಿದೆ. ನಮ್ಮ ಅಭ್ಯರ್ಥಿಗಳು ಬಿಜೆಪಿಯವರ ವಿಶ್ವಾಸವನ್ನು ಹೇಗೆ ಪಡೆಯಬೇಕು. ಅವರು ನಮ್ಮ ಕಾರ್ಯಕರ್ತರ ವಿಶ್ವಾಸವನ್ನು ಹೇಗೆ ಪಡೆಯಬೇಕು ಎಂಬ ಚರ್ಚೆಗಳೂ ಆಗಿವೆ. ಮಂಡ್ಯ, ಮೈಸೂರು ಹಾಗೂ ಹಾಸನದ ಬಗ್ಗೆಯೂ ಮಾತನಾಡಿದ್ದೇವೆ' ಎಂದರು.

'ಮೈತ್ರಿಯಿಂದ ವರ್ಚಸ್ಸು ಹೆಚ್ಚಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸೂ ಇದೆ. ರಾಮ ಮಂದಿರ ಉದ್ಘಾಟನೆ ವಿಷಯ ಮುಂಚೂಣಿಯಲ್ಲಿದೆ. ಸ್ಥಿರ ಸರ್ಕಾರದ ಬರಬೇಕು ಎಂಬ ಆಶಯ ದೇಶದ ಜನರಿಗಿದೆ. ಎರಡೂ ಪಕ್ಷಗಳಿಗೂ ನಮ್ಮ ನಮ್ಮ ಶಕ್ತಿ ಏನು ಎಂಬುದು ಗೊತ್ತಿದೆ' ಎಂದು ಸ್ಪಷ್ಟಪಡಿಸಿದರು.

ದುಡ್ಡು ಯಾರದ್ದು?

'ಕಾಂಗ್ರೆಸ್‌ನಲ್ಲಿ ಮೂರು ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಚರ್ಚೆಯಾಗುತ್ತಿದೆ. ಯಾರದೋ ದುಡ್ಡಿನಲ್ಲಿ ಯಲ್ಲಮ್ಮನ ಜಾತ್ರೆ ಮಾಡುತ್ತಿದೆ. 30-35 ಜನರಿಗೂ ಉಪಮುಖ್ಯಮಂತ್ರಿ ಸ್ಥಾನ ನೀಡುವುದು ಒಳ್ಳೆಯದು. ಆಗ ಪ್ರತಿನಿತ್ಯ ಈ ಗೊಂದಲ ಇರುವುದಿಲ್ಲ' ಎಂದು ವ್ಯಂಗ್ಯವಾಡಿದರು.

'ಗ್ಯಾರಂಟಿ ನೋಡಿಕೊಳ್ಳಲು ಒಬ್ಬ ಅಧ್ಯಕ್ಷ, ಅದಕ್ಕೆ ವರ್ಷಕ್ಕೆ ₹16 ಕೋಟಿ ಖರ್ಚಂತೆ, ಐವರು ಉಪಾಧ್ಯಕ್ಷರಂತೆ, ದುಡ್ಡು ಯಾರದು' ಎಂದು ಪ್ರಶ್ನಿಸಿದರು.

'ಕಾಂಗ್ರೆಸ್‌ನ ಸದ್ಯದ ಪರಿಸ್ಥಿತಿ ನನಗೆ ಅರ್ಥವಾಗಿದೆ. ಚುನಾವಣೆ ಫಲಿತಾಂಶದ ಬಳಿಕ ಎಲ್ಲವೂ ಗೊತ್ತಾಗಲಿದೆ' ಎಂದು ಹೇಳಿದರು.

'ಯುವನಿಧಿ' ಯೋಜನೆಗೆ ಚಾಲನೆ ಇಂದು

ಒಂದನೇ ಪುಟದಿಂದ...

ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹಾಗೂ ಯುವನಿಧಿಯ ಅನುಷ್ಠಾನದ ಹೊಣೆ ಹೊತ್ತಿರುವ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಕಳೆದ ಮೂರು ದಿನಗಳಿಂದ ನಗರದಲ್ಲಿಯೇ ಮೊಕ್ಕಾಂ ಹೂಡಿದ್ದು, ಕಾರ್ಯಕ್ರಮದ ಸಿದ್ಧತೆಯಲ್ಲಿ ತೊಡಗಿದ್ದಾರೆ.

ವಿವಿಧ ವಿಷಯಗಳ ಪದವೀಧರರಿಗೆ ಮಾಸಿಕ ₹3,000, ಡಿಪ್ಲೊಮಾ ಮಾಡಿದವರಿಗೆ ಮಾಸಿಕ ₹1,500 ಭತ್ಯೆ ನೀಡುವ ಈ ಗ್ಯಾರಂಟಿ ಯೋಜನೆಯನ್ನು ಜಾರಿಗೊಳಿಸುವುದಾಗಿ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿತ್ತು. ಈ ಸಂಬಂಧ ಕಳೆದ ವಾರದಿಂದಲೇ ಪ್ರತಿ ಜಿಲ್ಲೆಗಳಲ್ಲಿ ನೋಂದಣಿ ಆರಂಭವಾಗಿದೆ.



ಮಕ್ಕಳೊಂದಿಗೆ ಗೋಪಿ ಕುರಿತ ಮಾತು

ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಗುರುವಾರ ಸಂಜೆ ಮೈಸೂರು ಲಿಟ್ರರಿ ಫೋರಂ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ ಸಹಯೋಗದಲ್ಲಿ ನಡೆದ 'ಮೈಸೂರು ಮಕ್ಕಳ ಸಾಹಿತ್ಯ ಸಂಭ್ರಮ' ಎಂಟನೇ ಆವೃತ್ತಿ ಕಾರ್ಯಕ್ರಮದಲ್ಲಿ ಇನ್ಫೊಸಿಸ್ ಫೌಂಡೇಶನ್ ಅಧ್ಯಕ್ಷೆ ಸುಧಾ ಮೂರ್ತಿ ತಮ್ಮ ಸಾಕುನಾಯಿ ಗೋಪಿ ಕುರಿತು ಮಕ್ಕಳೊಂದಿಗೆ ಮಾತುಕತೆ ನಡೆಸಿದರು
–ಪ್ರಜಾವಾಣಿ ಚಿತ್ರ: ಅನೂಪ್ ರಾಘ್ ಟಿ.

ಶೈವ–ಶಾಕ್ತರಿಗೆ ಅವಮಾನ: ಸಿ.ಎಂ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಹಿಂದೂಗಳನ್ನು ಒಗ್ಗೂಡಿಸುವ ಕಾರ್ಯಕ್ರಮ ಆಗಬೇಕಾಗಿದ್ದ ಅಯೋಧ್ಯೆಯ ರಾಮಲಲ್ಲಾ ಪ್ರತಿಷ್ಠಾಪನೆ ಬಿಜೆಪಿಯ ರಾಜಕೀಯದಿಂದಾಗಿ ಹಿಂದೂಗಳನ್ನು ಒಡೆಯುವ ಕಾರ್ಯಕ್ರಮ ಆಗಿರುವುದು ದುರಂತ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

'ರಾಮ ಮಂದಿರದಲ್ಲಿ ಶೈವರು-ಶಾಕ್ತರಿಗೆ ಅಧಿಕಾರ ಇಲ್ಲ ಎಂಬ ರಾಮಮಂದಿರ ಟ್ರಸ್ಟ್ ಕಾರ್ಯದರ್ಶಿ ನೀಡಿರುವ ಹೇಳಿಕೆ ನಿಜವೆಂದಾದರೆ, ಅದು ಶೈವ ಆರಾಧಕರಿಗೆ ಮಾಡಿರುವ ಅವಮಾನ. ಶಂಕರಾಚಾರ್ಯರು ಸ್ಥಾಪಿಸಿದ ವಿವಿಧ ಪೀಠದವರು ರಾಮಮಂದಿರವನ್ನು ರಾಜಕೀಯಕ್ಕಾಗಿ ದುರುಪಯೋಗ ಮಾಡಿಕೊಳ್ಳುತ್ತಿರುವುದನ್ನು ವಿರೋಧಿಸಿ ಕಾರ್ಯಕ್ರಮ ಬಹಿಷ್ಕರಿಸುವುದಾಗಿ ಹೇಳಿರುವುದೂ ವರದಿಯಾಗಿದೆ' ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಇನ್ನೇನು ಹತ್ತು ವರ್ಷಗಳ ಆಡಳಿತ ಪೂರ್ಣಗೊಳಿಸಲಿರುವ ಪ್ರಧಾನಿ ನರೇಂದ್ರ ಮೋದಿಗೆ ತಮ್ಮ ಸಾಧನೆಯನ್ನು ಮತದಾರರ ಮುಂದಿಟ್ಟು ಚುನಾವಣೆ ಗೆಲ್ಲುವ ಆತ್ಮವಿಶ್ವಾಸ ಇಲ್ಲ. ಹೀಗಾಗಿ, ಅಪೂರ್ಣ ಸ್ಥಿತಿಯಲ್ಲಿರುವ ರಾಮಮಂದಿರವನ್ನು ಲೋಕಸಭಾ ಚುನಾವಣೆಯ ಸಮಯದಲ್ಲಿ ಅವಸರದಿಂದ ಉದ್ಘಾಟಿಸಲು ಮುಂದಾಗಿದ್ದಾರೆ. ಆ ಮೂಲಕ ಹಿಂದುತ್ವದ ಅಲೆ ಬಡಿದೆಬ್ಬಿಸಿ, ಅದರ ಮರೆಯಲ್ಲಿ ತಮ್ಮ ವೈಫಲ್ಯ ಮುಚ್ಚಿಹಾಕುವ ಪ್ರಯತ್ನ ನಡೆಸಿದ್ದಾರೆ' ಎಂದೂ ದೂರಿದ್ದಾರೆ.

'ಜಾತಿ, ಧರ್ಮ, ಪಕ್ಷ-ಪಂಥವನ್ನು ಮೀರಿ ಸರ್ವರನ್ನೂ ಒಳಗೊಂಡು ಭಕ್ತಿ ಮತ್ತು ಗೌರವದಿಂದ ನಡೆಸಬೇಕಾದ ಧಾರ್ಮಿಕ ಕಾರ್ಯಕ್ರಮವನ್ನು ಪಕ್ಷದ ಕಾರ್ಯಕ್ರಮವನ್ನಾಗಿ ಮಾಡಿ, ಪ್ರಧಾನಿ ನರೇಂದ್ರ ಮೋದಿ ಮತ್ತು ಸಂಘ ಪರಿವಾರದ ನಾಯಕರು ಶ್ರೀರಾಮನಿಗೆ ಮತ್ತು ದೇಶದ 140 ಕೋಟಿ ಜನತೆಗೆ ಅಗೌರವ ಉಂಟು ಮಾಡಿದ್ದಾರೆ. ಶ್ರದ್ಧಾಪೂರ್ವಕವಾಗಿ ನಡೆಸಬೇಕಾಗಿದ್ದ ಧಾರ್ಮಿಕ ಕಾರ್ಯಕ್ರಮವನ್ನು ರಾಜಕೀಯ ಪ್ರಚಾರದ ಅಭಿಯಾನವಾಗಿ ಮಾಡಿರುವುದು ಹಿಂದೂಗಳಿಗೆ ಮಾಡಿರುವ ದ್ರೋಹ' ಎಂದು ಅಭಿಪ್ರಾಯಪಟ್ಟಿದ್ದಾರೆ.

'30-35 ವರ್ಷಗಳಿಂದ ಬಿಜೆಪಿ ಮತ್ತು ಸಂಘಪರಿವಾರ ರಾಮನ ಹೆಸರಲ್ಲಿ ನಡೆಸಿಕೊಂಡು ಬಂದಿರುವ ರಾಜಕೀಯವನ್ನು ಗಂಭೀರವಾಗಿ ಗಮನಿಸುತ್ತಾ ಬಂದಿರುವ ದೇಶದ ಜನರು ಈ ಬಾರಿ ಇಂತಹ ಡೋಂಗಿ ಹಿಂದುತ್ವದ ಜಾಲಕ್ಕೆ ಬಲಿಯಾಗುವುದಿಲ್ಲವೆಂಬ ವಿಶ್ವಾಸವಿದೆ' ಎಂದಿದ್ದಾರೆ.

'ಮತೀಯ ಗೂಂಡಾಗಿರಿ ಸಹಿಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತೀಯ ಗೂಂಡಾಗಿರಿ ಸಹಿಸುವುದಿಲ್ಲ. ಅಂತಹ ಘಟನೆಗಳನ್ನು ಹತ್ತಿಕ್ಕಲಾಗುವುದು. ಈ ಬಗ್ಗೆ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ. ತಪ್ಪಿತಸ್ಥರನ್ನು ಸುಮ್ಮನೆ ಬಿಡುವುದಿಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಎಚ್ಚರಿಕೆ ನೀಡಿದರು.

ಸದಾಶಿವನಗರದ ತಮ್ಮ ನಿವಾಸದ ಬಳಿ ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಮತೀಯ ಗೂಂಡಾಗಿರಿ ಎಲ್ಲಿ ನಡೆದರೂ ಕಾನೂನು ರೀತಿ ಕ್ರಮತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ಹೈಕಮಾಂಡ್ ವಹಿಸುವ ಕೆಲಸ ಮಾಡುತ್ತೇವೆ: 'ಚುನಾವಣೆ ಹಿನ್ನೆಲೆಯಲ್ಲಿ ಜವಾಬ್ದಾರಿ ತೆಗೆದುಕೊಳ್ಳಬೇಕು. ಹೆಚ್ಚು ಸ್ಥಾನಗಳನ್ನು ಗೆಲ್ಲಿಸಬೇಕು ಎಂದು ಈಗಾಗಲೇ ಹೈಕಮಾಂಡ್ ಹೇಳಿದೆ. ದೆಹಲಿಯ ಸಭೆಯಲ್ಲಿ ಏನೆಲ್ಲ ನಿರ್ದೇಶನ ನೀಡುತ್ತಾರೋ ನೋಡಬೇಕು. ಹೈಕಮಾಂಡ್ ವಹಿಸುವ ಎಲ್ಲ ಹೊಣೆಯನ್ನು ತೆಗೆದುಕೊಂಡು ಕೆಲಸ ಮಾಡುತ್ತೇವೆ' ಎಂದು ಹೇಳಿದರು.

ಸಿ.ಎಂ ಮೌನವೇಕೆ; ಬೊಮ್ಮಾಯಿ ಪ್ರಶ್ನೆ

'ನೈತಿಕ ಪೊಲೀಸ್ ಗಿರಿ ವಿರುದ್ಧ ಯಾವಾಗಲೂ ಮಾತನಾಡುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನಲ್ಲಿ ನಡೆದಿರುವ ಪ್ರಕರಣದ ಬಗ್ಗೆ ಮೌನ ವಹಿಸಿರುವುದು ಏಕೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ವಿಭಿನ್ನ ಕೋಮಿನವರು ಒಂದು ಕೊಠಡಿಯಲ್ಲಿದ್ದಾಗ ಅವರ ಮೇಲೆ ಹಲ್ಲೆ ನಡೆಸಲಾಗಿದೆ. ಸಾಮೂಹಿಕ ಅತ್ಯಾಚಾರ ನಡೆದಿದೆ ಎಂಬ ಆರೋಪವೂ ಇದೆ. ಅಲ್ಪಸಂಖ್ಯಾತ ಮಹಿಳೆಗೆ ರಕ್ಷಣೆ ಕೊಡಲು ಸಿದ್ದರಾಮಯ್ಯ ಅವರಿಗೆ ಆಗುತ್ತಿಲ್ಲ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಕೊಡಿಸಬೇಕು' ಎಂದು ಒತ್ತಾಯಿಸಿದರು.

ಅಪರಾಧ ದೃಶ್ಯ ಮರುಸೃಷ್ಟಿ: ಸುಚನಾ ಕರೆದೊಯ್ದ ಪೊಲೀಸರು

ಪಣಜಿ (ಪಿಟಿಐ): ತನ್ನ ನಾಲ್ಕು ವರ್ಷದ ಮಗುವನ್ನು ಕೊಂದ ಆರೋಪ ಹೊತ್ತಿರುವ ಕೃತಕ ಬುದ್ಧಿಮತ್ತೆಯ ನವೋದ್ಯಮ 'ಮೈಂಡ್‌ಫುಲ್ ಎ.ಐ ಲ್ಯಾಬ್'ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಚನಾ ಸೇಠ್ (39) ಅವರನ್ನು ಶುಕ್ರವಾರ ಗೋವಾ ಪೊಲೀಸರು ಅಪರಾಧ ದೃಶ್ಯದ ಮರುಸೃಷ್ಟಿಗಾಗಿ ಆಕೆ ತಂಗಿದ್ದ ಸರ್ವೀಸ್ ಅಪಾರ್ಟ್‌ಮೆಂಟ್‌ಗೆ ಕರೆದೊಯ್ಯಲಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗೋವಾದ ಕ್ಯಾಂಡೋಲಿಮ್‌ನಲ್ಲಿರುವ ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿ ಸುಚನಾ ತನ್ನ ಪುತ್ರನೊಂದಿಗೆ ಜನವರಿ 6ರಿಂದ 8ರವರೆಗೆ ಉಳಿದುಕೊಂಡಿದ್ದರು. ಮಗು ಕೊಂದು ಶವವನ್ನು ಬ್ಯಾಗ್‌ನಲ್ಲಿ ತುಂಬಿ ಕಾರಿನಲ್ಲಿ ಬೆಂಗಳೂರಿನತ್ತ ಸಾಗಿಸುತ್ತಿದ್ದಾಗ ಚಿತ್ರದುರ್ಗದ ಐಮಂಗಲ ಠಾಣೆಯ ಪೊಲೀಸರು ಸೋಮವಾರ ರಾತ್ರಿ ಬಂಧಿಸಿದ್ದರು.

'ತನಿಖೆಯ ಭಾಗವಾಗಿ ಅಪರಾಧ ಕೃತ್ಯ ದೃಶ್ಯ ಮರು ಸೃಷ್ಟಿ ನಡೆಸುವ ಅಗತ್ಯವಿದೆ' ಎಂದು ಅಧಿಕಾರಿ ಹೇಳಿದ್ದಾರೆ.

ಪ್ರಣವ್ ಮೊಹಂತಿಗೆ ಹೆಚ್ಚುವರಿ ಹೊಣೆ

ಬೆಂಗಳೂರು: ಅಪರಾಧ ತನಿಖಾ ಇಲಾಖೆಯಲ್ಲಿ ಹೊಸತಾಗಿ ಸೃಷ್ಟಿಸಿರುವ ಎಡಿಜಿಪಿ (ಸೈಬರ್, ಎಕನಾಮಿಕ್ಸ್ ಆ್ಯಂಡ್ ನಾರ್ಕೋಟಿಕ್ಸ್) ಹುದ್ದೆಯ ಹೊಣೆಯನ್ನು ಹಿರಿಯ ಐಪಿಎಸ್ ಅಧಿಕಾರಿ ಪ್ರಣವ್ ಮೊಹಂತಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವಹಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸದ್ಯ ಪೊಲೀಸ್ ಕಂಪ್ಯೂಟರ್ ವಿಂಗ್‌ನ ಎಡಿಜಿಪಿ ಆಗಿರುವ ಮೊಹಂತಿ ಅವರಿಗೆ ಹೊಸ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ವಿಳಂಬ ಮಾಡದೆ ಹುದ್ದೆಗೆ ಸೇರುವಂತೆ ಸೂಚಿಸಲಾಗಿದೆ.

3 ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಕಾಂಗ್ರೆಸ್ ಟಿಕೆಟ್?

ಒಂದನೇ ಪುಟದಿಂದ

ಈ ಹೊತ್ತಿನಲ್ಲೇ ಹೈಕಮಾಂಡ್ ನಾಯಕರು ಈ ಸಂದೇಶ ರವಾನಿಸಿದ್ದಾರೆ ಎನ್ನಲಾಗಿದೆ.

'ಕಂದಾಯ ಹಾಗೂ ಆರೋಗ್ಯ ಇಲಾಖೆಯ ಕಾರ್ಯವೈಖರಿ ಉತ್ತಮವಾಗಿದೆ. ಇಬ್ಬರೂ ಸಚಿವರೂ ಸಮರ್ಥವಾಗಿ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ, ಲೋಕಸಭಾ ಚುನಾವಣೆಗೆ ಸ್ಪರ್ಧಿಸುವುದು ಬೇಡ. ಸಚಿವರಾಗಿಯೇ ಕೆಲಸ ಮಾಡಿಕೊಂಡು ಹೋಗುವಂತೆ ಹೈಕಮಾಂಡ್ ಇಬ್ಬರಿಗೂ ತಿಳಿಸಿದೆ' ಎಂದು ಮೂಲಗಳು ಹೇಳಿವೆ.

ಲೋಕಸಭೆ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವ ಉದ್ದೇಶದಿಂದ ರಾಜ್ಯಕ್ಕೆ ಬಂದಿರುವ ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಕೃಷ್ಣ ಬೈರೇಗೌಡ ಮತ್ತು ದಿನೇಶ್ ಗುಂಡೂರಾವ್ ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಉಭಯ ಸಚಿವರಿಗೆ ರಾಜ್ಯ ರಾಜಕಾರಣದಲ್ಲಿ ಮುಂದುವರೆಯುವಂತೆ ಅವರು ಸೂಚನೆ ನೀಡಿದ್ದಾರೆ ಎಂದು ಹೇಳಲಾಗಿದೆ.

ಗ್ಯಾರಂಟಿ ಜಾರಿ ಸಮಿತಿ ರಚನೆಗೆ ಆಶೋಕ ವ್ಯಂಗ್ಯ

'ನಾಯಕರ ಹಿಂಬಾಲಕರಿಗೆ ಬಿರಿಯಾನಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬರಗಾಲದಿಂದ ಸಂಕಷ್ಟಕ್ಕೆ ಈಡಾಗಿರುವ ರೈತರಿಗೆ ಪರಿಹಾರ ನೀಡಲು ಸರ್ಕಾರದ ಬಳಿ ಹಣವಿಲ್ಲ. ಕಾಂಗ್ರೆಸ್ ನಾಯಕರ ಹಿಂಬಾಲಕರಿಗೆ ಬಿರಿಯಾನಿ ತಿನ್ನಿಸಲು, ಮಜಾ ಮಾಡಲು ₹150 ಕೋಟಿ ಇದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ರೈತರಿಗೆ ಪರಿಹಾರ ನೀಡಲು ಕನಿಷ್ಠ ₹3 ಸಾವಿರ ಕೋಟಿ ಬಿಡುಗಡೆ ಮಾಡಬೇಕಿತ್ತು. ಅದರ ಬದಲು ₹100 ಕೋಟಿ ಬಿಡುಗಡೆ ಮಾಡಲಾಗಿದೆ. ರಾಜ್ಯ ಸರ್ಕಾರದ ಗ್ಯಾರಂಟಿಗಳ ಜಾರಿ ಸಮಿತಿಯಲ್ಲಿ ಮೂರು ಸಾವಿರ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಿಸಿಕೊಳ್ಳಲಾಗುತ್ತಿದ್ದು, ಅವರಿಗೆ ವರ್ಷಕ್ಕೆ ₹ 25 ಕೋಟಿ ಖರ್ಚು ಮಾಡಲಾಗುತ್ತದೆ. ಅಂದರೆ ಐದು ವರ್ಷಕ್ಕೆ ₹150 ಕೋಟಿ ವೆಚ್ಚವಾಗಲಿದೆ ಎಂದು ಹೇಳಿದರು.

ಶಾಲೆಗಳ ಶೌಚಾಲಯ ಸ್ವಚ್ಛಗೊಳಿಸಲು ಸರ್ಕಾರದ ಬಳಿ ಹಣವಿಲ್ಲ. ಕಾರ್ಯಕರ್ತರಿಗೆ ನೀಡಲು ಹಣವಿದೆ. ಇದೇ ಹಣವನ್ನು ಶಾಲೆಗಳಿಗೆ ಕೊಡಬಹುದು. ಗ್ಯಾರಂಟಿ ನಿರ್ವಹಣೆಗೆ ಬೇಕಿದ್ದರೆ ಅಧಿಕಾರಿಗಳನ್ನು ಬಳಸಿಕೊಳ್ಳಲಿ ಎಂದರು.

ಕಾನೂನು ಹೋರಾಟ: ಬೊಮ್ಮಾಯಿ

'ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಕಾಂಗ್ರೆಸ್ ಕಾರ್ಯಕರ್ತರಿಗೆ ಅವಕಾಶ ನೀಡುತ್ತಿರುವುದು ಕಾನೂ'ನು ಬಾಹಿರವಾಗಿದ್ದು, ಈ ತೀರ್ಮಾನ ವಿರೋಧಿ ಕಾನೂನು ಹೋರಾಟ ನಡೆಸುತ್ತೇವೆ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಗ್ರಾಮ ಲೆಕ್ಕಿಗರಿಂದ ಹಿಡಿದು ಮುಖ್ಯ ಕಾರ್ಯದರ್ಶಿಯವರೆಗೂ ಸರ್ಕಾರಿ ವ್ಯವಸ್ಥೆ ಇದೆ. ಆ ವ್ಯವಸ್ಥೆ ಸತ್ತು ಹೋಗಿದೆಯಾ ಎಂದು ಪ್ರಶ್ನಿಸಿದರು.

'ಸಿದ್ದರಾಮಯ್ಯ ಅವರು ರಾಜ್ಯಕ್ಕೆ ಮುಖ್ಯಮಂತ್ರಿಯೋ ಅಥವಾ ಕಾಂಗ್ರೆಸ್‌ಗೋ? ಸರ್ಕಾರದ ಕಾರ್ಯಕ್ರಮ ಜಾರಿಗೆ ಕಾರ್ಯಕರ್ತರಿಗೆ ನೀಡಲು ನಿಮಗೆ ಅಧಿಕಾರ ಕೊಟ್ಟವರು ಯಾರು? ಕಾರ್ಯಕರ್ತರಿಗೆ ಸಚಿವ ದರ್ಜೆ ನೀಡಲು ತೀರ್ಮಾನಿಸಿರುವುದು ಸರಿಯಲ್ಲ. ಇದು ಸ್ವಜನ ಪಕ್ಷಪಾತವಾಗುತ್ತದೆ. ಚುನಾಯಿತ ಪ್ರತಿನಿಧಿಗಳ ಪೈಕಿ ಶೇಕಡ 15 ಕ್ಕಿಂತ ಹೆಚ್ಚಿನವರಿಗೆ ಸಚಿವ ದರ್ಜೆಯ ಅಧಿಕಾರ ನೀಡಬಾರದು ಎಂದು ಸುಪ್ರೀಂಕೋರ್ಟ್ ಆದೇಶವೇ ಇದೆ. ಮುಖ್ಯ ಕಾರ್ಯದರ್ಶಿ ಇದಕ್ಕೆ ಅವಕಾಶ ಕೊಡಬಾರದು' ಎಂದರು.

ಮೈಸೂರಿಗೆ ಯತೀಂದ್ರ ಚಿಕ್ಕಬಳ್ಳಾಪುರಕ್ಕೆ ರಕ್ಷಾ?



ಡಾ.ಯತೀಂದ್ರ ಸಿದ್ದರಾಮಯ್ಯ

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗ, ಮಾಜಿ ಶಾಸಕ ಯತೀಂದ್ರ ಅವರನ್ನು ಕಣಕ್ಕೆ ಇಳಿಸುವ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಒಲವು ಹೊಂದಿದೆ.

ಪಕ್ಷದ ವೇದಿಕೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿದೆ. ಮೈಸೂರಿನ ರಾಜಕಾರಣದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಯತೀಂದ್ರ ಸ್ಪರ್ಧಿಸಿದರೆ, ಸದ್ಯ ಬಿಜೆಪಿ ಹಿಡಿತದಲ್ಲಿರುವ ಈ ಕ್ಷೇತ್ರದಲ್ಲಿ ಸ್ಪರ್ಧೆಯೊಡ್ಡಬಹುದು ಎಂಬ ಲೆಕ್ಕಾಚಾರ ಇದರ ಹಿಂದಿದೆ ಎನ್ನಲಾಗಿದೆ.

ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಮಾಜಿ ಸಚಿವ ಎಂ.ಆರ್. ಸೀತಾರಾಂ ಮಗ, ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ಅವರಿಗೆ ಟಿಕೆಟ್ ಸಿಗುವುದು ಬಹುತೇಕ ಖಚಿತ ಎಂದು ಹೇಳಲಾಗಿದೆ.

ಈ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಬಿ.ಎನ್. ಬಚ್ಚೇಗೌಡ ಗೆಲುವು ಸಾಧಿಸಿದ್ದರು. 2019ರಲ್ಲಿ ಹೊಸಕೋಟೆ ಕ್ಷೇತ್ರದಲ್ಲಿ ನಡೆದ ಉಪಚುನಾವಣೆಯಲ್ಲಿ ತಮ್ಮ ಪುತ್ರ ಶರತ್ ಬಚ್ಚೇಗೌಡ ಪಕ್ಷೇತರರಾಗಿ ಸ್ಪರ್ಧಿಸಿದ ಬಳಿಕ, ಬಚ್ಚೇಗೌಡ ಅವರು ಬಿಜೆಪಿಯಿಂದ ಅಂತರ ಕಾಯ್ದುಕೊಂಡಿದ್ದರು. 2023ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಶರತ್ ಈಗ ಶಾಸಕರಾಗಿದ್ದಾರೆ. ಬಚ್ಚೇಗೌಡ ಈ ಬಾರಿ ಸ್ಪರ್ಧಿಸುವ ಸಾಧ್ಯತೆ ಇಲ್ಲ.

ಅತ್ಯಾಚಾರ: ಮೂವರ ಸೆರೆ

ಒಂದನೇ ಪುಟದಿಂದ

ಹೋಟೆಲ್ ರೂಮ್ ಬಾಯ್ ದೂರು ಆಧಾರದಲ್ಲಿ ಬುಧವಾರ ಹಾನಗಲ್ ಪೊಲೀಸ್ ಠಾಣೆಯಲ್ಲಿ ಅಕ್ಕಿಆಲೂರು ಗ್ರಾಮದ 7 ಯುವಕರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಮೂವರ ಬಂಧನ: ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ಅಕ್ಕಿಆಲೂರಿನ ಅಫ್ತಾಬ್ ಮಕ್ಬೂಲ್ ಅಹಮದ್ ಚಂದನಕಟ್ಟಿ (24) ಮತ್ತು ಮದರ್‌ಸಾಬ್ ಮಹಮದ್ ಇಸಾಕ್ ಮಂಡಕ್ಕಿ (23) ಎಂಬ ಆರೋಪಿಗಳನ್ನು ಬಂಧಿಸಲಾಗಿತ್ತು. ಯುವಕರ ಗುಂಪಿಗೆ ಮಾಹಿತಿ ನೀಡಿದ್ದ ಆಟೊ ಚಾಲಕ ಅಬ್ದುಲ್ ಖಾದರ್ ಹಂಚಿನಮನಿ (29) ಎಂಬ ಆರೋಪಿಯನ್ನು ಗುರುವಾರ ಬಂಧಿಸಲಾಗಿದೆ.

'ಒಬ್ಬ ಆರೋಪಿ ಬೈಕ್ ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿದ್ದಾನೆ. ಇನ್ನೂ ಮೂವರು ಆರೋಪಿಗಳ ಬಂಧನಕ್ಕೆ ಬಲೆ ಬೀಸಲಾಗಿದೆ. ಇದೇ ರೀತಿಯ ಘಟನೆಗಳು ಹಿಂದೆ ನಡೆದಿದ್ದರೆ, ಅವುಗಳ ದೂರು ತೆಗೆದುಕೊಳ್ಳುತ್ತೇವೆ. ಈ ಆರೋಪಿಗಳ ವಿರುದ್ಧ ಈ ಹಿಂದೆ ದೂರುಗಳು ಬಂದಾಗ ರಾಜಿ ಸಂಧಾನ ನಡೆದಿತ್ತು ಎಂಬ ಬಗ್ಗೆ ಮಾಹಿತಿ ಇಲ್ಲ' ಎಂದು ಅಂಶುಕುಮಾರ ಹೇಳಿದರು.

ಇನ್ನಷ್ಟು ವಿಡಿಯೊಗಳು ವೈರಲ್

ಪ್ರಕರಣ ದಾಖಲಾದ ಬೆನ್ನಲ್ಲೇ ಮತ್ತಷ್ಟು ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಕಾರಿನಲ್ಲಿ ಮುಸ್ಲಿಂ ಯುವತಿಗೆ ಯುವಕರ ಗುಂಪು ಕಿರುಕುಳ ನೀಡುತ್ತಿರುವ ದೃಶ್ಯಗಳು ಸೆರೆಯಾಗಿವೆ. 'ನನ್ನನ್ನು ಬಿಟ್ಟುಬಿಡಿ ಮನೆಗೆ ಹೋಗುತ್ತೇನೆ' ಎಂದರೂ ಬಿಡದೆ, ಯುವತಿಯ ಕಪಾಳಕ್ಕೆ ಹೊಡೆದ ಮತ್ತು ಅವಾಚ್ಯ ಪದಗಳಿಂದ ನಿಂದಿಸಿದ ದೃಶ್ಯಗಳು ಚರ್ಚೆಗೆ ಗ್ರಾಸವಾಗಿವೆ.

> ದಾಳಿ, ಹಲ್ಲೆ ಮತ್ತು ಅತ್ಯಾಚಾರ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿದ್ದೇವೆ. ಈ ಗುಂಪಿನ ಹಿಂದೆ ಇರುವ ಶಕ್ತಿಗಳ ಬಗ್ಗೆಯೂ ತನಿಖೆಯನ್ನು ನಡೆಸಲಿದ್ದೇವೆ
>
> **ಅಂಶುಕುಮಾರ್**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಹಾವೇರಿ

ಅನ್ಯರ ಹಸ್ತಕ್ಷೇಪಕ್ಕೆ ಚೀನಾ ವಿರೋಧ

ಮಾಲ್ದೀವ್ಸ್ ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯ ಕಾಪಾಡಿಕೊಳ್ಳುವ ವಿಚಾರದಲ್ಲಿ ಬೆಂಬಲ ಘೋಷಣೆ

ಬೀಜಿಂಗ್ (ಪಿಟಿಐ): ಮಾಲ್ದೀವ್ಸ್‌ನ ಆಂತರಿಕ ವಿಚಾರಗಳಲ್ಲಿ ಅನ್ಯರ ಹಸ್ತಕ್ಷೇಪವನ್ನು ಬಲವಾಗಿ ವಿರೋಧಿಸುವುದಾಗಿ ಚೀನಾ ಗುರುವಾರ ಹೇಳಿದೆ. ಮಾಲ್ದೀವ್ಸ್ ದೇಶಕ್ಕೆ ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯ ಕಾಪಾಡಿಕೊಳ್ಳುವ ವಿಚಾರದಲ್ಲಿ ಬೆಂಬಲ ನೀಡುವುದಾಗಿ ತಿಳಿಸಿದೆ.

ಮಾಲ್ದೀವ್ಸ್ ಅಧ್ಯಕ್ಷ ಮೊಹಮದ್ ಮುಯಿಜು ಅವರು ತಮ್ಮ ಮೊದಲ ಚೀನಾ ಭೇಟಿಯನ್ನು ಕೊನೆಗೊಳಿಸುವ ದಿನ ಈ ಮಾತು ಹೇಳಿದೆ. 'ಎರಡೂ ದೇಶಗಳು ತಮ್ಮ ಪ್ರಮುಖ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವ ವಿಚಾರದಲ್ಲಿ ಪರಸ್ಪರರ ಬೆಂಬಲಕ್ಕೆ ನಿಲ್ಲುವುದನ್ನು ಮುಂದುವರಿಸಲು ಒಪ್ಪಿಕೊಂಡಿವೆ' ಎಂದು ಮುಯಿಜು ಮತ್ತು ಚೀನಾದ ಪ್ರಮುಖ ನಾಯಕರ ಜೊತೆಗಿನ ಮಾತುಕತೆಯ ಕೊನೆಯಲ್ಲಿ ಹೊರಡಿಸಲಾದ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಮುಖ್ಯಾಂಶಗಳು

- ಮುಯಿಜು ಚೀನಾ ಪ್ರವಾಸ ಮುಕ್ತಾಯ
- ತೈವಾನ್ ದೇಶವು ಚೀನಾ ಅವಿಭಾಜ್ಯ ಅಂಗ ಎಂದ ಮಾಲ್ದೀವ್ಸ್

'ಮಾಲ್ದೀವ್ಸ್ ತನ್ನ ರಾಷ್ಟ್ರೀಯ ಸಾರ್ವಭೌಮತ್ವ, ಸ್ವಾತಂತ್ರ್ಯ ಮತ್ತು ರಾಷ್ಟ್ರದ ಘನತೆಯನ್ನು ಕಾಪಾಡಿಕೊಳ್ಳುವ ವಿಚಾರದಲ್ಲಿ ಚೀನಾ ಬೆಂಬಲ ನೀಡಲಿದೆ. ಮಾಲ್ದೀವ್ಸ್‌ನ ಆಂತರಿಕ ವಿಚಾರಗಳಲ್ಲಿ ಅನ್ಯರ ಹಸ್ತಕ್ಷೇಪವನ್ನು ವಿರೋಧಿಸುತ್ತದೆ' ಎಂಬ ಹೇಳಿಕೆಯಲ್ಲಿ ಚೀನಾ ಇತರ ಯಾವುದೇ ದೇಶವನ್ನು ಹೆಸರಿಸಿಲ್ಲ.

ಮಾಲ್ದೀವ್ಸ್‌ನ ಮೂವರು ಉಪ ಸಚಿವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ನಂತರದಲ್ಲಿ, ಮಾಲ್ದೀವ್ಸ್ ಮತ್ತು ಭಾರತದ ನಡುವೆ ರಾಜತಾಂತ್ರಿಕ ಜಟಾಪಟಿ ನಡೆದಿದೆ. ಈ ಸಂದರ್ಭದಲ್ಲಿ ಚೀನಾ ಈ ಮಾತು ಹೇಳಿದೆ. ಮುಯಿಜು ಅವರು ಚೀನಾ ಪರ ಒಲವು ಹೊಂದಿದ್ದಾರೆ. ಅವಹೇಳನಕಾರಿ ಮಾತುಗಳನ್ನು ಆಡಬಾರದು ಎಂಬ ಎಚ್ಚರಿಕೆ ನೀಡಿ ಮುಯಿಜು ಅವರು ಈ ಉಪಸಚಿವರನ್ನು ಅಮಾನತು ಮಾಡಿದ್ದಾರೆ.

ಮುಯಿಜು ಅವರ ಚೀನಾ ಭೇಟಿ ಹೊತ್ತಿನಲ್ಲಿ, ಐರೋಪ್ಯ ಒಕ್ಕೂಟದ ಮಾಲ್ದೀವ್ಸ್‌ಗೆ ಸಂಬಂಧಿಸಿದ ಚುನಾವಣಾ ಕಣ್ಗಾವಲು ಸಮಿತಿಯು ವರದಿಯೊಂದನ್ನು ಬಿಡುಗಡೆ ಮಾಡಿದೆ. ಮಾಲ್ದೀವ್ಸ್‌ನ ಆಡಳಿತಾರೂಢ ಮೈತ್ರಿಕೂಟವು 2023ರ ಅಧ್ಯಕ್ಷೀಯ ಚುನಾವಣೆಯಲ್ಲಿ ಭಾರತ ವಿರೋಧಿ ಭಾವನೆಗಳನ್ನು ಹರಡುವ ಕೆಲಸ ಮಾಡಿತ್ತು ಎಂದು ವರದಿ ಹೇಳಿದೆ.

ಏಕ ಚೀನಾ ತತ್ವಕ್ಕೆ ತಾನು ಬದ್ಧತೆಯನ್ನು ವ್ಯಕ್ತಪಡಿಸುತ್ತಿರುವುದಾಗಿ ಮಾಲ್ದೀವ್ಸ್ ಹೇಳಿದೆ. ತೈವಾನ್ ದೇಶವು ಚೀನಾ ಅವಿಭಾಜ್ಯ ಅಂಗ ಎಂಬ ಮಾತನ್ನು ಕೂಡ ಮಾಲ್ದೀವ್ಸ್‌ನ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ. ಚೀನಾದ ಸಾರ್ವಭೌಮತ್ವವನ್ನು ಹಾಳುಮಾಡುವ ಯಾವುದೇ ಹೇಳಿಕೆ ಅಥವಾ ಕ್ರಿಯೆಯನ್ನು ವಿರೋಧಿಸುವುದಾಗಿ ಮಾಲ್ದೀವ್ಸ್ ತಿಳಿಸಿದೆ.

ಚೀನಿ ಪ್ರವಾಸಿಗರ ಹೆಚ್ಚಿಸಲು ಕ್ರಮ

ಚೀನಾದ ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೆಳೆಯುವ ಒಪ್ಪಂದವೊಂದಕ್ಕೆ ಮಾಲ್ದೀವ್ಸ್ ಸಹಿ ಮಾಡಿದೆ. ಮಾಲ್ದೀವ್ಸ್‌ಗೆ ಭೇಟಿ ನೀಡುವ ಪ್ರವಾಸಿಗರ ಪಟ್ಟಿಯಲ್ಲಿ ಭಾರತ ಮೂಲದವರು ಮೊದಲ ಸ್ಥಾನದಲ್ಲಿ ಇದ್ದಾರೆ, ಚೀನಾ ಮೂಲದವರು ಮೂರನೆಯ ಸ್ಥಾನದಲ್ಲಿ ಇದ್ದಾರೆ. ಕಳೆದ ವರ್ಷ ಭಾರತದ ಎರಡು ಲಕ್ಷಕ್ಕೂ ಹೆಚ್ಚಿನ ಪ್ರವಾಸಿಗರು ಮಾಲ್ದೀವ್ಸ್‌ಗೆ ಭೇಟಿ ನೀಡಿದ್ದರು.

ದೆಹಲಿಯಲ್ಲಿ ಮುಖ್ಯ ಚುನಾವಣಾಧಿಕಾರಿಗಳ ಸಮಾವೇಶ

'ಕಳಂಕರಹಿತ' ಚುನಾವಣೆ: ಸಿಇಸಿ ಸಲಹೆ



ರಾಜೀವ್ ಕುಮಾರ್

ನವದೆಹಲಿ (ಪಿಟಿಐ): ಮಾರ್ಚ್– ಏಪ್ರಿಲ್‌ನಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಯನ್ನು 'ಕಳಂಕ ರಹಿತ'ವಾಗಿ ನಡೆಸಲು ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಗುರುವಾರ ಸಲಹೆ ನೀಡಿದರು.

ದೆಹಲಿಯಲ್ಲಿ ಮುಖ್ಯ ಚುನಾವಣಾ ಅಧಿಕಾರಿಗಳ ಸಮಾವೇಶದಲ್ಲಿ ಅವರು ಮಾತನಾಡಿದರು. ಚುನಾವಣೆ ನಡೆಸಲು ಉತ್ತಮ ರೀತಿಯಲ್ಲಿ ತಯಾರಿ ಮಾಡಿಕೊಂಡಿರಬೇಕು ಎಂದು ಹೇಳಿದರು.

ಈಚೆಗೆ ನಡೆದ ವಿಧಾನಸಭೆ ಚುನಾವಣೆಗಳಲ್ಲಿ ಪಡೆದುಕೊಂಡ ಅನುಭವ, ಕಲಿಕೆ ಕುರಿತು ಚರ್ಚಿಸಲು ಈ ಸಮಾವೇಶವನ್ನು ಆಯೋಜಿಸಲಾಗಿತ್ತು. ಚುನಾವಣಾ ಸಿದ್ಧತೆ, ಖರ್ಚುವೆಚ್ಚ ಕುರಿತ ಮೇಲ್ವಿಚಾರಣೆ, ಮತದಾರರ ನೋಂದಣಿ, ಮಾಹಿತಿ ತಂತ್ರಜ್ಞಾನದ ಬಳಕೆ, ದತ್ತಾಂಶ ಮತ್ತು ವಿದ್ಯುನ್ಮಾನ ಮತಯಂತ್ರಗಳ ನಿರ್ವಹಣೆ ಕುರಿತು ವಿಷಯಾಧಾರಿತ ಚರ್ಚೆಗಳನ್ನೂ ಸಮಾವೇಶದಲ್ಲಿ ನಡೆಸಲಾಯಿತು.

ಚುನಾವಣಾ ನಿರ್ವಹಣೆಯು ಕರ್ತವ್ಯ ಮತ್ತು ದೃಢಸಂಕಲ್ಪದಿಂದ ಕೂಡಿರುವ ಒಂದು ಪ್ರಯಾಣ ಎಂದು ರಾಜೀವ್ ಕುಮಾರ್ ಹೇಳಿದರು. ಮತದಾರರಿಗೆ ಉತ್ತಮ ಚುನಾವಣಾ ಅನುಭವ ನೀಡಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಆಯೋಗ ಮಾಡಿಕೊಳ್ಳುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

2024ರ ಲೋಕಸಭೆ ಚುನಾವಣೆಯ ಸಿದ್ಧತೆಯ ಭಾಗವಾಗಿ ಕಳೆದ ಆರು ತಿಂಗಳಿನಿಂದ ನಡೆಸುತ್ತಿರುವ ಹಲವಾರು ಸಭೆಗಳು, ಕಾರ್ಯಾಗಾರಗಳು, ವಿಚಾರಗೋಷ್ಠಿಗಳು, ತರಬೇತಿ ಕಾರ್ಯಕ್ರಮಗಳ ಪ್ರಮುಖ ಘಟ್ಟವೇ ಈ ಸಮಾವೇಶ ಎಂದು ಚುನಾವಣಾ ಆಯುಕ್ತ ಅನೂಪ್ ಚಂದ್ರ ಪಾಂಡೆ ಹೇಳಿದರು.

ಚುನಾವಣೆ ನಡೆಸುವ ನಿಟ್ಟಿನಲ್ಲಿ ಇರುವ ಸವಾಲುಗಳು ಮತ್ತು ಸಲಹೆಗಳನ್ನು ಆಯೋಗಕ್ಕೆ ನೀಡಲು ಚುನಾವಣಾ ಅಧಿಕಾರಿಗಳು ಮುಕ್ತರು ಎಂದು ಚುನಾವಣಾ ಆಯುಕ್ತ ಅರುಣ್ ಗೋಯೆಲ್ ಹೇಳಿದರು. ಸಮಾವೇಶ ಎರಡು ದಿನಗಳವರೆಗೆ ನಡೆಯಲಿದೆ.

ಸೇನಾಪಡೆಗಳ ಮುಖ್ಯಸ್ಥ ಮನೋಜ್ ಪಾಂಡೆ ಹೇಳಿಕೆ

ಉಗ್ರರ ನಿಗ್ರಹಕ್ಕೆ 'ಜಾಣ್ಮೆ ಕೊರತೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಜಮ್ಮು ಮತ್ತು ಕಾಶ್ಮೀರದ ರಜೌರಿ, ಪೂಂಛ್ ವಲಯದಲ್ಲಿ ಸೇನಾಪಡೆಗಳ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗಳಿಗೆ 'ಜಾಣ್ಮೆಯ ಕೊರತೆ' ಪ್ರಮುಖ ಕಾರಣವಾಗಿದೆ ಎಂದು ಸೇನಾಪಡೆಗಳ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಗುರುವಾರ ಹೇಳಿದರು.

ಈ ವಲಯದಲ್ಲಿ ಕಳೆದ ಒಂದು ವರ್ಷದಲ್ಲಿ ಹಲವು ಬಾರಿ ಭಯೋತ್ಪಾದಕರ ದಾಳಿ ನಡೆದಿದೆ, ಒಳನುಸುಳುವಿಕೆ ಯತ್ನಗಳು ಕೂಡ ನಡೆದಿವೆ. ಒಂದು ವರ್ಷದಲ್ಲಿ ಒಟ್ಟು 20 ಮಂದಿ ಭದ್ರತಾ ಸಿಬ್ಬಂದಿ ಪ್ರಾಣ ಕಳೆದುಕೊಂಡಿದ್ದಾರೆ.

'ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗಳನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರುವಲ್ಲಿ ಮನುಷ್ಯನ ಜಾಣ್ಮೆ ಹಾಗೂ ಸ್ಥಳೀಯರ ಸಹಕಾರ ಬಹಳ ಮುಖ್ಯ. ನಾವು ನಮ್ಮ ಯತ್ನಗಳನ್ನು ಇತರ ಗುಪ್ತಚರ ಸಂಸ್ಥೆಗಳು ಹಾಗೂ ಸ್ಥಳೀಯ ಪೊಲೀಸರ ಜೊತೆ ಸಮನ್ವಯದಿಂದ ಕೈಗೊಳ್ಳುವ ಕೆಲಸ ಮಾಡುತ್ತಿದ್ದೇವೆ' ಎಂದು ಪಾಂಡೆ ತಿಳಿಸಿದರು. ಸ್ಥಳೀಯರ ಮನಸ್ಸಿನಲ್ಲಿ ಪರಕೀಯ ಮನೋಭಾವ ಬೆಳೆಯದಂತೆ ನೋಡಿಕೊಳ್ಳಲು ಕೆಲವು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದರು.

ಪೂಂಛ್ ಜಿಲ್ಲೆಯ ಹಳ್ಳಿಯೊಂದರಲ್ಲಿ ಸೇನೆಯ ವಶದಲ್ಲಿ ಇದ್ದ ನಾಗರಿಕರು ಮೃತಪಟ್ಟ ಘಟನೆಯ ಬಗ್ಗೆ ಪರೋಕ್ಷವಾಗಿ ಉಲ್ಲೇಖಿಸಿ ಪಾಂಡೆ ಅವರು, ಸ್ಥಳೀಯರ ಬೆಂಬಲದ ಅಗತ್ಯವನ್ನು ಮನಗಂಡು ಈ ಹಳ್ಳಿಯನ್ನು ಸೇನೆಯು ದತ್ತು ಪಡೆದಿತ್ತು ಎಂದು ಹೇಳಿದರು.

'ರಜೌರಿ ಮತ್ತು ಪೂಂಛ್ ಜಿಲ್ಲೆಗಳಲ್ಲಿ ಕಳೆದ ಐದಾರು ತಿಂಗಳಲ್ಲಿ ನಡೆದಿರುವ ಭಯೋತ್ಪಾದಕ ಚಟುವಟಿಕೆಗಳು ನಮ್ಮ ಕಳವಳಕ್ಕೆ ಕಾರಣವಾಗಿವೆ. 2017–18ರವರೆಗೆ ಇಲ್ಲಿ ಶಾಂತಿ ನೆಲೆಸಿತ್ತು. ಕಣಿವೆಯಲ್ಲಿ ಶಾಂತಿ ಮರುಸ್ಥಾಪನೆ ಆಗುತ್ತಿದ್ದುದನ್ನು ಕಂಡು ನಮ್ಮ ವಿರೋಧಿಗಳು ಇಲ್ಲಿ ಭಯೋತ್ಪಾದಕ ಗುಂಪುಗಳಿಗೆ ಉತ್ತೇಜನ ನೀಡುತ್ತಿದ್ದಾರೆ' ಎಂದು ಅವರು ತಮ್ಮ ವಾರ್ಷಿಕ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ದೇಶದ ಉತ್ತರದ ಗಡಿಯಲ್ಲಿನ ಪರಿಸ್ಥಿತಿಯ ಬಗ್ಗೆ ಪಾಂಡೆ ಅವರು, 'ಪರಿಸ್ಥಿತಿಯು ಸ್ಥಿರವಾಗಿದ್ದರೂ, ಸೂಕ್ಷ್ಮವಾಗಿಯೇ ಉಳಿದಿದೆ' ಎಂದು ಹೇಳಿದರು. ಚೀನಾದ ಜೊತೆ ನಡೆಯುತ್ತಿರುವ ಮಾತುಕತೆಗಳ ಉದ್ದೇಶವು 2020ರ ಮಧ್ಯಭಾಗದಲ್ಲಿ ಇದ್ದ ಸ್ಥಿತಿಯನ್ನು ಮರುಸ್ಥಾಪಿಸುವುದು ಎಂದರು.

'ಸೇನಾ ಸಿಬ್ಬಂದಿಯ ಸಂಖ್ಯೆಯನ್ನು ಅಲ್ಲಿ ಕಡಿಮೆ ಮಾಡುವ ವಿಚಾರವು ಇದಾದ ನಂತರ ಮುನ್ನೆಲೆಗೆ ಬರುತ್ತದೆ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳಿದರು.

ಮೈತೇಯಿ ಸಮುದಾಯದ ನಾಲ್ವರ ಹತ್ಯೆ

ಒಂದನೇ ಪುಟದಿಂದ

ಈ ಹತ್ಯೆಗಳನ್ನು ಪೊಲೀಸರು ಇನ್ನಷ್ಟೇ ದೃಢಪಡಿಸಬೇಕಿದೆ. ಮೂರು ಮೃತದೇಹಗಳನ್ನು ಗುರುವಾರ ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. 'ಹತ್ಯೆಯಾದವರು ಮೈತೇಯಿ ಸಮುದಾಯಕ್ಕೆ ಸೇರಿದ ಬಂಡುಕೋರರು. ಕುಕಿ ಸಮುದಾಯದವರು ವಾಸಿಸುವ ಗ್ರಾಮಗಳ ಮೇಲೆ ದಾಳಿ ನಡೆಸುವ ಸಲುವಾಗಿ ಅವರು ಚುರಾಚಾಂದ್‌ಪುರಕ್ಕೆ ನುಗ್ಗಿದ್ದರು' ಎಂದು ಕೆಲ ಕುಕಿ ಸಂಘಟನೆಗಳು ಹೇಳಿವೆ.

ಆದರೆ ಈ ಆರೋಪಗಳನ್ನು ಇಂಫಾಲ್ ಕಣಿವೆಯ ಮೈತೇಯಿ ಸಮುದಾಯದ ಮೂಲಗಳು ತಳ್ಳಿಹಾಕಿವೆ. ಕುಕಿ ಸಮುದಾಯದವರು ಹೆಚ್ಚಾಗಿ ವಾಸಿಸುವ ಮತ್ತು ಮೈತೇಯಿ ಸಮುದಾಯದ ಪ್ರಭಾವ ಹೆಚ್ಚಿರುವ ಪ್ರದೇಶಗಳನ್ನು ಪ್ರತ್ಯೇಕಿಸಲು ಕೇಂದ್ರೀಯ ಭದ್ರತಾ ಪಡೆಗಳು ಬಫರ್ ವಲಯವನ್ನು ಸೃಷ್ಟಿಸಿದ್ದರು. ಈ ವಲಯದಲ್ಲಿ ಈ ಹತ್ಯೆಗಳು ನಡೆದಿವೆ. ಮರಮುಟ್ಟು ಸಂಗ್ರಹಿಸುವವರು ದಾರಿತಪ್ಪಿ ಇಲ್ಲಿಗೆ ಹೋಗಿದ್ದರು ಎಂದು ಮೂಲಗಳು ಹೇಳಿವೆ.

'ಸುರಂಗದಲ್ಲಿ ಒತ್ತೆಯಾಳುಗಳ ಕುರುಹು ಪತ್ತೆ'

ಖಾನ್ ಯೂನಿಸ್ (ಎಪಿ): ಗಾಜಾಪಟ್ಟಿಯ ಖಾನ್ ಯೂನಿಸ್ ನಗರದ ಸುರಂಗದಲ್ಲಿ ಹಮಾಸ್ ಬಂಡುಕೋರರು ಒತ್ತೆಯಾಳುಗಳನ್ನು ಇರಿಸಿದ್ದ ಕುರುಹುಗಳು ಪತ್ತೆಯಾಗಿವೆ ಎಂದು ಇಸ್ರೇಲ್‌ನ ಸೇನಾಪಡೆ ಗುರುವಾರ ಹೇಳಿದೆ.

'ಏಣಿಯ ಮೂಲಕ 2.5 ಮೀಟರ್ ಆಳಕ್ಕೆ ಇಳಿದು ಈ ಸುರಂಗವನ್ನು ಪ್ರವೇಶಿಸಬೇಕಾಗಿದೆ. ಕಾಂಕ್ರೀಟ್ ಗೋಡೆಯ ಸುರಂಗವು ಕಿರಿದಾಗಿದ್ದು, ವಿದ್ಯುತ್ ಸಂಪರ್ಕವನ್ನು ಹೊಂದಿದೆ. ಇದರೊಳಗೆ ಶೌಚಾಲಯದ ವ್ಯವಸ್ಥೆಯೂ ಇದೆ ಎಂದು' ಇಸ್ರೇಲ್ ಸೇನೆಯ ಮೂಲಗಳು ತಿಳಿಸಿವೆ.

ಸುರಂಗದೊಳಗೆ ಯಾವ ವಸ್ತುಗಳು ಪತ್ತೆಯಾಗಿವೆ ಎಂಬುದನ್ನು ಸ್ಪಷ್ಟಪಡಿಸಿಲ್ಲ. ಕೆಲವು ಒತ್ತಯಾಳುಗಳನ್ನು ಹಮಾಸ್ ಬಂಡುಕೋರರುನವೆಂಬರ್‌ನಲ್ಲಿ ಬಿಡುಗಡೆಗೊಳಿಸಿದ್ದರು.

ಸೀಟು ಹಂಚಿಕೆ: ನಿರ್ಧಾರ ತಿಳಿಸಿದ್ದೇವೆ– ಟಿಎಂಸಿ

'ಕಾಂಗ್ರೆಸ್ ಸಮಿತಿ ಜತೆ ಮಾತುಕತೆಯಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಲೋಕಸಭಾ ಚುನಾವಣೆಗೆ ಪಶ್ಚಿಮ ಬಂಗಾಳದಲ್ಲಿ ಸೀಟು ಹಂಚಿಕೆ ಬಗ್ಗೆ ತಮ್ಮ ನಿರ್ಧಾರವನ್ನು ಈಗಾಗಲೇ 'ಇಂಡಿಯಾ' ಮೈತ್ರಿಕೂಟಕ್ಕೆ ತಿಳಿಸಿರುವುದರಿಂದ ಕಾಂಗ್ರೆಸ್‌ನ 'ರಾಷ್ಟ್ರೀಯ ಮೈತ್ರಿ ಸಮಿತಿ'ಯ ಜತೆಗಿನ ಮಾತುಕತೆಗೆ ಯಾವುದೇ ಅರ್ಥವಿಲ್ಲ ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಮೂಲಗಳು ಹೇಳಿವೆ.

ವಿವಿಧ ರಾಜ್ಯಗಳಲ್ಲಿ ಸೀಟು ಹಂಚಿಕೆ ಸಂಬಂಧ 'ಇಂಡಿಯಾ' ಮೈತ್ರಿಕೂಟದ ಪಾಲುದಾರ ಪಕ್ಷಗಳ ಜತೆ ಕಾಂಗ್ರೆಸ್ ಪಕ್ಷ ಮಾತುಕತೆ ನಡೆಸುತ್ತಿರುವ ಮಧ್ಯೆ ಈ ಬೆಳವಣಿಗೆ ನಡೆದಿದೆ. ಪಶ್ಚಿಮ ಬಂಗಾಳದ ಕಾಂಗ್ರೆಸ್ ಅಧ್ಯಕ್ಷ ಅಧೀರ್ ರಂಜನ್ ಚೌಧರಿ ಅವರು ಮಮತಾ ಬ್ಯಾನರ್ಜಿ ನೇತೃತ್ವದ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವುದಕ್ಕೆ ವಿಮುಖವಾಗಿ ನಡೆದುಕೊಳ್ಳುತ್ತಲೇ ಬಂದಿದ್ದಾರೆ.

ಪಶ್ಚಿಮ ಬಂಗಾಳದ 42 ಲೋಕಸಭಾ ಕ್ಷೇತ್ರಗಳಲ್ಲಿ ಮೈತ್ರಿಕೂಟದ ಪಾಲುದಾರರಿಗೆ ಎರಡನ್ನು ಮಾತ್ರ ಬಿಟ್ಟುಕೊಡುವುದಾಗಿ ಟಿಎಂಸಿ ಈಗಾಗಲೇ ಹೇಳಿದೆ. ಕಾಂಗ್ರೆಸ್ ಪಕ್ಷವು 9 ರಿಂದ 12 ಸ್ಥಾನಗಳಿಗೆ ಬೇಡಿಕೆಯಿಟ್ಟಿದೆ ಎಂಬ ಊಹಾಪೋಹ ಎದ್ದಿದೆಯಾದರೂ, ಪಕ್ಷವು ಅಧಿಕೃತವಾಗಿ ನಿರ್ದಿಷ್ಟ ಸಂಖ್ಯೆಯನ್ನು ತಿಳಿಸಿಲ್ಲ.

'ಕಾಂಗ್ರೆಸ್‌ಗೆ ಎರಡು ಸ್ಥಾನಗಳನ್ನು ಬಿಟ್ಟುಕೊಡಲು ನಿರ್ಧರಿಸಿದ್ದೇವೆ. ಹೀಗಿರುವಾಗ, ಟಿಎಂಸಿ ಮುಖಂಡರು ಕಾಂಗ್ರೆಸ್‌ನ 'ರಾಷ್ಟ್ರೀಯ ಮೈತ್ರಿ ಸಮಿತಿ' ಜತೆಗಿನ ಮಾತುಕತೆಗೆ ದೆಹಲಿಗೆ ತೆರಳಿ ಪಕ್ಷದ ತೀರ್ಮಾನವನ್ನು ಪುನರುಚ್ಚರಿಸುವುದರಲ್ಲಿ ಯಾವುದೇ ಅರ್ಥವಿಲ್ಲ' ಎಂದು ಮೂಲಗಳು ಗುರುವಾರ ಹೇಳಿವೆ.

ಬಂಗಾಳದಲ್ಲಿ ಕಾಂಗ್ರೆಸ್‌ಗೆ ಎರಡಕ್ಕಿಂತ ಹೆಚ್ಚಿನ ಕ್ಷೇತ್ರಗಳನ್ನು ಬಿಟ್ಟುಕೊಡುವುದಾದರೆ ಆ ಬಗ್ಗೆ ಮಮತಾ ಮಾತ್ರ ನಿರ್ಧಾರ ತೆಗೆದುಕೊಳ್ಳಲು ಸಾಧ್ಯ ಟಿಎಂಸಿ ಮೂಲಗಳು ಹೇಳಿವೆ. ಕಾಂಗ್ರೆಸ್ ಮತ್ತು ಟಿಎಂಸಿ ನಡುವಣ ಸೀಟು ಹಂಚಿಕೆ ಮಾತುಕತೆ ಉನ್ನತ ಮಟ್ಟದ ನಾಯಕರ ನಡುವೆ ಮಾತ್ರ ನಡೆಯಲಿದೆ ಎಂಬ ಸೂಚನೆಯನ್ನು ಈ ಮೂಲಕ ನೀಡಿದೆ.

'ಇಂಡಿಯಾ' ಮೈತ್ರಿಕೂಟದ ಜತೆಗಿರಲು ಟಿಎಂಸಿ ಬದ್ಧವಾಗಿದೆ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಸ್ಪಷ್ಟಪಡಿಸಿದ್ದು, ಬಂಗಾಳದಲ್ಲಿ ಕಾಂಗ್ರೆಸ್‌ಗೆ ಗಟ್ಟಿ ನೆಲೆಯಿಲ್ಲದಿರುವುದನ್ನು ಆ ಪಕ್ಷ ಒಪ್ಪಿಕೊಳ್ಳಬೇಕು ಎಂದಿದ್ದಾರೆ. 2019ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ 39 ಕ್ಷೇತ್ರಗಳಲ್ಲಿ ಶೇ 5 ಕ್ಕಿಂತ ಹೆಚ್ಚು ಮತಗಳನ್ನು ಪಡೆದಿರಲಿಲ್ಲ ಎಂದು ಹೇಳಿದ್ದಾರೆ.

ಕಳೆದ ಲೋಕಸಭೆ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ 42 ಸ್ಥಾನಗಳಲ್ಲಿ ಟಿಎಂಸಿ 22ನ್ನು ಗೆದ್ದಿತ್ತು. ಕಾಂಗ್ರೆಸ್ ಎರಡು ಹಾಗೂ ಬಿಜೆಪಿ 18 ಸ್ಥಾನಗಳನ್ನು ಜಯಿಸಿತ್ತು.



ಭಕ್ತರ ಸಂಗಮ ಮಕರ ಸಂಕ್ರಾಂತಿ ಹಬ್ಬ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದ ಕೋಲ್ಕತ್ತಾದ ಬಾಬುಘಾಟ್ ಬಳಿಯಿರುವ ಸಾಗರ್ ದ್ವೀಪ ಪ್ರದೇಶಕ್ಕೆ ತೆರಳಲು ಗುರುವಾರ ಗಂಗಾಸಾಗರ ಮೇಳದ ಯಾತ್ರಿಗಳು ಗಂಗಾನದಿಯ ದಡದಲ್ಲಿ ಸೇರಿದ್ದರು –ಪಿಟಿಐ ಚಿತ್ರ

ಪ್ರತಿಭಟನೆ ಇಂದು

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಶಿಕ್ಷಣ ಕ್ಷೇತ್ರದಲ್ಲಿ ದಮನಕಾರಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ'ದ 16 ಪಕ್ಷಗಳ ವಿದ್ಯಾರ್ಥಿ ಸಂಘಟನೆಗಳು ಜಂಟಿಯಾಗಿ ಇದೇ 12ರಂದು ನವದೆಹಲಿಯಲ್ಲಿ ಪ್ರತಿಭಟನೆ ನಡೆಸಲಿವೆ.

'ಯುನೈಟೆಡ್ ಸ್ಟೂಡೆಂಟ್ಸ್ ಆಫ್ ಇಂಡಿಯಾ' ವೇದಿಕೆಯಡಿ ಈ ಪ್ರತಿಭಟನೆ ನಡೆಯಲಿದೆ. ಎಐಎಸ್‌ಎ, ಎಐಎಸ್‌ಬಿ, ಎಐಎಸ್‌ಎಫ್, ಸಿಆರ್‌ಜೆಡಿ, ಸಿವೈಎಸ್‌ಎಸ್, ಡಿಎಸ್‌ಎಫ್, ಎನ್‌ಎಸ್‌ಯು(ಐ), ಎಸ್‌ಎಫ್‌ಐ ಮತ್ತಿತರ ವಿದ್ಯಾರ್ಥಿ ಸಂಘಟನೆಗಳು ಇದರಲ್ಲಿ ಪಾಲ್ಗೊಳ್ಳಲಿವೆ ಎಂದು ಮೂಲಗಳು ತಿಳಿಸಿವೆ. ಎಡ ಪಕ್ಷಗಳ ವಿದ್ಯಾರ್ಥಿ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿರುವ ಕಾರಣ ಟಿಎಂಸಿ ವಿದ್ಯಾರ್ಥಿ ಸಂಘಟನೆಯನ್ನು ಈ ಗುಂಪಿನಿಂದ ಈವರೆಗೆ ಹೊರಗಿಡಲಾಗಿದೆ.

ವಿವಾದದಲ್ಲಿ 'ಅನ್ನಪೂರಣಿ' ನಯನತಾರಾ ವಿರುದ್ಧ ದೂರು



ಮುಂಬೈ (ಪಿಟಿಐ/ಎಎಫ್‌ಪಿ): ಬಹುಭಾಷಾ ನಟಿ ನಯನತಾರಾ ನಟನೆಯ, ಇತ್ತೀಚೆಗಷ್ಟೇ ಬಿಡುಗಡೆಯಾದ 'ಅನ್ನಪೂರಣಿ' ಚಿತ್ರ ಇದೀಗ ವಿವಾದದ ಸುಳಿಯಲ್ಲಿ ಸಿಲುಕಿದೆ. ಸಿನಿಮಾದ ಕೆಲವು ಸನ್ನಿವೇಶಗಳು ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿವೆ ಎಂದು ಆರೋಪಿಸಿರುವ ಬಲಪಂಥೀಯ ಎರಡು ಸಂಘಟನೆಗಳು ನಯನತಾರಾ ಮತ್ತು ಚಿತ್ರತಂಡದ ವಿರುದ್ಧ ಮುಂಬೈನಲ್ಲಿ ಪ್ರತ್ಯೇಕ ದೂರು ದಾಖಲಿಸಿವೆ.

'ಅನ್ನಪೂರಣಿ' ಚಿತ್ರ ಇತ್ತೀಚೆಗಷ್ಟೇ ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆಯಾಗಿತ್ತು. ಚಿತ್ರದಲ್ಲಿ ಹಿಂದೂ ದೇವರು ಶ್ರೀರಾಮನನ್ನು ಮಾಂಸಾಹಾರಿ ಎಂದು ಕರೆದು ಅವಹೇಳನ ಮಾಡಲಾಗಿದೆ. ಅಲ್ಲದೇ ಧಾರ್ಮಿಕ ಮತಾಂತರದ ವಿವಾಹ ಪ್ರೋತ್ಸಾಹಿಸಲಾಗಿದೆ ಎಂದು ದೂರುದಾರರು ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬಜರಂಗ ದಳದ ಕಾರ್ಯಕರ್ತರು ಮುಂಬೈನ ಒಶಿವಾರ ಪೊಲೀಸ್ ಠಾಣೆಯಲ್ಲಿ ಎರಡು ದಿನಗಳ ಹಿಂದೆ ಈ ಸಂಬಂಧ ದೂರು ದಾಖಲಿಸಿದ್ದು, 'ಹಿಂದೂ ಐಟಿ ಸೆಲ್' ಸ್ಥಾಪಕ ರಮೇಶ್ ಸೋಲಂಕಿ ಅವರು ಲೋಕಮಾನ್ಯ ತಿಲಕ್ ಮಾರ್ಗ್ ಪೊಲೀಸ್ ಠಾಣೆಯಲ್ಲಿ ಮತ್ತೊಂದು ದೂರು ದಾಖಲಿಸಿದ್ದಾರೆ.

'ಚಿತ್ರದಲ್ಲಿ ರಾಮನನ್ನು ಕೀಳಾಗಿ ತೋರಿಸಲಾಗಿದ್ದು, ಹಿಂದೂಗಳ ಭಾವನೆಗೆ ಧಕ್ಕೆ ತರುವ ಸಲುವಾಗಿಯೇ ಚಿತ್ರ ಬಿಡುಗಡೆ ಮಾಡಿರುವುದಾಗಿ ಆರೋಪಿಸಿದ್ದಾರೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ನಕ್ಷತ್ರದಿಂದ ಹೊಮ್ಮಿದ ಎಕ್ಸ್‌ರೇ ಚಿತ್ರ ಸೆರೆಹಿಡಿದ ಎಕ್ಸ್‌ಪೊಸ್ಯಾಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಗೋಳದಲ್ಲಿ ಹೊಮ್ಮುವ ಕಿರಣಗಳ ಅಧ್ಯಯನಕ್ಕಾಗಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಉಡಾವಣೆ ಮಾಡಿರುವ 'ಎಕ್ಸ್‌ಪೊಸ್ಯಾಟ್' ಉಪಗ್ರಹದಲ್ಲಿ ಅಳವಡಿಸಿದ್ದ 'ಎಕ್ಸ್‌ಸ್ಪೆಕ್ಟ್', ಖಗೋಳದಲ್ಲಿ ಮೂಡಿದ್ದ ಎಕ್ಸ್‌ರೇದ ಪ್ರಥಮ ಚಿತ್ರವನ್ನು ಸೆರೆಹಿಡಿದಿದೆ.

'ಕ್ಯಾಸಿಯೊಪಿಯಾ ಎ' ಎಂಬ ಬೃಹತ್ ನಕ್ಷತ್ರದ ಅವಶೇಷದಲ್ಲಿ ಹೊಮ್ಮಿದ್ದ ಎಕ್ಸ್‌ರೇ ಅನ್ನು ಉಪಗ್ರಹದಲ್ಲಿ ಅಳವಡಿಸಲಾಗಿರುವ 'ಎಕ್ಸ್‌ಸ್ಪೆಕ್ಟ್' ಸೆರೆಹಿಡಿದಿದೆ. ಈ ಸಾಧನವನ್ನು ಜನವರಿ 5ರಂದು ಕಾರ್ಯಾರಂಭಗೊಳಿಸಲಾಗಿತ್ತು ಎಂದು ಇಸ್ರೊ ಗುರುವಾರ ಪ್ರಕಟಿಸಿದೆ.

'ಎಕ್ಸ್‌ಸ್ಪೆಕ್ಟ್' ಅಥವಾ 'ಎಕ್ಸ್–ರೇ ಸ್ಪೆಕ್ಟ್ರಾಸ್ಕೊಪಿಯ' ಸಾಮರ್ಥ್ಯವನ್ನು ಪರಿಶೀಲಿಸುವ ಪರಿಶೀಲನಾ ಹಂತದಲ್ಲಿ ಈ ಚಿತ್ರ ಸೆರೆಹಿಡಿಯಲಾಗಿದೆ ಎಂದು ತಿಳಿಸಿದೆ. ಈ ಕಿರಣವು ಮ್ಯಾಗ್ನಿಷಿಯಂ, ಸಿಲಿಕಾನ್, ಗಂಧಕ, ಕ್ಯಾಲ್ಸಿಯಂ, ಕಬ್ಬಿಣ ಸಂವಾದಿಯಾಗಿದೆ.

'ಕ್ಯಾಸಿಯೊಪಿಯ ಎ' ಎಂಬುದು ಬ್ರಹ್ಮಾಂಡ ವಿಕಸನದ ಪ್ರಕ್ರಿಯೆಯಲ್ಲಿ ಛಿದ್ರಗೊಂಡ ನಕ್ಷತ್ರದ ಅವಶೇಷವಾಗಿದ್ದು, ಭೂಮಿಯಿಂದ ಸುಮಾರು 11 ಸಾವಿರ ಬೆಳಕಿನ ವರ್ಷದಷ್ಟು ದೂರದಲ್ಲಿದೆ.

ಎಕ್ಸ್‌ಪೆಕ್ಟ್ ಅನ್ನು ಯು.ಆರ್. ರಾವ್ ಉಪಗ್ರಹ ಕೇಂದ್ರದ ಬಾಹ್ಯಾಕಾಶ ಖಗೋಳತಜ್ಞರ ತಂಡ ಅಭಿವೃದ್ಧಿಪಡಿಸಿದೆ. ಸುದೀರ್ಘ ಅವಧಿ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಇದು ಹೊಂದಿದೆ.

ಶಿವಸೇನಾ ಬಣಗಳ ವಾಕ್ಸಮರ ತೀವ್ರ

ಪ್ರಜಾವಾಣಿ ವಾರ್ತೆ

ಮುಂಬೈ: ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾವೇ 'ನಿಜವಾದ ಶಿವಸೇನಾ' ಎಂದು ಮಹಾರಾಷ್ಟ್ರ ವಿಧಾನಸಭೆ ಸ್ಪೀಕರ್ ರಾಹುಲ್ ನರ್ವೇಕರ್ ಆದೇಶ ನೀಡಿದ ಬಳಿಕ ಶಿವಸೇನಾದ ಎರಡು ಬಣಗಳ ನಡುವಣ ವಾಕ್ಸಮರವು ತೀವ್ರಗೊಂಡಿದೆ.

ರಾಜಕೀಯ ಪಕ್ಷವನ್ನು 'ಖಾಸಗಿ ಕಂಪನಿ'ಯಂತೆ ನಡೆಸಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವದಲ್ಲಿ ಸಂಖ್ಯಾಬಲಕ್ಕೆ ಮತ್ತು ಜನರ ಇಚ್ಛೆಗೆ ಮಹತ್ವವಿದೆ ಎಂದು ಶಿಂದೆ ಅವರು ಆದೇಶ ಕುರಿತು ಹೇಳಿದ್ದರು.

ಮಹಾರಾಷ್ಟ್ರದಲ್ಲಿ ಸ್ಥಿರ ಸರ್ಕಾರ ಮುಂದುವರೆಯಲಿದೆ ಮತ್ತು ಅದು ಅವಧಿಯನ್ನು ಪೂರ್ಣಗೊಳಿಸುತ್ತದೆ ಎಂಬುದನ್ನು ಈ ತೀರ್ಪು ಪ್ರತಿಬಿಂಬಿಸಿದೆ ಎಂದು ರಾಜ್ಯದ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಪ್ರತಿಕ್ರಿಯಿಸಿದ್ದರು.

ಇತ್ತ, ಸ್ಪೀಕರ್ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ (ಯುಬಿಟಿ) ಸಿದ್ಧತೆ ಮಾಡಿಕೊಳ್ಳುತ್ತಿದೆ. ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು ಪೂರ್ವತಯಾರಿ ಮಾಡಿಕೊಳ್ಳುವ ನಿಟ್ಟಿನಲ್ಲಿ ಠಾಕ್ರೆ ಕುಟುಂಬದ ಆಪ್ತ, ಪಕ್ಷದ ಎಂಎಲ್‌ಸಿ ಅನಿಲ್ ಪರಬ್ ಅವರು ದೆಹಲಿಗೆ ತೆರಳಿ ವಕೀಲರ ಜೊತೆ ಚರ್ಚೆ ನಡೆಸುತ್ತಿದ್ದಾರೆ.

'ರಾಜ್ಯ ವಿಧಾನಸಭೆಯ ಉಪಚುನಾವಣೆ ವೇಳೆಯೇ ನಮ್ಮ ಬಣಗಳ ಹೆಸರುಗಳನ್ನು ಅಂತಿಮ ಮಾಡಿಕೊಳ್ಳಬೇಕಿತ್ತು. ನಾವು ಬಾಳಾಸಾಹೇಬಾಂಚಿ ಶಿವಸೇನಾ ಎಂಬ ಹೆಸರನ್ನು ಅಂತಿಮಗೊಳಿಸಿದೆವು. ಉದ್ಧವ್ ಅವರು ಶಿವಸೇನಾ (ಉದ್ಧವ್ ಬಾಳಾಸಾಹೇಬ್ ಠಾಕ್ರೆ) ಎಂಬ ಹೆಸರು ಆರಿಸಿಕೊಂಡರು. ಬಾಳಾಸಾಹೇಬರ ಮೇಲೆ ಯಾರಿಗೆ ಎಷ್ಟು ಗೌರವವಿದೆ ಎಂಬುದು ಇದರಿಂದಲೇ ತಿಳಿಯುತ್ತದೆ' ಎಂದು ಶಿಂದೆ ಸುದ್ದಿಗಾರರ ಎದುರು ಹೇಳಿದ್ದಾರೆ.

ಠಾಣೆಯ ಆನಂದ ಆಶ್ರಮಕ್ಕೆ ಭೇಟಿ ನೀಡಿದ ಅವರು, ಶಿವಸೇನಾ ಸಂಸ್ಥಾಪಕ ಬಾಳಾಸಾಹೇಬ್ ಠಾಕ್ರೆ ಮತ್ತು ತಮ್ಮ ಮಾರ್ಗದರ್ಶಿ 'ಧರ್ಮವೀರ' ಆನಂದ್ ದಿಘೆ ಅವರಿಗೆ ಗೌರವ ಸಲ್ಲಿಸಿದರು.

ಸಿಬಲ್ ಅಸಮಾಧಾನ: ಇದೇವೇಳೆ ನಾರ್ವೇಕರ್ ಆದೇಶವನ್ನು ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಟೀಕಿಸಿದ್ದಾರೆ. ಶಿಂದೆ ಪರ ತೀರ್ಪು ನೀಡಿದ ನಾಟಕದ ಕಥೆಯನ್ನು ತುಂಬಾ ದಿನಗಳ ಹಿಂದೆಯೇ ಬರೆಯಲಾಗಿದೆ. ಯಾರ ನೆರವೂ ಇಲ್ಲದೇ ಪ್ರಹಸನ ನಡೆಯುತ್ತಿರುವುದನ್ನು ನಾವು ಈಗ ನೋಡುತ್ತಿದ್ದೇವೆ. ಇದು ಪ್ರಜಾಪ್ರಭುತ್ವದ ದುರಂತ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಶಹಜಹಾನ್ ಬಂಧನಕ್ಕೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ

ಕೋಲ್ಕತ್ತ (ಪಿಟಿಐ): ಟಿಎಂಸಿ ನಾಯಕ ಶಹಜಹಾನ್ ಶೇಖ್ ವಿರುದ್ಧ ಪೊಲೀಸರು ಕ್ರಮಕೈಗೊಳ್ಳುವಂತೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಪೊಲೀಸ್ ಠಾಣೆ ಬಳಿ ಗುರುವಾರ ಪ್ರತಿಭಟನೆ ನಡೆಸಿದರು.

ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸುಕಾಂತ ಮಜುಂದಾರ್ ನೇತೃತ್ವದಲ್ಲಿ ಪೊಲೀಸ್ ಠಾಣೆ ಬಳಿ ನೆರೆದ ನೂರಾರು ಕಾರ್ಯಕರ್ತರು, ಶಹಜಹಾನ್ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳದೆ ಇರುವುದರ ಕುರಿತು ಆಕ್ರೋಶ ವ್ಯಕ್ತಪಡಿಸಿದರು.

ಶಹಜಹಾನ್ ಅವರ ನಿವಾಸದಲ್ಲಿ ಶೋಧ ಕಾರ್ಯ ನಡೆಸಲು ತೆರಳಿದ್ದ ಇ.ಡಿ ಅಧಿಕಾರಿಗಳ ಮೇಲೆ ಗುಂಪೊಂದು ದಾಳಿ ನಡೆಸಿದ್ದ ಘಟನೆ ಜನವರಿ 5 ರಂದು ನಡೆದಿತ್ತು. ಟಿಎಂಸಿ ನಾಯಕನ ಬೆಂಬಲಿಗರು ದಾಳಿ ನಡೆಸಿದ್ದಾರೆ ಎಂಬ ಆರೋಪ ಇದೆ.

ಸುಮಾರು ಒಂದು ಕಿ.ಮೀ ದೂರ ಮೆರವಣಿಗೆಯಲ್ಲಿ ಬಂದ ಬಿಜೆಪಿ ಕಾರ್ಯಕರ್ತರರನ್ನು ಪೊಲೀಸರು ಠಾಣೆಯ ಬಳಿ ತಡೆದರು. ಅಲ್ಲೇ ಧರಣಿ ಕುಳಿತ ಪ್ರತಿಭಟನಕಾರರು ಸರ್ಕಾರ ಹಾಗೂ ಪೊಲೀಸರ ವಿರುದ್ಧ ಘೋಷಣೆ ಕೂಗಿದರು. ಆ ಬಳಿಕ ಐವರು ಸದಸ್ಯರನ್ನೊಳಗೊಂಡ ಪಕ್ಷದ ನಿಯೋಗ ಪೊಲೀಸ್ ಠಾಣೆಯೊಳಗೆ ತೆರಳಿ ಮನವಿ ಸಲ್ಲಿಸಿತು.

ಇ.ಡಿ ಅಧಿಕಾರಿಗಳ ವಿರುದ್ಧದ ಎಫ್‌ಐಆರ್‌ಗೆ ತಡೆ

ಕೋಲ್ಕತ್ತ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ವಿರುದ್ಧ ಪಶ್ಚಿಮ ಬಂಗಾಳ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ಗೆ ಸಂಬಂಧಿಸಿದ ಪ್ರಕ್ರಿಯೆಗಳಿಗೆ ಮಧ್ಯಂತರ ತಡೆ ನೀಡಿ ಕಲ್ಕತ್ತ ಹೈಕೋರ್ಟ್ ಗುರುವಾರ ಆದೇಶಿಸಿದೆ.

ಟಿಎಂಸಿ ನಾಯಕ ಶಹಜಹಾನ್ ಶೇಖ್ ಅವರ ನಿವಾಸದಲ್ಲಿ ಶೋಧ ಕಾರ್ಯ ನಡೆಸಲು ರಾಜ್ಯದ ಉತ್ತರ 24 ಪರಗಣ ಜಿಲ್ಲೆಯ ಸಂದೇಶ್‌ಖಾಲಿಗೆ ತೆರಳಿದ್ದ ಇ.ಡಿ ಅಧಿಕಾರಿಗಳ ವಿರುದ್ಧ ನಝತ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಶೋಧ ಕಾರ್ಯದ ವೇಳೆ ಅಧಿಕಾರಿಗಳು ಜನರನ್ನು ಥಳಿಸಿದ್ದಾರೆ, ಕಳ್ಳತನ ಮಾಡಿದ್ದಾರೆ, ಮಹಿಳೆಯರ ಗೌರವಕ್ಕೆ ಧಕ್ಕೆ ತರುವಂಥ ಕೃತ್ಯಗಳನ್ನು ಎಸಗಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ಅಧಿಕಾರಿಗಳ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸಲಾಗಿದೆ ಎಂದು ಹೇಳಿರುವ ಇ.ಡಿ, ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಎಫ್‌ಐಆರ್‌ಗೆ ಸಂಬಂಧಿಸಿದ ಪ್ರಕ್ರಿಯೆಗಳಿಗೆ ಮಾರ್ಚ್ 30ರವರೆಗೆ ತಡೆ ನೀಡಿ ನ್ಯಾಯಮೂರ್ತಿ ರಾಜಶೇಖರ್ ಮಂಥಾ ಅವರು ಆದೇಶ ಹೊರಡಿಸಿದ್ದಾರೆ.

ಜ.31ರಿಂದ ಕೇಂದ್ರ ಬಜೆಟ್ ಅಧಿವೇಶನ?

ನವದೆಹಲಿ (ಪಿಟಿಐ): ಸಂಸತ್ತಿನ ಬಜೆಟ್ ಅಧಿವೇಶನವು ಜನವರಿ 31ರಿಂದ ಫೆಬ್ರುವರಿ 9ರವರೆಗೆ ನಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜ.31ರಂದು ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ.

ಈ ಅಧಿವೇಶನದಲ್ಲಿ ಫೆ.1ರಂದು ಕೇಂದ್ರ ಸರ್ಕಾರವು ಲೇಖಾನುದಾನಕ್ಕೆ ಒಪ್ಪಿಗೆ ಪಡೆಯಬಹುದು ಅಥವಾ ಮಧ್ಯಂತರ ಬಜೆಟ್ ಮಂಡಿಸಬಹುದು. ಹೊಸ ಸರ್ಕಾರ ಪೂರ್ಣ ಪ್ರಮಾಣದ ಬಜೆಟ್ ಮಂಡಿಸಲಿದೆ.

17ನೇ ಲೋಕಸಭೆಯ ಅವಧಿ ಜೂನ್ 16ರಂದು ಕೊನೆಗೊಳ್ಳಲಿದ್ದು, ಸಾರ್ವತ್ರಿಕ ಚುನಾವಣೆ ಘೋಷಣೆಯಾಗುವ ಮುನ್ನ ನಡೆಯುವ ಕೊನೆಯ ಅಧಿವೇಶನ ಇದಾಗಿದೆ.

2019ರಲ್ಲಿ ಲೋಕಸಭೆ ಚುನಾವಣೆಯನ್ನು ಮಾರ್ಚ್ 10 ರಂದು ಘೋಷಿಸಲಾಗಿತ್ತು. ಏಪ್ರಿಲ್ 11 ಮತ್ತು ಮೇ 19ರ ನಡುವೆ ಏಳು ಹಂತಗಳಲ್ಲಿ ಮತದಾನ ನಡೆದಿತ್ತು.

ಪನ್ನೀರಸೆಲ್ವಂ ಅರ್ಜಿ ವಜಾ

ಚೆನ್ನೈ: ಎಐಎಡಿಎಂಕೆ ಪಕ್ಷದಿಂದ ಉಚ್ಚಾಟಿತರಾಗಿರುವ ಒ. ಪನ್ನೀರಸೆಲ್ವಂ ಅವರು ಪಕ್ಷದ ಚಿಹ್ನೆ, ಎರಡು ಎಲೆಗಳು ಹಾಗೂ ಬಾವುಟ, ಅಧಿಕೃತ ಲೆಟರ್‌ಹೆಡ್ ಬಳಸುವಂತಿಲ್ಲ ಎಂದು ಏಕಸದಸ್ಯ ಪೀಠ ನೀಡಿದ್ದ ಆದೇಶ ಪ್ರಶ್ನಿಸಿದ್ದ ಅರ್ಜಿಯನ್ನು ಮದ್ರಾಸ್ ಹೈಕೋರ್ಟ್‌ನ ವಿಭಾಗೀಯ ಪೀಠವು ಗುರುವಾರ ವಜಾಗೊಳಿಸಿದೆ.

ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ಪನ್ನೀರಸೆಲ್ವಂ ಅವರು ಮೇಲ್ಮನವಿ ಸಲ್ಲಿಸಿದ್ದರು. ಏಕಸದಸ್ಯ ಪೀಠ ನೀಡಿದ್ದ ಆದೇಶವನ್ನು ಬದಲಾಯಿಸಲು ಯಾವ ಆಧಾರವೂ ಇಲ್ಲ ಎಂದು ವಿಭಾಗೀಯ ಪೀಠವು ಹೇಳಿದೆ.

ಪನ್ನೀರಸೆಲ್ವಂ ಅವರನ್ನು ಪಕ್ಷದಿಂದ 2022ರ ಜುಲೈ 11ರಂದು ಉಚ್ಚಾಟಿಸಲಾಗಿತ್ತು. ಅದರ ನಂತರವೂ ಅವರು ತಮ್ಮನ್ನು ಪಕ್ಷದ ಸಮನ್ವಯಕಾರ ಎಂದು ಕರೆದುಕೊಂಡಿದ್ದರು, ಪಕ್ಷದ ಚಿಹ್ನೆ ಹಾಗೂ ಲೆಟರ್‌ಹೆಡ್ ಬಳಕೆ ಮಾಡುತ್ತಿದ್ದರು. ಇದನ್ನು ಪ್ರಶ್ನಿಸಿ ಎಐಎಡಿಎಂಕೆ ಹೈಕೋರ್ಟ್ ಮೆಟ್ಟಿಲೇರಿತ್ತು.

22ರಂದು ಸಚಿವ ಬಾಲಾಜಿ ವಿರುದ್ಧ ಆರೋಪ ನಿಗದಿ

ಚೆನ್ನೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕಳೆದ ವರ್ಷ ಬಂಧಿಸಲಾಗಿರುವ ತಮಿಳುನಾಡಿನ ಸಚಿವ ವಿ. ಸೆಂಥಿಲ್ ಬಾಲಾಜಿ ವಿರುದ್ಧ ಇದೇ 22ರಂದು ಇಲ್ಲಿನ ಸೆಷನ್ಸ್ ನ್ಯಾಯಾಲಯವು ಆರೋಪ ನಿಗದಿ ಮಾಡಲಿದೆ.

ಅಲ್ಲದೆ, ಬಾಲಾಜಿ ಅವರು ಸಲ್ಲಿಸಿರುವ ಮೂರನೇ ಜಾಮೀನು ಅರ್ಜಿಯ ಕುರಿತು ಸಿಟಿ ಕೋರ್ಟ್ ಇದೇ ಶುಕ್ರವಾರ ಆದೇಶ ಪ್ರಕಟಿಸಲಿದೆ.



ಕೇಂದ್ರ ಕಾರಾಗೃಹದಲ್ಲಿರುವ ಸೆಂಥಿಲ್ ಬಾಲಾಜಿ ಅವರನ್ನು ಪ್ರಾಸಿಕ್ಯೂಷನ್, ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಧಾನ ಸೆಷನ್ಸ್ ನ್ಯಾಯಾಧೀಶ ಎಸ್. ಅಲ್ಲಿ ಅವರ ಎದುರು ಗುರುವಾರ ಹಾಜರುಪಡಿಸಿತು. ಜ.22ರವರೆಗೆ ಸೆಂಥಿಲ್ ಅವರ ಬಂಧನ ಅವಧಿಯನ್ನು ವಿಸ್ತರಿಸಿ ನ್ಯಾಯಾಧೀಶರು ಮಧ್ಯಂತರ ಆದೇಶ ಹೊರಡಿಸಿದರು.

ಪ್ರಕರಣ ವಿಚಾರಣೆಗೆ ಬಂದಾಗ, ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಎನ್. ರಮೇಶ್ ಅವರು, 'ಪ್ರಕರಣದ ಸತ್ಯಾಸತ್ಯತೆಗಳನ್ನು ನ್ಯಾಯಾಲಯಕ್ಕೆ ವಿವರಿಸಿದ್ದೇವೆ. ಆರೋಪಪಟ್ಟಿಯಲ್ಲಿ ಉಲ್ಲೇಖಿಸಲಾದ 21 ಸಾಕ್ಷಿಗಳು ಮತ್ತು 77 ದಾಖಲೆಗಳನ್ನು ಪರಿಶೀಲಿಸುವ ಮೂಲಕ ಸೆಂಥಿಲ್ ಬಾಲಾಜಿ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ಪ್ರಸ್ತಾಪಿಸುತ್ತಿದ್ದೇವೆ' ಎಂದು ನ್ಯಾಯಾಧೀಶರ ಗಮನಕ್ಕೆ ತಂದರು.

ಯುವಕರು, ಮಹಿಳಾ ಸಬಲೀಕರಣದ ಆಶಯ

ಗೋವಾ: ಪ್ರವಾಸೋದ್ಯಮಕ್ಕೆ ಪುನಃಶ್ಚೇತನ

• ಎ.ಎಂ.ಸುರೇಶ

ಪಣಜಿ: ಗೋವಾ ವಿಮೋಚನೆಯ 62ನೇ ವಾರ್ಷಿಕೋತ್ಸವದ ಅಂಗವಾಗಿ ಪ್ರವಾಸೋದ್ಯಮದ ಪುನಃಶ್ಚೇತನಕ್ಕೆ ಕಾರ್ಯಕ್ರಮ ರೂಪಿಸಲಾಗಿದೆ. ಪರಿಸರ, ಸಂಸ್ಕೃತಿಯ ರಕ್ಷಣೆ ಜೊತೆಗೆ ಸ್ಥಳೀಯ ಯುವಕರು ಮತ್ತು ಮಹಿಳೆಯರನ್ನು ಸಬಲೀಕರಣಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

ಇಡೀ ವಿಶ್ವವನ್ನು ಕಾಡಿದ ಕೋವಿಡ್, ರಷ್ಯಾ–ಉಕ್ರೇನ್ ಯುದ್ಧ, ಇಸ್ರೇಲ್–ಹಮಾಸ್ ಸಂಘರ್ಷ, ಅಂತರರಾಷ್ಟ್ರೀಯ ಮಟ್ಟದಲ್ಲಿ ಎದುರಿಸುತ್ತಿರುವ ಸ್ಪರ್ಧೆಯಿಂದಾಗಿ ಗೋವಾಗೆ ಬರುವ ಪ್ರವಾಸಿಗರ ಸಂಖ್ಯೆ ಈಚೆಗೆ ಕಡಿಮೆಯಾಗಿದೆ. ಇದನ್ನು ಗಮನದಲ್ಲಿಟ್ಟು ಪ್ರವಾಸೋದ್ಯಮ ವಲಯದಲ್ಲಿ ಬದಲಾವಣೆ ತರಲು ಗೋವಾ ಸರ್ಕಾರ ಮುಂದಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಪ್ರವಾಸೋದ್ಯಮ ಸಚಿವ ರೋಹನ್ ಕೌಂಟೆ, 'ಕರಾವಳಿ ಭಾಗದ ಪರಿಸರ ಸಂರಕ್ಷಣೆಯ ಜೊತೆಗೆ ಗೋವಾದ ಸ್ಥಳೀಯ ಜನತೆಯ ಸಬಲೀಕರಣ, ಇಲ್ಲಿನ ಐತಿಹಾಸಿಕವಾದ 11 ಧಾರ್ಮಿಕ ಸ್ಥಳಗಳತ್ತ ಪ್ರವಾಸಿಗರನ್ನು ಆಕರ್ಷಿಸುವುದು ನಮ್ಮ ಮುಖ್ಯ ಉದ್ದೇಶವಾಗಿದೆ' ಎಂದರು.

ಮುಖ್ಯಾಂಶಗಳು

- ಪ್ರವಾಸೋದ್ಯಮದಿಂದ ಶೇ 33ರಷ್ಟು ಉದ್ಯೋಗ ಸೃಷ್ಟಿ
- ಜಿಡಿಪಿಗೆ ಪ್ರವಾಸೋದ್ಯಮದ ಕೊಡುಗೆ ಶೇ 16.4
- ಯುವ ಕ್ಲಬ್‌ಗಳ ಮೂಲಕ ಪ್ರವಾಸೋದ್ಯಮದ ಬಗ್ಗೆ ಅರಿವು

ಏಕದಶ ತೀರ್ಥ: ಇಷ್ಟು ದಿನ ಬೀಚ್‌ಗಳತ್ತ ಪ್ರವಾಸಿಗಳನ್ನು ಸೆಳೆಯಲು ಹೆಚ್ಚು ಒತ್ತು ನೀಡಲಾಗಿತ್ತು. ಆದರೆ, ಇನ್ನು ಮುಂದೆ ಏಕದಶ ತೀರ್ಥ ಕಾರ್ಯಕ್ರಮದಡಿ ದೇವಾಲಯಗಳು, ಆಧ್ಯಾತ್ಮಿಕ ಕೇಂದ್ರಗಳತ್ತ ಪ್ರವಾಸಿಗರನ್ನು ಆಕರ್ಷಿಸುತ್ತೇವೆ. ಮುಂದಿನ ಮೂರು ವರ್ಷಗಳಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕ್ರಮಕೈಗೊಳ್ಳಲಿದೆ ಎಂದರು.

ಗೋವಾ ಪ್ರವಾಸೋದ್ಯಮಕ್ಕೆ ಹೆಸರಾಗಿದ್ದು, ಕೋವಿಡ್‌ಗೆ ಮುಂಚೆ ಪ್ರತಿ ವರ್ಷ ಒಂದು ಕೋಟಿಗೂ ಅಧಿಕ ದೇಶಿಯ ಮತ್ತು ವಿದೇಶಿ ಪ್ರವಾಸಿಗರು ಇಲ್ಲಿಗೆ ಬರುತಿದ್ದರು. ಇದರಲ್ಲಿ ವಿದೇಶಿ ಪ್ರವಾಸಿಗರ ಸಂಖ್ಯೆಯೇ 10 ಲಕ್ಷ ಇತ್ತು. ಆದರೆ, ಕೋವಿಡ್ ಬಳಿಕ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕ ಸುನಿಲ್ ಅಂಚಿಪಾಕ ತಿಳಿಸಿದರು.

ಕೋವಿಡ್ ಸಾಂಕ್ರಾಮಿಕದ ಜೊತೆಗೆ ಥಾಯ್ಲೆಂಡ್, ಬ್ಯಾಂಕಾಕ್, ಇಂಡೊನೇಷ್ಯಾ, ಕೌಲಾಲಂಪುರ ಮೊದಲಾದ ಪ್ರವಾಸಿ ತಾಣಗಳೊಂದಿಗೆ ನಾವು ಸ್ಪರ್ಧೆ ಎದುರಿಸಬೇಕಾಗಿದೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಡು ಪುನಃಶ್ಚೇತನಗೊಳಿಸಲು ಮುಂದಾಗಿದ್ದೇವೆ. ಅಡ್ವೆಂಚರ್ ಟೂರಿಸಂ, ಸ್ಪೋರ್ಟ್ಸ್ ಟೂರಿಸಂಗೆ ಉತ್ತೇಜನ ನೀಡಲು ಉತ್ತರಾಖಂಡ ಸೇರಿದಂತೆ ಕೆಲವು ರಾಜ್ಯಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂಬ ಮಾಹಿತಿ ನೀಡಿದರು.

ಒಟ್ಟು ದೇಶಿಯ ಉತ್ಪನ್ನಕ್ಕೆ (ಜಿಡಿಪಿ) ಪ್ರವಾಸೋದ್ಯಮದ ಕೊಡುಗೆ ಸದ್ಯ ಶೇ 16.4ರಷ್ಟು ಇದ್ದು, ಮೂರು ವರ್ಷಗಳಲ್ಲಿ ಇದನ್ನು 24ಕ್ಕೆ ಹೆಚ್ಚಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆ. ಗೋವಾದಲ್ಲಿ 130ಕ್ಕೂ ಅಧಿಕ ಯುವ ಕ್ಲಬ್‌ಗಳು ಇದ್ದು, ಅವುಗಳ ಮೂಲಕ ಪ್ರವಾಸೋದ್ಯಮಕ್ಕೆ ಇನ್ನಷ್ಟು ಪ್ರಚಾರ ನೀಡಲು ನಿರ್ಧರಿಸಲಾಗಿದೆ. ಇದರಿಂದ ಪರೋಕ್ಷವಾಗಿ ಆರ್ಥಿಕ ಚಟುವಟಿಕೆಗಳಿಗೂ ಉತ್ತೇಜನ ದೊರೆಯಲಿದೆ ಎಂದು ಅವರು ಅಭಿಪ್ರಾಯಪಟ್ಟರು.

'ಗೋವಾದಲ್ಲಿ ವಿನ್ಯಾಸಗೊಳಿಸಿ'

ಪ್ರವಾಸೋದ್ಯಮದ ಜೊತೆಗೆ ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೂ ಒತ್ತು ನೀಡುವ ಮೂಲಕ ರಾಜ್ಯಕ್ಕೆ ನವೋದ್ಯಮಗಳನ್ನು ಸೆಳೆಯಲು ಗೋವಾ ಮುಂದಾಗಿದೆ. ಈ ನಿಟ್ಟಿನಲ್ಲಿ 'ಡಿಸೈನ್ ಇನ್ ಗೋವಾ' (ಗೋವಾದಲ್ಲಿ ವಿನ್ಯಾಸಗೊಳಿಸಿ) ಕಾರ್ಯಕ್ರಮ ರೂಪಿಸಲಾಗಿದೆ ಎಂದು ಮಾಹಿತಿ ತಂತ್ರಜ್ಞಾನ ಖಾತೆಯನ್ನೂ ಹೊಂದಿರುವ ಸಚಿವ ರೋಹನ್ ಕೌಂಟೆ ತಿಳಿಸಿದರು.

ನವೋದ್ಯಮಗಳಿಗೆ ಬೇಕಾದ ಎಲ್ಲ ಅವಕಾಶಗಳನ್ನು ನಾವು ಇಲ್ಲಿ ಕಲ್ಪಿಸಿಕೊಡುತ್ತೇವೆ. ನವೋದ್ಯಮಿಗಳು ಗೋವಾದಲ್ಲೇ ತಮ್ಮ ಉತ್ಪನ್ನಗಳನ್ನು ವಿನ್ಯಾಸಗೊಳಿಸಿ, ಬೇರೆ ಕಡೆಗೆ ರಫ್ತು ಮಾಡಬೇಕು ಎಂಬುದು ನಮ್ಮ ಆಶಯ. ನವೋದ್ಯಮದ ಘಟಕಗಳನ್ನು ಆರಂಭಿಸಲು ಮುಂದೆ ಬಂದರೆ ಸೂಕ್ತ ಸ್ಥಳಾವಕಾಶ, ತೆರಿಗೆ ವಿನಾಯಿತಿ ಸೇರಿದಂತೆ ಹಲವು ಕೊಡುಗೆಗಳನ್ನು ನೀಡುತ್ತೇವೆ ಎಂದು ವಿವರಿಸಿದರು.

ಇ–ಆಡಳಿತ, ಇ–ಸೇವೆಗಳ ಲಾಭ ಗ್ರಾಮೀಣ ಭಾಗದ ಜನರಿಗೂ ತಲುಪುತ್ತಿವೆ. ವಿಜ್ಞಾನ, ತಂತ್ರಜ್ಞಾನ, ಸಂಶೋಧನಾ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳ ಲಾಭ ಜನರಿಗೆ ಸಿಗಬೇಕು ಎಂಬುದು ನಮ್ಮ ಆಶಯವಾಗಿದೆ ಎಂದರು. ಮಾಹಿತಿ ತಂತ್ರಜ್ಞಾನ ಇಲಾಖೆಯ ನಿರ್ದೇಶಕಿ ಬಿ.ಯಶಸ್ವಿನಿ ಉಪಸ್ಥಿತರಿದ್ದರು.

ತಪ್ಪಿಸಬಹುದಿತ್ತೇ ಇಶಾನ್ ಆಯ್ಕೆ ಗೊಂದಲ?

ಜಿಕ್ಯುಬೆರಾ, ದಕ್ಷಿಣ ಆಫ್ರಿಕಾ (ಪಿಟಿಐ): ಇದೇ ವರ್ಷ ನಡೆಯಲಿರುವ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡದಲ್ಲಿ ಸ್ಥಾನ ಪಡೆಯಲು ಆಟಗಾರರ ದೊಡ್ಡ ಸಾಲು ಇದೆ. ಆ ಸಾಲಿನ ಅತ್ಯಂತ ಕೊನೆಯಲ್ಲಿ ವಿಕೆಟ್‌ಕೀಪರ್ ಇಶಾನ್ ಕೀಶನ್ ಇದ್ದಾರೆ.


ಇಶಾನ್ ಕಿಶನ್

ಅಫ್ಗಾನಿಸ್ತಾನ ಎದುರಿನ ಟಿ20 ಸರಣಿಯಲ್ಲಿ ಆಡುವ ತಂಡಕ್ಕೆ ಅವರು ಆಯ್ಕೆಯಾಗಿಲ್ಲ. ಅದರ ಬೆನ್ನಲ್ಲಿಯೇ ಅವರ 'ಅಶಿಸ್ತು' ಕುರಿತ ಹೇಳಿಕೆಗಳು ಹರಿದಾಡುತ್ತಿವೆ. ಆದರೆ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು 14 ತಿಂಗಳುಗಳ ನಂತರ ಟಿ20 ತಂಡಕ್ಕೆ ಮರಳಿದ್ದರಿಂದಲೂ ಅಗ್ರಕ್ರಮಾಂಕದ ಬ್ಯಾಟರ್ ಕೂಡ ಆಗಿರುವ ಇಶಾನ್‌ಗೆ ಅವಕಾಶ ಲಭಿಸಿಲ್ಲವೆಂದೂ ಹೇಳಲಾಗುತ್ತಿದೆ.

ಆದರೆ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರು, ಇಶಾನ್ ಆಯ್ಕೆಯಾಗದಿರುವುದಕ್ಕೂ ಅಶಿಸ್ತು ಕ್ರಮಕ್ಕೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದ್ದರು. ಸ್ವತಃ ಇಶಾನ್ ಅವರೇ ವಿಶ್ರಾಂತಿಗೆ ಮನವಿ ಮಾಡಿದ್ದರು ಎಂದೂ ಹೇಳಿದ್ದರು.

ಇದಲ್ಲದೇ, ಇಶಾನ್‌ಗೆ ರಾಷ್ಟ್ರೀಯ ತಂಡಕ್ಕೆ ಮರಳುವ ಹಾದಿ ಸಂಪೂರ್ಣ ಮುಚ್ಚಿಲ್ಲ. ದೇಶಿ ಟೂರ್ನಿಗಳಲ್ಲಿ ಉತ್ತಮವಾಗಿ ಆಡಬೇಕು ಎಂದೂ ದ್ರಾವಿಡ್ ಹೇಳಿದ್ದರು.

ಇದರೊಂದಿಗೆ ಮುಂಬರಲಿರುವ ಭಾರತ ಮತ್ತು ಇಂಗ್ಲೆಂಡ್ ಸರಣಿಗೂ ಇಶಾನ್ ಅವಕಾಶ ಪಡೆಯುವುದು ಅನುಮಾನವಾಗಿದೆ. ಟೆಸ್ಟ್ ಸರಣಿಯಲ್ಲಿ ಕೋನಾ ಭರತ್ ಅವಕಾಶ ಪಡೆಯುವ ಸಾಧ್ಯತೆ ಹೆಚ್ಚಿದೆ.

ಆದರೆ ಬಿಸಿಸಿಐನ ಮೂಲಗಳ ಪ್ರಕಾರ ಇಶಾನ್ ಕಿಶನ್ ಅವರು ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿ ಟೆಸ್ಟ್ ಸರಣಿ ಮುಗಿಯುವವರೆಗೂ ಕಾಯಬೇಕಿತ್ತು. ನಂತರ ಅವರು ವಿಶ್ರಾಂತಿ ಕೋರಿದ್ದರೆ ಇಷ್ಟು ದೊಡ್ಡಮಟ್ಟದ ಗೊಂದಲ ಉಂಟಾಗುತ್ತಿರಲಿಲ್ಲ.

ಏಕೆಂದರೆ ಇವತ್ತಿನ ಕ್ರಿಕೆಟ್‌ನಲ್ಲಿ ಅಪಾರ ಪೈಪೋಟಿಯಿದೆ. ಖಾಲಿಯಾದ ಕುರ್ಚಿಯಲ್ಲಿ ಕುಳಿತುಕೊಳ್ಳಲು ಪ್ರತಿಭಾವಂತರು ಸಾಲುಗಟ್ಟಿದ್ದಾರೆ. ಅನುಭವಿ ಆಟಗಾರರಲ್ಲದೇ ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ತಿಲಕ್ ವರ್ಮಾ ಮತ್ತು ರಿಂಕು ಸಿಂಗ್ ಅವರೂ ತಂಡದಲ್ಲಿ ವಿಶ್ವಕಪ್ ನಲ್ಲಿ ಆಡುವ ಕನಸು ಕಾಣುತ್ತಿದ್ದಾರೆ. 'ಇಶಾನ್ ವಿಶ್ರಾಂತಿಗಾಗಿ ಬಿಡುವು ಪಡೆದಿದ್ದು ತಪ್ಪಲ್ಲ. ಆದರೆ ಸಂದರ್ಭ ಸೂಕ್ತವಲ್ಲ. ಅವರು ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿ ಟೆಸ್ಟ್ ಸರಣಿ ಮುಗಿಯುವವರೆಗೂ ಇರಬೇಕಿತ್ತು. ನಂತರ ನಿರ್ಧರಿಸಬೇಕಿತ್ತು' ಎಂದೂ ಕೆಲವರು ಹೇಳಿದ್ದಾರೆ.

ಜಾರ್ಖಂಡ್ ಆಟಗಾರ ಇಶಾನ್ ಅವರು ನವೆಂಬರ್‌ನಲ್ಲಿ ಭಾರತದಲ್ಲಿ ನಡೆದಿದ್ದ ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಉತ್ತಮವಾಗಿ ಆಡಿದ್ದರು. ಆದರೆ ದಕ್ಷಿಣ ಆಫ್ರಿಕಾದಲ್ಲಿ ನಡೆದ ಸರಣಿಯಲ್ಲಿ ಅಂತಿಮ ಹನ್ನೊಂದರ ಬಳಗದಲ್ಲಿ ಸ್ಥಾನ ಸಿಕ್ಕಿರಲಿಲ್ಲ. ಇದರಿಂದಾಗಿ ಅವರು ಬೇಸರಗೊಂಡಿರಬಹುದು ಎಂದೂ ಹೇಳಲಾಗುತ್ತಿದೆ.

'ಒಂದು ಬಿಸಿಸಿಐನಿಂದ ರಜೆ ಮಂಜೂರಾದರೆ ಆಯಿತು. ಅವರು ಆ ರಜೆಯನ್ನು ಹೇಗೆ, ಎಲ್ಲಿ ಕಳೆಯುತ್ತಾರೆಂಬ ಬಗ್ಗೆ ಯಾರೂ ಯೋಚಿಸುವುದಿಲ್ಲ' ಎಂದೂ ಬಿಸಿಸಿಐ ಮೂಲಗಳು ಹೇಳಿವೆ.

'ಭಾರತ ತಂಡಕ್ಕೆ ಮರಳಲು ಅವರಿಗೆ ಖಂಡಿತವಾಗಿಯೂ ಅವಕಾಶ ಇದೆ. ಆದರೆ ಅಗ್ರ ಮೂರರಲ್ಲಿ ಸ್ಥಾನ ತೆರವಾಗಬೇಕಷ್ಟೇ' ಎಂದೂ ಹೇಳುತ್ತಾರೆ.

ಟಿ20 ಕ್ರಿಕೆಟ್: ಅಫ್ಗನ್ ವಿರುದ್ಧ ಜಯಿಸಿದ ಭಾರತ, ಅಕ್ಷರ್, ಮುಕೇಶ್ ಉತ್ತಮ ಬೌಲಿಂಗ್

ಶಿವಂ ದುಬೆ ಅರ್ಭಟಕ್ಕೆ ಒಲಿದ ಜಯ

ಮೊಹಾಲಿ (ಪಿಟಿಐ): ಅಜೇಯ ಅರ್ಧಶತಕ ಗಳಿಸಿದ ಶಿವಂ ದುಬೆ ಬ್ಯಾಟಿಂಗ್‌ನಿಂದ ಭಾರತ ತಂಡವು ಅಫ್ಗಾನಿಸ್ತಾನ ಎದುರಿನ ಚೊಚ್ಚಲ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಪಂಜಾಬ್ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಭಾರತ ತಂಡವು 6 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತು. ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ತಲಾ ಎರಡು ವಿಕೆಟ್ ಗಳಿಸಿದ ಮುಕೇಶ್ ಕುಮಾರ್ ಮತ್ತು ಅಕ್ಷರ್ ಪಟೇಲ್ ಅವರ ದಾಳಿಯ ಮುಂದೆ ಅಫ್ಗನ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 158 ರನ್ ಗಳಿಸಿತು.

ಭಾರತ ತಂಡವು ಶಿವಂ (ಔಟಾಗದೇ 60, 40ಎ, 4X5, 6X2) ಬ್ಯಾಟಿಂಗ್ ಬಲದಿಂದ 17.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 159 ರನ್ ಗಳಿಸಿ ಗೆದ್ದಿತು.

ಗುರಿ ಬೆನ್ನಟ್ಟಿದ ಆತಿಥೇಯರಿಗೆ ಇನಿಂಗ್ಸ್‌ನ ಮೊದಲ ಓವರ್‌ನಲ್ಲಿ ಆಘಾತ ಎದುರಾಯಿತು. ನಾಯಕ ರೋಹಿತ್ ಶರ್ಮಾ ಖಾತೆ ತೆರೆಯುವ ಮುನ್ನವೇ ರನ್‌ಔಟ್ ಆಗಿ ನಿರ್ಗಮಿಸಿದರು. ನಾಲ್ಕನೇ ಓವರ್‌ನಲ್ಲಿ ಶುಭಮನ್ ಗಿಲ್ ಅವರೂ ಔಟಾದರು. ಕ್ರೀಸ್‌ನಲ್ಲಿದ್ದ ತಿಲಕ್ ವರ್ಮಾ ಅವರೊಂದಿಗೆ ಸೇರಿಸಿಕೊಂಡ ದುಬೆ ಇನಿಂಗ್ಸ್‌ಗೆ ಬಲ ತುಂಬಿದರು.


ಭಾರತದ ಶಿವಂ ದುಬೆ ಬ್ಯಾಟಿಂಗ್ – ಎಎಫ್‌ಪಿ ಚಿತ್ರ

ಇವರಿಬ್ಬರೂ ಮೂರನೇ ವಿಕೆಟ್ ಜೊತೆಯಾಟದಲ್ಲಿ 44 ರನ್ ಸೇರಿಸಿದರು. ಒಂಬತ್ತನೇ ಓವರ್‌ನಲ್ಲಿ ತಿಲಕ್ ವರ್ಮಾ ವಿಕೆಟ್ ಕಬಳಿಸಿದ ಅಜ್ಮತ್‌ವುಲ್ಲಾ ಅವರು ಈ ಜೊತೆಯಾಟವನ್ನು ಮುರಿದರು. ಕ್ರೀಸ್‌ಗೆ ಬಂದ ಯುವಪ್ರತಿಭೆ ಜಿತೇಶ್ ಶರ್ಮಾ (31, 20ಎ, 4X5) ಶಿವಂ ಜೊತೆಗೂಡಿ ತಂಡದ ಗೆಲುವಿನ ಹಾದಿಯನ್ನು ಸುಗಮಗೊಳಿಸಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 45 ರನ್ ಸೇರಿಸಿದರು. ಮುಜೀಬ್ ಎಸೆತದಲ್ಲಿ ಶರ್ಮಾ ಔಟಾದರು.

ಕ್ರೀಸ್‌ಗೆ ಬಂದ ರಿಂಕು ಸಿಂಗ್ ವಿಕೆಟ್ ಪತನ ತಡೆದರು. ದುಬೆಯೊಂದಿಗೆ ಸೇರಿ ತಂಡವನ್ನು ಜಯದ ದಡ ಸೇರಿಸಿದರು.

ಅಫ್ಗನ್ ತಂಡದಲ್ಲಿ ಅನುಭವಿ ಸ್ಪಿನ್ನರ್ ರಶೀದ್ ಖಾನ್ ಅವರ ಗೈರುಹಾಜರಿ ಕಾಡಿತು. ಮುಜೀಬ್ ಉರ್ ರೆಹಮಾನ್ (21ಕ್ಕೆ2) ಅವರು ಭಾರತದ ಬ್ಯಾಟರ್‌ಗಳಿಗೆ ತುಸು ಕಠಿಣ ಸವಾಲೊಡ್ಡಿದರು.

ಆದರೆ ಪ್ರವಾಸಿ ತಂಡದ ಬ್ಯಾಟರ್‌ಗಳು ಭಾರತದ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದರು. ಮೊಹಮ್ಮದ್ ನಬಿ 27 ಎಸೆತಗಳಲ್ಲಿ 42 ರನ್ ಗಳಿಸಿದರು. ಅವರು ಮೂರು ಸಿಕ್ಸರ್ ಮತ್ತು ಎರಡು ಬೌಂಡರಿ ಗಳಿಸಿದರು. ಇದರಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 158 (ರೆಹಮಾನುಲ್ಲಾ ಗುರ್ಬಾಜ್ 23, ಇಬ್ರಾಹಿಂ ಝುದ್ರಾನ್ 25, ಅಜ್ಮತ್‌ವುಲ್ಲಾ 29, ಮೊಹಮ್ಮದ್ ನಬಿ 42, ನಜೀಬುಲ್ಲಾ ಔಟಾಗದೆ 19, ಮುಕೇಶ್ ಕುಮಾರ್ 33ಕ್ಕೆ2, ಅಕ್ಷರ್ ಪಟೇಲ್ 23ಕ್ಕೆ2) ಭಾರತ: 17.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 159 (ಶುಭಮನ್ ಗಿಲ್ 23, ತಿಲಕ್ ವರ್ಮಾ 26, ಶಿವಂ ದುಬೆ ಔಟಾಗದೆ 60, ಜಿತೇಶ್ ಶರ್ಮಾ 31, ರಿಂಕು ಸಿಂಗ್ ಔಟಾಗದೆ 16, ಮುಜೀಬ್ ಉರ್ ರೆಹಮಾನ್ 21ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 6 ವಿಕೆಟ್‌ಗಳ ಜಯ. 1-0ಯಿಂದ ಸರಣಿ ಮುನ್ನಡೆ. ಪಂದ್ಯಶ್ರೇಷ್ಠ: ಶಿವಂ ದುಬೆ

ಗಿಲ್ ಮೇಲೆ ಸಿಟ್ಟಿಗೆದ್ದ ರೋಹಿತ್

ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರು ನಾಯಕ ರೋಹಿತ್ ಶರ್ಮಾ ಅವರ ಕೆಂಗಣ್ಣಿಗೆ ಗುರಿಯಾದರು.

ಗುರಿ ಬೆನ್ನಟ್ಟಿದ ಭಾರತದ ಇನಿಂಗ್ಸ್‌ನ ಮೊದಲ ಓವರ್ ಹಾಕಿದ ಫಜಲ್‌ಹಕ್ ಫರೂಕಿ ಅವರ ಎರಡನೇ ಎಸೆತವನ್ನು ರೋಹಿತ್ ಮಿಡ್ ಆಫ್‌ನತ್ತ ಆಡಿದರು.

ಒಂದು ರನ್‌ಗಾಗಿ ಓಡಿದರು. ಆದರೆ ಇನ್ನೊಂದು ತುದಿಯಲ್ಲಿದ್ದ ಶುಭಮನ್ ಚೆಂಡನ್ನು ಹಿಡಿತಕ್ಕೆ ಪಡೆದಿದ್ದ ಮಿಡ್ ಆಫ್ ಫೀಲ್ಡರ್ ಅತ್ತ ನೋಡುತ್ತ ರೋಹಿತ್ ಅವರಿಗೆ ಬೇಡ ಎಂದು ಕೈತೋರಿಸಿದರು. ಆದರೆ ಅಷ್ಟೊತ್ತಿಗೆ ರೋಹಿತ್ ನಾನ್‌ಸ್ಟ್ರೈಕರ್ ಕ್ರೀಸ್‌ಗೆ ಬಂದಾಗಿತ್ತು. ಈ ಅವಕಾಶ ಬಳಸಿಕೊಂಡ ಅಫ್ಗಾನಿಸ್ತಾನ ರೋಹಿತ್ ಅವರನ್ನು ರನ್ ಔಟ್ ಮಾಡಿತು.

ಇದರಿಂದ ಕುಪಿತರಾದ ರೋಹಿತ್ ಅವರು ಗಿಲ್ ಅವರನ್ನು ಬೈಯುತ್ತ ಹೊರನಡೆದರು.

ಯುವ ಆಟಗಾರರಿಗೆ ಕಠಿಣ ಸವಾಲು: ರೋಹಿತ್ ಶರ್ಮಾ

ಮೊಹಾಲಿ (ಪಿಟಿಐ): ಮುಂಬರಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲು ಸಿದ್ಧರಾಗಲು ನಮ್ಮ ತಂಡದ ಆಟಗಾರರನ್ನು ಕಠಿಣ ಸನ್ನಿವೇಶಗಳಿಗೆ ಒಡ್ಡಲಾಗುತ್ತಿದೆ ಎಂದು ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದರು.


ರೋಹಿತ್ ಶರ್ಮಾ

ಗುರುವಾರ ಪಂದ್ಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾವು ಎಲ್ಲ ಆಯಾಮಗಳಿಂದಲೂ ಪ್ರಯತ್ನಿಸುತ್ತಿದ್ದೇವೆ. ಯುವ ಆಟಗಾರರಿಗೆ ಬೇಕೆಂತಲೇ ಕಠಿಣ ಸನ್ನಿವೇಶಗಳಿಗೆ ಒಡ್ಡುತ್ತಿದ್ದೇವೆ. ಇವತ್ತಿನ ಪಂದ್ಯದ 19ನೇ ಓವರ್‌ನಲ್ಲಿ ವಾಷಿಂಗ್ಟನ್ ಸುಂದರ್ ಅವರಿಗೆ ಇಂತಹ ಸವಾಲು ಎದುರಾಗಿತ್ತು' ಎಂದು ಅವರು ತಿಳಿಸಿದರು

'ಈ ಪಂದ್ಯದಲ್ಲಿ ಶಿವಂ ದುಬೆ, ಜಿತೇಶ್ ಅವರು ಉತ್ತಮವಾಗಿ ಬ್ಯಾಟಿಂಗ್ ಮಾಡಿದ್ದಾರೆ. ತಿಲಕ್ ಕೂಡ ಭರವಸೆ ಮೂಡಿಸಿದ್ದಾರೆ' ಎಂದು ಶ್ಲಾಘಿಸಿದರು.

ಎರಿಕ್‌ಸನ್‌ಗೆ ಕ್ಯಾನ್ಸರ್

ಸ್ಟಾಕ್‌ಹೋಮ್ (ಎಎಫ್‌ಪಿ): ಇಂಗ್ಲೆಂಡ್ ಫುಟ್‌ಬಾಲ್ ತಂಡದ ಮಾಜಿ ಮ್ಯಾನೇಜರ್ ಸ್ವೆನ್ ಗೊರಾನ್ ಎರಿಕ್‌ಸನ್ ಅವರಿಗೆ ಮೆದೋಜೀರಕ ಗ್ರಂಥಿಯ ಕ್ಯಾನ್ಸರ್ ಇರುವುದು ಪತ್ತೆಯಾಗಿದೆ. ಅವರು ಇನ್ನು 'ಒಂದು ವರ್ಷ' ಮಾತ್ರ ಬದುಕಲು ಸಾಧ್ಯ ಎಂದು ವೈದ್ಯರು ತಿಳಿಸಿದ್ದಾರೆ. ಎರಿಕ್‌ಸನ್ ಅವರಿಗೆ 75 ವರ್ಷವಾಗಿದೆ. ಅವರು ಪ್ರತಿಷ್ಠಿತ ತಂಡಗಳಿಗೆ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸಿದ್ದಾರೆ. 2002 ಮತ್ತು 2006ರಲ್ಲಿ ಇಂಗ್ಲೆಂಡ್ ತಂಡವು ಫಿಫಾ ವಿಶ್ವಕಪ್ ಕ್ವಾರ್ಟರ್‌ಫೈನಲ್ ತಲುಪಿದ್ದ ಇಂಗ್ಲೆಂಡ್ ತಂಡಕ್ಕೆ ಅವರು ಮ್ಯಾನೇಜರ್ ಆಗಿದ್ದರು.

ಮತ್ತೊಂದು ಜಯದತ್ತ ಮಯಂಕ್ ಪಡೆ ಕಣ್ಣು

ರಣಜಿ ಟ್ರೋಫಿ ಕ್ರಿಕೆಟ್: ಕರ್ನಾಟಕ–ಗುಜರಾತ್ ಹಣಾಹಣಿ ಇಂದಿನಿಂದ

ಅಹಮದಾಬಾದ್: ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಜಯ ಗಳಿಸಿ ಆತ್ಮವಿಶ್ವಾಸದಲ್ಲಿರುವ ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಶುಕ್ರವಾರ ಆರಂಭವಾಗಲಿರುವ ಎರಡನೇ ಪಂದ್ಯದಲ್ಲಿ ಗುಜರಾತ್ ವಿರುದ್ಧ ಆಡಲಿದೆ.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಸಿ ಗುಂಪಿನ ಪಂದ್ಯದಲ್ಲಿ ಆಡಲಿರುವ ಕರ್ನಾಟಕ ತಂಡಕ್ಕೆ ವೇಗಿ ಪ್ರಸಿದ್ಧ ಕೃಷ್ಣ ಮರಳಿಸಿದ್ದಾರೆ. ಆದರೆ, ವೇಗಿ ವಿದ್ವತ್ ಕಾವೇರಪ್ಪ ಅವರು ಭಾರತ ಎ ತಂಡದಲ್ಲಿ ಆಡಲು ತೆರಳಿದ್ದಾರೆ.

ದಕ್ಷಿಣ ಆಫ್ರಿಕಾ ಟೆಸ್ಟ್ ಸರಣಿಯಲ್ಲಿ ಆಡಿ ಬಂದಿರುವ ಪ್ರಸಿದ್ಧ ಅವರೊಂದಿಗೆ ವೈಶಾಖ ವಿಜಯಕುಮಾರ್ ಮತ್ತು ಭರವಸೆಯ ಮಧ್ಯಮವೇಗಿ ವಾಸುಕಿ ಕೌಶಿಕ್ ದಾಳಿ ನಡೆಸಲಿದ್ದಾರೆ.


ಮನೀಷ್ ಪಾಂಡೆ

ಉಳಿದಂತೆ ಹುಬ್ಬಳ್ಳಿಯಲ್ಲಿ ಪಂಜಾಬ್ ಎದುರು ನಡೆದಿದ್ದ ಮೊದಲ ಪಂದ್ಯದಲ್ಲಿ ಆಡಿದ್ದ ಆಟಗಾರರು ಇಲ್ಲಿ ಕಣಕ್ಕಿಳಿಯುವುದು ಖಚಿತ. ಶುಭಾಂಗ್ ಹೆಗಡೆ ಮತ್ತು ಹೊಸಪ್ರತಿಭೆ, ಎಡಗೈ ಬೌಲರ್ ರೋಹಿತ್ ಕುಮಾರ್ ಅವರು ಹುಬ್ಬಳ್ಳಿಯ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ತಲಾ ಮೂರು ವಿಕೆಟ್ ಗಳಿಸಿದ್ದರು.

ಮೊಟೇರಾದ ಪಿಚ್ ಕೂಡ ಮೊದಲಿನಿಂದಲೂ ಎಡಗೈ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ನೀಡಿರುವ ಇತಿಹಾಸ ಇದೆ. ಆದ್ದರಿಂದ ಶುಭಾಂಗ್ ಮತ್ತು ರೋಹಿತ್ ಇಬ್ಬರಿಗೂ ಪ್ರತಿಭೆ ಮೆರೆಯುವ ಅವಕಾಶ ಸಿಗಬಹುದು.

ರಾಜ್ಯ ತಂಡದ ಬ್ಯಾಟಿಂಗ್ ವಿಭಾಗದಲ್ಲಿ ಮಯಂಕ್ ಹಾಗೂ ಸಮರ್ಥ್ ಇನಿಂಗ್ಸ್‌ಗೆ ಉತ್ತಮ ಆರಂಭ ನೀಡಿದರೆ, ತಂಡದ ಗೆಲುವಿನ ಸಾಧ್ಯತೆ ಹೆಚ್ಚುವುದರಲ್ಲಿ ಸಂಶಯವಿಲ್ಲ. ಅವರಿಬ್ಬರೂ ಲಯಕ್ಕೆ ಮರಳಬೇಕಿದೆ. ಹುಬ್ಬಳ್ಳಿಯಲ್ಲಿ ದೇವದತ್ತ ಪಡಿಕ್ಕಲ್ ಮತ್ತು ಅನುಭವಿ ಮನೀಷ್ ಪಾಂಡೆ ಶತಕ ಗಳಿಸಿದ್ದರು. ವಿಕೆಟ್‌ಕೀಪರ್–ಬ್ಯಾಟರ್ ಶರತ್ ಶ್ರೀನಿವಾಸ್ ಅರ್ಧಶತಕ ಗಳಿಸಿದ್ದರು. ನಿಕಿನ್ ಜೋಸ್ ಕೂಡ ಲಯಕ್ಕೆ ಮರಳಿದರೆ ಮಧ್ಯಮ ಕ್ರಮಾಂಕದ ಬಲ ಹೆಚ್ಚುವುದು ಖಚಿತ.

ಆತಿಥೇಯ ಗುಜರಾತ್ ತಂಡಕ್ಕೆ ಸ್ಪಿನ್ ಜೋಡಿ ರವಿ ಬಿಷ್ಣೋಯಿ ಮತ್ತು ಅಕ್ಷರ್ ಪಟೇಲ್ ಅವರು ಅಫ್ಗಾನಿಸ್ತಾನ ತಂಡದ ವಿರುದ್ಧದ ಸರಣಿಯಲ್ಲಿ ಆಡಲಿರುವ ಭಾರತ ತಂಡದಲ್ಲಿದ್ದಾರೆ. ಆದ್ದರಿಂದ ನಾಯಕ ಚಿಂತನ್ ಗಜಾ, ವೇಗಿ ಅರ್ಜನ್ ನಾಗವಸ್ವಾಲಾ ಹಾಗೂ ಪ್ರಿಯಜೀತ್‌ಸಿಂಗ್ ಜಡೇಜ ಅವರ ಮೇಲೆ ಹೊಣೆ ಹೆಚ್ಚಿದೆ. ಆದರೆ ತಂಡವು ಹೊಸ ಸ್ಪಿನ್ನರ್‌ಗಳ ಮೇಲೆ ಅವಲಂಬಿತವಾಗಬೇಕಿದೆ.

ವಿದೇಶದಲ್ಲಿ ತರಬೇತಿ: ಮೀರಾಬಾಯಿ, ಕಿಶೋರ್‌ಗೆ ಸಚಿವಾಲಯದ ಸಮ್ಮತಿ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ಗೆ ಸಿದ್ಧತೆಯಾಗಿ ಅಂತರರಾಷ್ಟ್ರೀಯ ಜಾವೆಲಿನ್ ಥ್ರೊಸ್ಪರ್ಧಿ ಕಿಶೋರ್ ಕುಮಾರ್ ಜೇನಾ ಅವರಿಗೆ ಆಸ್ಟ್ರೇಲಿಯಾದಲ್ಲಿ ತರಬೇತಿ ಪಡೆಯುವುದಕ್ಕೆ ಕ್ರೀಡಾ ಸಚಿವಾಲಯ ಸಮ್ಮತಿ ನೀಡಿದೆ. ಟೋಕಿಯೊ ಒಲಿಂಪಿಕ್ಸ್ ಪದಕ ವಿಜೇತೆ ಮೀರಾಬಾಯಿ ಚಾನು ಅವರಿಗೆ ಅಮೆರಿಕದಲ್ಲಿ ಪುನಶ್ಚೇತನ– ತರಬೇತಿ ಪಡೆಯುವುದಕ್ಕೂ ನೆರವು ನೀಡಲು ಒಪ್ಪಿಕೊಂಡಿದೆ.


ಮೀರಾಬಾಯಿ

ಆಸ್ಟ್ರೇಲಿಯಾದ ಗೋಲ್ಡ್ ಕೋಸ್ಟ್‌ನಲ್ಲಿ ಕಿಶೋರ್ 78 ದಿನಗಳ ಕಾಲ ತರಬೇತಿ ಪಡೆಯಲಿದ್ದು ಈ ವೆಚ್ಚವನ್ನು ಸಚಿವಾಲಯ ಭರಿಸಲಿದೆ. ಚಾನು ಅವರು ಅಮೆರಿಕದ ಸೇಂಟ್ ಲೂಯಿಯಲ್ಲಿ ಡಾ.ಆರನ್ ಹೊರ್ಷಿಗ್ ಅವರ ಮಾರ್ಗದರ್ಶನ ಪಡೆಯಲಿದ್ದಾರೆ. ಅವರ ಜೊತೆ ಚೀಫ್ ಕೋಚ್ ವಿಜಯ್ ಶರ್ಮಾ ಸಹ ಇರುತ್ತಾರೆ.

ಕ್ರೀಡಾ ಸಚಿವಾಲಯವು 'ಟಾಪ್ಸ್' (ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಸ್ಕೀಮ್) ಯೋಜನೆಯಡಿ ಜೇನಾ, ಅವರ ಕೋಚ್ ಮತ್ತು ಫಿಜಿಯೊಥೆರಪಿಸ್ಟ್ ಅವರ ವಿಮಾನಯಾನ, ಊಟ, ವಸತಿ ವೆಚ್ಚ ಭರಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕುಸ್ತಿಪಟುಗಳಾದ ದೀಪಕ್ ಪೂನಿಯಾ (ಫ್ರೀಸ್ಟೈಲ್), ಆಶು (ಗ್ರೀಕೊ ರೋಮನ್) ಮತ್ತು ರೋನಿತ್ ಶರ್ಮಾ (ಗ್ರೀಕೊ ರೋಮನ್) ಅವರಿಗೆ ಹೊರದೇಶಗಳಲ್ಲಿ ತರಬೇತಿ ಪಡೆಯುವುದಕ್ಕೂ ನೆರವು ನೀಡಲು ಸಚಿವಾಲಯ ಒಪ್ಪಿಕೊಂಡಿದೆ.

ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ ರಿದಂ

ಜಕಾರ್ತಾ: ಏಷ್ಯನ್ ಕ್ವಾಲಿಫೈಯರ್ಸ್‌ನಲ್ಲಿ ಭಾರತದ ಶೂಟರ್‌ಗೆ ಕಂಚಿನ ಪದಕ

ಜಕಾರ್ತಾ (ಪಿಟಿಐ): ರಿದಂ ಸಾಂಗ್ವಾನ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಸ್ಥಾನ ಕಾದಿರಿಸಿದ ಭಾರತದ 16ನೇ ಶೂಟಿಂಗ್ ಸ್ಪರ್ಧಿ ಎನಿಸಿದರು. ಏಷ್ಯನ್ ಒಲಿಂಪಿಕ್ಸ್ ಕ್ವಾಲಿಫೈಯರ್ಸ್‌ನಲ್ಲಿ ಅವರು 25 ಮೀಟರ್ ಸ್ಪೋರ್ಟ್ಸ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದು ಈ ಅರ್ಹತೆ ಪಡೆದರು.

ಭಾರತ ಈ ಹಿಂದಿನ ಟೋಕಿಯೊ ಒಲಿಂಪಿಕ್ಸ್‌ಗೆ 15 ಸ್ಪರ್ಧಿಗಳ ಶೂಟಿಂಗ್ ತಂಡವನ್ನು ಕಳುಹಿಸಿದ್ದ ಇದುವರೆಗಿನ ದಾಖಲೆಯಾಗಿತ್ತು. ಈಗ ಆ ದಾಖಲೆ ಮುರಿಯುವ ಅವಕಾಶವಿದೆ.

ಜಕಾರ್ತಾದ ಅರ್ಹತಾ ಕೂಟದಲ್ಲಿ ರಿದಮ್ ಅವರಿಗಿಂತ ಮೊದಲು ಈಶಾ ಸಿಂಗ್, ವರುಣ್ ತೋಮಾರ್ (ಇಬ್ಬರೂ 10 ಮೀ. ಏರ್ ಪಿಸ್ತೂಲ್) ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದರು. ಒಲಿಂಪಿಕ್ಸ್ ಈ ವರ್ಷದ ಜುಲೈ– ಆಗಸ್ಟ್‌ನಲ್ಲಿ ನಿಗದಿಯಾಗಿದೆ.


ರಿದಂ ಸಾಂಗ್ವಾನ್

25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದಿದ್ದ ಯಾಂಗ್ ಜಿನ್ ಮತ್ತು ಕಿಮ್ ಯೆಜಿ (ಇಬ್ಬರೂ ದಕ್ಷಿಣ ಕೊರಿಯಾ) ಒಲಿಂಪಿಕ್ ಕೋಟಾ ಪಡೆಯಲು ಅನರ್ಹರಾಗಿದ್ದರು.

ಹೀಗಾಗಿ ಅರ್ಹತೆ ಪಡೆಯುವ ರಿದಂ ಅವರ ಹಾದಿ ಸುಗಮವಾಯಿತು.

ಹರಿಯಾಣದ 20 ವರ್ಷದ ರಿದಂ, ಕಳೆದ ವರ್ಷದ ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಮಹಿಳೆಯರ 25 ಮೀ. ಸ್ಪೋರ್ಟ್ಸ್ ಪಿಸ್ತೂಲ್ ಚಿನ್ನ ಗೆದ್ದ ತಂಡದಲ್ಲಿದ್ದರು. ಇಶಾ, ಮನು ಭಾಕರ್ ಆ ತಂಡದಲ್ಲಿದ್ದರು.

ಇದು ಪ್ರಸಕ್ತ ಏಷ್ಯಾ ಒಲಿಂಪಿಕ್ ಕ್ವಾಲಿಫೈಯರ್ಸ್‌ನಲ್ಲಿ ರಿದಮ್ ಅವರಿಗೆ ಮೂರನೇ ಪದಕ. 10 ಮೀ. ಏರ್ ಪಿಸ್ತೂಲ್‌ನಲ್ಲಿ ಅವರು ಇಶಾ ಜೊತೆ ಚಿನ್ನ ಗೆದ್ದಿದ್ದರು. ಅರ್ಜುನ್ ಸಿಂಗ್ ಚೀಮಾ ಜೊತೆ 10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ರಜತ ಪದಕ ಗಳಿಸಿದ್ದರು. ಸೋಮವಾರ ನಡೆದ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ರಿದಂ ಅವರಿಗೆ ಒಲಿಂಪಿಕ್ ಅರ್ಹತಾ ಅವಕಾಶ ಸ್ವಲ್ಪದರಲ್ಲೇ ತಪ್ಪಿತ್ತು. ಪಾಕಿಸ್ತಾನದ ಕಿಶ್ಮಲಾ ತಲತ್ ಬೆಳ್ಳಿ ಗೆದ್ದಿದ್ದರಿಂದ ರಿದಂ ಅವರಿಗೆ ಕೋಟಾ ಕೈತಪ್ಪಿತ್ತು.

'ಕಂಚಿನ ಪದಕ ಗೆದ್ದು ಒಲಿಂಪಿಕ್ ಕೋಟಾ ದೊರಕಿರುವುದು ಸಂಸತ ಮೂಡಿಸಿದೆ' ಎಂದ ರಿದಂ ಪ್ರತಿಕ್ರಿಯಿಸಿದರು. ಕ್ವಾಲಿಫೈರ್ಸ್‌ನಲ್ಲಿ ತಮ್ಮ ಯಶಸ್ಸಿನ ಶ್ರೇಯ ಪರ್ಸನಲ್ ಕೋಚ್ ವಿನೀತ್ ಕುಮಾರ್ ಅವರಿಗೆ ಸಲ್ಲುತ್ತದೆ ಎಂದರು.

ಹಸರಂಗ ಅಮೋಘ ಬೌಲಿಂಗ್

ಕೊಲಂಬೊ: ಲೆಗ್ ಸ್ಪಿನ್ನರ್ ವನೀಂದು ಹಸರಂಗ ಅವರ ಜೀವನ ಶ್ರೇಷ್ಠ ಬೌಲಿಂಗ್ (5.5–1–19–7) ದಾಳಿಯ ನೆರವಿನಿಂದ ಶ್ರೀಲಂಕಾ ತಂಡ ಮಳೆಯ ಆಟ ಕಂಡ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ಗುರುವಾರ ಎಂಟು ವಿಕೆಟ್‌ಗಳಿಂದ ಜಿಂಬಾಬ್ವೆ ತಂಡವನ್ನು ಸೋಲಿಸಿತು.

ಮೊದಲ ವಿಕೆಟ್‌ಗೆ 43 ರನ್ ಬಂದರೂ, ಪ್ರವಾಸಿ ತಂಡ ನಂತರದ 53 ರನ್ ಅಂತರದಲ್ಲಿ ಹತ್ತು ವಿಕೆಟ್‌ಗಳನ್ನು ಕಳೆದುಕೊಂಡಿತು.


ವನೀಂದು ಹಸರಂಗ

ಮಳೆಯಿಂದ 27 ಓವರುಗಳಿಗೆ ಇಳಿಸಲಾದ ಪಂದ್ಯದಲ್ಲಿ ಜಿಂಬಾಬ್ವೆ 22.5 ಓವರುಗಳಲ್ಲಿ 96 ರನ್ನಿಗೆ ಕುಸಿಯಿತು.

ನಾಯಕ ಕುಸಲ್ ಮೆಂಡಿಸ್ ಅವರ ಅಜೇಯ 66 ರನ್‌ಗಳ (51ಎ, 4x9, 6x1) ನೆರವಿನಿಂದ ಶ್ರೀಲಂಕಾ 16.4 ಓವರುಗಳಲ್ಲಿ 2 ವಿಕೆಟ್‌ಗೆ 97 ರನ್ ಹೊಡೆಯಿತು.

ಶ್ರೀಲಂಕಾ 2-0 ಯಿಂದ ಸರಣಿ ಜಯಿಸಿತು. ಮೊದಲ ಪಂದ್ಯ ಮಳೆಯ ಪಾಲಾಗಿತ್ತು.

ಮೂರು ಟೆಸ್ಟ್ ಸರಣಿ ಇರಲಿ: ಲಾಯ್ಡ್

ಕೋಲ್ಕತ್ತ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ವೇಳಾಪಟ್ಟಿಯಲ್ಲಿ ಹೆಚ್ಚು ಟೆಸ್ಟ್ ಪಂದ್ಯಗಳಿರಬೇಕು. ದ್ವಿಪಕ್ಷೀಯ ಸರಣಿಯಲ್ಲಿ ಕಡೇಪಕ್ಷ ಮೂರು ಟೆಸ್ಟ್‌ಗಳ ಸರಣಿಯಾದರೂ ಇರಬೇಕು ಎಂದು ವೆಸ್ಟ್ ಇಂಡೀಸ್ ಕ್ರಿಕೆಟ್ ದಿಗ್ಗಜ ಕ್ಲೈವ್ ಲಾಯ್ಡ್ ಅಭಿಪ್ರಾಯಪಟ್ಟಿದ್ದಾರೆ.

'ಈಗ ಹೆಚ್ಚಿನ ಸಂಖ್ಯೆಯಲ್ಲಿ ಟಿ20 ಪಂದ್ಯಗಳು ನಡೆಯುತ್ತಿದೆ. ಹೆಚ್ಚು ಟೆಸ್ಟ್ ಕ್ರಿಕೆಟ್ ಇರಬೇಕು ಎಂಬುದು ನನ್ನ ಬಯಕೆ. ಟೆಸ್ಟ್ ಸರಣಿ ನಡೆಸುವುದಾದರೆ ಮೂರು ಅಥವಾ ಐದು ಪಂದ್ಯಗಳಾದರೂ ಇರಬೇಕು' ಎಂದು ತಂಡದ ಮಾಜಿ ನಾಯಕರೂ ಆಗಿರುವ ಲಾಯ್ಡ್ ಅವರು ಇಲ್ಲಿ ನಡೆದ 'ಏಕಂ ಅವಾರ್ಡ್ಸ್ ನೈಟ್' ಕಾರ್ಯಕ್ರಮದಲ್ಲಿ ಹೇಳಿದರು.

'ಎರಡು ಟೆಸ್ಟ್ ಆಡಲು ವೆಸ್ಟ್ ಇಂಡೀಸ್ 12,000 ಮೈಲು ದೂರದಲ್ಲಿರುವ ಆಸ್ಟ್ರೇಲಿಯಕ್ಕೆ ಹೋಗಬೇಕೆಂದು ನನಗೆನೂ ಅನಿಸುತ್ತಿಲ್ಲ. ಇದರಲ್ಲಿ ಅರ್ಥವಿಲ್ಲ. ಮೊನ್ನೆಯಷ್ಟೇ ಭಾರತ– ದಕ್ಷಿಣ ಆಫ್ರಿಕಾ ಸರಣಿ 1-1 ಆಯಿತು. ಇನ್ನೊಂದು ಟೆಸ್ಟ್ ಇದ್ದರೆ ಎರಡರಲ್ಲಿ ಯಾವ ತಂಡ ಉತ್ತಮ ಎಂದು ತಿಳಿಯುತಿತ್ತು' ಎಂದು 79 ವರ್ಷದ ಲಾಯ್ಡ್ ತಿಳಿಸಿದರು. ಯುವ ಆಟಗಾರರು ಕೌಶಲಕ್ಕಿಂತ ಹೆಚ್ಚಾಗಿ ದೊಡ್ಡ ಹೊಡೆತಗಳನ್ನು ಆಡುವ ಕಡೆಗೇ ಹೆಚ್ಚಿನ ಲಕ್ಷ್ಯ ಹರಿಸುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಲಾಯ್ಡ್ ಹೇಳಿದರು. ವೆಸ್ಟ್ ಇಂಡೀಸ್ ಮೊದಲ ಎರಡು ಏಕದಿನ ವಿಶ್ವಕಪ್ (1975 ಮತ್ತು 1979ರಲ್ಲಿ) ಗೆದ್ದಾಗ ಲಾಯ್ಡ್ ನಾಯಕರಾಗಿದ್ದರು.

ಪಿ.ಎಂ–2 ಆನೆ ಮರಳಿ ಕಾಡಿಗೆ: ತಜ್ಞರ ಸಲಹೆ

ಕೊಚ್ಚಿ (ಪಿಟಿಐ): ವಯನಾಡಿನ ಅರಣ್ಯದಿಂದ ಸೆರೆಹಿಡಿದಿರುವ 'ಪಂದಲ್ಲೂರು ಮಾಖ್ನಾ' (ಪಿ.ಎಂ–2) ಹೆಸರಿನ ಆನೆಯನ್ನು ಮರಳಿ ಕಾಡಿಗೆ ಬಿಡಬೇಕೆಂದು ಕೇರಳ ಹೈಕೋರ್ಟ್ ರಚಿಸಿರುವ ತಜ್ಞರ ಸಮಿತಿ ಸಲಹೆ ನೀಡಿದೆ.

ಆನೆ ತಜ್ಞರಾದ ಡಾ. ಪಿ.ಎಸ್. ಈಸಾ, ಡಾ. ಎಂ. ಆನಂದ ಕುಮಾರ್ ಮತ್ತಿತರರನ್ನೊಳಗೊಂಡ ಸಮಿತಿಯು ಈ ಶಿಫಾರಸು ಮಾಡಿದೆ. ಅರಣ್ಯ ಇಲಾಖೆಯು ಕಳೆದ ವರ್ಷ ಸೆರೆ ಹಿಡಿದಿದ್ದ ಅಂದಾಜು 13 ವರ್ಷ ಪ್ರಾಯದ ಈ ಕಾಡಾನೆ ಸದ್ಯ ಮುತ್ತುಂಗಾ ಆನೆ ಶಿಬಿರದಲ್ಲಿದೆ.

ಆನೆಯ ಚಲನವಲನಗಳ ಮೇಲೆ ನಿಗಾ ವಹಿಸುವ ಸಲುವಾಗಿ ಅದಕ್ಕೆ ರೇಡಿಯೊ ಕಾಲರ್ ಅಳವಡಿಸಬೇಕು ಎಂದೂ ಸಮಿತಿ ಹೇಳಿದೆ.

ಕೇರಳ ಹೈಕೋರ್ಟ್‌ಗೆ ಈಚೆಗೆ ವರದಿ ಸಲ್ಲಿಸಿರುವ ಸಮಿತಿಯು ಅರಣ್ಯ ಇಲಾಖೆಯ ಕಾರ್ಯವೈಖರಿಯನ್ನು ಟೀಕಿಸಿದೆ. ವಯನಾಡಿನ ಸುಲ್ತಾನ್ ಬತ್ತೇರಿ ಪ್ರದೇಶದಲ್ಲಿ ಕಾಣಿಸಿಕೊಂಡಿದ್ದ ಈ ಆನೆಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆಯು ಅನಗತ್ಯ ಆತುರ ತೋರಿದೆ ಎಂದೂ ಹೇಳಿದೆ.

ಪಂದಲ್ಲೂರು ಪ್ರದೇಶದಲ್ಲಿ ಪಿ.ಎಂ–2 ಆನೆಯು ವ್ಯಕ್ತಿಯೊಬ್ಬರನ್ನು ಕೊಂದಿದೆ ಎಂದು ತಮಿಳುನಾಡಿನ ಅರಣ್ಯ ಇಲಾಖೆಯು ಹೇಳಿತ್ತು.

ಈ ಆನೆಯನ್ನು ಸೆರೆ ಹಿಡಿದಿದ್ದ ತಮಿಳುನಾಡಿನ ಅರಣ್ಯ ಇಲಾಖೆಯು ಬಳಿಕ ಮುದುಮಲೈ ಹುಲಿ ಸಂರಕ್ಷಿತಾರಣ್ಯದ ವ್ಯಾಪ್ತಿಯಲ್ಲಿ ಬಿಟ್ಟಿತ್ತು. ಬಳಿಕ ಇದು ವಯನಾಡಿಗೆ ಬಂದಿತ್ತು.

ಐಎಸ್ ನಂಟು: 70 ಜನರ ಬಂಧನ

ಇಸ್ತಾಂಬುಲ್ (ಎಪಿ): ದೇಶದಲ್ಲಿ ವಾರ ಪೂರ್ತಿ ನಡೆದ ಕಾರ್ಯಾಚರಣೆಯಲ್ಲಿ, ಐಎಸ್ ಉಗ್ರ ಸಂಘಟನೆಯ ನಂಟು ಹೊಂದಿದ್ದ 70 ಜನರನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ ಎಂದು ಟರ್ಕಿಯ ಗೃಹ ಸಚಿವ ಅಲಿ ಯೆರ್ಲಿಕಯ ಗುರುವಾರ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಕಾರ್ಯಾಚರಣೆ ವೇಳೆ ಬೃಹತ್ ಪ್ರಮಾಣದ ನಗದು, ವಿದ್ಯುನ್ಮಾನ ವಸ್ತುಗಳು, ಹವಾಲಾ ವಹಿವಾಟು ಕುರಿತ ದಾಖಲೆಗಳು ದೊರೆತಿವೆ ಎಂದು ತಿಳಿಸಿದ್ದಾರೆ.

ಮಂಡ್ಯ ಓಪನ್ ಐಟಿಎಫ್ ಟೆನಿಸ್: ಮಾಧ್ವಿನ್ ಕಾಮತ್‌ಗೆ ಗೆಲುವು

ಕ್ವಾರ್ಟರ್‌ಗೆ ಭಾರತದ ಮೂವರು

ಪ್ರಜಾವಾಣಿ ವಾರ್ತೆ

ಮಂಡ್ಯ: ಭಾರತದ ಮಾಧ್ವಿನ್ ಕಾಮತ್, ಸಿದ್ಧಾರ್ಥ ವಿಶ್ವಕರ್ಮ ಹಾಗೂ ಕರಣ್ ಸಿಂಗ್ ಇಲ್ಲಿ ನಡೆಯುತ್ತಿರುವ ಎಟಿಪಿ ಮಂಡ್ಯ ಓಪನ್ ಐಟಿಎಫ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಅರ್ಹತಾ ಸುತ್ತಿನ ಮೂಲಕ ಬಂದಿದ್ದ ಮಾಧ್ವಿನ್, ಗುರುವಾರ ನಡೆದ ಪಂದ್ಯದಲ್ಲಿ ಮಾಧ್ವಿನ್ ಕಾಮತ್ ಕೊರಿಯಾದ ಯುನ್ ಸಿಯೊಕ್ ಜಂಗ್ ಎದುರು ಜಯಿಸಿದರು.

ಈ ಹಿಂದಿನ ಪಂದ್ಯದಲ್ಲಿ ಎಂಟನೇ ಶ್ರೇಯಾಂಕದ ಪ್ರಜ್ವಲ್ ದೇವ್ ಅವರನ್ನು ಸೋಲಿಸಿದ್ದ ಕೊರಿಯಾ ಆಟಗಾರ 6–4ರಲ್ಲಿ ಮೊದಲ ಸೆಟ್ ಗೆದ್ದರೂ, ಮಾಧ್ವಿನ್ 7–5ರಲ್ಲಿ ಎರಡನೇ ಸೆಟ್ ತಮ್ಮದಾಗಿಸಿಕೊಂಡರು. ನಿರ್ಣಾಯಕ ಸೆಟ್‌ನಲ್ಲಿ ಮಾಧ್ವಿನ್ 3-2 ರಲ್ಲಿ ಮುಂದಿದ್ದಾಗ ಸ್ನಾಯು ಸೆಳೆತಕ್ಕೆ ಒಳಗಾದ ಕೊರಿಯಾದ ಆಟಗಾರ ಪಂದ್ಯ ಬಿಟ್ಟುಕೊಟ್ಟರು.


ಗುರುವಾರ ನಡೆದ ಪಂದ್ಯದಲ್ಲಿ ಭಾರತದ ಮಾಧ್ವಿನ್ ಕಾಮತ್ ಗೆಲುವನ್ನು ಸಂಭ್ರಮಿಸಿದ್ದು ಹೀಗೆ

ಸಿದ್ಧಾರ್ಥ ವಿಶ್ವಕರ್ಮ ಅವರು 7-5, 6-4 ರಿಂದ ಸ್ವದೇಶದ ಮನೀಷ್ ಸುರೇಶ್ ಕುಮಾರ್ ಅವರನ್ನು ಹಿಮ್ಮೆಟ್ಟಿಸಿದರು. ಇದಕ್ಕೂ ಮೊದಲು ಮನೀಷ್, ಮಂದ ಬೆಳಕಿನಿಂದಾಗಿ ಬುಧವಾರ ಸಂಜೆ ಅರ್ಧಕ್ಕೇ ನಿಲ್ಲಿಸಿದ್ದ ಆಟವನ್ನು ಗುರುವಾರ ಮುಂದುವರಿಸಿ ಬ್ರಿಟನ್‌ನ ಗೈಲ್ಸ್ ಹಸ್ಸಿ ಅವರನ್ನು 6-7(4), 6-1, 6-1 ಅಂತರದಿಂದ ಸೋಲಿಸಿದ್ದರು. ಮತ್ತೊಂದು ಪಂದ್ಯದಲ್ಲಿ ಕರಣ್ ಸಿಂಗ್ 3-6, 6-4, 6-2 ರಲ್ಲಿ ಸ್ವದೇಶದ ಇಶಾಕ್ ಇಕ್ಬಾಲ್ ವಿರುದ್ಧ ಗೆಲುವು ದಾಖಲಿಸಿದರು.

ಪುರುಷರ ಡಬಲ್ಸ್‌ನಲ್ಲಿ ಕೇವಲ ಒಂದೇ ಕ್ವಾರ್ಟರ್ ಫೈನಲ್ ಪಂದ್ಯ ಪೂರ್ಣಗೊಳಿಸಲು ಸಾಧ್ಯವಾಯಿತು. ಮಂದ ಬೆಳಕಿನ ಕಾರಣದಿಂದಾಗಿ ಉಳಿದ ಮೂರೂ ಪಂದ್ಯಗಳನ್ನು ಶುಕ್ರವಾರಕ್ಕೆ ಮುಂದೂಡಲಾಯಿತು.

ಸಾತ್ವಿಕ್–ಚಿರಾಗ್, ತನಿಶಾ ಅಶ್ವಿನಿ ಮುನ್ನಡೆ

ಮಲೇಷ್ಯಾ ಓಪನ್: ಸಿಂಗಲ್ಸ್‌ನಲ್ಲಿ ಎರಡನೇ ಸುತ್ತು ದಾಟದ ಕಿದಂಬಿ

ಕ್ವಾಲಾಲಂಪುರ (ಪಿಟಿಐ): ವಿಶ್ವದ ಎರಡನೇ ಕ್ರಮಾಂಕದ ಡಬಲ್ಸ್ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಯಶಸ್ಸಿನ ಓಟ ಮುಂದುವರಿಸಿ ಮಲೇಷಿಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗುರುವಾರಪುರ ಕ್ವಾರ್ಟರ್‌ಫೈನಲ್ ತಲುಪಿದರು.

ಆದರೆ ಪುರುಷರ ಸಿಂಗಲ್ಸ್‌ನಲ್ಲಿ ಕಿದಂಬಿ ಶ್ರೀಕಾಂತ್ ಅವರು ಎರಡನೇ ಸುತ್ತು ದಾಟಲಾಗಲಿಲ್ಲ.

ಸಾತ್ವಿಕ್– ಚಿರಾಗ್ ಜೋಡಿ ಎರಡನೇ ಸುತ್ತಿನಲ್ಲಿ 21–11, 21–18 ರಲ್ಲಿ ನೇರ ಆಟಗಳಿಂದ 36ನೇ ಕ್ರಮಾಂಕದ ಲುಕಾಸ್ ಕೊರ್ವಿ ಮತ್ತು ರೊನನ್ ಲ್ಯಾಬರ್ (ಫ್ರಾನ್ಸ್) ಜೋಡಿಯನ್ನು ಸೋಲಿಸಿತು.


ಸಾತ್ವಿಕ್ ಸಾಯಿರಾಜ್ ಮತ್ತು ಚಿರಾಗ್ ಶೆಟ್ಟಿ

ಭಾರತದ ಜೋಡಿ ಎಂಟರ ಘಟ್ಟದ ಪಂದ್ಯದಲ್ಲಿ, ವಿಶ್ವ ಕ್ರಮಾಂಕದಲ್ಲಿ 32ನೇ ಸ್ಥಾನದಲ್ಲಿರುವ ಹೆ ಜಿ ಟಿಂಗ್–ರೆನ್ ಷಿಯಾಂಗ್ ಯು (ಚೀನಾ) ಜೋಡಿಯನ್ನು ಎದುರಿಸಲಿದೆ.

ಮಹಿಳಾ ಡಬಲ್ಸ್‌ನಲ್ಲಿ ಭಾರತದ ತನಿಶಾ ಕ್ರಾಸ್ಟೊ – ಅಶ್ವಿನಿ ಪೊನ್ನಪ್ಪ ಜೋಡಿ 21–19, 13–21, 21–15 ರಿಂದ ಏಳನೇ ಶ್ರೇಯಾಂಕದ ವಕಾನ ನಾಗಹರಾ– ಮಯು ಮಾತ್ಸುಮೊಟೊ (ಜಪಾನ್) ಜೋಡಿಗೆ ಸೋಲಿನ ಆಘಾತ ನೀಡಿತು.

ಆ ಮೂಲಕ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವತ್ತ ಇನ್ನೊಂದು ಹೆಜ್ಜೆ ಮುಂದೆಯಿಟ್ಟಿತು.

ಶ್ರೀಕಾಂತ್‌ಗೆ ನಿರಾಸೆ: ಆದರೆ ಸಿಂಗಲ್ಸ್‌ನಲ್ಲಿ ಕಣದಲ್ಲಿ ಉಳಿದಿದ್ದ, ಶ್ರೀಕಾಂತ್ ಎರಡನೇ ಸುತ್ತಿನಲ್ಲಿ ಹಾಂಗ್‌ಕಾಂಗ್‌ನ ಎನ್‌ಜಿ ಕಾ ಲಾಂಗ್ ಆಂಗಸ್ ಎದುರು 13–21, 17–21 ರಲ್ಲಿ ನೇರ ಆಟಗಳಿಂದ ಮಣಿದರು. ಕ್ರಮಾಂಕಪಟ್ಟಿಯಲ್ಲಿ ಶ್ರೀಕಾಂತ್ 24ನೇ ಸ್ಥಾನದಲ್ಲಿದ್ದರೆ, ಆಂಗಸ್ 20ನೇ ಸ್ಥಾನದಲ್ಲಿದ್ದಾರೆ. ಎಚ್.ಎಸ್. ಪ್ರಣಯ್, ಲಕ್ಷ್ಯ ಸೇನ್ ಮೊದಲ ಸುತ್ತಿನಲ್ಲೇ ಸೋಲನುಭವಿಸಿದ್ದರು.

ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್: ಮುಂಬೈ ವಿರುದ್ಧ ಫೈನಲ್ ಇಂದಿನಿಂದ

ಪ್ರಶಸ್ತಿಯ ಕನಸಿನಲ್ಲಿ ಕರ್ನಾಟಕ ತಂಡ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಈ ಬಾರಿ ಅಮೋಘ ಸಾಮರ್ಥ್ಯ ತೋರಿ ಫೈನಲ್‌ಗೇರಿರುವ ಕರ್ನಾಟಕ ತಂಡವು ಪ್ರಶಸ್ತಿಯ ಹೊಸ್ತಿಲಲ್ಲಿದೆ. ಕರ್ನಾಟಕ, ಇಲ್ಲಿನ ನವುಲೆಯ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಕ್ರೀಡಾಂಗಣದಲ್ಲಿ ಜ.12ರಿಂದ 15ರವರೆಗೆ ನಡೆಯುವ ಫೈನಲ್‌ನಲ್ಲಿ ಮುಂಬೈ ವಿರುದ್ಧ ಆಡಲಿದೆ.

ಹುಬ್ಬಳ್ಳಿಯಲ್ಲಿ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಮಧ್ಯಪ್ರದೇಶ ಹಾಗೂ ಬೆಳಗಾವಿಯಲ್ಲಿ ಆಯೋಜನೆಯಾಗಿದ್ದ ಸೆಮಿಫೈನಲ್‌ನಲ್ಲಿ ತಮಿಳುನಾಡು ವಿರುದ್ಧ ಗೆದ್ದು ಪ್ರಶಸ್ತಿ ಸುತ್ತು ಪ್ರವೇಶಿಸಿರುವ ಆತಿಥೇಯರು ಮತ್ತೊಂದು ಜಯದ ಹುಮ್ಮಸ್ಸಿನಲ್ಲಿದ್ದಾರೆ.


ಧೀರಜ್‌ಗೌಡ

ಮಧ್ಯಪ್ರದೇಶ ವಿರುದ್ಧ ಆತಿಥೇಯ ತಂಡದ ನಾಯಕ ಧೀರಜ್ ಗೌಡ 157ರನ್ ದಾಖಲಿಸಿ ಗಮನ ಸೆಳೆದಿದ್ದರು. ಸಮಿತ್ ದ್ರಾವಿಡ್, ಧ್ರುವ್ ಪ್ರಭಾಕರ್ ಹಾಗೂ ಪ್ರಖರ್ ಚತುರ್ವೇದಿ ಅವರೂ ಮಿಂಚಿದ್ದರು.

ಸೆಮಿಫೈನಲ್‌ನಲ್ಲಿ ಕಾರ್ತಿಕ್ ಎಸ್.ಯು, ಹರ್ಷಿಲ್ ಧರ್ಮಾನಿ, ವಿಕೆಟ್ ಕೀಪರ್ ಯುವರಾಜ್ ಅರೋರಾ ಅರ್ಧಶತಕ ಬಾರಿಸಿದ್ದರು.

ಹಾರ್ದಿಕ್ ರಾಜ್ ಶತಕದ ಸಾಧನೆ ಮಾಡಿದ್ದರು. ಬ್ಯಾಟಿಂಗ್‌ನಲ್ಲಿ ತಂಡದ ಆಧಾರಸ್ಥಂಭ ಎನಿಸಿರುವ ಇವರು ಫೈನಲ್‌ನಲ್ಲೂ ಉತ್ತಮ ಆಟ ಆಡುವ ವಿಶ್ವಾಸದಲ್ಲಿದ್ದಾರೆ. ಸಮಿತ್ ಹಾಗೂ ಧೀರಜ್ ಬೌಲಿಂಗ್‌ನಲ್ಲೂ ಮಿಂಚಬಲ್ಲರು.

ಸಮರ್ಥ್ ಎನ್. ಹಾಗೂ ಅಗಸ್ತ್ಯ ಎಸ್.ರಾಜು ಅವರ ಬೌಲಿಂಗ್ ಬಲವೂ ತಂಡಕ್ಕಿದೆ. ಸೆಮಿಫೈನಲ್‌ನಲ್ಲಿ ಉತ್ತರ ಪ್ರದೇಶ ತಂಡವನ್ನು 9 ವಿಕೆಟ್‌ಗಳಿಂದ ಮಣಿಸಿರುವ ಮುಂಬೈ ಸಹ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡ ಎನಿಸಿದೆ.

ಪಂದ್ಯದ ಆರಂಭ: ಬೆಳಿಗ್ಗೆ 9.30

ಜಾಗ್ರೆಬ್ ಓಪನ್ ಕುಸ್ತಿ: ಅಮನ್‌ಗೆ ಚಿನ್ನ

ಜಾಗ್ರೆಬ್ (ಪಿಟಿಐ): ಅಧಿಕಾರಯುತ ಪ್ರದರ್ಶನ ನೀಡಿದ ಭಾರತದ ಕುಸ್ತಿಪಟು ಅಮನ್ ಸೆಹ್ರಾವತ್ 10–0 ಯಿಂದ ವಿಶ್ವದ ಏಳನೇ ಕ್ರಮಾಂಕದ ಕುಸ್ತಿಪಟು ವಾನ್‌ಹಾವೊ ಝೌ (ಚೀನಾ) ಅವರನ್ನು ಸೋಲಿಸಿ, ಜಾಗ್ರೆಬ್ ಓಪನ್ ರ‍್ಯಾಂಕಿಂಗ್ ಸಿರೀಸ್ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದುಕೊಂಡರು.

ಬುಧವಾರ ರಾತ್ರಿ ನಡೆದ ಈ ಸೆಣಸಾಟದಲ್ಲಿ, 13ನೇ ಕ್ರಮಾಂಕದ ಸೆಹ್ರಾವತ್ ತಾಂತ್ರಿಕ ಕೌಶಲ ಮೆರೆದರು. ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಅವರು 57 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದರು.

ಭಾರತದ ಕುಸ್ತಿಪಟುಗಳು ವಿಶ್ವ ಕುಸ್ತಿ ಸಂಸ್ಥೆ (ಯುಡಬ್ಲ್ಯುಡಬ್ಲ್ಯು) ಬ್ಯಾನರ್‌ನಡಿ ಸ್ಪರ್ಧಿಸುತ್ತಿದ್ದಾರೆ. ನಿಗದಿಯೊಳಗೆ ಚುನಾವಣೆ ನಡೆಸದ ಕಾರಣ ಭಾರತ ಕುಸ್ತಿ ಫೆಡರೇಷನ್‌ಅನ್ನು ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ ಅಮಾನತು ಮಾಡಿದೆ.

ಅಮನ್ ಕ್ವಾರ್ಟರ್‌ಫೈನಲ್‌ನಲ್ಲಿ ಅಮೆರಿಕದ ರಿಚರ್ಡ್ಸ್ ಜೇನ್ ರೋಡ್ಸ್ ಅವರನ್ನು, ಸೆಮಿಫೈನಲ್‌ನಲ್ಲಿ ಜಾರ್ಜಿಯಾದ ರಾಬರ್ಟ್ ಡಿಂಗಾಶ್ವಿಲಿ ಅವರನ್ನು ಸೋಲಿಸಿದ್ದರು. ಏಷ್ಯನ್ ಗೇಮ್ಸ್ ಬೆಳ್ಳಿ ವಿಜೇತ ದೀಪಕ್ ಪೂನಿಯಾ 86 ಕೆ.ಜಿ. ವಿಭಾಗದ ಮೊದಲ ಸುತ್ತಿನಲ್ಲಿ ಕಜಕಸ್ತಾನದ ಅಜಮತ್ ದೌಲೆತ್‌ಬೆಕೊವ್ ಅವರಿಗೆ ಮಣಿದರು. ರಿಪೆಷಾಜ್ ಸುತ್ತಿನಲ್ಲಿ ಅವರು ಒಂದು ಪಂದ್ಯ ಗೆದ್ದರೂ, ಇನ್ನೊಂದರಲ್ಲಿ ಸೋತು ಪದಕದ ಅವಕಾಶ ಕಳೆದುಕೊಂಡರು.

ಟಿ20 ಪಂದ್ಯ: ಆನ್‌ಲೈನ್ ಟಿಕೆಟ್ ಮಾರಾಟ ಇಂದು

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದೇ 17ರಂದು ನಡೆಯಲಿರುವ ಭಾರತ ಮತ್ತು ಅಫ್ಗಾನಿಸ್ತಾನ ನಡುವಣ ಟಿ20 ಕ್ರಿಕೆಟ್ ಪಂದ್ಯದ ಹೆಚ್ಚುವರಿ ಟಿಕೆಟ್‌ಗಳನ್ನು ಆನ್‌ಲೈನ್‌ನಲ್ಲಿ ಶುಕ್ರವಾರದಿಂದ ಮಾರಾಟ ಮಾಡಲಾಗುತ್ತಿದೆ. ಸಂಜೆ 6ರಿಂದ ಪೇಟಿಎಂ ಆ್ಯಪ್ ಅಥವಾ ಪೇಟಿಎಂ ಇನ್‌ಸೈಡರ್ ವೆಬ್‌ಸೈಟ್ ಮೂಲಕ ಟಿಕೆಟ್ ಖರೀದಿಸಬಹುದು. ರಿಡೆಂಪ್ಷನ್ ವೋಚರ್‌ಗಳನ್ನು ಜ.13ರ ಬೆಳಿಗ್ಗೆ 10 ಗಂಟೆಯಿಂದ, 16ರ ಸಂಜೆ 6ರ ವರೆಗೆ ಕ್ರೀಡಾಂಗಣದ ಗೇಟ್ ಸಂಖ್ಯೆ 2, 5, 16 ಹಾಗೂ 19ರ ಕೌಂಟರ್‌ಗಳಲ್ಲಿ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



ವಿಜಯಪುರದಲ್ಲಿ ನಡೆದ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬಾಲಕಿಯರ 80 ಕಿ.ಮೀ. ಟೀಮ್ ಟೈಮ್ ಟ್ರಯಲ್‌ನಲ್ಲಿ ಗುರಿಯತ್ತ ಮುನ್ನುಗ್ಗಿದ ಸೈಕ್ಲಿಸ್ಟ್‌ಗಳು —ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ

ರೋಡ್ ಸೈಕ್ಲಿಂಗ್: ರಾಜಸ್ಥಾನ ಸ್ಪರ್ಧಿಗಳ ಮೇಲುಗೈ

ಪ್ರಜಾವಾಣಿ ವಾರ್ತೆ

ವಿಜಯಪುರ: ನಿರೀಕ್ಷೆಯಂತೆ ರಾಜಸ್ಥಾನ ಸೈಕ್ಲಿಸ್ಟ್‌ಗಳು, ಇಲ್ಲಿನ ವಿಜಯಪುರ–ಸೋಲಾಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ನಡೆದ 28ನೇ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನ ಮೂರನೇ ದಿನ ಪಾರಮ್ಯ ಮುಂದುವರಿಸಿದರು.

16 ವರ್ಷದೊಳಗಿನ ಬಾಲಕರ 40 ಕಿ.ಮೀ. ತಂಡ ಟೈಮ್ ಟ್ರಯಲ್ ಸ್ಪರ್ಧೆಯಲ್ಲಿ ಕೈಲಾಸ್ ಜಕಾರ, ಕೇತಾರಾಮ್, ತೋಲಾರಾಮ್ ದುಡಿ, ಸುರೇಂದ್ರ ಚೌಧರಿ ಅವರನ್ನು ಒಳಗೊಂಡ ರಾಜಸ್ಥಾನ ತಂಡ 50ನಿ. 48.566 ಸೆ.ಗಳ ಅವಧಿಯಲ್ಲಿ ಗುರಿ ತಲುಪಿ ಮೊದಲ ಸ್ಥಾನ ಪಡೆಯಿತು.

ಸುಜಲ್ ಜಾಧವ, ರಾಹುಲ್ ರಾಠೋಡ, ಮಲ್ಲೇಶ ಬಡಿಗೇರ ಮತ್ತು ರಾಘವೇಂದ್ರ ವಂದಾಲ ಅವರನ್ನು ಒಳಗೊಂಡ ಆತಿಥೇಯ ಕರ್ನಾಟಕ ತಂಡ (51ನಿ.07.123 ಸೆ.) ಬೆಳ್ಳಿಯ ಪದಕ ಪಡೆಯಿತು. ಹರಿಯಾಣ ತಂಡ (ಸುಭಾಷ, ಗೌತಮ್, ಕ್ರಿಶನ್, ಅನೀಶಕುಮಾರ್) 52ನಿ.27.781 ಸೆ. ಕಾಲ ತೆಗೆದುಕೊಂಡು ಮೂರನೇ ಸ್ಥಾನ ಗಳಿಸಿತು.

ಗಾಯಗೊಂಡ ಜಾನ್: ಬೆಂಗಳೂರಿನ ಸೈಕ್ಲಿಸ್ಟ್ ನವೀನ್ ಜಾನ್ 120 ಕಿ.ಮೀ. ಮಾಸ್ ಸ್ಟಾರ್ಟ್ ಸ್ಪರ್ಧೆಯ ಗುರಿ ತಲುಪುವ ವೇಳೆ ಆಕಸ್ಮಿಕವಾಗಿ ಬಿದ್ದು, ಗಾಯಗೊಂಡ ಪರಿಣಾಮ ಚಿನ್ನದ ಪದಕ ಗೆಲ್ಲುವ ಕನಸು ನುಚ್ಚುನೂರಾಯಿತು.

ಮಣಿಪುರ ಸ್ಪರ್ಧಿಗೆ ಗಾಯ: ಸ್ಪರ್ಧೆ ಮುಗಿಸಿ ಮರಳುತ್ತಿದ್ದ ವೇಳೆ ಮಣಿಪುರದ ಸೈಕ್ಲಿಸ್ಟ್ ಒಬ್ಬರಿಗೆ ವಾಹನವೊಂದು ಡಿಕ್ಕಿ ಹೊಡೆದು ಗಾಯಗೊಂಡಿದ್ದಾರೆ. ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಯಿತು.

ಗುರುವಾರ ನಡೆದ ಇನ್ನುಳಿದ ವಿಭಾಗಗಳ ಫಲಿತಾಂಶವನ್ನು ಪರಿಶೀಲಿಸುತ್ತಿರುವ ಸಿಎಫ್‌ಐ ವಿಜೇತರ ಹೆಸರನ್ನು ಪ್ರಕಟಿಸಿಲ್ಲ.

ಚಾಂಪಿಯನ್ ಪಟ್ಟಕ್ಕಾಗಿ ಶುಕ್ರವಾರ ನಡೆಯಲಿರುವ ವಿವಿಧ ವಿಭಾಗಗಳ ಅಂತಿಮ ಹಣಾಹಣಿಗೆ ಸೈಕ್ಲಿಸ್ಟ್‌ಗಳು ಸಿದ್ಧರಾಗಿದ್ದು, ಕುತೂಹಲ ಕೆರಳಿಸಿದೆ.

ಟೆನಿಸ್: ಅಂತಿಮ ಸುತ್ತಿಗೆ ಸುಮೀತ್ ನಗಾಲ್

ಮೆಲ್ಬರ್ನ್ (ಪಿಟಿಐ): ಭಾರತದ ಸುಮೀತ್ ನಗಾಲ್ ಅವರು ಅರ್ಹತಾ ಸುತ್ತಿನ ಇನ್ನೊಂದು ಪಂದ್ಯ ಗೆದ್ದರೆ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಆಡುವ ಅವಕಾಶ ಪಡೆಯಲಿದ್ದಾರೆ. ಅವರು ಗುರುವಾರ ಅರ್ಹತಾ ಟೂರ್ನಿಯ ಅಂತಿಮ ಸುತ್ತನ್ನು ತಲುಪಿದರು.

ನಗಾಲ್ ಅವರು ಎರಡನೇ ಅರ್ಹತಾ ಸುತ್ತಿನಲ್ಲಿ ಆಸ್ಟ್ರೇಲಿಯಾದ ಎಡ್ವರ್ಡ್ ವಿಂಟರ್ ಅವರನ್ನು 64 ನಿಮಿಷಗಳ ಸೆಣಸಾಟದಲ್ಲಿ 6–3, 6–2 ರಿಂದ ಸೋಲಿಸಿದರು. ವಿಂಟರ್ ಅವರು ವೈಲ್ಡ್ ಕಾರ್ಡ್ ಮೂಲಕ ಅರ್ಹತಾ ಸುತ್ತಿನಲ್ಲಿ ಆಡುವ ಅವಕಾಶ ಪಡೆದಿದ್ದರು.

ಭಾರತದ 26 ವರ್ಷದ ಆಟಗಾರ ಅಂತಿಮ (ಅರ್ಹತಾ) ಸುತ್ತಿನಲ್ಲಿ ಸ್ಲೊವಾಕಯಾದ ಅಲೆಕ್ಸ್ ಮೊಲ್ಕನ್ ಅವರನ್ನು ಶುಕ್ರವಾರ ಎದುರಿಸ-ಲಿದ್ದಾರೆ. ನಗಾಲ್ ಪ್ರಸ್ತುತ ವಿಶ್ವ ಕ್ರಮಾಂಕದ ಸಿಂಗಲ್ಸ್‌ನಲ್ಲಿ 139ನೇ ಸ್ಥಾನ ಪಡೆದಿದ್ದಾರೆ. ಅಂತಿಮ ಅರ್ಹತಾ ಪಂದ್ಯ ಗೆದ್ದಲ್ಲಿ 2021ರ ನಂತರ ಅವರು ಮೊದಲ ಬಾರಿ ಹಾಗೂ ಒಟ್ಟಾರೆ ನಾಲ್ಕನೇ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಆಡುವ ಅವಕಾಶ ಪಡೆದಂತೆ ಆಗುತ್ತದೆ.

ಕಬಡ್ಡಿ: ಇಂದಿನಿಂದ ಜೈಪುರದಲ್ಲಿ ಪಂದ್ಯ

ಜೈಪುರ: ಇಲ್ಲಿನ ಸವಾಯಿ ಮಾನ್‌ಸಿಂಗ್ ಒಳಾಂಗಣ ಕ್ರೀಡಾಂಗಣದಲ್ಲಿ ನಾಳೆ (ಶುಕ್ರವಾರ) ಪ್ರೊ ಕಬಡ್ಡಿ ಲೀಗ್‌ನ ಜೈಪುರ ಲೆಗ್‌ನ ಪಂದ್ಯಗಳು ಆರಂಭ ವಾಗಲಿವೆ. ಆತಿಥೇಯ ಜೈಪುರ ಪಿಂಕ್ ಪ್ಯಾಂಥರ್ಸ್ ಮೊದಲ ಪಂದ್ಯದಲ್ಲಿ ಪಾಯಿಂಟ್ ಪಟ್ಟಿಯ ತಳದಲ್ಲಿರುವ ತೆಲುಗು ಟೈಟನ್ಸ್ ಎದುರು ಆಡಲಿದೆ.

10 ಪಂದ್ಯಗಳಿಂದ 9 ಗೆದ್ದು 46 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನದಲ್ಲಿ-ರುವ ಪುಣೇರಿ ಪಲ್ಟನ್ಸ್ ತಂಡ ಎರಡನೇ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧ ಆಡಲಿದೆ. ಜೈಂಟ್ಸ್ (11 ಪಂದ್ಯಗಳಿಂದ 39) ಸದ್ಯ ಮೂರನೇ ಸ್ಥಾನದಲ್ಲಿದೆ. ಒಟ್ಟು 11 ಪಂದ್ಯಗಳು ಜೈಪುರದಲ್ಲಿ ನಡೆಯಲಿವೆ.